ಶುಕ್ರವಾರ, ಆಗಸ್ಟ್ 2, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

ಭೀಮನಾಗಿ ಬಂದ
ದುನಿಯಾ ವಿಜಯ್
ನಟ, ನಿರ್ದೇಶಕ
ವಿಜಯ್ ಸಂದರ್ಶನ



ವಿದೇಶದಲ್ಲಿ ನೌಕರಿ ಆಮಿಷ ಯುವಕರಿಗೆ ವಂಚನೆ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ (ಬೀದರ್ ಜಿಲ್ಲೆ): ವಿದೇಶದಲ್ಲಿ ಉತ್ತಮ ಸಂಬಳದ ನೌಕರಿ ಕೊಡಿಸುವ ಆಮಿಷ ನೀಡಿ ಹಣ ಪಡೆದು ವಂಚಿಸಿರುವ ಬಗ್ಗೆ ಉಜ್ಬೇಕಿಸ್ತಾನಕ್ಕೆ ಹೋಗಿರುವ ತಾಲ್ಲೂಕಿನ ಕೆಲವರು ತಮ್ಮ ಸಮಸ್ಯೆ ತೋಡಿಕೊಂಡಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಬಸವಕಲ್ಯಾಣ ತಾಲ್ಲೂಕಿನ ಐದರು ಸೇರಿ ಹತ್ತಕ್ಕೂ ಹೆಚ್ಚಿನ ಮಂದಿ ಒಂದೇ ಸ್ಥಳದಲ್ಲಿ ಸೇರಿ ವಿಡಿಯೊದಲ್ಲಿ ತಮ್ಮ ಅಳಲು ತೋಡಿಕೊಂಡಿದ್ದಾರೆ.

'ವಾರದ ಹಿಂದೆ ನಾವೆಲ್ಲ ಉಜ್ಬೇಕಿಸ್ತಾನಕ್ಕೆ ಬಂದಿದ್ದೇವೆ. ನಮಗೆ ನಿಯೋಜಿಸಿದ ಕಂಪನಿ ಬಿಟ್ಟು ಬೇರೆ ಕಂಪನಿಯಲ್ಲಿ ಕೆಲಸ ನೀಡಲಾಗಿದೆ. ಮಧ್ಯವರ್ತಿಗಳು ನಮ್ಮಿಂದ ಲಕ್ಷಾಂತರ ರೂಪಾಯಿ ಹಣ ಪಡೆದು ಅನ್ಯಾಯ ಮಾಡಿದ್ದಾರೆ. ಯಾವುದೇ ಸೌಲಭ್ಯಗಳು ಇಲ್ಲಿ ಇಲ್ಲ. ದಿನದಲ್ಲಿ ಒಂದು ಹೊತ್ತಿನ ಊಟವೂ ಸಿಗುತ್ತಿಲ್ಲ. ನಮ್ಮ ಕಣ್ಣೆದುರಲ್ಲೇ ಕೆಲವರು ಊಟವಿಲ್ಲದೆ ಮೃತಪಟ್ಟಿದ್ದಾರೆ. ಇದರಿಂದ ನಾವು ಭಯಗೊಂಡಿದ್ದೇವೆ' ಎಂದು ತಮ್ಮ ಸಮಸ್ಯೆಗಳನ್ನು ಹೇಳಿಕೊಂಡಿದ್ದಾರೆ.

'ಪ್ರಧಾನಿ ಹಾಗೂ ಕರ್ನಾಟಕದ ಮುಖ್ಯಮಂತ್ರಿ ಅವರು ನಮ್ಮನ್ನು ಹೀಗಿರುವ ಮಾಡಿ ಸ್ವದೇಶಕ್ಕೆ ಕರೆಸಿಕೊಳ್ಳಬೇಕು' ಎಂದೂ ವಿನಂತಿಸಿದ್ದಾರೆ.

ಬಸವ ಕಲ್ಯಾಣದವರು ಎಂದು ತಮ್ಮ ಹೆಸರು ಹೇಳಿರುವ ಸುನಿಲ, ಚನ್ನಪ್ಪ, ಅವಿನಾಶ, ಬಸವ, ಅಣ್ಣಾರಾವ್ ಅವರು ತಾವು ಕಷ್ಟದಲ್ಲಿದ್ದು ಸಹಕರಿಸಿ ಎಂದು ಕೇಳಿಕೊಂಡಿದ್ದಾರೆ. ಕಲಬುರಗಿಯ ರಮೇಶ, ಶಿವಾ ಕಮಲಾಪುರ, ರಾಜೇಶ ಹುಮನಾಬಾದ್ ಸಹ ತಮಗೆ ಭಾರತಕ್ಕೆ ಕರೆಸಿಕೊಳ್ಳಬೇಕು ಎಂದು ಕೋರಿದ್ದಾರೆ.

ಶಾಸಕರಿಂದ ಧನ ಸಹಾಯ: ಯುವಕರು ಸಂಕಷ್ಟದಲ್ಲಿ ಸಿಲುಕಿರುವ ಬಗ್ಗೆ ಗೊತ್ತಾದ ತಕ್ಷಣ ಶಾಸಕ ಶರಣು ಸಲಗರ ಅವರು ವಿಡಿಯೊ ಕಾಲ್ ಮೂಲಕ ಅವರನ್ನು ಸಂಪರ್ಕಿಸಿ ಮಾಹಿತಿ ಪಡೆದುಕೊಂಡಿದ್ದಾರೆ.

'ಭಾರತಕ್ಕೆ ವಾಪಸ್ಸಾಗಲು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರೊಂದಿಗೆ ಮಾತನಾಡಿ ವ್ಯವಸ್ಥೆ ಮಾಡುತ್ತೇವೆ. ಮಧ್ಯವರ್ತಿಗಳಿಂದ ಹಣ ಮರಳಿ ಕೊಡಿಸುತ್ತೇವೆ' ಎಂದು ಭರವಸೆ ನೀಡಿ ಖರ್ಚಿಗಾಗಿ ₹50,000 ಹಣವನ್ನು ಕಳುಹಿಸಿದ್ದಾರೆ.

ಐಡಿಬಿಐ ಬ್ಯಾಂಕ್‌ನಲ್ಲಿ ಹಣ ಅಕ್ರಮ ವರ್ಗಾವಣೆ ಪ್ರಕರಣ

ಪಂಚಾಯತ್‌ರಾಜ್, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅನುದಾನ ಗುಳುಂ

• ಬಸವರಾಜ ಹವಾಲ್ದಾರ

ಬಾಗಲಕೋಟೆ: ನಗರದ ಐಡಿಬಿಐ ಬ್ಯಾಂಕ್‌ನಲ್ಲಿ ನಡೆದ ಪ್ರವಾಸೋದ್ಯಮ ಇಲಾಖೆಯ ಹಣ ಅಕ್ರಮ ವರ್ಗಾವಣೆ ಹಗರಣ ಪ್ರಕರಣವು ಈಗ ಪಂಚಾಯತ್ ರಾಜ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೂ ವಿಸ್ತರಿಸಿದೆ. ಎರಡೂ ಇಲಾಖೆಗಳ ಒಟ್ಟು ₹1.66 ಕೋಟಿ ಅನುದಾನ ವಿವಿಧ ಖಾತೆಗಳಿಗೆ ವರ್ಗಾವಣೆಯಾಗಿದೆ.

2023 ಮತ್ತು 2024ನೇ ಸಾಲಿನಲ್ಲಿ ಪಂಚಾಯತ್ ರಾಜ್ ಎಂಜಿನಿಯರಿಂಗ್ ವಿಭಾಗದ ₹86.40 ಲಕ್ಷ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ₹79.75 ಲಕ್ಷ ಹಣ ವರ್ಗಾವಣೆಯಾಗಿದೆ. ಇದಕ್ಕೂ ಮೊದಲು ಇದೇ ಬ್ಯಾಂಕ್‌ನಲ್ಲಿ ಪ್ರವಾಸೋದ್ಯಮ ಇಲಾಖೆಗೆ ಸೇರಿದ ₹2.47 ಕೋಟಿ ಹಣ ಅಕ್ರಮವಾಗಿ ವರ್ಗಾವಣೆಯಾಗಿತ್ತು.

ಸರ್ಕಾರದ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ 9 ಜನರ ಬಂಧನವಾಗಿದೆ. ಉಳಿದವರ ಬಂಧನಕ್ಕೆ ಶೋಧ ನಡೆದಿದೆ

ಅಮರನಾಥ ರೆಡ್ಡಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಬಾಗಲಕೋಟೆ

ಹಣ ವರ್ಗಾವಣೆ ಹೇಗೆ?: 'ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಅನುದಾನ ಬಿಡುಗಡೆ ಕೋರಿ ಇಲಾಖೆ ನೀಡಿದ್ದ ಪತ್ರದ 'ಇಲಾಖೆಯ ಹೆಡ್ಡಿಂಗ್' ಮತ್ತು ಸಹಿ ತುಂಡರಿಸಿಕೊಂಡು, ಬಿಳಿ ಹಾಳೆಯ ಮೇಲೆ ಕಲರ್ ಪ್ರಿಂಟ್ ತೆಗೆದುಕೊಳ್ಳುತ್ತಿದ್ದರು. ಬೇಕಾದ ಮೊತ್ತ ಬರೆದುಕೊಂಡು ಹಣ ವರ್ಗಾವಣೆ ಮಾಡಿಕೊಳ್ಳುತ್ತಿದ್ದರು' ಎಂಬುದು ತನಿಖೆಯಿಂದ ಗೊತ್ತಾಗಿದೆ.

ಖಾತೆ ತೆರೆದದ್ದು ಯಾಕೆ?: ಸರ್ಕಾರದ ವಿವಿಧ ಕಚೇರಿಗಳಿಗೆ ತೆರಳುತ್ತಿದ್ದ ಐಡಿಬಿಐ ಬ್ಯಾಂಕ್ ಪ್ರತಿನಿಧಿ, 'ಉತ್ತಮ ಸೇವೆ ನೀಡುತ್ತೇವೆ. ನಮ್ಮ ಬ್ಯಾಂಕ್‌ನಲ್ಲೇ ಖಾತೆ ತೆರೆಯಿರಿ' ಎಂದು ಕೋರುತ್ತಿದ್ದರು. ಕಚೇರಿಗೆ ಬೇಕಾದ ಕುರ್ಚಿ, ಮೇಜು, ಕಂಪ್ಯೂಟರ್‌ನಂತಹ ವಸ್ತುಗಳನ್ನು ನೀಡುವುದಾಗಿ ಆಮಿಷ ಒಡ್ಡುತ್ತಿದ್ದರು.

'ಖಾತೆ ತೆರೆದ ಬಳಿಕ ಬ್ಯಾಂಕ್‌ನ ಸಿಬ್ಬಂದಿಯೇ ಪ್ರತಿ ತಿಂಗಳು ಇಲಾಖೆ ಅಧಿಕಾರಿಗಳಿಗೆ ಸ್ಟೇಟ್‌ಮೆಂಟ್ ತಲುಪಿಸುತ್ತಿದ್ದರು. ಖಾತೆಯಲ್ಲಿನ ಹಣ ವರ್ಗಾವಣೆ ಮಾಡಿದ್ದರೂ, ಹಣ ಖಾತೆಯಲ್ಲಿದ್ದಂತೆಯೇ ನಕಲಿ ದಾಖಲೆ ಸೃಷ್ಟಿಸುತ್ತಿದ್ದರು. ಅದನ್ನೇ ನಂಬಿದ್ದರಿಂದ ಹಣ ವರ್ಗಾವಣೆಯಾಗಿರುವುದು ಇಲಾಖೆಯ ಅಧಿಕಾರಿಗಳಿಗೆ ಗೊತ್ತಾಗುತ್ತಿರಲಿಲ್ಲ. ಸರ್ಕಾರದ ವಿವಿಧ ಇಲಾಖೆ ತೆರೆದಿರುವ ಖಾತೆಗಳನ್ನು ಪರಿಶೀಲಿಸುತ್ತಿದ್ದು, ಎರಡು ವರ್ಷಗಳಿಂದ ಚಾಲ್ತಿಯಿರದ ಖಾತೆಯನ್ನು ಗುರುತಿಸಿ, ಅಂತಹ ಖಾತೆಗಳಿಂದ ಹಣ ತೆಗೆಯುತ್ತಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

ಇನ್ನೆರಡು ಇಲಾಖೆಗಳಲ್ಲಿ ಶಂಕೆ: ಪ್ರವಾಸೋದ್ಯಮ ಇಲಾಖೆಯ ಮಾದರಿಯಲ್ಲೇ ಜವಳಿ ಹಾಗೂ ಕೈಮಗ್ಗ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲೂ ಹಣ ಅಕ್ರಮ ವರ್ಗಾವಣೆಯಾಗಿದೆ. ಆದರೆ, ಎಷ್ಟು ಮೊತ್ತ ವರ್ಗಾವಣೆಯಾಗಿದೆ ಎಂಬ ಲೆಕ್ಕ ಇಲಾಖೆ ಅಧಿಕಾರಿಗಳಿಗೆ ಇನ್ನೂ ಸಿಕ್ಕಿಲ್ಲ.

ಸಹಾಯಕ ವ್ಯವಸ್ಥಾಪಕಿ ಬಂಧನ

ಸರ್ಕಾರದ ವಿವಿಧ ಇಲಾಖೆಗಳ ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿದಂತೆ ಗುರುವಾರ ಐಡಿಬಿಐ ಬ್ಯಾಂಕ್‌ನ ಸಹಾಯಕ ವ್ಯವಸ್ಥಾಪಕಿ ಸರಸ್ವತಿ ಎಂಬುವರನ್ನು ಬಂಧಿಸಲಾಗಿದೆ. ಬ್ಯಾಂಕ್ ಸಿಬ್ಬಂದಿ ಸೂರಜ್ ಸಗರ, ರೋಹಿತ್ ಜತೆಗೆ ಸೂರಜ್‌ನ ಆರು ಜನ ಸ್ನೇಹಿತರನ್ನು ಈಗಾಗಲೇ ಬಂಧಿಸಲಾಗಿದೆ.

ಸುದ್ದಿ 2 ನಿಮಿಷ

ರಾಜೀನಾಮೆ ಕೊಟ್ಟು ತನಿಖೆ ಎದುರಿಸಿ: ಸಿ.ಎಂಗೆ ಸವಾಲು

ನವದೆಹಲಿ: ವಾಲ್ಮೀಕಿ ಅಭಿವೃದ್ಧಿ ನಿಗಮ ಹಾಗೂ ಮುಡಾ ಹಗರಣದಲ್ಲಿ ಭಾಗಿಯಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ತನಿಖೆ ಎದುರಿಸಬೇಕು ಎಂದು ಕೇಂದ್ರ ಸಚಿವರು ಸವಾಲು ಎಸೆದಿದ್ದಾರೆ.

ಗುರುವಾರ ಇಲ್ಲಿ ಪ್ರತ್ಯೇಕವಾಗಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆಹಾರ ಸಚಿವ ಪ್ರಲ್ಹಾದ ಜೋಶಿ ಹಾಗೂ ಸಣ್ಣ, ಮಧ್ಯಮ ಕೈಗಾರಿಕಾ ಖಾತೆಯ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಅವರು ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದರು.

ಶೋಭಾ ಕರಂದ್ಲಾಜೆ ಮಾತನಾಡಿ, 'ಮುಡಾ ನನಗೆ ಪರಿಹಾರ ನೀಡಬೇಕು ಎಂದು ಸಿದ್ದರಾಮಯ್ಯ ಅವರೇ ಹೇಳಿದ್ದರು. ರಾಜ್ಯಪಾಲರು ನೋಟಿಸ್ ನೀಡಿದ ಬಳಿಕ ಕಾನೂನು ಸಮರಕ್ಕೆ ಮುಂದಾಗಿದ್ದಾರೆ. ತಪ್ಪು ಮಾಡಿಲ್ಲದಿದ್ದರೆ ಭಯ ಪಡುವುದು ಏಕೆ. ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿ ತನಿಖೆ ಎದುರಿಸಿ' ಎಂದರು.

'ರಾಜ್ಯಪಾಲರನ್ನು ಹೆದರಿಸುವ ಕೆಲಸವನ್ನು ಇಂದಿನ ಸಚಿವ ಸಂಪುಟ ಸಭೆಯಲ್ಲಿ ಮಾಡಲಾಗಿದೆ. ಅವರು ಹೆದರಬಾರದು. ಬಿ.ಎಸ್. ಯಡಿಯೂರಪ್ಪ ಅವರ ವಿರುದ್ಧ ಆರೋಪ ಬಂದಿತ್ತು, ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ತನಿಖೆ ಎದುರಿಸಿದ್ದರು' ಎಂದರು.

ಪ್ರಲ್ಹಾದ ಜೋಶಿ ಮಾತನಾಡಿ, 'ವಾಲ್ಮೀಕಿ ನಿಗಮದಲ್ಲಿ ₹189 ಕೋಟಿ ಹಗರಣ ನಡೆದಿರುವುದನ್ನು ಸಿದ್ದರಾಮಯ್ಯ ಅವರೇ ಒಪ್ಪಿಕೊಂಡಿದ್ದಾರೆ. ಇದು ಶೇ 80 ಕಮಿಷನ್ ಸರ್ಕಾರ' ಎಂದು ಕಿಡಿಕಾರಿದರು.



₹500 ಆಸೆಗೆ ಜೈಲು ಪಾಲಾದ ಎಸ್‌ಡಿಎ

ಬೀದರ್: ಸಹಾಯಧನದ ಚೆಕ್ ನೀಡಲು ಫಲಾನುಭವಿಯಿಂದ ₹500 ಲಂಚ ಪಡೆಯುವಾಗ ಸಿಕ್ಕಿ ಬಿದ್ದಿದ್ದ ಬಸವಕಲ್ಯಾಣ ತಹಶೀಲ್ದಾರ್ ಕಚೇರಿಯ ದ್ವಿತೀಯ ದರ್ಜೆ ಸಹಾಯಕಿ ಜಯಶ್ರೀ ಬಸವರಾಜ ಅವರಿಗೆ ಇಲ್ಲಿಯ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯವು ಒಂದು ವರ್ಷ ಜೈಲು ಶಿಕ್ಷೆ ಹಾಗೂ ದಂಡ ವಿಧಿಸಿದೆ.

ಲಂಚ ನಿಷೇಧ ಕಾಯ್ದೆಯ ಕಲಂ 13(2) ಅಡಿ 1 ವರ್ಷ ಜೈಲು ಹಾಗೂ ₹5 ಸಾವಿರ ದಂಡ, ಕಲಂ 7ರ ಅಡಿ 6 ತಿಂಗಳು ಜೈಲು ಹಾಗೂ ₹5 ಸಾವಿರ ದಂಡ ವಿಧಿಸಿದ್ದಾರೆ. ದಂಡ ಭರಿಸಲು ತಪ್ಪಿದಲ್ಲಿ 6 ತಿಂಗಳು ಹೆಚ್ಚುವರಿಯಾಗಿ ಜೈಲು ಶಿಕ್ಷೆ ವಿಧಿಸಿ ನ್ಯಾಯಾಧೀಶ ವಿಜಯಕುಮಾರ ಆನಂದಶೆಟ್ಟಿ ಬುಧವಾರ ಆದೇಶ ನೀಡಿದ್ದಾರೆ.

ಬಸವಕಲ್ಯಾಣ ತಾಲ್ಲೂಕಿನ ಭೋಸಗಾ ಗ್ರಾಮದ ಲಲಿತಾಬಾಯಿ ಪುರುಷೋತ್ತಮ ಅವರಿಗೆ ರಾಷ್ಟ್ರೀಯ ಸಾಮಾಜಿಕ ಭದ್ರತಾ ಯೋಜನೆಯಡಿ ₹10 ಸಾವಿರ ಸಹಾಯಧನ ಮಂಜೂರಾತಿ ಹಾಗೂ ಚೆಕ್ ನೀಡಿಕೆಗೆ ₹500 ಲಂಚಕ್ಕೆ ಬೇಡಿಕೆಯಿಟ್ಟಿದ್ದ ಜಯಶ್ರೀ 2013ರ ಜನವರಿ 30ರಂದು ಫಲಾನುಭವಿಯಿಂದ ಲಂಚ ಪಡೆಯುವಾಗ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದರು.

ಅಂದಿನ ಲೋಕಾಯುಕ್ತ ಪೊಲೀಸ್ ಇನ್‌ಸ್ಪೆಕ್ಟರ್ ಆರ್.ಎಸ್. ಜಹಗೀರದಾರ್ ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಸೈಬರ್ ಭದ್ರತಾ ನೀತಿ ಜಾರಿ: ಪ್ರಿಯಾಂಕ್

ಸೈಬರ್ ಜಾಗೃತಿ, ಸ್ಟಾರ್ಟ್ ಅಪ್‌ಗಳಿಗೆ ಪ್ರೋತ್ಸಾಹ ಈ ನೀತಿಯ ಉದ್ದೇಶ

ಪ್ರಜಾವಾಣಿ ವಾರ್ತೆ



ಐಟಿಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಅವರು 'ಸೈಬರ್ ಭದ್ರತಾ ನೀತಿ–2024'ನ್ನು ಬಿಡುಗಡೆ ಮಾಡಿದರು. ಇ–ಆಡಳಿತ ಕಾರ್ಯದರ್ಶಿ ಉಜ್ವಲ್‌ಕುಮಾರ್ ಘೋಷ್, ಎಲೆಕ್ಟ್ರಾನಿಕ್ಸ್, ಐಟಿ, ಬಿಟಿ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿ ಏಕ್‌ರೂಪ್ ಕೌರ್ ಮತ್ತಿತರರು ಜತೆಗಿದ್ದರು —ಪ್ರಜಾವಾಣಿ ಚಿತ್ರ

ಬೆಂಗಳೂರು: 'ರಾಜ್ಯದಲ್ಲಿ ಇತ್ತೀಚಿನ ವರ್ಷಗಳಲ್ಲಿ ಸೈಬರ್ ಅಪರಾಧ ಪ್ರಕರಣಗಳು ಹೆಚ್ಚುತ್ತಿದ್ದು, ಅದನ್ನು ತಡೆಯುವ ಉದ್ದೇಶದಿಂದ 'ಸೈಬರ್ ಭದ್ರತಾ ನೀತಿ–2024' ಅನ್ನು ಗುರುವಾರದಿಂದ (ಆಗಸ್ಟ್ 1) ಜಾರಿಗೆ ತರಲಾಗಿದೆ' ಎಂದು ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ನೀತಿಯನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು, 'ಸೈಬರ್ ಜಾಗೃತಿ ಮೂಡಿಸುವುದು, ಸ್ಟಾರ್ಟ್ ಅಪ್‌ಗಳಿಗೆ ಪ್ರೋತ್ಸಾಹ ನೀಡುವುದು, ಪರಸ್ಪರ ಸಹಕಾರದ ಮೂಲಕ ರಾಜ್ಯದ ಡಿಜಿಟಲ್ ವ್ಯವಸ್ಥೆಯನ್ನು ಸಂರಕ್ಷಿಸುವುದು ಈ ನೀತಿಯ ಮುಖ್ಯ ಉದ್ದೇಶ' ಎಂದರು.

'ಹೆಚ್ಚುತ್ತಿರುವ ಸೈಬರ್ ಭದ್ರತೆಯ ಅಗತ್ಯವನ್ನು ಮನಗಂಡು, ಸಾರ್ವಜನಿಕರು ಮತ್ತು ಉದ್ಯಮಿಗಳ ಹಿತ ಕಾಯುವ ಗುರಿಯೊಂದಿಗೆ ಈ ನೀತಿಯನ್ನು ನಿಖರವಾಗಿ ರೂಪಿಸಲಾಗಿದೆ' ಎಂದೂ ಅವರು ಹೇಳಿದರು. 'ಎರಡು ಭಾಗಗಳಲ್ಲಿ ಈ ನೀತಿಯನ್ನು ಜಾರಿಗೊಳಿಸಲಾಗುವುದು. ಮೊದಲ ಭಾಗವು ಸಾರ್ವಜನಿಕ, ಶೈಕ್ಷಣಿಕ, ಉದ್ಯಮ, ಸ್ಟಾರ್ಟ್‌ಅಪ್‌ಗಳು ಮತ್ತು ಸರ್ಕಾರವೂ ಸೇರಿದಂತೆ ಸಮಾಜದ ಎಲ್ಲ ವಿಭಾಗಗಳಲ್ಲಿ ಸೈಬರ್ ಭದ್ರತೆಯ ವಾತಾವರಣವನ್ನು ನಿರ್ಮಿಸುವುದರ ಮೇಲೆ ಕೇಂದ್ರೀಕೃತವಾಗಿದೆ. ಸಿಸ್ಕೊ ಸಂಸ್ಥೆಯ ಸಹಭಾಗಿತ್ವದಲ್ಲಿ ಸುರಕ್ಷಿತ ಡಿಜಿಟಲ್ ಪರಿಸರವನ್ನು ನಿರ್ಮಿಸಲಾಗುವುದು. ಮಹಿಳೆಯರ ಸಬಲೀಕರಣಕ್ಕೆ ವಿಶೇಷ ಒತ್ತು ನೀಡಲಾಗುವುದು. ಅಲ್ಲದೆ, 40 ಸಾವಿರ ಜನರಿಗೆ ತರಬೇತಿ ನೀಡುವ ಮೂಲಕ ಟೆಕ್ ವಲಯದಲ್ಲಿ ಉದ್ಯೋಗಾವಕಾಶಗಳನ್ನು ಹೆಚ್ಚಿಸಲಾಗುವುದು' ಎಂದು ಪ್ರಿಯಾಂಕ್ ಹೇಳಿದರು.

'ನೀತಿಯ ಎರಡನೇ ಭಾಗವು ರಾಜ್ಯದ ಐಟಿ ಸ್ವತ್ತುಗಳ ಸೈಬರ್ ಭದ್ರತೆ ಬಲಪಡಿಸುವುದರ ಮೇಲೆ ಕೇಂದ್ರೀಕೃತವಾಗಿದೆ. ಮೊದಲ ಭಾಗವು ಸಾರ್ವಜನಿಕ ಡೊಮೇನ್‌ನಲ್ಲಿದ್ದರೆ, ಎರಡನೇ ಭಾಗವು ರಾಜ್ಯದ ಐಟಿ ತಂಡಗಳು ಮತ್ತು ಇಲಾಖೆಗಳ ಐಟಿ ಅನುಷ್ಠಾನಗಳಿಗೆ ಆಂತರಿಕವಾಗಿರುತ್ತದೆ' ಎಂದೂ ಅವರು ತಿಳಿಸಿದರು.

'ಎಲೆಕ್ಟ್ರಾನಿಕ್ಸ್, ಐಟಿ-ಬಿಟಿ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಇ- ಆಡಳಿತ), ಗೃಹ ಇಲಾಖೆ, ಸರ್ಕಾರಿ ಮತ್ತು ಖಾಸಗಿ ವಲಯಗಳ ಸಂಬಂಧಿಸಿದ ಭಾಗೀದಾರಿಕೆಯಲ್ಲಿ, ಸಮಾಲೋಚಿಸಿ ಈ ನೀತಿಯನ್ನು ರೂಪಿಸಲಾಗಿದೆ' ಎಂದೂ ಅವರು ವಿವರಿಸಿದರು.

ಎಲೆಕ್ಟ್ರಾನಿಕ್ಸ್, ಐಟಿ- ಬಿಟಿ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿ ಎಂ.ಎಸ್. ಏಕ್‌ರೂಪ್ ಕೌರ್ ಮಾತನಾಡಿ, 'ಸೈಬರ್ ಕ್ಷೇತ್ರ ಭವಿಷ್ಯದಲ್ಲಿ ಹೆಚ್ಚು ಸಂಕೀರ್ಣವಾಗುವ ನಿರೀಕ್ಷೆಯಿದೆ, ನೆಟ್‌ವರ್ಕ್ ಮತ್ತು ಅದಕ್ಕೆ ಸಂಪರ್ಕಗೊಂಡಿರುವ ಸಾಧನಗಳಲ್ಲಿ ಹಲವು ಪಟ್ಟು ಹೆಚ್ಚಳವಾಗಲಿದೆ. ಆದ್ದರಿಂದ, ಸೈಬರ್ ಭದ್ರತಾ ನೀತಿಯ ಅವಶ್ಯವಿದೆ, ನಾವು ರೂಪಿಸಿರುವ ನೀತಿಯು ರಾಷ್ಟ್ರೀಯ ಸೈಬರ್ ಭದ್ರತಾ ನೀತಿಗೆ ಅನುಗುಣವಾಗಿದೆ' ಎಂದರು. ನೀತಿಯ ಕುರಿತು ಹೆಚ್ಚಿನ ಮಾಹಿತಿಗೆ https://itbtst.karnataka.gov.in ಸಂಪರ್ಕಿಸಬಹುದು.

ಜೆಡಿಎಸ್ ನಾಯಕತ್ವ ಅಪಹರಣಕ್ಕೆ ಬಿಜೆಪಿ ಯತ್ನ: ಡಿ.ಕೆ ಶಿವಕುಮಾರ್

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಜೆಡಿಎಸ್ ಪ್ರಾಬಲ್ಯದ ಕ್ಷೇತ್ರಗಳಲ್ಲಿ ಆ ಪಕ್ಷದವರನ್ನು ಪರಿಗಣಿಸದೆ ಬಿಜೆಪಿಯವರು ತಮಟೆ ಬಾರಿಸಿಕೊಂಡು ನಾಯಕತ್ವವನ್ನು-ಅಪಹರಿಸಲು ಹೋದರೆ ಅದನ್ನು ಸಹಿಸಿಕೊಳ್ಳಲು ಜೆಡಿಎಸ್‌ನವರಿಗೆ ಸಾಧ್ಯವೇ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪ್ರಶ್ನಿಸಿದರು.

ಸರ್ಕಾರದ ವಿರುದ್ಧ ಪಾದಯಾತ್ರೆ ವಿಚಾರದಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿಯಲ್ಲಿ ಅಪಸ್ವರ ಮೂಡಿರುವ ಬಗ್ಗೆ ಸುದ್ದಿಗಾರರಿಗೆ ಗುರುವಾರ ಪ್ರತಿಕ್ರಿಯಿಸಿದ ಅವರು, 'ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲದಲ್ಲಿ ಸುಮಾರು 10 ಕ್ಷೇತ್ರಗಳಲ್ಲಿ ಬಿಜೆಪಿಯವರು ಗೆಲುವು ಸಾಧಿಸಿದ್ದಾರೆ. ಮೈಸೂರು, ಮಂಡ್ಯ ಮತ್ತು ಬೆಂಗಳೂರು ಗ್ರಾಮಾಂತರ ಕ್ಷೇತ್ರಗಳು ಜೆಡಿಎಸ್ ನೆಲೆ. ಅಲ್ಲಿ ಜೆಡಿಎಸ್ ಅಸ್ತಿತ್ವವನ್ನು ಕಿತ್ತುಕೊಳ್ಳಲು ಬಿಜೆಪಿ ಮುಂದಾಗುವುದು ಹೇಗೆ' ಎಂದು ಕೇಳಿದರು.

'ಈ ವಿಚಾರಕ್ಕೇ ಮೈತ್ರಿಯಲ್ಲಿ ತಿಕ್ಕಾಟ ನಡೆಯುತ್ತಿರಬಹುದು. ಕುಮಾರಸ್ವಾಮಿ ಅವರು ತಮ್ಮ ಪಕ್ಷ ಹಾಗೂ ತಮ್ಮ ರಾಜಕೀಯ ಅಸ್ತಿತ್ವವನ್ನು ಉಳಿಸಿಕೊಳ್ಳುತ್ತಾರೆ ಎಂದು ನಾನು ಭಾವಿಸಿದ್ದೇನೆ' ಎಂದರು.

ಪಾದಯಾತ್ರೆಗೆ ತಿರುಗೇಟು ನೀಡಲು ಸಿದ್ಧತೆ: 'ಬಿಜೆಪಿ–ಜೆಡಿಎಸ್ ಹಮ್ಮಿಕೊಳ್ಳಲು ಉದ್ದೇಶಿಸಿರುವ ಪಾದಯಾತ್ರೆಗೆ ತಿರುಗೇಟು ನೀಡಲು ನಾವು ಸಿದ್ಧತೆಯನ್ನು ಮಾಡಿಕೊಳ್ಳುತ್ತಿದ್ದೇವೆ. ಬಿಜೆಪಿ ಸರ್ಕಾರದ ಅವಧಿಯ 30 ಹಗರಣಗಳಿವೆ. ಪ್ರತಿ ದಿನವೂ ಒಂದೊಂದು ಹಗರಣ ಬಿಚ್ಚಿಡುತ್ತೇವೆ. ಅವರ ಪಾದಯಾತ್ರೆ ಅಂತಿಮ ರೂಪುರೇಷೆ ಬಂದರೆ, ನಾವು ನಮ್ಮ ಕಾರ್ಯಸೂಚಿ ತೀರ್ಮಾನಿಸುತ್ತೇವೆ' ಎಂದು ಹೇಳಿದರು.

ಪ್ರಜ್ವಲ್ ಪ್ರಕರಣ: ವಿಡಿಯೊ ಅಸಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯರ ಮೇಲೆ ಅತ್ಯಾಚಾರ ನಡೆಸಿದ ಆರೋಪದಡಿ ಮಾಜಿ ಸಂಸದ, ಜೆಡಿಎಸ್‌ನ ಪ್ರಜ್ವಲ್ ರೇವಣ್ಣ ಅವರ ವಿರುದ್ಧ ದಾಖಲಾಗಿದ್ದ ಪ್ರಕರಣದಲ್ಲಿ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ್ದ 'ವಿಡಿಯೊಗಳು ಅಸಲಿ' ಎಂಬುದು ವಿಧಿ ವಿಜ್ಞಾನ ಪ್ರಯೋಗಾಲಯದ(ಎಫ್‌ಎಸ್‌ಎಲ್) ಪರೀಕ್ಷೆಯಲ್ಲಿ ದೃಢಪಟ್ಟಿದೆ.



ಅತ್ಯಾಚಾರ ಪ್ರಕರಣ ದಾಖಲಾದ ಮೇಲೆ 'ಅಶ್ಲೀಲ' ವಿಡಿಯೊಗಳನ್ನು ತನಿಖಾಧಿಕಾರಿಗಳು ಜಪ್ತಿ ಮಾಡಿಕೊಂಡಿದ್ದರು. ಎಲ್ಲ ವಿಡಿಯೊಗಳನ್ನು ಎಫ್‌ಎಸ್‌ಎಲ್‌ಗೆ ಕಳುಹಿಸಲಾಗಿತ್ತು. ಎಫ್‌ಎಸ್‌ಎಲ್ ವರದಿಯು ಎಸ್‌ಐಟಿ ಅಧಿಕಾರಿಗಳ ಕೈಸೇರಿದ್ದು, 'ವಿಡಿಯೊಗಳು ನೈಜವಾಗಿವೆ. ಯಾವುದೇ ತಿರುಚುವಿಕೆ ನಡೆದಿಲ್ಲ'ಎಂದು ವರದಿಯಲ್ಲಿದೆ ಎಂದು ಮೂಲಗಳು ತಿಳಿಸಿವೆ.

'ವಿಡಿಯೊಗಳು ಅಸಲಿ ಎಂಬುದು ಗೊತ್ತಾಗಿದ್ದು, ವಿಡಿಯೊದಲ್ಲಿರುವ ವ್ಯಕ್ತಿ ಯಾರು ಎಂಬುದನ್ನು ತನಿಖೆಯಿಂದ ಪತ್ತೆ ಹಚ್ಚಬೇಕಿದೆ' ಎಂದು ಮೂಲಗಳು ಹೇಳಿವೆ. 'ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ್ದ ಅಶ್ಲೀಲ ವಿಡಿಯೊಗಳಲ್ಲಿ ಪುರುಷನ ಮುಖ ಪ್ರದರ್ಶಿಸಿಲ್ಲ. ಹೀಗಾಗಿ, ವಿಡಿಯೊದಲ್ಲಿರುವ ವ್ಯಕ್ತಿಗೂ, ಬಂಧಿತ ಆರೋಪಿಗೂ ಹೋಲಿಕೆ ಮಾಡಿ ತನಿಖೆ ನಡೆಸಲಾಗುತ್ತಿದೆ' ಎಂದು ತನಿಖಾಧಿಕಾರಿಯೊಬ್ಬರು ತಿಳಿಸಿದ್ದಾರೆ.

ಆರೋಪ ಪಟ್ಟಿ ಸಲ್ಲಿಕೆಗೆ ಸಿದ್ಧತೆ: ಪ್ರಕರಣದ ತನಿಖೆ ಚುರುಕುಗೊಳಿಸಲಾಗಿದೆ. ತನಿಖೆಯನ್ನು ಶೀಘ್ರದಲ್ಲೇ ಪೂರ್ಣಗೊಳಿಸಿ ಆರೋಪ ಪಟ್ಟಿ ಸಲ್ಲಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

ರೇವಣ್ಣ ಜಾಮೀನು ರದ್ದು: ಆದೇಶ ಕಾಯ್ದಿರಿಸಿದ ಹೈಕೋರ್ಟ್

ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ಸಂಬಂಧಿಸಿದ ಪ್ರಕರಣದಲ್ಲಿ ಸಂತ್ರಸ್ತ ಮಹಿಳೆಯನ್ನು ಅಪಹರಣ ಮಾಡಿದ ಆರೋಪದಲ್ಲಿ ಶಾಸಕ ಎಚ್.ಡಿ.ರೇವಣ್ಣ ಅವರಿಗೆ ಮಂಜೂರು ಮಾಡಿದ್ದ ಜಾಮೀನು ರದ್ದುಪಡಿಸುವಂತೆ ಕೋರಿದ ಅರ್ಜಿಯ ಮೇಲಿನ ವಿಚಾರಣೆಯನ್ನು ಹೈಕೋರ್ಟ್ ಪೂರ್ಣಗೊಳಿಸಿದೆ.

ಈ ಸಂಬಂಧ ಎಸ್‌ಐಟಿ ಸಲ್ಲಿಸಿದ್ದ ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಗುರುವಾರ ಸುದೀರ್ಘ ವಿಚಾರಣೆ ಪೂರ್ಣಗೊಳಿಸಿ ಆದೇಶ ಕಾಯ್ದಿರಿಸಿರುವುದಾಗಿ ಪ್ರಕಟಿಸಿದರು.

ಎಸ್‌ಐಟಿ ಪರ ವಿಶೇಷ ಪ್ರಾಸಿಕ್ಯೂಟರ್ ಆದ ಹಿರಿಯ ವಕೀಲ ರವಿವರ್ಮ ಕುಮಾರ್ ಮತ್ತು ಎಚ್.ಡಿ.ರೇವಣ್ಣ ಪರ ಹಿರಿಯ ವಕೀಲ ಸಿ.ವಿ.ನಾಗೇಶ್ ವಾದ ಮಂಡಿಸಿದರು.

ದೋಷಾರೋಪ ಪಟ್ಟಿ ಸಲ್ಲಿಕೆ

ಪ್ರಜ್ವಲ್ ರೇವಣ್ಣ ಮೇಲೆ ಇರುವ ಲೈಂಗಿಕ ದೌರ್ಜನ್ಯ ಮತ್ತು ಅತ್ಯಾಚಾರ ಆರೋಪ ಪ್ರಕರಣದಲ್ಲಿ ಸಂತ್ರಸ್ತ ಮಹಿಳೆಯ ಅಪಹರಣದ ಆರೋಪದಡಿ ಶಾಸಕ ಎಚ್.ಡಿ.ರೇವಣ್ಣ ಮತ್ತು ಏಳು ಜನರ ವಿರುದ್ಧ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ.



ಈ ಸಂಬಂಧ ಪ್ರಾಸಿಕ್ಯೂಷನ್ ಪರ ವಕೀಲರು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ (42ನೇ ಎಸಿಎಂಎಂ) ನ್ಯಾಯಾಲಯಕ್ಕೆ ಗುರುವಾರ ದೋಷಾರೋಪ ಪಟ್ಟಿ ಸಲ್ಲಿಸಿದರು. ಪಟ್ಟಿಯಲ್ಲಿ ಎಚ್.ಡಿ.ರೇವಣ್ಣ ಅವರ ಪತ್ನಿ ಭವಾನಿ 8ನೇ ಆರೋಪಿ ಎಂದು ಪರಿಗಣಿಸಲಾಗಿದೆ.

ದೋಷಾರೋಪ ಪಟ್ಟಿಯಲ್ಲಿ, 'ರೇವಣ್ಣ ಮತ್ತು ಭವಾನಿ ಆಣತಿಯ ಮೇರೆಗೆ ಸಂತ್ರಸ್ತೆಯ ಅಪಹರಣ ಮಾಡಲಾಗಿದೆ. ಆಕೆಯನ್ನು ಹೊಳೆನರಸೀಪುರಕ್ಕೆ ಕರೆಸಿ ಬೆದರಿಕೆ ಹಾಕಿ, ಏಳನೇ ಆರೋಪಿಯ ಮನೆಯಲ್ಲಿ ಇರಿಸಲಾಗಿತ್ತು. ಏಳನೇ ಆರೋಪಿ ರೇವಣ್ಣ ಅವರ ವಿಶೇಷ ಕರ್ತವ್ಯ ಅಧಿಕಾರಿಯಾಗಿ ಕೆಲಸ ಮಾಡುತ್ತಾ ಇದ್ದರು ಎಂಬಂತಹ ಅಂಶಗಳು ಒಳಗೊಂಡಿವೆ' ಎಂದು ಪ್ರಾಸಿಕ್ಯೂಷನ್ ಮೂಲಗಳು ತಿಳಿಸಿವೆ.

ಸಂಕ್ಷಿಪ್ತ ಸುದ್ದಿ

ಸಾರಿಗೆ ನೇಮಕಾತಿ: ಅಂಕಗಳ ಪಟ್ಟಿ ಪ್ರಕಟ

ಬೆಂಗಳೂರು: ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಹಾಗೂ ಕೆಯುಡಬ್ಲ್ಯುಎಸ್‌ಡಿಬಿಯ ಖಾಲಿ ಹುದ್ದೆಗಳಿಗೆ ನಡೆಸಲಾಗಿದ್ದ ಲಿಖಿತ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಪಡೆದ ತಾತ್ಕಾಲಿಕ ಅಂಕಗಳ ಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಬಿಡುಗಡೆ ಮಾಡಿದೆ.

ಬೆಂಗಳೂರು ಮಹಾನಗರ ಸಾರಿಗೆ ನಿಗಮದ ನಿರ್ವಾಹಕರ ಹುದ್ದೆಗಳು, ಕರ್ನಾಟಕ ನಗರ ನೀರು ಸರಬರಾಜು ಮಂಡಳಿಯ ಪ್ರಥಮ ದರ್ಜೆ ಸಹಾಯಕರು ಹಾಗೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಿವಿಧ ಹುದ್ದೆಗಳಿಗೆ ಇದೇ ಜುಲೈ 13 ಮತ್ತು 14ರಂದು ಲಿಖಿತ ಪರೀಕ್ಷೆ ನಡೆಸಲಾಗಿತ್ತು.

ತಾತ್ಕಾಲಿಕ ಅಂಕಗಳ ಪಟ್ಟಿಗೆ ಆಕ್ಷೇಪಣೆಗಳನ್ನು ಆ.3ರ ಸಂಜೆ 5.30ರ ಒಳಗೆ ಪ್ರಾಧಿಕಾರದ ವೆಬ್‌ಸೈಟ್ ಮೂಲಕ ನಿಗದಿತ ಲಿಂಕ್ ಬಳಸಿ ಸಲ್ಲಿಸಬೇಕು ಎಂದು ಕೆಇಎ ಹೇಳಿದೆ.

ಗೆಜೆಟೆಡ್ ಪ್ರೊಬೇಷನರಿ: 25ರ ಪರೀಕ್ಷೆ ಮುಂದೂಡಿಕೆ ಪರಿಗಣನೆ

ಬೆಂಗಳೂರು: 'ವಿವಿಧ ಬ್ಯಾಂಕುಗಳಲ್ಲಿ ಖಾಲಿ ಇರುವ ಗುಮಾಸ್ತ ಹುದ್ದೆಗಳಿಗೆ ಬ್ಯಾಂಕಿಂಗ್ ಸಿಬ್ಬಂದಿ ನೇಮಕಾತಿ ಸಂಸ್ಥೆಯು (ಐಬಿಪಿಎಸ್) ಇದೇ 25ರಂದು ಪರೀಕ್ಷೆ ನಡೆಸಲಿರುವ ಕಾರಣ ಅದೇ ದಿನ ನಿಗದಿಯಾಗಿರುವ 2023–24ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ (384 ಹುದ್ದೆ) ಪೂರ್ವಭಾವಿ ಪರೀಕ್ಷೆಯನ್ನು ಮುಂದೂಡಬೇಕೆಂಬ ಅಭ್ಯರ್ಥಿಗಳ ಬೇಡಿಕೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸುತ್ತಿದೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಈ ಕುರಿತು ತಮ್ಮ 'ಎಕ್ಸ್' ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, 'ಐಬಿಪಿಎಸ್ ಪರೀಕ್ಷೆಯ ಕಾರಣಕ್ಕೆ ಗೆಜೆಟೆಡ್ ಪ್ರೊಬೇಷನರಿ ಪರೀಕ್ಷೆ ಮುಂದೂಡುವಂತೆ ಮುಖ್ಯಮಂತ್ರಿ ಬಳಿ ನಾನು ಮನವಿ ಮಾಡಿದ್ದೇನೆ' ಎಂದಿದ್ದಾರೆ.

'ಐಬಿಪಿಎಸ್ ಪರೀಕ್ಷೆಗಳನ್ನು ಮುಂದೂಡುವಂತೆ ಈ ಹಿಂದೆಯೇ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದೆವು. ಆದರೆ, ಇನ್ನೂ ಪ್ರತಿಕ್ರಿಯೆ ಬಂದಿಲ್ಲ. ಹೀಗಾಗಿ, ಗೆಜೆಟೆಡ್ ಪ್ರೊಬೇಷನರಿ ಪರೀಕ್ಷೆಯನ್ನು ಮುಂದೂಡುವ ಬಗ್ಗೆ ಪರಿಶೀಲಿಸುವುದಾಗಿ ನಾನು ಭರವಸೆ ನೀಡುತ್ತೇನೆ. ಅಭ್ಯರ್ಥಿಗಳ ಕಾಳಜಿಗೆ ನಮ್ಮ ಆದ್ಯತೆ' ಎಂದೂ ಹೇಳಿದ್ದಾರೆ.

ನಟ ದರ್ಶನ್ ನ್ಯಾಯಾಂಗ ಬಂಧನದ ಅವಧಿ ವಿಸ್ತರಣೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿಗಳಾದ ನಟ ದರ್ಶನ್ ಸೇರಿ 17 ಮಂದಿಯ ನ್ಯಾಯಾಂಗ ಬಂಧನದ ಅವಧಿಯನ್ನು ಮತ್ತೆ ವಿಸ್ತರಿಸಿ 24ನೇ ಎಸಿಎಂಎಂ ನ್ಯಾಯಾಲಯ ಗುರುವಾರ ಆದೇಶಿಸಿದೆ.



ಎಲ್ಲ ಆರೋಪಿಗಳನ್ನು ಕಾರಾಗೃಹದಿಂದಲೇ ವಿಡಿಯೊ ಕಾನ್ಫರೆನ್ಸ್ ಮೂಲಕ ಹಾಜರು ಪಡಿಸಲಾಯಿತು. ಆರೋಪಿಗಳಿಂದ ಕೆಲವು ಮಾಹಿತಿ ಪಡೆದ ನ್ಯಾಯಾಧೀಶರು, ಆಗಸ್ಟ್ 14ರ ವರೆಗೆ ನ್ಯಾಯಾಂಗ ಬಂಧನದ ಅವಧಿ ವಿಸ್ತರಣೆ ಮಾಡಿ ಆದೇಶ ಹೊರಡಿಸಿದರು.

ಈ ಹಿಂದೆ (ಜುಲೈ 18) ಆರೋಪಿಗಳನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ನ್ಯಾಯಾಧೀಶರ ಎದುರು ಹಾಜರು ಪಡಿಸಿದಾಗ ಆಗಸ್ಟ್ 1ರ ವರೆಗೆ ನ್ಯಾಯಾಂಗ ಬಂಧನ ವಿಧಿಸಲಾಗಿತ್ತು. ಮತ್ತೆ ಅವಧಿ ವಿಸ್ತರಣೆ ಮಾಡಲಾಗಿದೆ.

ಆರೋಪಿಗಳಾದ ದರ್ಶನ್, ಪವಿತ್ರಾಗೌಡ, ಪ್ರದೋಷ್, ವಿನಯ್ ಸೇರಿ ಎಲ್ಲ ಆರೋಪಿಗಳನ್ನು ಪ್ರತ್ಯೇಕ ಕೊಠಡಿಯಲ್ಲಿ ಕೂರಿಸಿ, ನ್ಯಾಯಾಧೀಶರ ಎದುರು ಹಾಜರು ಪಡಿಸಲಾಯಿತು. ದರ್ಶನ್ ಸೇರಿ 14 ಮಂದಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಇದ್ದಾರೆ. ರವಿಶಂಕರ್, ಕಾರ್ತಿಕ್ ಅಲಿಯಾಸ್ ಕಪ್ಪೆ, ಕೇಶವಮೂರ್ತಿ, ನಿಖಿಲ್ ನಾಯಕ್ ಅವರನ್ನು ತುಮಕೂರು ಕಾರಾಗೃಹದಲ್ಲಿ ಇರಿಸಲಾಗಿದೆ.

ಹಲ್ಲೆಯಾಗಿದ್ದು ಯುವತಿಗೆ; ಮಂಗಳಮುಖಿಗಲ್ಲ: ಎಸ್‌ಪಿ

ವಿಜಯಪುರ: ನಗರದಲ್ಲಿ ಮಂಗಳಮುಖಿಯೊಬ್ಬರನ್ನು ಸಾರ್ವಜನಿಕವಾಗಿ ವಿವಸ್ತ್ರಗೊಳಿಸಿ, ಗುಪ್ತಾಂಗಕ್ಕೆ ಖಾರದ ಪುಡಿ ಹಾಕಿ, ಅಮಾನವೀಯವಾಗಿ ಹಲ್ಲೆ ಮಾಡಿದ ಪ್ರಕರಣಕ್ಕೆ ಹೊಸ ತಿರುವು ಸಿಕ್ಕಿದೆ.

'ಹಲ್ಲೆಗೊಳಗಾದ ಸಂತ್ರಸ್ತೆಯು ಮಂಗಳಮುಖಿ ಅಲ್ಲ, ಆಕೆ ವಿಜಯಪುರ ಸಮೀಪದ ಗ್ರಾಮದ ಯುವತಿ. ಪುಣೆಯಲ್ಲಿ ಮಂಗಳಮುಖಿಯರ ಜೊತೆಯಿದ್ದರು. ವೈಯಕ್ತಿಕ ಭಿನ್ನಾಭಿಪ್ರಾಯ ತಲೆದೋರಿ, ಆಕೆಯ ಮೇಲೆ ಮಂಗಳಮುಖಿಯರು ಹಲ್ಲೆ ನಡೆಸಿದರು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಋಷಿಕೇಶ ಸೋನಾವಣೆ ತಿಳಿಸಿದರು.

'ಹಲ್ಲೆ ಪ್ರಕರಣದ ಆರೋಪದ ಮೇಲೆ ಮಂಗಳಮುಖಿಯರಾದ ಕೊಪ್ಪಳ ಜಿಲ್ಲೆ ಕಾರಟಗಿ ತಾಲ್ಲೂಕಿನ ಬಸವಣ್ಣ ಕ್ಯಾಂಪ್‌ನ ಜಿ.ಹುಲಗೆಮ್ಮ(26), ಮಹಾರಾಷ್ಟ್ರದ ಲಾತೂರು ಜಿಲ್ಲೆಯ ಸತಾಳ ಗ್ರಾಮದ ಕವಿತಾ(26), ಯಾದಗಿರಿ ಜಿಲ್ಲೆ ನಾರಾಯಣಪುರದ ಮಹಾನಮ್ಮ(48), ವಿಜಯಪುರ ಜಿಲ್ಲೆ ತಾಳಿಕೋಟೆ ತಾಲ್ಲೂಕು ಕೊಣ್ಣೂರಿನ ಅಶ್ವಿನಿ(23) ಮತ್ತು ಯಾದಗಿರಿ ಜಿಲ್ಲೆ ಗದ್ದೆಮ್ಮಕಟ್ಟೆಯ ಬಸಮ್ಮ (28) ಎಂಬುವರನ್ನು ಬಂಧಿಸಲಾಗಿದೆ' ಎಂದು ಅವರು ಹೇಳಿದರು. 'ಬೇರೆ ಬೇರೆ ಜಿಲ್ಲೆಯ ಆರೋಪಿಗಳು ಮಹಾರಾಷ್ಟ್ರದ ಪುಣೆಯಲ್ಲಿ ನೆಲೆಸಿದ್ದರು. ಹಲ್ಲೆ ಪ್ರಕರಣದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ಹಿನ್ನೆಲೆಯ ಲ್ಲಿ ಗೋಳಗುಮ್ಮಟ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಯಿತು. ತನಿಖಾ ತಂಡ ರಚಿಸಿ, 24 ಗಂಟೆಗಳಲ್ಲಿ ಐವರನ್ನು ಬಂಧಿಸಲಾಯಿತು' ಎಂದು ಅವರು ತಿಳಿಸಿದರು.

'ಬೆಳೆ ವಿಮೆ: ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆಗೆ ಒಪ್ಪಿಗೆ'

ಉಡುಪಿ: ಕೇಂದ್ರ ಸರ್ಕಾರದ ಹವಾಮಾನ ಆಧರಿತ ಬೆಳೆ ವಿಮೆಗೆ ಅರ್ಜಿ ಸಲ್ಲಿಸುವ ಅವಧಿಯನ್ನು ಆಗಸ್ಟ್ ತಿಂಗಳ ಅಂತ್ಯದವರೆಗೆ ವಿಸ್ತರಿಸಲು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಸಮ್ಮತಿಸಿ, ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ ಎಂದು ಸಂಸದ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದ್ದಾರೆ.

'ಉಡುಪಿ-ಚಿಕ್ಕಮಗಳೂರು ಸೇರಿದಂತೆ ರಾಜ್ಯದ ರೈತರು ಈ ಯೋಜನೆಯ ಸದುಪಯೋಗ ಪಡೆಯುತ್ತಿದ್ದಾರೆ. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಕೆ ಪ್ರಾರಂಭವಾದ ಬಳಿಕ ಕೆಲ ತೊಡಕುಗಳಿಂದಾಗಿ ರೈತರಿಗೆ ಅರ್ಜಿ ಸಲ್ಲಿಸಲು ಸಾಧ್ಯವಾಗಿಲ್ಲ ಎಂಬ ವಿಷಯವನ್ನು ಸಂಸತ್ತಿನಲ್ಲಿ ಸಚಿವರ ಗಮನಕ್ಕೆ ತಂದಿದ್ದೇನೆ. ನನ್ನ ಮನವಿಗೆ ಅವರು ಸ್ಪಂದಿಸಿದ್ದಾರೆ' ಎಂದು ತಿಳಿಸಿದ್ದಾರೆ.

ನೋಟ್‌ಬುಕ್‌ಗಳ ಭಾರ ಇಳಿಸಲು ಶಿಕ್ಷಣ ಇಲಾಖೆ ಕ್ರಮ

ಶಾಲಾ ಮಕ್ಕಳ ಬ್ಯಾಗ್ ಮತ್ತಷ್ಟು ಹಗುರವಾಗಲಿದೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಕ್ಕಳ ಬ್ಯಾಗ್ ಹೊರೆ ತಗ್ಗಿಸಲು ಪ್ರತಿ ವಿಷಯದ ಪಠ್ಯಪುಸ್ತಕವನ್ನು ಎರಡು ಭಾಗವಾಗಿ ಮುದ್ರಿಸಿ, ಸೆಮಿಸ್ಟರ್ ರೀತಿ ಬಳಕೆ ಮಾಡಲು ಕ್ರಮ ಕೈಗೊಂಡಿದ್ದ ಶಾಲಾ ಶಿಕ್ಷಣ ಇಲಾಖೆ, ಈಗ ನೋಟ್‌ಬುಕ್‌ಗಳ ಸಂಖ್ಯೆಯನ್ನೂ ಕಡಿಮೆ ಮಾಡಲು ಚಿಂತನೆ ನಡೆಸಿದೆ.



ಒಂದೇ ನೋಟ್ ಬುಕ್‌ಗಳಲ್ಲಿ ಹಲವು ವಿಷಯಗಳನ್ನು ಬರೆದುಕೊಳ್ಳಲು ಅನುಕೂಲವಾಗುವಂತೆ ವಿನ್ಯಾಸಗೊಳಿಸಲು ನೋಟ್‌ಬುಕ್ ಮುದ್ರಕರ ಜೊತೆ ಮಾತುಕತೆ ನಡೆಸುತ್ತಿದೆ. ಶಾಲೆಯಲ್ಲಿ ಶಿಕ್ಷಕರು ಹೇಳುವ ಪ್ರತಿ ವಿಷಯದ ಬರವಣಿಗೆಯನ್ನು ಆಯಾ ವಿಭಾಗಗಳಲ್ಲಿ ಬರೆದುಕೊಳ್ಳಬಹುದು. ಒಂದು ನೋಟ್‌ಬುಕ್‌ನ ಹಾಳೆಗಳನ್ನು ಸುಲಭವಾಗಿ ಬೇರ್ಪಡಿಸಲು ಅನುಕೂಲವಾಗುವಂತೆ ಸಾಮಾನ್ಯ ಹಾಳೆಗಳು, ಬೈಂಡಿಂಗ್ ಹಾಗೂ ಸ್ಟೀಲ್ ಕ್ಲಿಪ್‌ಗಳನ್ನು ಬಳಸಿ ವಿನ್ಯಾಸಗೊಳಿಸಲಾಗುತ್ತದೆ. ಮಕ್ಕಳು ಮನೆಗೆ ತೆರಳಿದ ನಂತರ ಆಯಾ ವಿಷಯದ ನೋಟ್‌ಬುಕ್‌ಗೆ ಈಗಾಗಲೇ ಬರೆದುಕೊಂಡ ಹಾಳೆಗಳನ್ನು ಕ್ರಮಬದ್ಧವಾಗಿ ಜೋಡಿಸಿಕೊಳ್ಳಬಹುದು.

ಪರೀಕ್ಷೆಯ ವೇಳೆಯಲ್ಲಿ ಪ್ರತ್ಯೇಕವಾಗಿ ಸಿದ್ಧವಾದ ಆಯಾ ವಿಷಯದ ನೋಟ್‌ಬುಕ್ ಬಳಸಬಹುದು. ಒಂದೇ ನೋಟ್‌ಬುಕ್ ಅನ್ನು ಮಕ್ಕಳು ಪ್ರತಿದಿನ ಶಾಲೆಗೆ ತೆಗೆದುಕೊಂಡು ಹೋಗುವುದರಿಂದ ಶಾಲಾಬ್ಯಾಗ್ ಹೊರೆ ಶೇ 50ರಷ್ಟು ಕಡಿಮೆಯಾಗುತ್ತದೆ.

ಪ್ರತಿ ಮೂರನೇ ಶನಿವಾರ 'ನೋ ಬ್ಯಾಗ್ ಡೇ' ಆಚರಣೆಯನ್ನು ಇಲಾಖೆ ಈಗಾಗಲೇ ಕಡ್ಡಾಯಗೊಳಿಸಿದೆ. ಮಕ್ಕಳು ಅಂದು ಬ್ಯಾಗ್‌ಗಳನ್ನು ಮನೆಯಲ್ಲೇ ಬಿಟ್ಟು ಶಾಲೆಗೆ ಬರಬೇಕು. ಈ ನಿಯಮವನ್ನು ಖಾಸಗಿ ಶಾಲೆಗಳಿಗೂ ಅನ್ವಯಿಸಲು ಶಿಕ್ಷಣ ಇಲಾಖೆ ಮುಂದಾಗಿದೆ.

ಸದ್ಯ ಹಾಳೆ ಬಳಸಲು ಕ್ರಮ: ನೋಟ್ ಬುಕ್‌ಗಳು ಸಿದ್ಧವಾಗುವವರೆಗೂ ಮಕ್ಕಳು ಆಯಾ ವಿಷಯದ ಟಿಪ್ಪಣಿ, ವಿವರಗಳನ್ನು ಪ್ರತ್ಯೇಕ ಹಾಳೆಗಳಲ್ಲಿ ಬರೆದುಕೊಂಡು ಮನೆಯಲ್ಲಿ ಒಂದು ಕಡೆ ಜೋಡಿಸಿಟ್ಟುಕೊಳ್ಳುವಂತೆ ಶಿಕ್ಷಕರು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡಬೇಕು ಎಂದು ಇಲಾಖೆಯ ಅಧಿಕಾರಿಗಳು ಸೂಚಿಸಿದ್ದಾರೆ.

'ಮಕ್ಕಳು ಅಧಿಕ ಭಾರ ಹೊರುತ್ತಿರುವುದರಿಂದ ಎಳೆಯ ವಯಸ್ಸಿನಲ್ಲೇ ಹಲವು ಆರೋಗ್ಯ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಅಧ್ಯಯನಗಳು, ಸಂಶೋಧನೆಗಳಿಂದಲೂ ಇದು ಸಾಬೀತಾಗಿದೆ. ಮಕ್ಕಳು ಆಡುತ್ತಾ, ನಲಿಯುತ್ತಾ ಕಲಿಯಬೇಕು. ಆಗ ಕಲಿಕೆ ಪರಿಣಾಮಕಾರಿಯಾಗಿರುತ್ತದೆ ಎಂದು ಹಲವು ಶಿಕ್ಷಣ ತಜ್ಞರು ಶಿಫಾರಸು ಮಾಡಿದ್ದಾರೆ. ಅದಕ್ಕಾಗಿ ಬ್ಯಾಗ್ ಭಾರ ಕಡಿತಗೊಳಿಸುವ, ಬ್ಯಾಗ್ ರಹಿತ ದಿನದ ಆದೇಶಗಳನ್ನು ಹೊರಡಿಸಲಾಗಿದೆ. ಇಂತಹ ಮಾರ್ಗಸೂಚಿ ಪಾಲಿಸದ ಶಾಲೆಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎನ್ನುತ್ತಾರೆ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ.

ಬ್ಯಾಗ್ ಹೊರೆ 5 ಕೆ.ಜಿ. ಮೀರುವಂತಿಲ್ಲ

1ರಿಂದ 10ನೇ ತರಗತಿಯ ಮಕ್ಕಳ ಬ್ಯಾಗ್ ತೂಕದ ಹೊರೆಯನ್ನು 1.5 ಕೆ.ಜಿ. ಯಿಂದ 5ಕೆ.ಜಿ.ವರೆಗೆ ನಿಗದಿ ಮಾಡಲಾಗಿದೆ.

1993ರಲ್ಲಿ ನೇಮಿಸಿದ್ದ ಯಶಪಾಲ ವರ್ಮ ಸಮಿತಿಯ 'ಹೊರೆ ಇಲ್ಲದ ಕಲಿಕೆ' ವರದಿ, ಕೇಂದ್ರ ಸರ್ಕಾರದ 'ಶಾಲಾ ಬ್ಯಾಗ್ ನೀತಿ–2020' ಹಾಗೂ ಮಕ್ಕಳು ಮತ್ತು ಕಾನೂನು ಕೇಂದ್ರ, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ ನಡೆಸಿದ ಅಧ್ಯಯನ ವರದಿ ಆಧಾರದಲ್ಲಿ ಉಲ್ಲೇಖಿಸಿದಂತೆ ಹಾಗೂ ಮೂಳೆ ತಜ್ಞರ ಶಿಫಾರಸಿನಂತೆ ಮಕ್ಕಳು ಅವರ ದೇಹದ ತೂಕದ ಶೇ 10ರಿಂದ 15ರಷ್ಟು ಭಾರ ಹೊರಬಹುದು ಎಂಬ ಅಂಶಗಳ ಆಧಾರದಲ್ಲಿ ಶಾಲಾ ಶಿಕ್ಷಣ ಇಲಾಖೆ ಕಳೆದ ವರ್ಷ ಬ್ಯಾಗ್ ತೂಕದ ಹೊರೆಯನ್ನು ನಿಗದಿ ಮಾಡಿತ್ತು.

1ರಿಂದ 2ನೇ ತರಗತಿಯ ಮಕ್ಕಳಿಗೆ 1.5ರಿಂದ 2 ಕೆ.ಜಿ, 3ರಿಂದ 5ನೇ ತರಗತಿ 2ರಿಂದ 3 ಕೆ.ಜಿ, 6ರಿಂದ 8 ತರಗತಿ 3ರಿಂದ 4 ಕೆ.ಜಿ ಹಾಗೂ 9ರಿಂದ 10ನೇ ತರಗತಿಯ ಮಕ್ಕಳಿಗೆ 4ರಿಂದ 5 ಕೆ.ಜಿ.ವರೆಗೆ ಶಾಲಾ ಬ್ಯಾಗ್ ತೂಕ ಇರುವಂತೆ ಕ್ರಮವಹಿಸುವುದು ಆಯಾ ಶಾಲೆಯ ಶಿಕ್ಷಕರ ಹೊಣೆ.

₹2 ಲಕ್ಷ ಲಂಚ ಪಡೆದ ವಿಶೇಷ ತಹಶೀಲ್ದಾರ್‌ಗೆ ನ್ಯಾಯಾಂಗ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಹಣಿಯಲ್ಲಿನ ವಿವಿಧ ಕಾಲಂಗಳನ್ನು ತಾಳೆ ನೋಡಿ, ದೃಢೀಕರಿಸಲು ₹2 ಲಕ್ಷ ಪಡೆದಿದ್ದ ಬೆಂಗಳೂರು ದಕ್ಷಿಣ ತಾಲ್ಲೂಕು ವಿಶೇಷ ತಹಶೀಲ್ದಾರ್ ನಾಗರಾಜ್ ವಿ. ಸೇರಿದಂತೆ ನಾಲ್ವರನ್ನು ಬಂಧಿಸಿದ್ದ ಲೋಕಾಯುಕ್ತ ಪೊಲೀಸರು, ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ನೀಡಿದ್ದಾರೆ.

ಉತ್ತರಹಳ್ಳಿ ಹೋಬಳಿಯ ಸುಂಕದಕಟ್ಟೆ ಗ್ರಾಮದ ಸರ್ವೆ ನಂಬರ್ 47ರಲ್ಲಿನ ತಮ್ಮ ಜಮೀನಿನ ಪಹಣಿಯ 3 ಮತ್ತು 9ನೇ ಕಾಲಂ ಅನ್ನು ತಾಳೆ ನೋಡಿ, ದೃಢೀಕರಿಸಲು ಗುರುಪ್ರಸಾದ್ ಎಂಬವರು ಅರ್ಜಿ ಸಲ್ಲಿಸಿದ್ದರು. ಪಹಣಿ ತಾಳೆ ಮತ್ತು ದೃಢೀಕರಣ ಕಾರ್ಯವನ್ನು ವಿಳಂಬ ಮಾಡಲಾಗಿತ್ತು. ಈ ಕೆಲಸ ಮಾಡಿಕೊಡಲು ಅಧಿಕಾರಿಗಳು ₹2.50 ಲಕ್ಷ ಬೇಡಿಕೆ ಇಟ್ಟಿದ್ದಾರೆ ಎಂದು ಗುರುಪ್ರಸಾದ್ ಅವರು ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು.



ನಾಗರಾಜ್ ವಿ.

ನಾಗರಾಜ್, ತಾಲ್ಲೂಕು ಕಚೇರಿಯ ಮ್ಯಾನೇಜರ್ ಮಂಜುನಾಥ್ ಮತ್ತು ಪ್ರಥಮ ದರ್ಜೆ ಸಹಾಯಕಿ ಶಿಲ್ಪಾ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಶಿಲ್ಪಾ ಅವರೇ ಹೇಮಂತ್ ಎಂಬವರನ್ನು ಕಂಪ್ಯೂಟರ್ ಆಪರೇಟರ್ ಎಂದು ಪರಿಚಯ ಮಾಡಿಕೊಟ್ಟಿದ್ದು, ಲಂಚದ ಹಣ ಹೇಮಂತ್‌ಗೇ ನೀಡಬೇಕು ಎಂದು ಸೂಚಿಸಿದ್ದರು ಎಂದು ದೂರುದಾರರು ಆರೋಪಿಸಿದ್ದರು ಎಂದು ಲೋಕಾಯುಕ್ತ ಪೊಲೀಸರು ಮಾಹಿತಿ ನೀಡಿದ್ದಾರೆ.

ಲೋಕಾಯುಕ್ತ ಪೊಲೀಸರ ಸೂಚನೆಯಂತೆ, ಗುರುಪ್ರಸಾದ್ ಅವರು ಬುಧವಾರ ಮಧ್ಯಾಹ್ನ ತಾಲ್ಲೂಕು ಕಚೇರಿಯ ಆವರಣದಲ್ಲಿ ಹೇಮಂತ್ ಅವರಿಗೆ ₹2 ಲಕ್ಷ ನೀಡಿದ್ದರು. ಅದೇ ಸಂದರ್ಭದಲ್ಲಿ ಲೋಕಾಯುಕ್ತ ಪೊಲೀಸ್ ಇನ್‌ಸ್ಪೆಕ್ಟರ್ ಗಂಗರುದ್ರಯ್ಯ ಅವರ ನೇತೃತ್ವದ ತಂಡವು ದಾಳಿ ನಡೆಸಿ, ಹೇಮಂತ್ ಅವರನ್ನು ಬಂಧಿಸಿತು. ಆರೋಪಿಯಿಂದ ₹2 ಲಕ್ಷ ವಶಕ್ಕೆ ಪಡೆಯಲಾಗಿತ್ತು. ಕಚೇರಿಯಲ್ಲಿ ಇದ್ದ ನಾಗರಾಜ್, ಶಿಲ್ಪಾ ಮತ್ತು ಮಂಜುನಾಥ್ ಅವರನ್ನು ವಿಚಾರಣೆ ನಡೆಸಿ, ಬಂಧಿಸಲಾಗಿತ್ತು ಎಂದು ಲೋಕಾಯುಕ್ತ ಪೊಲೀಸರು ಮಾಹಿತಿ ನೀಡಿದ್ದಾರೆ.

ಲೋಕಾಯುಕ್ತ ಡಿವೈಎಸ್‌ಪಿ ಬಸವರಾಜ್ ಮಗದಮ್ ಮೇಲ್ವಿಚಾರಣೆಯಲ್ಲಿ ಕಾರ್ಯಾಚರಣೆ ನಡೆಸಲಾಗಿದ್ದು, ಆರೋಪಿಗಳ ವಿರುದ್ಧ ಭ್ರಷ್ಟಾಚಾರ ತಡೆ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸಲಾಗುತ್ತಿದೆ ಎಂದು ಲೋಕಾಯುಕ್ತ ಪೊಲೀಸರು ಮಾಹಿತಿ ನೀಡಿದ್ದಾರೆ.

ಶುಕ್ರವಾರ, ಆಗಸ್ಟ್ 2, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ


ಬೆಡಗು

ನವದೆಹಲಿಯಲ್ಲಿ ಜರುಗಿದ 'ಇಂಡಿಯಾ ಕಲ್ಚರ್ ವೀಕ್' ಕಾರ್ಯಕ್ರಮದಲ್ಲಿ ನಟ ರಶ್ಮಿಕಾ ಮಂದಣ್ಣ ಕಾಣಿಸಿಕೊಂಡಿದ್ದು ಹೀಗೆ






ತುಂಗಭದ್ರಾ ಜಲಾಶಯದಿಂದ ಹೆಚ್ಚುವರಿ ನೀರನ್ನು ಎಲ್ಲ ಕ್ರಸ್ಟ್ ಗೇಟ್‌ಗಳನ್ನು ತೆರೆದು ನದಿಗೆ ಬಿಡಲಾಗಿದ್ದು, ಮೈದುಂಬಿ ಹರಿಯುತ್ತಿರುವ ತುಂಗಭದ್ರೆಯ ವಿಹಂಗಮ ನೋಟ ಕೊಪ್ಪಳ ಜಿಲ್ಲೆಯ ಸಾಣಾಪುರ ಬಳಿಯ ಬಾಲಾಂಜನೇಯ ಬೆಟ್ಟದಿಂದ ಕಂಡದ್ದು ಹೀಗೆ ಪ್ರಜಾವಾಣಿ ಚಿತ್ರ:/ಭರತ್ ಕಂದಕೂರ



ಜೋಗದ ಸಿರಿ.. ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಕಾರ್ಗಲ್‌ನ ಲಿಂಗನಮಕ್ಕಿ ಜಲಾಶಯದಿಂದ ಗುರುವಾರ ನದಿಗೆ ನೀರು ಹರಿಸಲಾಗಿದೆ. ಇದರಿಂದ ವಿಶ್ವವಿಖ್ಯಾತ ಜೋಗ ಜಲಪಾತ ಮೈದುಂಬಿ ಪ್ರವಾಸಿಗರನ್ನು ಸೆಳೆಯುತ್ತಿದೆ ಪ್ರಜಾವಾಣಿ ಚಿತ್ರ/ಶಿವಮೊಗ್ಗ ನಾಗರಾಜ್



ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಕಾರ್ಗಲ್‌ನ ಲಿಂಗನಮಕ್ಕಿ ಜಲಾಶಯದ 3 ಕ್ರಸ್ಟ್‌ಗೇಟ್‌ಗಳನ್ನು ತೆರದು ಗುರುವಾರ ಶರಾವತಿ ನದಿಗೆ ನೀರು ಹರಿಸಲಾಯಿತು ಪ್ರಜಾವಾಣಿ ಚಿತ್ರ/ಶಿವಮೊಗ್ಗ ನಾಗರಾಜ್



ಸಕಲೇಶಪುರ ತಾಲ್ಲೂಕಿನ ದೊಡ್ಡತಪ್ಪಲೆ ಬಳಿ ಗುರುವಾರ ಬೆಳಿಗ್ಗೆ ಮತ್ತೆ ಭೂಕುಸಿತವಾಗಿದ್ದು, ರಸ್ತೆಯ ಮೇಲೆ ಮಣ್ಣು ಬಿದ್ದಿತ್ತು.

ದೊಡ್ಡತಪ್ಪಲೆ: ನಿಲ್ಲದ ಭೂಕುಸಿತ

ಪ್ರಜಾವಾಣಿ ವಾರ್ತೆ

ಹಾಸನ: ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿ -75 ರಲ್ಲಿ ಸಕಲೇಶಪುರ ತಾಲ್ಲೂಕಿನ ದೊಡ್ಡತಪ್ಪಲೆ ಬಳಿ ಗುರುವಾರ ಬೆಳಿಗ್ಗೆ ವಾಹನ ಸಂಚಾರ ಆರಂಭಿಸಿದ ಒಂದು ಗಂಟೆಯಲ್ಲಿಯೇ ಮತ್ತೆ ರಸ್ತೆಗೆ ಮಣ್ಣು ಕುಸಿಯಿತು. ಯಾವುದೇ ಅನಾಹುತ ಸಂಭವಿಸಿಲ್ಲ. ಮತ್ತೆ ಮಣ್ಣು ತೆರವುಗೊಳಿಸಿದ್ದು, ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ.

ಸ್ಥಳಕ್ಕೆ ಭೇಟಿ ನೀಡಿದ್ದ ಜಿಲ್ಲಾಧಿಕಾರಿ ಸಿ.ಸತ್ಯಭಾಮಾ, ‘ಗಣಿ ಮತ್ತು ಭೂವಿಜ್ಞಾನ ಇಲಾಖೆ ತಜ್ಞರ ನಿರ್ದೇಶನದಂತೆ ಭೂಕುಸಿತವನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಬೇಕು’ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ಸೂಚನೆ ನೀಡಿದರು.



ದಾವಣಗೆರೆ ಜಿಲ್ಲೆಯ ಹರಿಹರದಲ್ಲಿ ತುಂಗಭದ್ರಾ ನದಿ ತುಂಬಿ ಹರಿಯುತ್ತಿದ್ದು ತುಂಗಾರತಿ ಮಂಟಪ ಜಲಾವೃತವಾಗಿರುವ ದೃಶ್ಯ ಕಂಡು ಬಂದ ಬಗೆ —ಪ್ರಜಾವಾಣಿ ಚಿತ್ರ / ಸತೀಶ್ ಬಡಿಗೇರ್

ಮಳೆಯಿಂದಾದ ಜಲ ಚಿತ್ರಗಳು

ಕೆಲವು ದಿನಗಳಿಂದ ರಾಜ್ಯದ ವಿವಿಧೆಡೆ ನಿರಂತರವಾಗಿ ಸುರಿದ ಮಳೆಯಿಂದಾಗಿ ನದಿಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿವೆ. ಜಲಾಶಯಗಳು ಭರ್ತಿಯಾಗಿದ್ದು ನದಿಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿಸಲಾಗುತ್ತಿದೆ. ಕಾವೇರಿ ನದಿಗೆ ಅಡ್ಡಲಾಗಿ ಕಟ್ಟಿರುವ ತಮಿಳುನಾಡಿನ ಮೆಟ್ಟೂರು ಜಲಾಶಯದ **16** ಗೇಟ್‌ಗಳ ಮೂಲಕ **1.70** ಲಕ್ಷ ಕ್ಯುಸೆಕ್ ನೀರನ್ನು ನದಿಗೆ ಹರಿಬಿಡಲಾಗಿದೆ.ಲಿಂಗನಮಕ್ಕಿ ಜಲಾಶಯದ **11** ಕ್ರಸ್ಟ್ ಗೇಟ್ ಗಳ ಪೈಕಿ ಮೂರು ಗೇಟ್ ತೆಗೆದು ನೀರು ಹರಿಸಿದ್ದು ಜೋಗ ಜಲಪಾತದಲ್ಲಿ ದೃಶ್ಯ ವೈಭವ ಸೃಷ್ಟಿಯಾಗಿದೆ. ಮತ್ತೊಂದೆಡೆ, ನದಿಗಳು ಉಕ್ಕಿ ಹರಿದು ಜನಜೀವನ ಅಸ್ತವ್ಯಸ್ತವಾಗಿದೆ



ಯಾದಗಿರಿ ಜಿಲ್ಲೆಯ ನಾರಾಯಣಪುರದ ಬಸವಸಾಗರ ಜಲಾಶಯದ 30 ಗೇಟ್‌ಗಳನ್ನು ಗುರುವಾರ ತೆರೆದು 3.25 ಲಕ್ಷ ಕ್ಯುಸೆಕ್ ನೀರನ್ನು ಕೃಷ್ಣಾ ನದಿಗೆ ಹರಿಸಲಾಯಿತು

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್ ಎಸ್ *	124.80	122.60	1,12,451	99,501
ಹಾರಂಗಿ	2,859	2,854.83	12,460	4,000
ಕಬಿನಿ	2,284.00	2,281.30	45,951	50,000
ಹೇಮಾವತಿ	2,922	2919.55	43,106	45,210
ಲಿಂಗನಮಕ್ಕಿ	1,819	1,814	53,061	15,236
ಸೂಪಾ (ಮೀ)	564	554.60	42,572	71.87
ಮಾಣಿ	595	586.90	5,949	0
ತುಂಗಭದ್ರಾ	1,633	1630.81	1,25,373	1,54,706
ಮಲಪ್ರಭಾ	2,079.5	2,075.75	14,968	13,394
ಘಟಪ್ರಭಾ	2175	2,170.86	33,515	38,644
ಭದ್ರಾ *	186	183.1	56,152	65,724
ಆಲಮಟ್ಟಿ (ಮೀ)	519.60	515.38	3,41,384	3,52,588
ನಾರಾಯಣಪುರ (ಮೀ)	492.25	489.97	3,35,000	3,25,838

* ನೆಲಮಟ್ಟದಿಂದ



ಹೇಮಾವತಿ ಜಲಾಶಯದಿಂದ ಭೋರ್ಗರೆದು ಚಿಮ್ಮಿದ ನೀರು ಪ್ರಜಾವಾಣಿ ಚಿತ್ರ/ಅತೀಖುರ್ ರಹಮಾನ್



ಕಾವೇರಿ ನದಿಗೆ ಅಡ್ಡಲಾಗಿ ಕಟ್ಟಿರುವ ತಮಿಳುನಾಡಿನ ಮೆಟ್ಟೂರು ಜಲಾಶಯದ ನೀರು ಹರಿದ ದೃಶ್ಯ ಪ್ರಜಾವಾಣಿ ಚಿತ್ರ/ಜಿ ಪ್ರದೀಪ್ ಕುಮಾರ್



ಬ್ರಹ್ಮಾವರ ವ್ಯಾಪ್ತಿಯ ಉಪ್ಪೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಜಲಾವೃತವಾಗಿದೆ

ಮೂಡುಬಿದಿರೆ– ಮನೆ ಕುಸಿದು ವೃದ್ಧೆ ಸಾವು • ಹರಿಹರಕ್ಕೆ ನುಗ್ಗಿದ ನೀರು • ಉಡುಪಿಯಲ್ಲಿ ಭಾರಿ ಮಳೆ

ಕೆಲವೆಡೆ ಸತತ ಮಳೆ: ಪ್ರವಾಹ ಪರಿಸ್ಥಿತಿ

ಪ್ರಜಾವಾಣಿ ವಾರ್ತೆ

ಮೈಸೂರು/ ಮಂಗಳೂರು: ಮೈಸೂರು ಭಾಗದ ಜಿಲ್ಲೆಗಳಲ್ಲಿ ಮಳೆ ಹಾಗೂ ಕಬಿನಿ, ಕೆಆರ್‌ಎಸ್ ಜಲಾಶಯಗಳಿಂದ ನೀರು ಬಿಡುಗಡೆ ಪ್ರಮಾಣವು ಕೊಂಚ ತಗ್ಗಿದ್ದರೂ ಪ್ರವಾಹ ಪರಿಸ್ಥಿತಿ ಮುಂದುವರಿದಿದೆ.

ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯಾದ್ಯಂತ ಗುರುವಾರ ಧಾರಾಕಾರ ಮಳೆಯಾಗಿದೆ. ಬುಧವಾರ ರಾತ್ರಿಯಿಂದ ಗುರುವಾರ ಬೆಳಿಗ್ಗೆವರೆಗೂ ಬಿಟ್ಟು ಬಿಟ್ಟು ಮಳೆ ಸುರಿದಿತ್ತು.

ಕೊಡಗಿನಲ್ಲಿ 37 ವಿದ್ಯುತ್ ಕಂಬಗಳು ನೆಲಕಚ್ಚಿವೆ. ಸಂಪಾಜೆಯಲ್ಲಿ ಭೂಕುಸಿತವಾಗಿದೆ. ನಾಪೋಕ್ಲುವಿನ ಮಡಿಕೇರಿ ರಸ್ತೆಯಲ್ಲಿ ನೀರು ಕಡಿಮೆಯಾಗಿದ್ದು, ಸಂಪರ್ಕ ಸಾಧ್ಯವಾಗಿದೆ.

ಪೊನ್ನಂಪೇಟೆ ತಾಲ್ಲೂಕಿನ ನಾಗರಹೊಳೆ ರಕ್ಷಿತಾರಣ್ಯದಲ್ಲಿರುವ ಆನೆ ಕಂದಕ ಹಾಗೂ ಚಿಣ್ಣರ ಹಾಡಿಯ ತೋಡು ತುಂಬಿ ಅಂಚಿನ ಹಾಡಿಗಳ ಗುಡಿಸಲುಗಳಿಗೆ ನೀರು ನುಗ್ಗುತ್ತಿದೆ. ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ಪಟ್ಟಣದ ಬಳಿ ಕಾವೇರಿ ನದಿ ಬುಧವಾರ ರಾತ್ರಿ ಉಕ್ಕಿ ಹರಿದು, ಇತಿಹಾಸ ಪ್ರಸಿದ್ಧ ವೆಲ್ಲೆಸ್ಲಿ ಸೇತುವೆಯ ಮೂಲೆ ಕಲ್ಲೊಂದು ಜಾರಿ ಬಿದ್ದಿದೆ. ಪಟ್ಟಣದಿಂದ ವಿವಿಧೆಡೆಗೆ ಸಂಪರ್ಕ ಕಲ್ಪಿಸುವ ಸೇತುವೆಗೆ ಮುಖ್ಯ ಕೊಂಡಿಯಾಗಿರುವ ಆಂಜನೇಯಸ್ವಾಮಿ ಗುಡಿಯ ಮುಂದಿನ ಡಾಂಬರು ರಸ್ತೆ 50 ಮೀಟರ್‌ನಷ್ಟು ಕೊಚ್ಚಿಹೋಗಿದೆ.

ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲತಾಲ್ಲೂಕಿನ ಆರು ಗ್ರಾಮಗಳ 575ಕ್ಕೂ ಹೆಚ್ಚು ಮಂದಿಯನ್ನು ತೆಪ್ಪಗಳ ಮೂಲಕ ಕಾಳಜಿ ಕೇಂದ್ರಗಳಿಗೆ ಕರೆದೊಯ್ಯಲಾಗಿದೆ. ತೆರಳಲು ನಿರಾಕರಿಸಿದವರನ್ನು ಜಿಲ್ಲಾಧಿಕಾರಿ ಶಿಲ್ಪನಾಗ್ ಮತ್ತು ಶಾಸಕ ಎ.ಆರ್.ಕೃಷ್ಣಮೂರ್ತಿ ನೇತೃತ್ವದ ತಂಡ ಮನವೊಲಿಸಿದೆ.ಸತ್ತೆಗಾಲ ಸೇತುವೆ ಕೆಳಗೆ ಬಹಿರ್ದೆಸೆಗೆ ತೆರಳಿದ್ದ ಮಹಮ್ಮದ್ ಮನ್ಸೂರ್ ಎಂಬಾತ ನೀರಿನ ಸೆಳೆತಕ್ಕೆ ಸಿಲುಕಿ ಕೊಚ್ಚಿಕೊಂಡು ಹೋಗುವಾಗ ತೆಪ್ಪ ಚಲಾಯಿಸುವವರು ರಕ್ಷಿಸಿದರು.

ಮೂಡುಬಿದಿರೆ ತಾಲ್ಲೂಕಿನ ನೆಲ್ಲಿಕಾರು ಗ್ರಾಮದ ಬೋರುಗುಡ್ಡೆಯಲ್ಲಿ ಗಾಳಿ ಮಳೆಗೆ ಮನೆಯ ಚಾವಣಿ ಕುಸಿದು ಗೋಪಿ (65) ವೃದ್ಧೆ ಮೃತಪಟ್ಟಿದ್ದಾರೆ. ಮನೆಯಲ್ಲಿದ್ದ ಅವರ ನಾಲ್ವರು ಮಕ್ಕಳು ಚಾವಣಿಗೆ ಟರ್ಪಾಟ್ ಹೊದಿಸಲು ಹೊರಗೆ ಹೋಗಿದ್ದರಿಂದ ಪಾರಾಗಿದ್ದಾರೆ.

ಬೆಳ್ತಂಗಡಿ ತಾಲ್ಲೂಕಿನ ಮಾಲಾಡಿ ಸೋಣಂದೂರು ಗ್ರಾಮದ ಮೊದಲೆಯಲ್ಲಿ ಕಿರು ಸೇತುವೆ ಕುಸಿದಿದ್ದು, ಸಬರಬೈಲು–ಪಡಂಗಡಿ ನಡುವೆ ಸಂಪರ್ಕ ಕಡಿತಗೊಂಡಿದೆ. ಮರೋಡಿ ಗ್ರಾಮದ ದೇರಾಜೆ ಬೆಟ್ಟಕ್ಕೆ ಹೋಗುವ ಸೇತುವೆ ಪ್ರವಾಹದಲ್ಲಿ ಕೊಚ್ಚಿಕೊಂಡು-ಹೋಗಿದೆ. ಇದೇ ಗ್ರಾಮದ ಪಲಾಗೋಳಿ ಸೇತುವೆಯೂ ಪ್ರವಾಹದಿಂದ ಹಾನಿಗೊಳಗಾಗಿದೆ.

ಫಲ್ಗುಣಿ ನದಿಯ ದಂಡೆಯಲ್ಲಿರುವ ವೇಣೂರು, ಪೊಳಲಿ, ಮೂಲಾರಪಟ್ಣ, ಅಮ್ಮುಂಜೆ ಮುಂತಾದ ಪ್ರದೇಶಗಳಲ್ಲಿ ಪ್ರವಾಹ ಕಾಣಿಸಿಕೊಂಡಿದೆ. ವೇಣೂರು ಪಟ್ಟಣದ ಚರ್ಚ್ ಬಳಿ ವೇಣೂರು–ಮೂಡುಬಿದಿರೆ ರಸ್ತೆ ಪ್ರವಾಹದಲ್ಲಿ ಮುಳುಗಿದ್ದರಿಂದ ವಾಹನ ಸಂಚಾರಕ್ಕೆ ಅಡ್ಡಿ ಉಂಟಾಗಿತ್ತು. ವೇಣೂರು–ನಾರಾವಿ ಮಾರ್ಗದಲ್ಲಿ ಹಲವೆಡೆ ಸೇತುವೆಗಳು ಜಲಾವೃತಗೊಂಡವು. ಗುಡ್ಡ ಕುಸಿತದ ಆತಂಕ ವಿರುವ ಕಾರಣ ಅಂಕಾಜೆಯಲ್ಲಿ ರಸ್ತೆಯಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿದೆ.

ಖುಷಿಮುಖ : ನಡುಗಡ್ಡೆಯಲ್ಲಿ ಸಿಲುಕಿದ ಬಾಬಾಗಳು

ಗಂಗಾವತಿ: ಬುಧವಾರ ರಾತ್ರಿ ಹನುಮನಹಳ್ಳಿ ಗ್ರಾಮದ ಬಳಿಯ ಖುಷಿಮುಖ ಪರ್ವತದ ನಡುಗಡ್ಡೆಯಲ್ಲಿ ಬಾಬಗಳು ಸೇರಿ ನಾಲ್ವರು ಹಾಗೂ ವಿರುಪಾಪುರಗಡ್ಡೆಯಲ್ಲಿ ಎರಡು ಕುಟುಂಬ ಸೇರಿ ಒಂಬತ್ತು ಜನ ಸಿಲುಕಿಕೊಂಡಿದ್ದಾರೆ.

ತುಂಗಭದ್ರಾ ಜಲಾಶಯದಿಂದ ನದಿಗೆ ಅಪಾರ ಪ್ರಮಾಣದಲ್ಲಿ ನೀರು ಹರಿಸಲಾಗುತ್ತಿದ್ದು, ಖುಷಿಮುಖ ಪರ್ವತದ ಆಂಜನೇಯಸ್ವಾಮಿ, ರಾಮಚಂದ್ರ ದೇವಸ್ಥಾನ ಜಲಾವೃತವಾಗಿದೆ. ಇಲ್ಲಿ ನಿತ್ಯ ಪೂಜೆ ಮಾಡುವ ಉತ್ತರ-ಪ್ರದೇಶದ ಆನಂದಗಿರಿ ಬಾಬಾ, ಹರಿದಾಸ ಬಾಬಾ ಅವರ ನಿವಾಸವಿದೆ. ಸ್ಥಳೀಯರಾದ ನೀಲಪ್ಪ, ಶಿವಯೋಗಿ ಅವರು ಇವರೊಂದಿಗಿದ್ದಾರೆ.

ನಾಲ್ವರು ನಡುಗಡ್ಡೆಯಲ್ಲಿ ಸಿಲುಕಿದ ವಿಷಯ ತಿಳಿಯು-ತ್ತಿದ್ದಂತೆ ಕಂದಾಯ ಇಲಾಖೆ ಅಧಿಕಾರಿಗಳು ದೂರವಾಣಿ ಮೂಲಕ ಸಂಪರ್ಕಿಸಿ ಅವರ ಆರೋಗ್ಯ, ಆಹಾರ ಪೂರೈಕೆ ಬಗ್ಗೆ ಮಾಹಿತಿ ಕೇಳಿದ್ದಾರೆ. ಯಾವುದೇ ತೊಂದರೆ ಇಲ್ಲ ಎಂದು ಬಾಬಾಗಳು ತಿಳಿಸಿದ್ದಾರೆ. ವಿರುಪಾಪುರಗಡ್ಡೆಯಲ್ಲೂ 2 ಕುಟುಂಬಗಳು ವಾಸವಿದ್ದು, ಇವರೂ ನಡುಗಡ್ಡೆಯಲ್ಲಿ ಸಿಲುಕಿಕೊಂಡಿದ್ದಾರೆ. ಇವರ ಬಳಿ ಒಂದು ತಿಂಗಳಿಗೆ ಆಗುವಷ್ಟು ದವಸ-ಧಾನ್ಯಗಳ ದಾಸ್ತಾನು ಇದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಮಂಡ್ಯ ವರದಿ: ಶ್ರೀರಂಗಪಟ್ಟಣ ತಾಲ್ಲೂಕಿನ ಕಾವೇರಿ ನದಿಯ ನಡುಗಡ್ಡೆಯಲ್ಲಿ ಸಿಲುಕಿದ್ದ ಗಜಾನನ ಸ್ವಾಮೀಜಿ ಮತ್ತು ಇಬ್ಬರು ಮಹಿಳೆಯರನ್ನು ಕರೆತರಲು ತೆರಳಿದ್ದ ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಹಾಗೂ ಇಬ್ಬರು ಅಗ್ನಿಶಾಮಕರು ವಾಪಸ್ ಬರಲಾಗದೆ ಅಲ್ಲಿಯೇ ಸಿಲುಕಿದ್ದಾರೆ.



ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನಲ್ಲಿ ಗುಂಡಬಾಳ ನದಿ ಉಕ್ಕಿದ್ದರಿಂದ ಗುಂಡಿಬೈಲು ಗ್ರಾಮದಲ್ಲಿ ಮನೆಗಳಿಗೆ ನೀರು ನುಗ್ಗಿದ್ದರ ನಡುವೆ ವ್ಯಕ್ತಿಯೊಬ್ಬರು ನೀರಿನಲ್ಲಿ ಸಾಗಲು ಪ್ರಯತ್ನಿಸಿದರು.

803 ಮನೆಗಳಿಗೆ ಹಾನಿ

ಹುಬ್ಬಳ್ಳಿ: ಜುಲೈ 1ರಿಂದ ಆಗಸ್ಟ್ 1ರವರೆಗೆ ಅತಿವೃಷ್ಟಿಯಿಂದ ಬೆಳಗಾವಿ ಜಿಲ್ಲೆಯಲ್ಲಿ 803 ಮನೆಗಳಿಗೆ ಹಾನಿಯಾಗಿದ್ದು, ಅವುಗಳಲ್ಲಿ 99 ಮನೆಗಳು ಪೂರ್ಣಪ್ರಮಾಣದಲ್ಲಿ ಬಿದ್ದಿವೆ. 6 ಮಂದಿ ಮೃತಪಟ್ಟಿದ್ದು, 12 ಜಾನುವಾರುಗಳು ಪ್ರಾಣ ಕಳೆದುಕೊಂಡಿವೆ. ಪ್ರವಾಹ ಇಳಿದಿದೆ. ಆದರೆ, ಜನ ಇನ್ನೂ ಕಾಳಜಿ ಕೇಂದ್ರದಲ್ಲಿ ಇದ್ದಾರೆ.

ತುಂಗಭದ್ರಾ ನದಿಯ ಒಳ ಹರಿವು ಹೆಚ್ಚಿದ್ದು, ವಿಜಯನಗರ ಜಿಲ್ಲೆಯ ಹೂವಿನಹಡಗಲಿ, ಹರಪನಹಳ್ಳಿ ತಾಲ್ಲೂಕಿನ ನದಿ ತೀರದ ಗ್ರಾಮಗಳಿಗೆ ಪ್ರವಾಹ ಭೀತಿ ಉಂಟಾಗಿದೆ. ನದಿ ತೀರದ ಗ್ರಾಮಗಳ ಕೃಷಿ ಭೂಮಿ ಪ್ರವಾಹದಲ್ಲಿ ಮುಳುಗಡೆಯಾಗಿದೆ. ಸಾವಿರಾರು ಎಕರೆಯಲ್ಲಿನ ಭತ್ತ, ಕಬ್ಬು, ಜೋಳ, ಮೆಕ್ಕೆಜೋಳ, ಅಡಿಕೆ ಬೆಳೆಗಳು ಜಲಾವೃತಗೊಂಡಿವೆ.

ಬಳ್ಳಾರಿ ಜಿಲ್ಲೆಯ ಕಂಪ್ಲಿಯ ಕೋಟೆ ಪ್ರದೇಶ ಜಲಾವೃತಗೊಂಡಿದೆ. ಹೊಳೆ ಆಂಜನೇಯ ದೇವಸ್ಥಾನ, ಮಹಾಂಕಾಳಿ ದೇವಸ್ಥಾನ, ನದಿ ಬಳಿಯ ವೆಂಕಟರಮಣ ದೇವಸ್ಥಾನ, ಕೋಟೆ ಜನವಸತಿ ಪ್ರದೇಶಕ್ಕೆ ತೆರಳುವ ಮುಖ್ಯರಸ್ತೆ, ಕುಮಾರರಾಮನ ಹೆಬ್ಬಾಗಿಲಿನವರೆಗೆ ನದಿ ಬಂದಿದೆ. ಮೀನುಗಾರರ ಕೆಲ ಮನೆಗಳಿಗೆ ನೆರೆ ನೀರು ನುಗ್ಗಿದೆ.

ಮುಖ್ಯಾಂಶಗಳು

- ಮೈಸೂರು–ಮಂಡ್ಯ ಜಿಲ್ಲೆಯ ಪ್ರಮುಖ ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರಿಗೆ ನಿರ್ಬಂಧ
- ಕನಕಪುರ ತಾಲ್ಲೂಕಿನ ಸಂಗಮ, ಮೇಕೆದಾಟು ಪ್ರವಾಸಿ ತಾಣಗಳಿಗೆ ಆ. 5ರವರೆಗೆ ಸಾರ್ವಜನಿಕರ ಪ್ರವೇಶ ನಿಷೇಧ
- ಕೊಡಗಿನಲ್ಲಿ 10 ಕಾಳಜಿ ಕೇಂದ್ರಗಳು ಸಕ್ರಿಯ

ಗುರುವಾರ ಬೆಳಿಗ್ಗೆ 8.30ರವರೆಗಿನ 24 ಗಂಟೆಗಳಲ್ಲಿ ಉಡುಪಿ ಜಿಲ್ಲೆಯ ರೆಂಜಾಳದಲ್ಲಿ 32 (ರಾಜ್ಯದಲ್ಲೇ ಗರಿಷ್ಠ), ಸಾಣೂರಿನಲ್ಲಿ 29 ಸೆಂ.ಮೀ ಮಳೆಯಾಗಿದೆ.

ದಾವಣಗೆರೆ ವರದಿ: ತುಂಗಾ ಮತ್ತು ಭದ್ರಾ ಜಲಾಶಯದಿಂದ ಅಪಾರ ಪ್ರಮಾಣದ ನೀರು ಹೊರಬಿಟ್ಟಿರುವುದರಿಂದ ಅಪಾಯದ ಮಟ್ಟದಲ್ಲಿ ಹರಿಯುತ್ತಿರುವ ತುಂಗಭದ್ರಾ ನದಿ ನೀರು ಹರಿಹರದ ಗಂಗಾನಗರದ 23 ಮನೆಗಳಿಗೆ ನುಗ್ಗಿದೆ. ಉಕ್ಕಡಗಾತ್ರಿ ದೇಗುಲದ ಆವರಣ ಮುಳುಗಡೆಯಾಗಿದೆ.

ಆಗಸ್ಟ್, ಸೆಪ್ಟೆಂಬರ್‌ನಲ್ಲಿ ಹೆಚ್ಚು ಮಳೆ ಸಾಧ್ಯತೆ: ಐಎಂಡಿ

ಜುಲೈ: ವಾಡಿಕೆಗಿಂತ ಶೇ 9 ಅಧಿಕ ಮಳೆ

ನವದೆಹಲಿ (ಪಿಟಿಐ): ದೇಶದಲ್ಲಿ ಜುಲೈ ತಿಂಗಳಲ್ಲಿ ವಾಡಿಕೆಗಿಂತ ಶೇ 9ರಷ್ಟು ಅಧಿಕ ಮಳೆಯಾಗಿದ್ದು, ಮಧ್ಯ ಭಾರತದ ಪ್ರದೇಶಗಳಲ್ಲಿ ವಾಡಿಕೆಗಿಂತ ಶೇ 33ರಷ್ಟು ಅಧಿಕ ಮಳೆ ಬಿದ್ದಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಗುರುವಾರ ತಿಳಿಸಿದೆ.

ಆಗಸ್ಟ್ ಮತ್ತು ಸೆಪ್ಟೆಂಬರ್‌ನಲ್ಲೂ ವಾಡಿಕೆಗಿಂತ ಅಧಿಕ ಮಳೆ ಸುರಿಯಲಿದೆ ಎಂದು ಅಂದಾಜು ಮಾಡಿದೆ. ಮಳೆ ತರುವ ‘ಎಲ್ ನಿನೊ’ ವಾತಾವರಣವು ಆಗಸ್ಟ್ ಕೊನೆಯ ವೇಳೆಗೆ ಸೃಷ್ಟಿಯಾ-ಗುವುದರಿಂದ ಹೆಚ್ಚಿನ ಮಳೆ ಬೀಳಲಿದೆ ಎಂದು ವರದಿ ತಿಳಿಸಿದೆ.

ಆಗಸ್ಟ್ ಮತ್ತು ಸೆಪ್ಟೆಂಬರ್ ನಲ್ಲಿ ದೇಶದಲ್ಲಿ ಮಳೆಯ ದೀರ್ಘಾವಧಿ ಸರಾಸರಿ 42.28 ಸೆಂ.ಮೀ. ಇದೆ. ಈ ಬಾರಿ ಶೇ 106ರಷ್ಟು ಮಳೆ ಬೀಳುವುದಾಗಿ ಅಂದಾಜಿಸಲಾಗಿದೆ.

ಜೂನ್ 1ರಿಂದ ಇದುವರೆಗೆ 45.38 ಸೆಂ.ಮೀ. ಮಳೆಯಾಗಿದ್ದು, ಇದು ಈ ಅವಧಿಯ ವಾಡಿಕೆಗಿಂತ (44.58 ಸೆಂ. ಮೀ.) ಶೇ 2ರಷ್ಟು ಹೆಚ್ಚು ಇದೆ.

‘ಮುಂದಿನ ಎರಡು ತಿಂಗಳಲ್ಲಿ ದೇಶದ ಬಹುತೇಕ ಭಾಗಗಳಲ್ಲಿ ವಾಡಿಕೆ ಮತ್ತು ವಾಡಿಕೆಗಿಂತ ಅಧಿಕ ಮಳೆ ನಿರೀಕ್ಷಿಸಬಹುದು. ಈಶಾನ್ಯ ಭಾರತ, ಪೂರ್ವ ಭಾಗದ ಕೆಲವು ಪ್ರದೇಶಗಳು, ಲಡಾಖ್, ಸೌರಾಷ್ಟ್ರ ಮತ್ತು ಕಛ್‌ನಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಬಹುದು’ ಎಂದು ವರದಿ ತಿಳಿಸಿದೆ.

‘ಕೇರಳಕ್ಕೆ ಎಚ್ಚರಿಕೆ ಕೊಟ್ಟಿದ್ದೆವು’

‘ಹವಾಮಾನ ಇಲಾಖೆಯು ದೇಶದ ಪಶ್ಚಿಮ ಕರಾವಳಿಯಲ್ಲಿ ಹೆಚ್ಚಿನ ಮಳೆಯಾಗುವ ಮುನ್ಸೂಚನೆಯನ್ನು ನಿಯಮಿತವಾಗಿ ನೀಡುತ್ತಾ ಬಂದಿತ್ತು ಹಾಗೂ ಜುಲೈ 30ರ ಬೆಳಿಗ್ಗೆ ಕೇರಳಕ್ಕೆ ರೆಡ್ ಅಲರ್ಟ್ ಘೋಷಿಸಿತ್ತು’ ಎಂದು ಐಎಂಡಿ ಮುಖ್ಯಸ್ಥ ಮೃತ್ಯುಂಜಯ ಮಹಾಪಾತ್ರ ಹೇಳಿದ್ದಾರೆ. ಈ ಮೂಲಕ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಹೇಳಿಕೆಯನ್ನು ಸಮರ್ಥಿಸಿಕೊಂ-ಡಿದ್ದಾರೆ.

‘ಭೂಕುಸಿತ ಸಾಧ್ಯತೆಯ ಎಚ್ಚರಿಕೆ ನೀಡಿದ್ದರೂ, ಕೇರಳ ಸರ್ಕಾರ ಅದನ್ನು ಕಡೆಗಣಿಸಿತ್ತು’ ಎಂದು ಶಾ ಅವರು ಹೇಳಿದ್ದರು. ಆದರೆ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಶಾ ಹೇಳಿಕೆಯನ್ನು ಅಲ್ಲಗಳೆದಿದ್ದರಲ್ಲದೆ, ‘ಆರೆಂಜ್ ಅಲರ್ಟ್’ ಮಾತ್ರ ಘೋಷಿಸಲಾಗಿತ್ತು ಎಂದಿದ್ದರು.

ಗುರುವಾರ ವರ್ಚುವಲ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಹಾಪಾತ್ರ, ‘ಜುಲೈ 25ರಿಂದ ಆಗಸ್ಟ್ 1ರವರೆಗೆ ಪಶ್ಚಿಮ ಕರಾವಳಿ ಮತ್ತು ದೇಶದ ಮಧ್ಯ ಭಾಗಗಳಲ್ಲಿ ಉತ್ತಮ ಮಳೆಯಾಗುವ ಮುನ್ಸೂಚನೆ ನೀಡಲಾಗಿತ್ತು. ನಾವು ಜುಲೈ 25ರಂದು ‘ಯೆಲ್ಲೊ ಅಲರ್ಟ್’ ನೀಡಿದ್ದು, ಅದು ಜುಲೈ 29ರವರೆಗೆ ಮುಂದುವರಿಯಿತು. ಜುಲೈ 30ರ ಮುಂಜಾನೆ ‘ರೆಡ್ ಅಲರ್ಟ್’ ನೀಡಿ, 20 ಸೆಂ.ಮೀ.ನಷ್ಟು ಮಳೆಯಾಗುವ ಸಾಧ್ಯತೆಯಿದೆ ಎಂಬ ಎಚ್ಚರಿಕೆ ಕೊಟ್ಟಿದ್ದೆವು’ ಎಂದು ಹೇಳಿದರು. ‘ಯಾವುದೇ ಪರಿಸ್ಥಿತಿಯನ್ನು ಎದುರಿಸಲು ಸಜ್ಜಾಗಿರಬೇಕು ಎಂಬುದು ಆರೆಂಜ್ ಅಲರ್ಟ್‌ನ ಅರ್ಥ. ರೆಡ್ ಅಲರ್ಟ್‌ಗಾಗಿ ಕಾಯಬಾರದು’ ಎಂದು ತಿಳಿಸಿದರು.

ಮೇಘಸ್ಫೋಟ, ದಿಢೀರ್ ಪ್ರವಾಹಕ್ಕೆ ತತ್ತರಿಸಿದ ಜನ: ಹಲವೆಡೆ ರಸ್ತೆ ಸಂಪರ್ಕ ಕಡಿತ

ಧಾರಾಕಾರ ಮಳೆ: ದೇಶದಾದ್ಯಂತ 24 ಸಾವು

ಶಿಮ್ಲಾ/ಡೆಹ್ರಾಡೂನ್/ನವದೆಹಲಿ (ಪಿಟಿಐ): ಹಿಮಾಚಲ ಪ್ರದೇಶ, ಉತ್ತರಾಖಂಡ ಹಾಗೂ ದೆಹಲಿಯಲ್ಲಿ ಭಾರಿ ಮಳೆ-ಯಾಗುತ್ತಿದ್ದು ಇದಕ್ಕೆ ಸಂಬಂಧಿಸಿದ ಪ್ರತ್ಯೇಕ ಅವಘಡಗಳಲ್ಲಿ ಒಟ್ಟು 24 ಮಂದಿ ಗುರುವಾರ ಮೃತಪಟ್ಟಿದ್ದಾರೆ.

ಉತ್ತರಾಖಂಡದ ಹಲವು ಭಾಗಗಳಲ್ಲಿ ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ಈವರೆಗೆ ಒಮ್ಮೆಯೂ ಮಳೆ ಸುರಿದಿರಲಿಲ್ಲ. ಆದರೆ, ಬುಧವಾರ ರಾತ್ರಿ ರಾಜ್ಯದ ಹಲವು ಭಾಗಗಳಲ್ಲಿ ಭಾರಿ ಮಳೆಯಾಗಿದೆ. ಇಲ್ಲಿನ ನದಿಗಳ ನೀರಿನ ಮಟ್ಟದಲ್ಲಿ ಭಾರಿ ಏರಿಕೆಯಾಗಿದೆ. ಇದರಿಂದ ಪ್ರವಾಹ ಉಂಟಾಗಿದ್ದು ಕೆಲವೆಡೆ ಮೇಘಸ್ಫೋಟವೂ ಸಂಭವಿಸಿದೆ.

ಈ ಘಟನೆಗಳಲ್ಲಿ ಒಂದೇ ಕುಟುಂಬದ ಮೂವರು ಸೇರಿ ಒಟ್ಟು 12 ಮಂದಿ ಮೃತಪಟ್ಟು, 6 ಮಂದಿ ಗಾಯಗೊಂಡಿದ್ದಾರೆ. ಹಲವೆಡೆ ಮನೆಗಳು ಕುಸಿದಿವೆ. ಹರಿದ್ವಾರ, ಡೆಹ್ರಾಡೂನ್, ಠಹರಿ ಹಾಗೂ ಚಮೋಲಿ ಜಿಲ್ಲೆಗಳಲ್ಲಿ ಭಾರಿ ಮಳೆಯಾಗುತ್ತಿದೆ. ಡೆಹ್ರಾಡೂನ್ ನಗರದ ಹಲವು ರಸ್ತೆಗಳಲ್ಲಿ ನೀರು ನಿಂತಿದೆ. ಮಳೆನೀರು ಮನೆಗೆ ನುಗ್ಗಿದೆ.

ಹಿಮಾಚಲ ಪ್ರದೇಶದಲ್ಲಿನ ಮೇಘಸ್ಫೋಟ ಹಾಗೂ ಪ್ರವಾಹದ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ನದಿಗಳ ನೀರಿನ ಮಟ್ಟ ಅಪಾಯಕರ ರೀತಿಯಲ್ಲಿ ಏರಿಕೆಯಾಗಿದೆ. ಇಲ್ಲಿನ ಕುಲ್ಲು, ಮಂಡಿ ಹಾಗೂ ಶಿಮ್ಲಾ ಜಿಲ್ಲೆಗಳಲ್ಲಿ ಮೇಘಸ್ಫೋಟ ಸಂಭವಿಸಿದೆ. ಈ ಘಟನೆಗಳಲ್ಲಿ ಐವರು ಮೃತಪಟ್ಟಿದ್ದು, ಸುಮಾರು 50 ಜನರು ಕಾಣೆಯಾಗಿದ್ದಾರೆ. ಹಲವು ಮನೆಗಳು, ಸೇತುವೆಗಳು ಕೊಚ್ಚಿಹೋಗಿವೆ. ಈ ಜಿಲ್ಲೆಗಳಲ್ಲಿನ ರಸ್ತೆ ಸಂಪರ್ಕವು ಕಡಿತಗೊಂಡಿದೆ.

‘ಪ್ರವಾಹದಲ್ಲಿ ಸಿಲುಕಿಕೊಂಡವರ ರಕ್ಷಣಾ ಕಾರ್ಯಾಚರಣೆ ನಡೆಸಲಾಗುತ್ತಿದೆ. ಆದರೆ, ರಸ್ತೆ ಸಂಪರ್ಕ ಕಡಿತಗೊಂಡಿರುವುದರಿಂದ ಕಾರ್ಯಾಚರಣೆಗೆ ಅಡಚಣೆ-ಯಾಗುತ್ತಿದೆ’ ಎಂದು ಶಿಮ್ಲಾದ ಜಿಲ್ಲಾಧಿಕಾರಿ ಅನುಪಮ್ ಕಶ್ಯಪ್ ತಿಳಿಸಿದ್ದಾರೆ. ‘ಮುಂದಿನ ನಾಲ್ಕು–ಐದು ದಿನಗಳಲ್ಲಿ ರಾಜ್ಯದಲ್ಲಿ ಭಾರಿ ಮಳೆಯಾಗಲಿದೆ. ಮಂಡಿ, ಕುಲ್ಲು, ಚಂಬಾ ಹಾಗೂ ಕಾಂಗಢಾ ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್ ಘೋಷಿಸಲಾಗಿದೆ’ ಎಂದು ಹವಾಮಾನತಜ್ಞ ಸಂದೀಪ್ ಶರ್ಮಾ ಹೇಳಿದ್ದಾರೆ.

ದೆಹಲಿಯ ಸಬ್ಜಿ ಮಂಡಿ ಪ್ರದೇಶದಲ್ಲಿ ಕಟ್ಟಡ ಕುಸಿದು ಬಿದ್ದು, 62 ವರ್ಷದ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ. ಡಿಫೆನ್ಸ್ ಕಾಲೊನಿಯಲ್ಲಿ ಒಬ್ಬರು, ಶಾಸ್ತ್ರಿ ಪಾರ್ಕ್ ನಗರದಲ್ಲಿ ಇಬ್ಬರು ಮೃತಪಟ್ಟಿದ್ದಾರೆ. ಕಟ್ಟಡ ಕುಸಿತದಿಂದ ಹಲವರು ಗಾಯಗೊಂಡಿದ್ದಾರೆ.

ಸಿಡಿಲಿಗೆ 12 ಜನರ ಸಾವು (ಪಟ್ನಾ ವರದಿ): ಬಿಹಾರದ ನಾಲ್ಕು ಜಿಲ್ಲೆಗಳಲ್ಲಿ ಸಿಡಿಲು ಬಡಿದು 12 ಮಂದಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.ಗಯಾ ಜಿಲ್ಲೆಯಲ್ಲಿ ಐವರು, ಜೆಹನಾಬಾದ್‌ನಲ್ಲಿ ಮೂವರು, ನಳಂದಾ ಮತ್ತು ರೋಹ್ತಾಸ್‌ನಲ್ಲಿ ತಲಾ ಇಬ್ಬರು ಅಸುನೀಗಿದ್ದಾರೆ ಎಂದು ಮುಖ್ಯಮಂತ್ರಿ ಕಚೇರಿ ತಿಳಿಸಿದೆ.

ಮೃತರ ಕುಟುಂಬದವರಿಗೆ ತಲಾ ₹4 ಲಕ್ಷ ಪರಿಹಾರವನ್ನು ಮುಖ್ಯಮಂತ್ರಿ ನಿತೀಶ್ ಕುಮಾರ್ ಪ್ರಕಟಿಸಿದ್ದಾರೆ.

ಮಾರ್ಗಮಧ್ಯೆ ಸಿಲುಕಿದ 450 ಯಾತ್ರಿಗಳು

ಗೌರಿಕುಂಡ–ಕೇದಾರನಾಥ ಚಾರಣ ಮಾರ್ಗದಲ್ಲಿ ಸುಮಾರು 450 ಯಾತ್ರಿಗಳು ಸಿಲುಕಿಕೊಂಡಿದ್ದಾರೆ. ಈ ಮಾರ್ಗದ ಸುಮಾರು 20–25 ಮೀಟರ್ ಉದ್ದದ ರಸ್ತೆ ಮಾರ್ಗವು ಭೂಕುಸಿತದಿಂದ ಹಾನಿಗೊಳಗಾಗಿದೆ. ಸಂಚಾರ ರದ್ದುಗೊಂಡಿದೆ. ಕೇದಾರನಾಥ ಮಾರ್ಗದಲ್ಲಿನ ಭೀಮ್‌ಬಲಿ ಚೌಕಿ ಬಳಿ ಸುಮಾರು 200 ಯಾತ್ರಿಗಳು ಸಿಲುಕಿಕೊಂಡಿದ್ದರು. ಇವರನ್ನು ರಕ್ಷಿಸಲಾಗಿದ್ದು, ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸ-ಲಾಗಿದೆ. ಈ ಮಾರ್ಗದಲ್ಲಿ ರಸ್ತೆಗಳ ಮೇಲೆ ಬಂಡೆಗಳು ಉರುಳುತ್ತಿವೆ.

‘ಹವಾಮಾನವು ಸಹಜ ಸ್ಥಿತಿಗೆ ಬರುವವರೆಗೆ ಕೇದಾರನಾಥ ಯಾತ್ರಿಗಳು ಸುರಕ್ಷಿತ ಪ್ರದೇಶದಲ್ಲಿಯೇ ಇರಬೇಕು. ಕೇದಾರನಾಥ ಮಾರ್ಗದ ಹಲವು ರಸ್ತೆಗಳ ಸಂಪರ್ಕ ಕಡಿತಗೊಂಡಿದೆ. ಈ ರಸ್ತೆಗಳು ಸಂಚಾರಕ್ಕೆ ಯೋಗ್ಯವಾಗುವವರೆಗೂ ಯಾವ ಯಾತ್ರಿಗಳೂ ಯಾತ್ರೆ ಹೊರಡಬಾರದು’ ಎಂದು ಸರ್ಕಾರ ಮನವಿ ಮಾಡಿದೆ.

- ದೆಹಲಿಯ ಹಳೆಯ ರಾಜಿಂದರ್ ನಗರದಲ್ಲಿರುವ ಕೋಚಿಂಗ್ ಸೆಂಟರ್‌ವೊಂದಕ್ಕೆ ಮಳೆ ನೀರು ನುಗ್ಗಿ ಇತ್ತೀಚೆಗಷ್ಟೇ ಮೂವರು ಐಎಎಸ್ ಆಕಾಂಕ್ಷಿಗಳು ಮೃತಪಟ್ಟಿದ್ದರು. ಇದೇ ನಗರದಲ್ಲಿ ಬುಧವಾರವೂ ಹೆಚ್ಚು ಮಳೆಯಾಗಿದ್ದು, ನೆಲಮಹಡಿಗಳಿಗೆ ನೀರು ನುಗ್ಗಿದೆ. ರಸ್ತೆಗಳಲ್ಲಿ ಸೊಂಟದ ಮಟ್ಟದವರೆಗೆ ನೀರು ನಿಂತಿದೆ. ರಸ್ತೆಯಲ್ಲಿಯೇ ಐಎಎಸ್ ಆಕಾಂಕ್ಷಿಗಳು ಬುಧವಾರ ರಾತ್ರಿ ಪ್ರತಿಭಟನೆ ಮುಂದುವರಿಸಿರುವ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ
- ಜೈಪುರದ ವಿಶ್ವಕರ್ಮ ನಗರದ ಮನೆಯೊಂದಕ್ಕೆ ನೀರು ನುಗ್ಗಿ ಅಪ್ರಾಪ್ತೆ ಸೇರಿ ಕುಟುಂಬದ ಮೂವರು ಮಳೆನೀರಿನಲ್ಲಿ ಮುಳುಗಿರುವ ಘಟನೆ ಗುರುವಾರ ಬೆಳಿಗ್ಗೆ ನಡೆದಿದೆ. ಮೃತದೇಹಗಳನ್ನು ಹೊರತೆಗೆಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ

ಶುಕ್ರವಾರ, ಆಗಸ್ಟ್ 2, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 214 | ಪುಟ 18

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ಪರಿಶಿಷ್ಟ ಜಾತಿ ಒಳಮೀಸಲಾತಿ: ಹೋರಾಟದ ಹಾದಿ

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
81,867	25,010	₹71,900 (ಬೆಂಗಳೂರು)	₹86,000 (ಬೆಂಗಳೂರು)	83.73



ಸ್ವಪ್ನಿಲ್ ಕುಸಾಳೆ (ಭಾರತ)
451.4 ಅಂಕ
ಕಂಚು

ಚಿನ್ನಯ್ಯ ಪ್ರಕರಣದ ತೀರ್ಪು ರದ್ದು ● ಪರಿಶಿಷ್ಟ ಜಾತಿಗೆ ಸಂಬಂಧಿಸಿ 6:1ರ ಬಹುಮತದ 'ಸುಪ್ರೀಂ' ತೀರ್ಪು

ಒಳಮೀಸಲು: ರಾಜ್ಯಕ್ಕೆ ಅಧಿಕಾರ

ನವದೆಹಲಿ (ಪಿಟಿಐ): ಪರಿಶಿಷ್ಟ ಜಾತಿಗಳಲ್ಲಿ (ಎಸ್‌ಸಿ) ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹೆಚ್ಚು ಹಿಂದುಳಿದಿರುವ ಜಾತಿಗಳ ಅಭಿವೃದ್ಧಿಯ ಉದ್ದೇಶದಿಂದ ಆ ಜಾತಿಗಳಿಗೆ ಸೇರಿದವರಿಗೆ ಮೀಸಲಾತಿ ಕಲ್ಪಿಸಲು, ಒಳಮೀಸಲಾತಿ ನೀಡುವ ಸಾಂವಿಧಾನಿಕ ಅಧಿಕಾರ ರಾಜ್ಯಗಳಿಗೆ ಇದೆ ಎಂದು ಸುಪ್ರೀಂ ಕೋರ್ಟ್ ಗುರುವಾರ ಸಾರಿದೆ.

ಪರಿಶಿಷ್ಟ ಜಾತಿಗಳು ಸಾಮಾಜಿಕವಾಗಿ ಏಕರೂಪಿಯಾಗಿಲ್ಲ ಎಂದು ಏಳು ನ್ಯಾಯಮೂರ್ತಿಗಳ ಸಂವಿಧಾನ ಪೀಠವು ಹೇಳಿದೆ. ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು ಈ ಪೀಠದ ನೇತೃತ್ವ ವಹಿಸಿದ್ದರು. ಪೀಠವು 6:1ರ ಬಹುಮತದ ತೀರ್ಪು ನೀಡಿದೆ.

ಇ.ವಿ. ಚಿನ್ನಯ್ಯ ಮತ್ತು ಆಂಧ್ರಪ್ರದೇಶ ಸರ್ಕಾರದ ನಡುವಿನ ಪ್ರಕರಣದಲ್ಲಿ, 'ಪರಿಶಿಷ್ಟ ಜಾತಿಗಳ ಒಳಮೀಸಲಾತಿಗೆ ಅವಕಾಶ ಇಲ್ಲ, ಏಕೆಂದರೆ ಪರಿಶಿಷ್ಟ ಜಾತಿ ಎಂಬುದೇ ಒಂದು ಏಕರೂಪಿ ವರ್ಗ' ಎಂದು ಸುಪ್ರೀಂ ಕೋರ್ಟ್‌ನ ಐವರು ನ್ಯಾಯಮೂರ್ತಿಗಳ ಸಂವಿಧಾನ ಪೀಠ 2004ರಲ್ಲಿ ನೀಡಿದ್ದ ತೀರ್ಪನ್ನು ಏಳು ನ್ಯಾಯಮೂರ್ತಿಗಳ ಪೀಠವು ರದ್ದುಪಡಿಸಿದೆ.

'ಸಂವಿಧಾನದ 15ನೆಯ ಹಾಗೂ 16ನೆಯ ವಿಧಿಗಳ ಅಡಿಯಲ್ಲಿ ಇರುವ ಅಧಿಕಾರವನ್ನು ಬಳಸಿ ರಾಜ್ಯ ಸರ್ಕಾರಗಳು ಸಾಮಾಜಿಕ ಹಿಂದುಳಿದಿರುವಿಕೆಯ ಭಿನ್ನ ಮಟ್ಟವನ್ನು ಗುರುತಿಸಲು ಹಾಗೂ ಮೀಸಲಾತಿಯಂತಹ ವಿಶೇಷ ಅವಕಾಶಗಳನ್ನು ಕಲ್ಪಿಸಲು ಮುಕ್ತವಾಗಿವೆ' ಎಂದು ಸಿಜೆಐ ಚಂದ್ರಚೂಡ್ ಅವರು ತೀರ್ಪಿನಲ್ಲಿ ಹೇಳಿದ್ದಾರೆ.

'ಪರಿಶಿಷ್ಟ ಜಾತಿಗಳು ಏಕರೂಪಿ ಸಮುದಾಯ ಅಲ್ಲ ಎಂಬುದನ್ನು ಐತಿಹಾಸಿಕ ಹಾಗೂ ಅನುಭವಕ್ಕೆ ದಕ್ಕುವ ಸಾಕ್ಷ್ಯಗಳು ಹೇಳುತ್ತವೆ. ಹೀಗಾಗಿ, ರಾಜ್ಯಗಳು ಸಂವಿಧಾನದ 15(4), 16(4)ನೆಯ ವಿಧಿಯ ಅಡಿಯಲ್ಲಿ ಇರುವ ಅಧಿಕಾರವನ್ನು ಬಳಸಿ, ಪರಿಶಿಷ್ಟ ಜಾತಿಗಳಲ್ಲಿ ಒಳಮೀಸಲಾತಿ ಕಲ್ಪಿಸಬಹುದು. ಆದರೆ ಹಾಗೆ ಪ್ರತ್ಯೇಕಗೊಳಿಸುವುದಕ್ಕೆ ಸಕಾರಣ ಇರಬೇಕು' ಎಂದು ಅವರು ವಿವರಿಸಿದ್ದಾರೆ.

ಪೀಠವು ಒಟ್ಟು 565 ಪುಟಗಳ ತೀರ್ಪುಗಳನ್ನು ನೀಡಿದೆ. ಚಂದ್ರಚೂಡ್ ಅವರು ನ್ಯಾಯಮೂರ್ತಿ ಮಿಶ್ರಾ ಅವರ ಪರವಾಗಿ ತಾವೇ ತೀರ್ಪು ಬರೆದಿದ್ದಾರೆ. ನಾಲ್ವರು ನ್ಯಾಯಮೂರ್ತಿಗಳು ಇದಕ್ಕೆ ಸಹಮತದ ತೀರ್ಪು ಬರೆದಿದ್ದಾರೆ. ನ್ಯಾಯಮೂರ್ತಿ ತ್ರಿವೇದಿ ಅವರು ಭಿನ್ನಮತದ ತೀರ್ಪು ಬರೆದಿದ್ದಾರೆ.

6ನೇ ಪುಟ ನೋಡಿ

ಕೋರ್ಟ್ ಹೇಳಿದ ಪ್ರಮುಖ ಮಾತುಗಳು



- ಒಳಮೀಸಲು ಸೇರಿದಂತೆ ಸದಾಶಯದ ಯಾವುದೇ ಕ್ರಮದ ಉದ್ದೇಶವು ಹಿಂದುಳಿದಿರುವವರಿಗೆ ಸಮಾನ ಅವಕಾಶಗಳನ್ನು ನೀಡುವುದಾಗಿರಬೇಕು
- ಕೆಲವು ವರ್ಗಗಳಿಗೆ ಪ್ರಾತಿನಿಧ್ಯವು ಸರಿಯಾಗಿ ದೊರೆತಿಲ್ಲ ಎಂಬ ಕಾರಣಕ್ಕೆ ರಾಜ್ಯ ಸರ್ಕಾರಗಳು ಒಳಮೀಸಲು ನೀಡಬಹುದು
- ಜಾತಿ ಅಥವಾ ಗುಂಪು ಹಿಂದುಳಿದಿರುವ ಕಾರಣದಿಂದಾಗಿ ಅದಕ್ಕೆ ಸೂಕ್ತ ಪ್ರಾತಿನಿಧ್ಯ ಸಿಕ್ಕಿಲ್ಲ ಎಂಬುದನ್ನು ಸಾಬೀತು ಮಾಡಬೇಕು
- ಸರ್ಕಾರಿ ಹುದ್ದೆಗಳಲ್ಲಿ ಪ್ರಾತಿನಿಧ್ಯ ಸೂಕ್ತವಾಗಿ ಇಲ್ಲ ಎಂಬ ಬಗ್ಗೆ ಸರ್ಕಾರವು ದತ್ತಾಂಶ ಕಲೆಹಾಕಬೇಕು. ಏಕೆಂದರೆ ಸೂಕ್ತ ಪ್ರಾತಿನಿಧ್ಯ ಇಲ್ಲ ಎಂಬುದನ್ನು ಹಿಂದುಳಿದಿರುವಿಕೆಯ ಸೂಚಕವನ್ನಾಗಿ ಬಳಸಲಾಗುತ್ತದೆ
- ಒಳಮೀಸಲು ನೀಡುವಾಗ ರಾಜ್ಯಗಳು ಸಮರ್ಥನೀಯವಾದ ದತ್ತಾಂಶಗಳನ್ನು ಹೊಂದಿರಬೇಕೇ ಹೊರತು ತಮಗೆ ತೋಚಿದ ಬಗೆಯಲ್ಲಿ ಒಳಮೀಸಲು ನೀಡುವಂತಿಲ್ಲ

● ಏಳು ನ್ಯಾಯಮೂರ್ತಿಗಳ ಪೀಠದಲ್ಲಿ ಇದ್ದವರು: ಡಿ.ವೈ. ಚಂದ್ರಚೂಡ್, ಬಿ.ಆರ್. ಗವಾಯಿ, ವಿಕ್ರಮನಾಥ್, ಬೇಲಾ ಎಂ. ತ್ರಿವೇದಿ, ಪಂಕಜ್ ಮಿತ್ತಲ್, ಮನೋಜ್ ಮಿಶ್ರಾ ಮತ್ತು ಸತೀಶ್ ಚಂದ್ರ ಮಿಶ್ರಾ

'ಕೆನೆಪದರಕ್ಕೆ ಮೀಸಲಾತಿ ಬೇಡ'

ಪರಿಶಿಷ್ಟ ಜಾತಿ (ಎಸ್‌ಸಿ) ಹಾಗೂ ಪರಿಶಿಷ್ಟ ಪಂಗಡಗಳಲ್ಲಿ (ಎಸ್‌ಟಿ) ಕೆನೆಪದರವನ್ನು ಗುರುತಿಸಲು ಮತ್ತು ಅವರಿಗೆ ಮೀಸಲಾತಿಯ ಸೌಲಭ್ಯವನ್ನು ನಿರಾಕರಿಸಲು ರಾಜ್ಯ ಸರ್ಕಾರಗಳು ನೀತಿಯೊಂದನ್ನು ರೂಪಿಸಬೇಕು ಎಂದು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರು ಹೇಳಿದ್ದಾರೆ.

ಗವಾಯಿ ಅವರು ದಲಿತ ಸಮುದಾಯಕ್ಕೆ ಸೇರಿದವರು. ಅಲ್ಲದೆ ಅವರು ಮುಂದಿನ ವರ್ಷ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ (ಸಿಜೆಐ) ಪದೋನ್ನತಿ ಹೊಂದಲಿದ್ದಾರೆ.



ಪರಿಶಿಷ್ಟ ಜಾತಿಗಳ ಒಳಮೀಸಲು ಅಧಿಕಾರ ರಾಜ್ಯ ಸರ್ಕಾರಗಳಿಗೆ ಇದೆ ಎಂದು ಸಾರಿರುವ ಸಂವಿಧಾನ ಪೀಠದಲ್ಲಿ ಒಬ್ಬರಾಗಿರುವ ನ್ಯಾಯಮೂರ್ತಿ ಗವಾಯಿ ಅವರು, ಸಹಮತದ ತಮ್ಮ ತೀರ್ಪನ್ನು ಪ್ರತ್ಯೇಕವಾಗಿ ಬರೆದಿದ್ದಾರೆ.

ಒಳಮೀಸಲು ಕಲ್ಪಿಸುವ ಅಧಿಕಾರವು ರಾಜ್ಯಗಳಿಗೆ ಇದೆ ಎಂಬ ತೀರ್ಪು ನೀಡಿರುವ ಆರು ನ್ಯಾಯಮೂರ್ತಿಗಳ ಪೈಕಿ ನಾಲ್ವರು ನ್ಯಾಯಮೂರ್ತಿಗಳು, 'ಕೆನೆಪದರದ ವ್ಯಾಪ್ತಿಗೆ ಬರುವವರನ್ನು ಮೀಸಲಾತಿಯ ಸೌಲಭ್ಯದಿಂದ ಹೊರಗಿರಿಸಬೇಕು' ಎಂದಿದ್ದಾರೆ.

ಸಹಮತದ ತೀರ್ಪು ಬರೆದಿರುವ ನ್ಯಾಯಮೂರ್ತಿ ಗವಾಯಿ ಅವರು, 'ಸರ್ಕಾರಿ ಉದ್ಯೋಗಗಳಲ್ಲಿ ಸೂಕ್ತ ಪ್ರಾತಿನಿಧ್ಯ ಸಿಕ್ಕಿರದ ಹಿಂದುಳಿದ ವರ್ಗದವರಿಗೆ ಆದ್ಯತೆಯನ್ನು ನೀಡುವುದು ಸರ್ಕಾರದ ಕರ್ತವ್ಯ' ಎಂದು ಹೇಳಿದ್ದಾರೆ.

'ಪರಿಶಿಷ್ಟ ಜಾತಿಗಳು ಹಾಗೂ ಪರಿಶಿಷ್ಟ ಪಂಗಡಗಳಲ್ಲಿ ಕೆನೆಪದರವನ್ನು ಗುರುತಿಸಲು ರಾಜ್ಯ ಸರ್ಕಾರಗಳು ನೀತಿಯೊಂದನ್ನು ರೂಪಿಸಬೇಕು. ಸಂವಿಧಾನದಲ್ಲಿ ಹೇಳಿರುವ ನಿಜವಾದ ಸಮಾನತೆಯ ಗುರಿಯನ್ನು ಸಾಧಿಸಲು ಈ ಕ್ರಮದಿಂದ ಮಾತ್ರವೇ ಸಾಧ್ಯ ಎಂಬುದು ನನ್ನ ಅನಿಸಿಕೆ' ಎಂದು ಗವಾಯಿ ಅವರು ಹೇಳಿದ್ದಾರೆ.

ಮೀಸಲಾತಿಯ ಪ್ರಯೋಜನವನ್ನು ಪಡೆದಿರುವ, ಪರಿಶಿಷ್ಟ ಜಾತಿಗಳಿಗೆ ಸೇರಿದವರ ಮಕ್ಕಳನ್ನು ಹಾಗೂ ಮೀಸಲಾತಿಯ ಪ್ರಯೋಜನ ಪಡೆಯದ, ಪರಿಶಿಷ್ಟ ಜಾತಿಗಳಿಗೆ ಸೇರಿದವರ ಮಕ್ಕಳನ್ನು ಒಂದೇ ತಕ್ಕಡಿಯಲ್ಲಿ ತೂಗಲು ಆಗುವುದಿಲ್ಲ ಎಂದು ಅವರು ಹೇಳಿದ್ದಾರೆ.

6ನೇ ಪುಟ ನೋಡಿ

'ಜಾರಿಗೆ ಇದ್ದ ಅಡ್ಡಿ ನಿವಾರಣೆ'

ಬೆಂಗಳೂರು: 'ಪರಿಶಿಷ್ಟರಲ್ಲಿ ಅತಿ ಹಿಂದುಳಿದವರನ್ನು ಗುರುತಿಸಿ ಒಳಮೀಸಲಾತಿ ನೀಡುವ ರಾಜ್ಯ ಸರ್ಕಾರಗಳ ಅಧಿಕಾರವನ್ನು ಎತ್ತಿಹಿಡಿದಿರುವ ಸುಪ್ರೀಂ ಕೋರ್ಟ್ ತೀರ್ಪಿನಿಂದಾಗಿ ಒಳಮೀಸಲಾತಿ ಅನುಷ್ಠಾನಕ್ಕೆ ಇದ್ದ ಮುಖ್ಯ ಅಡ್ಡಿಯೊಂದು ನಿವಾರಣೆಯಾಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.



ಸಿದ್ದರಾಮಯ್ಯ

'ಒಳಮೀಸಲಾತಿ ಕಲ್ಪಿಸುವ ಕುರಿತ ನ್ಯಾ.ಎ.ಜೆ. ಸದಾಶಿವ ಆಯೋಗದ ಶಿಫಾರಸುಗಳನ್ನು ಕೂಲಂಕಷವಾಗಿ ಅಧ್ಯಯನ ನಡೆಸಲಾಗುವುದು. ಅಗತ್ಯ ಬಿದ್ದರೆ ಅದಕ್ಕೆ ಸಂಬಂಧಿಸಿದಂತೆ ಇತ್ತೀಚಿನ ಬೆಳವಣಿಗೆಗಳನ್ನು ಪರಿಗಣನೆಗೆ ತೆಗೆದುಕೊಂಡು, ರಾಜ್ಯದಲ್ಲಿ ಒಳಮೀಸಲಾತಿ ಜಾರಿಗೊಳಿಸುವ ಕುರಿತು ಸಮಾಲೋಚನೆ- ಸಂಧಾನದ ಮೂಲಕ ಸ್ಪಷ್ಟ ನಿರ್ಧಾರ ಕೈಗೊಳ್ಳಲಾಗುವುದು' ಎಂದು ತಿಳಿಸಿದ್ದಾರೆ.

'ಸುಪ್ರೀಂ ಕೋರ್ಟ್ ನೀಡಿರುವ ಈ ತೀರ್ಪು ಐತಿಹಾಸಿಕವಾದುದು. ತೀರ್ಪಿನಲ್ಲಿರುವ ವಿವಾದಾತ್ಮಕ ಕೆನೆಪದರದ ಬಗೆಗಿನ ಅಂಶವೂ ಸೇರಿದಂತೆ ಇತರ ವಿಷಯಗಳ ಬಗ್ಗೆ ಪರಿಶಿಷ್ಟ ಜಾತಿಯ ನಾಯಕರು ಮತ್ತು ಕಾನೂನು ತಜ್ಞರ ಜೊತೆ ಸಮಾಲೋಚಿಸಿ ಕ್ರಮಕೈಗೊಳ್ಳಲಾಗುವುದು' ಎಂದಿದ್ದಾರೆ.

6ನೇ ಪುಟ ನೋಡಿ

ಸ್ವಪ್ನಿಲ್ ರೈಫಲ್ ಕಮಾಲ್

ಪ್ಯಾರಿಸ್ ನಗರದಿಂದ 280 ಕಿ.ಮೀ ದೂರದಲ್ಲಿರುವ ಶತೋಹು ಶೂಟಿಂಗ್ ರೇಂಜ್ ಭಾರತದ ಪ್ರತಿಭೆಗಳ ಪಾಲಿಗೆ ಮತ್ತೊಮ್ಮೆ ಅದೃಷ್ಟದ ತಾಣವಾಯಿತು. ಸ್ವಪ್ನಿಲ್ ಕುಸಾಳೆ ಅವರು ಇದೇ ರೇಂಜ್‌ನಲ್ಲಿ ಗುರುವಾರ ನಡೆದ 50 ಮೀ ರೈಫಲ್ ತ್ರೀ ಪೊಸಿಷನ್ ವಿಭಾಗದಲ್ಲಿ ಕಂಚಿನ ಪದಕ ಗೆದ್ದರು. ಭಾರತಕ್ಕೆ ಈ ಕೂಟದಲ್ಲಿ ಮತ್ತು ಶೂಟಿಂಗ್‌ನಲ್ಲಿ ಇದುವರೆಗೆ ಒಲಿದ ಮೂರನೇ ಪದಕ ಇದಾಗಿದೆ.

- ಒಲಿಂಪಿಕ್ಸ್‌ನಲ್ಲಿ 50 ಮೀ ರೈಫಲ್ ತ್ರಿ ಪೊಸಿಷನ್‌ನಲ್ಲಿ ಭಾರತಕ್ಕೆ ಮೊದಲ ಪದಕ
- 28 ವರ್ಷದ ಅವರು ಮಹಾರಾಷ್ಟ್ರದ ಕೊಲ್ಹಾಪುರ ಸಮೀಪದ ಕಾಂಬಳವಾಡಿಯವರು
- ಕುಸಾಳೆಯವರಿಗೆ ಇದು ಮೊದಲ ಒಲಿಂಪಿಕ್ ಕೂಟವಾಗಿದೆ
- ಮಹಾರಾಷ್ಟ್ರ ಸರ್ಕಾರದಿಂದ ₹1 ಕೋಟಿ ಬಹುಮಾನ



ಲಕ್ಷ್ಯ ಸೇನ್
ಪುರುಷರ ಸಿಂಗಲ್ಸ್ ಬ್ಯಾಡ್ಮಿಂಟನ್ ಕ್ವಾರ್ಟರ್‌ಫೈನಲ್‌ಗೆ ಪ್ರವೇಶ

ಇನ್ನಷ್ಟು ಸುದ್ದಿಗಳು 13

ಕೃಷ್ಣ ಜನ್ಮಭೂಮಿ– ಶಾಹಿ ಈದ್ಗಾ ವಿವಾದ: ಸಮಿತಿ ಅರ್ಜಿ ತಿರಸ್ಕೃತ

ಪ್ರಯಾಗರಾಜ್ (ಪಿಟಿಐ): ಮಥುರಾದಲ್ಲಿನ ಕೃಷ್ಣ ಜನ್ಮಭೂಮಿ – ಶಾಹಿ ಈದ್ಗಾ ವಿವಾದಕ್ಕೆ ಸಂಬಂಧಿಸಿದ 18 ಪ್ರಕರಣಗಳ ವಿಚಾರಣೆಯು ಮುಂದುವರಿಯಲು ಯಾವ ಅಡ್ಡಿಯೂ ಇಲ್ಲ ಎಂದು ಅಲಹಾಬಾದ್ ಹೈಕೋರ್ಟ್ ಗುರುವಾರ ಸ್ಪಷ್ಟಪಡಿಸಿದೆ.



18 ಪ್ರಕರಣಗಳ ಅರ್ಜಿಗಳು ಪುರಸ್ಕಾರಯೋಗ್ಯವೇ ಎಂಬ ಪ್ರಶ್ನೆಯೊಂದಿಗೆ ಮಸೀದಿ ಸಮಿತಿ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ. ಅರ್ಜಿಗಳು ಪುರಸ್ಕಾರಯೋಗ್ಯವೇ ಎಂಬ ಪ್ರಶ್ನೆಯೊಂದಿಗೆ ಸಮಿತಿ ಸಲ್ಲಿಸಿದ್ದ ಅರ್ಜಿ ಕುರಿತ ಆದೇಶವನ್ನು ನ್ಯಾಯಮೂರ್ತಿ ಮಯಾಂಕ್ ಕುಮಾರ್ ಜೈನ್ ಅವರು ಜೂನ್ 6ರಂದು ಕಾಯ್ದಿರಿಸಿದ್ದರು.

ಹಿಂದೂ ಅರ್ಜಿದಾರರು ಸಲ್ಲಿಸಿರುವ ಅರ್ಜಿಗಳು, ಕೃಷ್ಣ ಜನ್ಮಭೂಮಿ ದೇವಸ್ಥಾನದ ಪಕ್ಕದಲ್ಲಿ ಇರುವ ಶಾಹಿ ಈದ್ಗಾ ಮಸೀದಿಯನ್ನು ತೆರವುಗೊಳಿಸಬೇಕು ಎಂಬ ಕೋರಿಕೆಯನ್ನು ಹೊಂದಿವೆ. ಅಲ್ಲದೆ, ದೇವಸ್ಥಾನ ಹಾಗೂ ಮಸೀದಿ ಇರುವ 13.37 ಎಕರೆ ಜಮೀನಿನ ಹಕ್ಕು ತಮಗೆ ಸಿಗಬೇಕು ಎಂದು ಹಿಂದೂ ಅರ್ಜಿದಾರರು ಕೋರಿದ್ದಾರೆ. ಆದರೆ, ಈ ಅರ್ಜಿಗಳನ್ನು ವಿಚಾರಣೆಗೆ ಎತ್ತಿಕೊಳ್ಳಲು ಪೂಜಾ ಸ್ಥಳಗಳ (ವಿಶೇಷ ಅವಕಾಶಗಳು) ಕಾಯ್ದೆ – 1991ರ ಅಡಿಯಲ್ಲಿ ನಿರ್ಬಂಧ ಇದೆ ಎಂದು ಮಸೀದಿ ಸಮಿತಿ ವಾದಿಸಿದೆ.

ಶ್ರೀಕೃಷ್ಣ ಜನಿಸಿದ ಸ್ಥಳದಲ್ಲಿ ಇದ್ದ ದೇವಸ್ಥಾನವನ್ನು ಧ್ವಂಸಗೊಳಿಸಿದ ನಂತರದಲ್ಲಿ ಮಸೀದಿಯನ್ನು ನಿರ್ಮಿಸಲಾಗಿದೆ ಎಂಬುದು ಹಿಂದೂ ಅರ್ಜಿದಾರರ ವಾದ.

18 ಅರ್ಜಿಗಳ ವಿಚಾರಣೆಯನ್ನು ಆಗಸ್ಟ್ 12ರಿಂದ ನಡೆಸಲಾಗುತ್ತದೆ ಎಂದು ನ್ಯಾಯಾಲಯ ಹೇಳಿದೆ. ಹೈಕೋರ್ಟ್ ತೀರ್ಮಾನವನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಾಗುವುದು ಎಂದು ಮುಸ್ಲಿಂ ಅರ್ಜಿದಾರರ ಪ್ರತಿನಿಧಿಗಳು ಹೇಳಿದ್ದಾರೆ.

₹10 ಲಕ್ಷ ಕೊಟ್ಟರೂ ಚಪ್ಪಲಿ ಮಾರಲು ನಿರಾಕರಿಸಿದ ಚಮ್ಮಾರ

ಸುಲ್ತಾನಪುರ(ಉತ್ತರ ಪ್ರದೇಶ) (ಪಿಟಿಐ): ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ತನ್ನ ಅಂಗಡಿಗೆ ಭೇಟಿ ನೀಡಿದ್ದ ವೇಳೆ ಹೊಲಿದಿದ್ದ ಚಪ್ಪಲಿಗಳನ್ನು ₹10 ಲಕ್ಷ ಕೊಟ್ಟು ಖರೀದಿಸಲು ಕೆಲವರು ಮುಂದೆ ಬಂದಿದ್ದರೂ, ಅವುಗಳನ್ನು ಮಾರಾಟ ಮಾಡುವುದಕ್ಕೆ ಇಲ್ಲಿನ ಚಮ್ಮಾರ ರಾಮ್ ಚೇತ್ ನಿರಾಕರಿಸಿದ್ದಾರೆ.

6

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಎಚ್‌ಡಿಕೆ ಮನವೊಲಿಸಿದ ಬಿಜೆಪಿ ನಾಯಕರು

ಪಾದಯಾತ್ರೆ ಅಬಾಧಿತ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಮುಡಾ' ನಿವೇಶನ ಹಂಚಿಕೆಯಲ್ಲಿ ನಡೆದಿರುವ ಅಕ್ರಮದ ಹೊಣೆ ಹೊತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ಕೊಡಬೇಕು ಎಂದು ಆಗ್ರಹಿಸಿ ಬಿಜೆಪಿ-ಜೆಡಿಎಸ್ ನಡೆಸಲು ಉದ್ದೇಶಿಸಿದ್ದ ಬೆಂಗಳೂರು-ಮೈಸೂರು ಪಾದಯಾತ್ರೆಗೆ ನೈತಿಕ ಬೆಂಬಲವನ್ನೂ ನೀಡುವುದಿಲ್ಲ ಎಂದು ಪ್ರಕಟಿಸಿದ್ದ ಕೇಂದ್ರ ಭಾರಿ ಕೈಗಾರಿಕೆ ಹಾಗೂ ಉಕ್ಕು ಸಚಿವ ಎಚ್‌.ಡಿ.ಕುಮಾರಸ್ವಾಮಿ ಅವರನ್ನು ಬಿಜೆಪಿ ನಾಯಕರು ಗುರುವಾರ ಮನವೊಲಿಸಿದ್ದಾರೆ. ಪಾದಯಾತ್ರೆಯ 'ಮೈತ್ರಿ' ಬಿಕ್ಕಟ್ಟು ಶಮನಗೊಂಡಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಸೂಚನೆಯ ಮೇರೆಗೆ ಕುಮಾರಸ್ವಾಮಿ ಅವರನ್ನು ಬಿಜೆಪಿ ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅಗರವಾಲ್, ಕೇಂದ್ರ ಆಹಾರ ಸಚಿವ ಪ್ರಲ್ಹಾದ ಜೋಶಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಭೇಟಿ ಮಾಡಿ ಮಾತುಕತೆ ನಡೆಸಿದರು. ಏಕಪಕ್ಷೀಯವಾಗಿ ತೀರ್ಮಾನ ತೆಗೆದುಕೊಂಡ ಬಿಜೆಪಿ ನಾಯಕರ ಧೋರಣೆಗೆ ಕುಮಾರಸ್ವಾಮಿ ಅಸಮಾಧಾನ ವ್ಯಕ್ತಪಡಿಸಿದರು. 'ಕೊನೆಯ ಕ್ಷಣದಲ್ಲಿ ಪಾದಯಾತ್ರೆ ಮುಂದೂಡಿದರೆ ಮುಜುಗರ ಅನುಭವಿಸಬೇಕಾಗುತ್ತದೆ. ಸರ್ಕಾರದ ವಿರುದ್ಧ ಹೋರಾಟಕ್ಕೆ ಜೆಡಿಎಸ್ ನಾಯಕರು ಸಂಪೂರ್ಣ ಸಹಕಾರ ನೀಡಬೇಕು' ಎಂದು ಬಿಜೆಪಿ ನಾಯಕರು ಕೋರಿದರು. ಇದಕ್ಕೆ ಕುಮಾರಸ್ವಾಮಿ ಸಮ್ಮತಿ ಸೂಚಿಸಿದರು.

ಬಳಿಕ ಪತ್ರಿಕಾಗೋಷ್ಠಿ ನಡೆಸಿದ ಬಿಜೆಪಿ ನಾಯಕರು, 'ಇದೇ 3ರಿಂದ ನಡೆಯಲಿರುವ ಪಾದಯಾತ್ರೆಗೆ ಕುಮಾರಸ್ವಾಮಿ ಹಾಗೂ ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಚಾಲನೆ ನೀಡಲಿದ್ದಾರೆ' ಎಂದರು.

ವಿಜಯೇಂದ್ರ ಮಾತನಾಡಿ, 'ಬಿಜೆಪಿ- ಜೆಡಿಎಸ್ ಜಂಟಿಯಾಗಿ ಪಾದಯಾತ್ರೆ ನಡೆಸಲಿವೆ. ಭ್ರಷ್ಟ ಹಾಗೂ ಹಗರಣಗಳ ಕಾಂಗ್ರೆಸ್ ಸರ್ಕಾರದ ವಿರುದ್ಧ ಜನಾಂದೋಲನ ಇದಾಗಿರಲಿದೆ. ಇದನ್ನು ತಾರ್ಕಿಕ ಅಂತ್ಯಕ್ಕೆ ಒಯ್ಯುತ್ತೇವೆ' ಎಂದರು.

6ನೇ ಪುಟ ನೋಡಿ

ಕಾಂಗ್ರೆಸ್‌ನಿಂದ ಜನಾಂದೋಲನ

ಬೆಂಗಳೂರು: ಬಿಜೆಪಿ-ಜೆಡಿಎಸ್ ಪಾದಯಾತ್ರೆಗೆ ತಿರುಗೇಟು ನೀಡಲು ಮುಂದಾಗಿರುವ ಕಾಂಗ್ರೆಸ್ ಪಕ್ಷವು, ಬಿಡದಿಯಿಂದ ಮೈಸೂರಿನವರೆಗೆ ಜನಾಂದೋಲನ ಹಮ್ಮಿಕೊಳ್ಳಲು ನಿರ್ಧರಿಸಿದೆ.

ಗುರುವಾರ ರಾತ್ರಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ಪಾದಯಾತ್ರೆ ಸಾಗುವ ಪಟ್ಟಣಗಳಲ್ಲಿ ಮುನ್ನಾದಿನವೇ ಸಭೆ ನಡೆಸಿ, ಬಿಜೆಪಿ ಅವಧಿಯಲ್ಲಿ ನಡೆದ 21 ಹಗರಣಗಳನ್ನು ಪ್ರಸ್ತಾಪಿಸುತ್ತೇವೆ. ಅಲ್ಲದೇ ಕೇಂದ್ರದ ಅನ್ಯಾಯವನ್ನು ಜನರ ಮುಂದಿಡುತ್ತೇವೆ. ಆಗಸ್ಟ್ 9ರಂದು ಮೈಸೂರಿನಲ್ಲಿ ಬೃಹತ್ ಬಹಿರಂಗ ಸಭೆ ನಡೆಸುತ್ತೇವೆ' ಎಂದರು.

ರಾಜಭವನ ಜತೆ ಸರ್ಕಾರ ಸಂಘರ್ಷ

ಸಿ.ಎಂ ಸಿದ್ದರಾಮಯ್ಯಗೆ ನೀಡಿದ್ದ ಶೋಕಾಸ್ ನೋಟಿಸ್ ವಾಪಸ್‌ಗೆ ರಾಜ್ಯಪಾಲರಿಗೆ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿಮ್ಮ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಯಾಕೆ ಅನುಮತಿ ನೀಡಬಾರದು' ಎಂದು ಕೇಳಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಶೋಕಾಸ್ ನೋಟಿಸ್ ನೀಡಿರುವ ರಾಜ್ಯಪಾಲರ ಕ್ರಮಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ 'ಮಂತ್ರಿ ಪರಿಷತ್ ಸಭೆ', ರಾಜಭವನದ ಜೊತೆ ಸಂಘರ್ಷದ ಹಾದಿ ಹಿಡಿದಿದೆ.

'ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರ ನಡೆಯು ಸಂವಿಧಾನದ ಕಗ್ಗೊಲೆ ಮತ್ತು ಪ್ರಜಾತಂತ್ರದ ಸರ್ವನಾಶ' ಎಂದೂ ಸಭೆ ಪ್ರತಿಪಾದಿಸಿತು.

ಮುಖ್ಯಮಂತ್ರಿ ಅನುಪಸ್ಥಿತಿಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಧ್ಯಕ್ಷತೆಯಲ್ಲಿ ಗುರುವಾರ ಬೆಳಿಗ್ಗೆ ಸುಮಾರು ಮೂರು ಗಂಟೆಗೂ ಹೆಚ್ಚು ಹೊತ್ತು ಮಂತ್ರಿ ಪರಿಷತ್ ಸಭೆ ನಡೆಯಿತು. 'ಸಿದ್ದರಾಮಯ್ಯ ಅವರಿಗೆ ನೀಡಿರುವ ಶೋಕಾಸ್ ನೋಟಿಸ್ ಹಿಂದಕ್ಕೆ ಪಡೆಯಬೇಕು ಮತ್ತು ಕ್ರಿಮಿನಲ್ ಪ್ರಕರಣ ದಾಖಲಿಸಲು ಅನುಮತಿ ಕೋರಿ ಟಿ.ಜೆ. ಅಬ್ರಹಾಂ ಸಲ್ಲಿಸಿರುವ ಅರ್ಜಿಯನ್ನು ತಿರಸ್ಕರಿಸಬೇಕು' ಎಂದು ರಾಜ್ಯಪಾಲರಿಗೆ ಸಲಹೆ ನೀಡಲು ಸಭೆ ನಿರ್ಧರಿಸಿತು.

ಈಗ ಲಭ್ಯವಿರುವ ವಾಸ್ತವಾಂಶ ಮತ್ತು ಸಂದರ್ಭಕ್ಕೆ ಅನುಗುಣವಾಗಿ ಮಂತ್ರಿ ಪರಿಷತ್ ಸಭೆ ನೀಡಿರುವ ಸಲಹೆಯ ಪ್ರಕಾರವೇ ರಾಜ್ಯಪಾಲರು ನಡೆದುಕೊಳ್ಳಬೇಕು. ಸ್ವಂತ ವಿವೇಚನೆಯಿಂದ ನಡೆದುಕೊಳ್ಳಬಾರದು ಎಂದು ರಾಜಭವನಕ್ಕೆ ಸಂದೇಶ ರವಾನಿಸಲು ಸಭೆ ನಿರ್ಣಯ ಕೈಗೊಂಡಿತು.

'ನಿಮ್ಮ ವಿರುದ್ಧ ಆರೋಪಗಳು ಗಂಭೀರವಾದುದು ಮತ್ತು ಮೇಲ್ನೋಟಕ್ಕೆ ನಿಜ ಎಂಬುದು ಸಾಬೀತಾಗುತ್ತದೆ' ಎಂದು ನೋಟಿಸ್‌ನಲ್ಲಿ ಹೇಳಿದ್ದೀರಿ. ನಾವು ನೀಡಿದ ಸ್ಪಷ್ಟನೆಯನ್ನು ನೋಡದೆಯೇ, ನೀವು ಈ ರೀತಿ ಉಲ್ಲೇಖಿಸಿರುವುದನ್ನು ಗಮನಿಸಿದರೆ ನೋಟಿಸ್ ನೀಡಬೇಕೆಂಬ ತೀರ್ಮಾನವನ್ನು ಮೊದಲೇ ಮಾಡಿದ್ದೀರಿ ಎಂದು ಮಂತ್ರಿ ಪರಿಷತ್ ಭಾವಿಸಬೇಕಾಗುತ್ತದೆ' ಎಂದೂ ನಿರ್ಣಯದಲ್ಲಿ ಪ್ರಸ್ತಾವಿಸಲಾಗಿದೆ.

ಸಭೆಯ ಬಳಿಕ, ಎಲ್ಲ ಸಚಿವರ ಜತೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಡಿ.ಕೆ. ಶಿವಕುಮಾರ್ ಅವರು, 'ರಾಜ್ಯಪಾಲರು ನೀಡಿರುವ ನೋಟಿಸ್ ಸಂಪೂರ್ಣ ಕಾನೂನು ಮತ್ತು ಸಂವಿಧಾನ ಬಾಹಿರ. ಅಲ್ಲದೇ, ರಾಜಭವನವನ್ನು ಬಳಸಿಕೊಂಡು ಬಹುಮತವಿರುವ ಸರ್ಕಾರವನ್ನು ಅಸ್ಥಿರಗೊಳಿಸುವ ಮತ್ತು ಬುಡಮೇಲು ಮಾಡುವ ಪ್ರಯತ್ನ ನಡೆದಿದೆ. ಇದಕ್ಕಾಗಿ ಕೇಂದ್ರ ಸರ್ಕಾರ ರಾಜ್ಯಪಾಲರನ್ನು ಕೈಗೊಂಬೆಯಾಗಿ ಬಳಸಿಕೊಳ್ಳುತ್ತಿದೆ' ಎಂದು ದೂರಿದರು.

'ಈ ಪ್ರಕರಣದಲ್ಲಿ ಮುಖ್ಯಮಂತ್ರಿಯವರಿಂದ ಅಕ್ರಮ ನಡೆದಿರುವ ಬಗ್ಗೆ ಯಾವುದೇ ಸಾಕ್ಷ್ಯಾಧಾರಗಳಾಗಲಿ, ತನಿಖಾ ಸಂಸ್ಥೆಗಳ ವಿಚಾರಣೆಯಾಗಲಿ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಮುಖ್ಯಮಂತ್ರಿಯವರ ವಿಚಾರಣೆ ಹೇಗೆ ಸಾಧ್ಯ? ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಹುದೊಡ್ಡ ಬಹುಮತದೊಂದಿಗೆ ಆಯ್ಕೆಯಾದ ರಾಜ್ಯದ ಮುಖ್ಯಮಂತ್ರಿ ವಿರುದ್ಧ ಷಡ್ಯಂತ್ರ ನಡೆಯುತ್ತಿದೆ. ಪ್ರಜಾಪ್ರಭುತ್ವದ ಕಗ್ಗೊಲೆ ಮಾಡುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ' ಎಂದು ಕಿಡಿಕಾರಿದರು.

6ನೇ ಪುಟ ನೋಡಿ

'ಕ್ರಿಮಿನಲ್ ಪ್ರಕರಣ ದಾಖಲಿಸಲು ಅನುಮತಿ ನೀಡಬಾರದೇಕೆ?'



ಬೆಂಗಳೂರು: 'ಮುಡಾ ನಿವೇಶನ ಅಕ್ರಮ ಹಂಚಿಕೆಗೆ ಸಂಬಂಧಿಸಿದಂತೆ ನಿಮ್ಮ ವಿರುದ್ಧ ದಾಖಲಾಗಿರುವ ದೂರಿನ ಅಡಿ ಕ್ರಿಮಿನಲ್ ಪ್ರಕರಣ ದಾಖಲಿಸಲು ಅನುಮತಿ ಏಕೆ ನೀಡಬಾರದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನೀಡಿರುವ ಶೋಕಾಸ್ ನೋಟಿಸ್‌ನಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಕೇಳಿದ್ದಾರೆ.

ಮುಖ್ಯಮಂತ್ರಿ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಅನುಮತಿ ನೀಡಿ ಎಂದು ವಕೀಲ ಟಿ.ಜೆ.ಅಬ್ರಹಾಂ ಅವರು ಸಲ್ಲಿಸಿದ್ದ ಮನವಿಯ ಆಧಾರದಲ್ಲಿ ಸಿದ್ದರಾಮಯ್ಯ ಅವರಿಗೆ ಕಾರಣ ಕೇಳಿ ಇದೇ26 ರಂದು ರಾಜ್ಯಪಾಲ ನೋಟಿಸ್ ಜಾರಿ ಮಾಡಿದ್ದರು.

'ಅಬ್ರಹಾಂ ಅವರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದೆ. ನಿಮ್ಮ ಮೇಲಿನ ಆರೋಪಗಳು ಗಂಭೀರ ಸ್ವರೂಪದವು ಮತ್ತು ಆ ಆರೋಪಗಳು ನಿಜ ಎಂಬುದು ಮೇಲ್ನೋಟಕ್ಕೆ ಸಾಬೀತಾಗುತ್ತದೆ. ಹೀಗಾಗಿ ನಿಮ್ಮ ವಿರುದ್ಧ ಪ್ರಕರಣ ದಾಖಲಿಸಲು ಅನುಮತಿ ಕೋರಿ ಬಂದಿರುವ ಮನವಿಯ ಆಧಾರದಲ್ಲಿ ನೋಟಿಸ್ ನೀಡಲಾಗುತ್ತಿದೆ' ಎಂದು ವಿವರಿಸಿದ್ದಾರೆ. 'ಅನುಮತಿ ಏಕೆ ನೀಡಬಾರದು ಎಂಬುದಕ್ಕೆ ಏಳು ದಿನಗಳ ಒಳಗೆ ಉತ್ತರ ನೀಡಿ. ನಿಮ್ಮ ಉತ್ತರವನ್ನು ಪುಷ್ಟೀಕರಿಸುವ ದಾಖಲೆಗಳನ್ನು ಸಲ್ಲಿಸಿ' ಎಂದು ರಾಜ್ಯಪಾಲ ನೋಟಿಸ್‌ನಲ್ಲಿ ಸೂಚಿಸಿದ್ದಾರೆ.



ಕೇರಳದ ವಯನಾಡ್ ಜಿಲ್ಲೆಯ ಚೂರಲ್‌ಮಲದಲ್ಲಿ ಭೂಕುಸಿತದಿಂದ ಸಂಪೂರ್ಣ ಕೊಚ್ಚಿಕೊಂಡು ಹೋಗಿರುವ ಸೇತುವೆಯ ಜಾಗದಲ್ಲಿ ಸೈನಿಕರಿಂದ ನಡೆದ ಕಬ್ಬಿಣದ ಹೊಸ ತಾತ್ಕಾಲಿಕ ಸೇತುವೆ ನಿರ್ಮಾಣ ಕಾರ್ಯ
ಪ್ರಜಾವಾಣಿ ಚಿತ್ರ–ಫಕ್ರುದ್ದೀನ್ ಎಚ್

ಎಲ್ಲ ದಿಕ್ಕುಗಳಿಂದ ನೆರವಿನ ಹಸ್ತ ಚಾಚಿ ವಯನಾಡ್‌ನತ್ತ ಬಂದ ಸಹೃದಯರು

ದುರಂತಕ್ಕೆ ನಾಡಜನರ ಮಿಡಿತ

● ವಿಕ್ರಂ ಕಾಂತಿಕೆರೆ

ದುರಂತದ ನೆಲದಿಂದ

ಕಲ್ಪೆಟ್ಟ (ವಯನಾಡ್ ಜಿಲ್ಲೆ): ಕೇರಳದ ದಕ್ಷಿಣ ತುದಿಯ ಕೊಲ್ಲಂ ಜಿಲ್ಲೆಯಿಂದ ಬಂದಿರುವ ಯುವಕರು ಮತ್ತು ಯುವತಿಯರ ಗುಂಪು ಉತ್ತರದ ಅಂಚಿನಲ್ಲಿರುವ ವಯನಾಡ್ ಜಿಲ್ಲೆಯ ಕೇಂದ್ರಸ್ಥಾನ ಕಲ್ಪೆಟ್ಟದ ಬಸ್ ನಿಲ್ದಾಣದ ಬಳಿ ಗುರುವಾರ ಮಧ್ಯಾಹ್ನ ಸೇರಿದ್ದರು.

ಅವರ ಜೊತೆಗೂಡಿದ ಸ್ಥಳೀಯ ಗೆಳೆಯರು ವಿವಿಧ ಗುಂಪುಗಳಾಗಿ ಭೂಕುಸಿತ ಸಂಭವಿಸಿದ ಚೂರಲ್‌ಮಲ ಮತ್ತು ಮುಂಡಕ್ಕೈ ಭಾಗಗಳಿಗೆ ತೆರಳಿದರು. ನಾಡನ್ನೇ ಬೆಚ್ಚಿ ಬೀಳಿಸಿದ ದುರಂತಕ್ಕೆ ಕೇರಳದ ಉದ್ದಗಲದ ಜನರು ಮಿಡಿದಿರುವ ಪರಿಗೆ ಈ ಯುವ ಸಮುದಾಯ ಒಂದು ಉದಾಹರಣೆ ಮಾತ್ರ.

ಗುಡ್ಡವೇ ಕೆಸರಾಗಿ ಹರಿದು ಬಂದು ಜನರ ಜೀವ ಮತ್ತು ಜೀವನವನ್ನು ಕೊಚ್ಚಿಕೊಂಡು ಹೋದ ಮಹಾದುರಂತದಲ್ಲಿ ಮಡಿದವರ ಸಂಬಂಧಿಕರು ಮತ್ತು ಆಪ್ತರಿಗಾಗಿ ನೂರಾರು ಮಂದಿ ಆಸ್ಪತ್ರೆ, ಶವಾಗಾರ ಮತ್ತಿತರ ಕಡೆಯಲ್ಲಿ ಹುಡುಕಾಡುತ್ತಿದ್ದರೆ ದುರಂತ ನಡೆದ ಜಾಗದಲ್ಲಿ ಶವಗಳ ಶೋಧ ನಡೆಸುತ್ತಿರುವ ಸೇನಾಪಡೆ, ರಾಷ್ಟ್ರೀಯ ಮತ್ತು ರಾಜ್ಯ ವಿಪತ್ತು ನಿರ್ವಹಣಾ ದಳದ ಸಿಬ್ಬಂದಿ, ವಿವಿಧ ಸಂಘಸಂಸ್ಥೆಗಳ ಕಾರ್ಯಕರ್ತರ ನೆರವಿಗೆ ಇಡೀ ರಾಜ್ಯವೇ ಟೊಂಕಕಟ್ಟಿ ನಿಂತಿದೆ.

ಕಲ್ಪೆಟ್ಟದಿಂದ 9 ಕಿಲೊಮೀಟರ್ ದೂರದ ಮೇಪ್ಪಾಡಿ ಪಟ್ಟಣ ಮತ್ತು ಅಲ್ಲಿಂದ 13 ಕಿಲೊಮೀಟರ್ ದುರ್ಗಮ ರಸ್ತೆ ಸಾಗಿದರೆ ಚೂರಲ್‌ಮಲ ಸಿಗುತ್ತದೆ.

8ನೇ ಪುಟ ನೋಡಿ

ಅವಿರತ ದುಡಿಮೆಯ ಸೇತುವೆ ಸಿದ್ಧ

ಚೂರಲ್‌ಮಲದಲ್ಲಿ ಸಣ್ಣ ಹೊಳೆಯಾಗಿ ಹರಿದು ಚಾಲಿಯಾರ್ ನದಿಯನ್ನು ಸೇರುವ ನೀರು ಉಕ್ಕಿಹರಿದಿದ್ದರಿಂದ ಅಟ್ಟಮಲ ಮತ್ತು ಚೂರಲ್‌ಮಲ ನಡುವಿನ ಸಂಪರ್ಕ ಸೇತು ಕಡಿದಿತ್ತು. ಇದನ್ನು ಮರುಸ್ಥಾಪಿಸಲು ಪಣತೊಟ್ಟ ಬೆಂಗಳೂರಿನ ಮದ್ರಾಸ್ ಎಂಜಿನಿಯರಿಂಗ್ ಗ್ರೂಪ್ ಸೈನಿಕರು ಬುಧವಾರ ಬೆಳಿಗ್ಗೆಯಿಂದ ಅವಿರತ ದುಡಿದಿದ್ದರು. ಒಂದು ಕ್ಷಣವೂ ನಿಲ್ಲದ ಕೆಲಸದಿಂದಾಗಿ ಗುರುವಾರ ಸಂಜೆ 6 ಗಂಟೆಯ ವೇಳೆ ಸೇತುವೆ ನಿರ್ಮಾಣ ಕಾರ್ಯ ಪೂರ್ಣಗೊಂಡಿತು. ಸೇನೆಯ ವಾಹನ ಅದರ ಮೂಲಕ ಸಾಗಿತು. ಸೇತುವೆ ನಿರ್ಮಾಣದಿಂದಾಗಿ ಪರಿಹಾರ ಕಾರ್ಯಗಳಿಗೆ ಶುಕ್ರವಾರ ಚುರುಕು ಸಿಗಲಿದೆ.

'ಬೈಲಿ ಪ್ಯಾನಲ್ ಮೂಲಕ 119 ಅಡಿ ಉದ್ದದ ಸೇತುವೆ ನಿರ್ಮಾಣ ಕಾರ್ಯ ಪೂರ್ಣಗೊಂಡಿದೆ. ಇದಕ್ಕೆ ಬೇಕಾದ ಸಾಮಗ್ರಿಗಳನ್ನು ಬೆಂಗಳೂರಿನಿಂದಲೇ ತೆಗೆದುಕೊಂಡು ಬಂದಿದ್ದು 160 ಮಂದಿ ಸೈನಿಕರು ಒಂದು ನಿಮಿಷವೂ ಎಡೆಬಿಡದೆ ಕೆಲಸ ಮಾಡಿದ್ದಾರೆ. 24 ಟನ್ ಭಾರದ ವಾಹನ ಇದರ ಮೇಲಿಂದ ಸಾಗಬಹುದು. 19 ಪ್ಯಾನಲ್‌ಗಳನ್ನು ಇದಕ್ಕಾಗಿ ಬಳಸಲಾಗಿದೆ. ಸರ್ಕಾರ ಬಯಸಿದರೆ ಇದನ್ನು ಶಾಶ್ವತವಾಗಿ ಇಲ್ಲಿ ಉಳಿಸಲಾಗುವುದು' ಎಂದು ಶಬರಿಮಲೆಯಲ್ಲಿ ಇದೇ ರೀತಿಯ ಸೇತುವೆ ನಿರ್ಮಿಸಿ ಶಾಶ್ವತವಾಗಿ ಉಳಿಸಿರುವ ಗ್ರೂಪ್‌ನ ಕೇರಳ–ಕರ್ನಾಟಕ ಸಬ್ ಏರಿಯಾ ಕಮಾಂಡರ್ ಮೇಜರ್ ಜನರಲ್ ವಿನೋದ್ ಮ್ಯಾಥ್ಯು 'ಪ್ರಜಾವಾಣಿ'ಗೆ ವಿವರಿಸಿದರು.

ಏರುತ್ತಲೇ ಇದೆ ಸಾವಿನ ಸಂಖ್ಯೆ

- ವಯನಾಡ್ ಭೂಕುಸಿತದಲ್ಲಿ 200ಕ್ಕೂ ಹೆಚ್ಚು ಮಂದಿ ಸಾವಿಗೀಡಾಗಿದ್ದು, ಇದುವರೆಗೂ 190 ಮೃತದೇಹಗಳು ಪತ್ತೆಯಾಗಿವೆ
- ಮೃತರಲ್ಲಿ 25 ಮಕ್ಕಳು ಹಾಗೂ 70 ಮಹಿಳೆಯರು
- ಶೋಧಕಾರ್ಯದ ವೇಳೆ 92 ಅಂಗಾಂಗಗಳು ಪತ್ತೆ. ಹೆಚ್ಚಿನವು ಚಾಲಿಯಾರ್ ನದಿಯಲ್ಲಿ ದೊರೆತಿವೆ
- ಸ್ಥಳಕ್ಕೆ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಭೇಟಿ
- ಮನೆಗಳು ಸೇರಿದಂತೆ 348 ಕಟ್ಟಡಗಳು ಕುಸಿದಿವೆ
- ಭೂಸೇನೆ, ವಾಯುಪಡೆ, ಎನ್‌ಡಿಆರ್‌ಎಫ್, ಪೊಲೀಸ್ ಸೇರಿ 1,600ಕ್ಕೂ ಅಧಿಕ ಮಂದಿ ರಕ್ಷಣಾ ಕಾರ್ಯಾಚರಣೆಯಲ್ಲಿ ಭಾಗಿ

ಮೇಕೆದಾಟು: ಪ್ರವೇಶ ನಿಷೇಧ

ಕನಕಪುರ (ರಾಮನಗರ): ಕಾವೇರಿ ನದಿ ಅಪಾಯದ ಮಟ್ಟ ಮೀರಿ ಹರಿಯುತ್ತಿರುವುದರಿಂದ ತಾಲ್ಲೂಕಿನ ಸಂಗಮ ಮತ್ತು ಮೇಕೆದಾಟು ಪ್ರವಾಸಿ ತಾಣಗಳಿಗೆ ಆ. 5ರವರೆಗೆ ಸಾರ್ವಜನಿಕರ ಪ್ರವೇಶ ನಿಷೇಧಿಸಲಾಗಿದೆ.

ರಾಜ್ಯದಲ್ಲಿ ಹೆಚ್ಚಿನ ಮಳೆಯಾಗುತ್ತಿರುವುದರಿಂದ ಕೆಆರ್‌ಎಸ್, ಕಬಿನಿ ಜಲಾಶಯ ಭರ್ತಿಯಾಗಿದ್ದು ಹೆಚ್ಚಿನ ಪ್ರಮಾಣದ ನೀರನ್ನು ಹೊರಬಿಡಲಾಗುತ್ತಿದೆ. ಹಾಗಾಗಿ ಸಂಗಮ, ಮೇಕೆದಾಟಿಗೆ ಪ್ರವಾಸಿಗರು ಭೇಟಿ ನೀಡಿದಾಗ ಅನಾಹುತ ಸಂಭವಿಸುವ ಸಾಧ್ಯತೆ ಇದೆ.

ಪ್ರವಾಸಿಗರ ಸುರಕ್ಷತೆ ದೃಷ್ಟಿಯಿಂದ ಸಂಗಮ, ಗಾಳಿಬೋರೆ, ಮೇಕೆದಾಟು ಪ್ರವಾಸಿ ತಾಣ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ ಆ. 5ರ ಸಂಜೆ 6 ಗಂಟೆವರೆಗೆ ಸಾರ್ವಜನಿಕರ ಪ್ರವೇಶ ನಿಷೇಧಿಸಲಾಗಿದೆ ಎಂದು ತಹಶೀಲ್ದಾರ್ ಡಾ. ಸ್ಮಿತಾ ರಾಮು ತಿಳಿಸಿದ್ದಾರೆ.

ವ್ಯಸನಮುಕ್ತ ದಿನಾಚರಣೆಯಲ್ಲಿ ಮನೋವೈದ್ಯ ಡಾ.ಸಿ.ಆರ್.ಚಂದ್ರಶೇಖರ್

‘ಸರ್ಕಾರದಿಂದಲೇ ಮದ್ಯಪಾನಕ್ಕೆ ಪ್ರೋತ್ಸಾಹ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜನರನ್ನು ಕಾದು, ಅವರ ಜೀವನಕ್ಕೆ ಮಾರ್ಗದರ್ಶನ ಮಾಡಬೇಕಾದ ಸರ್ಕಾರಗಳೇ ಮದ್ಯಪಾನ ಮಾಡುವಂತೆ ಪ್ರೋತ್ಸಾಹ ನೀಡುತ್ತಿರುವುದು ದುರದೃಷ್ಟಕರ ಸಂಗತಿ’ ಎಂದು ಮನೋವೈದ್ಯ ಡಾ.ಸಿ.ಆರ್. ಚಂದ್ರಶೇಖರ್ ಬೇಸರ ವ್ಯಕ್ತಪಡಿಸಿದರು.

ಮಹಾಂತ ಶಿವಯೋಗಿಗಳ ಜಯಂತಿ ಪ್ರಯುಕ್ತ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಜಂಟಿಯಾಗಿ ನಗರದಲ್ಲಿ ಗುರುವಾರ ಹಮ್ಮಿಕೊಂಡ ವ್ಯಸನಮುಕ್ತ ದಿನಾಚರಣೆ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದರು.

‘ಸಿದ್ದರಾಮಯ್ಯ ಅವರ ಸರ್ಕಾರವು ಅಬಕಾರಿ ಸುಂಕದಿಂದಲೇ ₹50 ಸಾವಿರ ಕೋಟಿ ಸಂಗ್ರಹದ ಗುರಿ ಹಾಕಿಕೊಂಡಿದೆ. ಇದರಿಂದಾಗಿ ಐದನೇ ಬಾರಿ ಮದ್ಯದ ದರ ಹೆಚ್ಚಿಸಲಾಗಿದೆ. ತಡರಾತ್ರಿವರೆಗೂ ಮದ್ಯದ ಮಳಿಗೆಗಳು ಬಾಗಿಲು ತೆರೆದಿದ್ದರೂ ಅವುಗಳ ಮೇಲೆ ಕಾನೂನು ಕ್ರಮಗಳನ್ನು ಕೈಗೊಳ್ಳುತ್ತಿಲ್ಲ. ಇದರಿಂದಾಗಿ ಜನರು ಮದ್ಯಪಾನದಂತಹ ವ್ಯಸನಕ್ಕೆ ಒಳಗಾಗಿ, ಬದುಕನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ’ ಎಂದು ಹೇಳಿದರು.

ಇಳಕಲ್‌ನ ಚಿತ್ತರಗಿ ವಿಜಯ ಮಹಾಂತೇಶ್ವರ ಸಂಸ್ಥಾನದ ಶಾಖಾ ಮಠದ ಬಸವಲಿಂಗ ಸ್ವಾಮೀಜಿ ಮಾತನಾಡಿ, ‘ದೇಹವು ದೇವ ಮಂದಿರವಾಗಿದೆ. ಅದನ್ನು ಕಸದ ತೊಟ್ಟಿ ಮಾಡದೆ ಸ್ವಚ್ಛವಾಗಿಟ್ಟುಕೊಳ್ಳಬೇಕು’ ಎಂದರು.



ಕಾರ್ಯಕ್ರಮದಲ್ಲಿ ಬಸವಲಿಂಗ ಸ್ವಾಮೀಜಿ, ಡಾ.ಸಿ.ಆರ್.ಚಂದ್ರಶೇಖರ್, ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ. ಕೃಷ್ಣ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಕಾರ್ಯದರ್ಶಿ ಎನ್.ಎಸ್. ಮಹೇಶ್ ಅವರು ಮಹಾಂತ ಶಿವಯೋಗಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು –ಪ್ರಜಾವಾಣಿ ಚಿತ್ರ

ಮೊಬೈಲ್ ವ್ಯಸನವೂ ಅಪಾಯಕಾರಿ

‘ಮೊಬೈಲ್ ಬಳಕೆಯೂ ಇತ್ತೀಚೆಗೆ ವ್ಯಸನವಾಗಿ ಮಾರ್ಪಟ್ಟಿದೆ. ಒಂದೂವರೆ, ಎರಡು ತಿಂಗಳ ಮಗುವಿಗೂ ಅತ್ತಾಗ ಮೊಬೈಲ್ ನೀಡಲಾಗುತ್ತಿದೆ. ಇದು ಭವಿಷ್ಯದಲ್ಲಿ ವ್ಯಸನವಾಗಲಿದೆ. ಡ್ರಗ್ಸ್ ವ್ಯಸನವೂ ಹೆಚ್ಚುತ್ತಿದ್ದು, ರಾತ್ರಿ 9ರ ನಂತರ ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆಯಲ್ಲಿ ಸಂಚರಿಸಲು ಭಯವಾಗುತ್ತದೆ. ಕೆಲವರು ಗಾಂಜಾ ಸೇವಿಸಿ ವಾಹನಗಳನ್ನು ಓಡಿಸುತ್ತಿರುತ್ತಾರೆ’ ಎಂದು ಡಾ.ಸಿ.ಆರ್. ಚಂದ್ರಶೇಖರ್ ಹೇಳಿದರು.

ಪೊಲೀಸರ ಹೆಸರಿನಲ್ಲೇ ಲಿಂಕ್ ಕಳುಹಿಸಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಂಚಾರ ನಿಯಮ ಉಲ್ಲಂಘನೆಗಾಗಿ ದಂಡ ಪಾವತಿಸುವಂತೆ ಪೊಲೀಸರ ಹೆಸರಿನಲ್ಲೇ ಸೈಬರ್ ವಂಚಕರು ಸಂದೇಶ ಕಳುಹಿಸಿ ಜನರನ್ನು ವಂಚಿಸುತ್ತಿದ್ದಾರೆ’ ಎಂದು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ (ಸಂಚಾರ ಮತ್ತು ರಸ್ತೆ ಸುರಕ್ಷತಾ ವಿಭಾಗ) ಅಲೋಕ್ ಕುಮಾರ್ ತಿಳಿಸಿದ್ದಾರೆ.

‘ವಂಚಕರು https://echallan parivahan.in/ ಲಿಂಕ್ ತೆರೆದು ದಂಡ ಪಾವತಿಸುವಂತೆ ಮೊಬೈಲ್‌ಗೆ ಸಂದೇಶ ಕಳುಹಿಸುತ್ತಿದ್ದಾರೆ. ಇದನ್ನು ತೆರೆದ ಕೂಡಲೇ ಬ್ಯಾಂಕ್ ಖಾತೆಯನ್ನು ಹ್ಯಾಕ್ ಮಾಡಿ ಹಣವನ್ನು ವರ್ಗಾವಣೆ ಮಾಡಿಕೊಳ್ಳುತ್ತಿದ್ದಾರೆ’ ಎಂದು ‘ಎಕ್ಸ್’ನಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

‘ವಾಹನ ಚಾಲಕರು ಪೊಲೀಸ್ ಇಲಾಖೆಯಿಂದ ಬಂದಿರುವ ಅಸಲಿ ಲಿಂಕ್ ಮಾತ್ರವೇ ತೆರೆದು ದಂಡ ಶುಲ್ಕ ಪಾವತಿಸಬೇಕು. ಲಿಂಕ್ ಬಂದ ತಕ್ಷಣವೇ ಪರಿಶೀಲನೆ ಮಾಡಿಕೊಂಡು ಅಸಲಿಯೇ ಅಥವಾ ನಕಲಿಯೇ ಎಂಬುದನ್ನು ಖಾತ್ರಿಪಡಿಸಿಕೊಳ್ಳಬೇಕು. ಪೊಲೀಸ್ ಇಲಾಖೆ ಕಳುಹಿಸುವ ಅಸಲಿ ಲಿಂಕ್ https://echallan.parivahan.gov.in/ ಎಂಬುದಾಗಿದೆ’ ಎಂದು ತಿಳಿಸಿದ್ದಾರೆ.

ಸಂಸದ ಸುಧಾಕರ್ ವಿರುದ್ಧದ ಪ್ರಕರಣಕ್ಕೆ ಹೈಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭೆ ಚುನಾವಣೆ ವೇಳೆ ಯಲಹಂಕ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಾದಾವರ ಗ್ರಾಮದಲ್ಲಿ ಗೋವಿಂದಪ್ಪ ಅವರ ಮನೆಯಲ್ಲಿ ಚುನಾವಣಾ ಅಧಿಕಾರಿಗಳು ₹4.8 ಕೋಟಿ ಜಪ್ತಿ ಮಾಡಿದ ಪ್ರಕರಣದಲ್ಲಿ ಚಿಕ್ಕಬಳ್ಳಾಪುರ ಕ್ಷೇತ್ರದ ಸಂಸದ ಡಾ.ಕೆ.ಸುಧಾಕರ್ ವಿರುದ್ಧ ಸಲ್ಲಿಸಲಾಗಿರುವ ದೋಷಾರೋಪ ಪಟ್ಟಿ ಸೇರಿ ಎಲ್ಲ ವಿಚಾರಣಾ ಪ್ರಕ್ರಿಯೆಗಳಿಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

‘ನನ್ನ ವಿರುದ್ಧದ ದೋಷಾರೋಪ ಪಟ್ಟಿ ಹಾಗೂ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ನಡೆಯುತ್ತಿರುವ ವಿಚಾರಣೆ ರದ್ದುಪಡಿಸಬೇಕು’ ಎಂದು ಕೋರಿ ಡಾ.ಕೆ.ಸುಧಾಕರ್ ಹಾಗೂ ಗೋವಿಂದಪ್ಪ ಸಲ್ಲಿಸಿರುವ ಪ್ರತ್ಯೇಕ ಅರ್ಜಿಗಳನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಾಲಯದ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಗುರುವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದರು.

ಸುಧಾಕರ್ ಹಾಗೂ ಗೋವಿಂದಪ್ಪ ಅವರ ವಿರುದ್ಧ ಮಾದನಾಯಕನಹಳ್ಳಿ ಪೊಲೀಸರು ನೆಲಮಂಗಲ ಜೆಎಂಎಫ್‌ಸಿ ಕೋರ್ಟ್‌ಗೆ ಸಲ್ಲಿಸಿರುವ ದೋಷಾರೋಪ ಪಟ್ಟಿ ಮತ್ತು ಅದರನ್ವಯ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ನಡೆಯುತ್ತಿರುವ ವಿಚಾರಣಾ ಪ್ರಕ್ರಿಯೆಗೆ ತಡೆ ನೀಡಿದರು.

ಸುಧಾಕರ್ ಪರ ಹಿರಿಯ ವಕೀಲರಾದ ಬಿ.ವಿ.ಆಚಾರ್ಯ ಹಾಗೂ ಬಿ.ಎಲ್. ಆಚಾರ್ಯ ಮತ್ತು ಗೋವಿಂದಪ್ಪ ಪರ ಹಿರಿಯ ವಕೀಲ ಪ್ರಭುಲಿಂಗ ಕೆ.ನಾವದಗಿ ವಾದ ಮಂಡಿಸಿದರು.

ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ: ಬೈಕ್ ಸವಾರ ಸಾವು

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಬೆನ್ನಿಗಾನಹಳ್ಳಿ ಸೇತುವೆ ಬಳಿ ಕೆಎಸ್‌ಆರ್‌ಟಿಸಿ ಬಸ್ ಹಾಗೂ ದ್ವಿಚಕ್ರ ವಾಹನದ ನಡುವೆ ಸಂಭವಿಸಿದ ಅಪಘಾತದಲ್ಲಿ ಸವಾರರೊಬ್ಬರು ಮೃತಪಟ್ಟಿದ್ದಾರೆ.

ಚಿಕ್ಕಬಳ್ಳಾಪುರ ಜಿಲ್ಲೆಯ ತಮ್ಮನಾಯಕನಹಳ್ಳಿ ನಿವಾಸಿ ಮನೋಜ್(29) ಮೃತ ಯುವಕ.

ನಗರದ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಕೆ.ಆರ್.ಪುರದಲ್ಲಿ ವಾಸವಾಗಿದ್ದರು. ಬುಧವಾರ ರಾತ್ರಿ 10.45 ಸುಮಾರಿಗೆ ಮಳೆ ಸುರಿಯುತ್ತಿದ್ದಾಗಲೇ ದ್ವಿಚಕ್ರ ವಾಹನದಲ್ಲಿ ನಗರದ ಕಡೆಯಿಂದ ಕಸ್ತೂರಿನಗರ ಕಡೆಗೆ ಬರುತ್ತಿರುವಾಗ ಅಪಘಾತ ನಡೆದಿದೆ.

ಕೆಜಿಎಫ್ ಡಿಪೊಗೆ ಸೇರಿದ ಕೆಎಸ್‌ಆರ್‌ಟಿಸಿ ಬಸ್ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ದ್ವಿಚಕ್ರ ವಾಹನ ಸವಾರ ಆಯತಪ್ಪಿ ಕೆಳಗೆ ಬಿದ್ದಿದ್ದರು. ಕೆಳಗೆ ಬಿದ್ದ ಸವಾರನ ಮೇಲೆ ಬಸ್ ಚಕ್ರ ಹರಿದು ತೀವ್ರವಾಗಿ ಗಾಯಗೊಂಡಿದ್ದರು. ಸ್ಥಳೀಯರು ಕೆ.ಆರ್.ಪುರ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗಮಧ್ಯದಲ್ಲಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು.

ಪಿ. ರಾಹುಲ್ ಅವಿರೋಧ ಆಯ್ಕೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಮಾರೇನಹಳ್ಳಿ ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಪಿ.ರಾಹುಲ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನಂಜೇಗೌಡ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಚುನಾವಣೆ ನಡೆದಿತ್ತು.

ಕರ್ನಾಟಕ ಸರ್ಕಾರ

ಆನೇಕಲ್ ತಾಲ್ಲೂಕು ಪಂಚಾಯಿತಿ ಕಾರ್ಯಾಲಯ

ಜೆ.ಎಂ.ಎಫ್.ಸಿ.ಕೋರ್ಟ್ ಹತ್ತಿರ, ಅತ್ತಿಬೆಲೆ ರಸ್ತೆ, ಆನೇಕಲ್ ಟೌನ್, ಬೆಂಗಳೂರು–562106

Phone No: 080 27859232

ಸಂ:ಆ.ತಾ.ಪಂ/ಟೆಂಡರ್/04/2024 ದಿನಾಂಕ:30.07.2024

ಹೆನ್ನಾಗರ ಗ್ರಾಮ ಪಂಚಾಯಿತಿ 2024–25ನೇ ಸಾಲಿನ ವರ್ಗ 1ರ ಅನುದಾನದಲ್ಲಿ ಕುಡಿಯುವ ನೀರು ಪೈಪ್ ಲೈನ್ ಮತ್ತು ಬೋರ್‌ವೆಲ್ ಗೆ ಸಂಬಂಧಿಸಿದಂತೆ ಸಾಮಗ್ರಿ ಖರೀದಿ ಹಾಗೂ ಗ್ರಾಮಗಳಲ್ಲಿ ಘನ ಹಾಗೂ ದ್ರವ ತ್ಯಾಜ್ಯ ನಿರ್ವಹಣೆಗಾಗಿ ವಾಹನಗಳನ್ನು ಬಾಡಿಗೆ ಪಡೆಯುವುದಕ್ಕಾಗಿ ಟೆಂಡರ್ ಕರೆಯಲಾಗಿದ್ದು ಇ–ಟೆಂಡರ್ (e-Procurment)ಗೆ ಸಂಬಂಧಿಸಿದ ದಾಖಲೆಗಳನ್ನು ಜಾಲಕ್ಕೆ ರವಾನಿಸಲು (upload) ಮಾಡಲು ಅಂತಿಮ ದಿನಾಂಕ 08.08.2024ರ ಸಮಯ 5.30ರ ವರೆಗೆ. ಇ–ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ https://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಕ್ರ.ಸಂ.	ವಿವರ	ಇ–ಟೆಂಡರ್ ಸಂಖ್ಯೆ
1.	ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಕುಡಿಯುವ ನೀರಿನ ಕೊಳವೆ ಮಾರ್ಗಗಳ ನಿರ್ವಹಣೆಗಾಗಿ ವಾರ್ಷಿಕ ನಿರ್ವಹಣಾ ವೆಚ್ಚ (ಎಎಂಸಿ) ಅಡಿ ಬಿಡಿಭಾಗಗಳ ಪೂರೈಕೆ.	RDPR/2024-25/IND3512
2.	ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ವಾರ್ಷಿಕ ನಿರ್ವಹಣೆ ವೆಚ್ಚ(ಎಎಂಸಿ) ಅಡಿ ಬೇಡಿಕೆಗನುಗುಣವಾಗಿ ಕೊಳವೆ ಬಾವಿಗಳ ಪಂಪು ಮೋಟಾರ್‌ಗಳ ದುರಸ್ಥಿ ಮತ್ತು ನಿರ್ವಹಣೆ ಹಾಗೂ ಪಂಪು ಮೋಟಾರ್ ಮತ್ತು ಅಗತ್ಯ ಸಾಮಗ್ರಿಗಳ ಪೂರೈಕೆ	RDPR/2024-25/IND3518
3.	ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ವಾರ್ಷಿಕ ನಿರ್ವಹಣೆ ವೆಚ್ಚದಡಿ(ಎಎಂಸಿ) ಬೇಡಿಕೆಗನುಗುಣವಾಗಿ ಬೀದಿದೀಪ ನಿರ್ವಹಣೆಗೆ ಎಲ್ ಇ ಡಿ ಸೆಟ್ಟುಗಳು(ಪಿಟ್ಟಿಂಗ್ಸ್) ಖರೀದಿ.	RDPR/2024-25/IND3520
4.	ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಗ್ರಾಮಗಳಲ್ಲಿ ಬೇಡಿಕೆಗನುಗುಣವಾಗಿ ವಾರ್ಷಿಕ ನಿರ್ವಹಣೆ ವೆಚ್ಚದಡಿ(ಎಎಂಸಿ) ಬೀದಿದೀಪ ಎಲ್‌ಇಡಿ ಬಿಡಿ ಭಾಗಗಳ ಪೂರೈಕೆ.	RDPR/2024-25/IND3499
5.	ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಗ್ರಾಮಗಳಲ್ಲಿ ಬೇಡಿಕೆಗನುಗುಣವಾಗಿ ವಾರ್ಷಿಕ ನಿರ್ವಹಣೆ ವೆಚ್ಚದಡಿ(ಎಎಂಸಿ) ವೈಜ್ಞಾನಿಕ ಕಸ ಸಂಗ್ರಹಣೆ ಮತ್ತು ವಿಲೇವಾರಿ ಮಾಡುವುದು.	RDPR/2024-25/SE1577
6.	ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಗ್ರಾಮಗಳಲ್ಲಿ ಬೇಡಿಕೆಗನುಗುಣವಾಗಿ ವಾರ್ಷಿಕ ನಿರ್ವಹಣೆ ವೆಚ್ಚದಡಿ (ಎಎಂಸಿ) ಜೆಸಿಬಿ ವಾಹನ ಬಾಡಿಗೆ ಪಡೆಯುವ ಬಗ್ಗೆ	RDPR/2024-25/SE1524
7.	ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಗ್ರಾಮಗಳಲ್ಲಿ ಬೇಡಿಕೆಗನುಗುಣವಾಗಿ ವಾರ್ಷಿಕ ನಿರ್ವಹಣೆ ವೆಚ್ಚದಡಿ (ಎಎಂಸಿ) ಒಳಚರಂಡಿ ನಿರ್ವಹಣೆಗೆ ವಾಹನ ಬಾಡಿಗೆ ಪಡೆಯುವ ಬಗ್ಗೆ	RDPR/2024-25/SE1574

ಕಾರ್ಯನಿರ್ವಾಹಕ ಅಧಿಕಾರಿ
ತಾಲ್ಲೂಕು ಪಂಚಾಯಿತಿ
ಆನೇಕಲ್.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ದಾಸರಹಳ್ಳಿ ವಲಯ, ದಾಸರಹಳ್ಳಿ ವಿಭಾಗ, ಎಂಇಐ ಬಡಾವಣೆ, ಹೆಸರುಘಟ್ಟ ಮುಖ್ಯರಸ್ತೆ, ಬಾಗಲಗುಂಟೆ, ಟಿ.ದಾಸರಹಳ್ಳಿ, ಬೆಂಗಳೂರು – 560 073.

ಸಂಖ್ಯೆ:ಬೃಬೆಂಮಪಾ/ಕಾಪಾಅ/ದಾವಿ/ಟೆಂಡರ್/11/2024–25 ದಿನಾಂಕ: 01.08.2024

ಅಲ್ಪಾವಧಿ ಟೆಂಡರ್ ಆಹ್ವಾನ (ಐಎಫ್‌ಟಿ)

(ದ್ವಿ ಟೆಂಡರ್ ದಾಖಲೆ ಪದ್ಧತಿ) (ಕೆಡಬ್ಲ್ಯೂ–2) 5ನೇ ಕರೆ

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ, ಬೃ.ಬೆಂ.ಮ.ಪಾಲಿಕೆ ಬೆಂಗಳೂರು ಇವರು ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು
1	ಶೆಟ್ಟಿಹಳ್ಳಿ ಉಪವಿಭಾಗ ವಾರ್ಡ್ ಸಂಖ್ಯೆ–17 ಚಿಕ್ಕಸಂದ್ರದ ಚಿಕ್ಕಸಂದ್ರ (ಎಸ್‌ಸಿಪಿ/ಟಿಎಸ್‌ಪಿ), ಚಿಕ್ಕಸಂದ್ರ ಎಸ್‌ಸಿ,ಎಸ್‌ಟಿ ಕಾಲೋನಿ, ಸೌಂದರ್ಯ ಬಡಾವಣೆ, ಎಜಿಬಿ ಬಡಾವಣೆ, ಬಾಬಣ್ಣ ಬಡಾವಣೆ, ಅಂಜನಾದ್ರಿ ಬಡಾವಣೆ, ಸಿಡೇದಹಳ್ಳಿ, ಎನ್‌ಎಂಹೆಚ್ ಬಡಾವಣೆ ಪ್ರದೇಶಗಳಲ್ಲಿ ರಸ್ತೆಗಳು, ಚರಂಡಿಗಳ ಸುಧಾರಣೆ ಮತ್ತು ಪಾದಚಾರಿಮಾರ್ಗ ಕಾಮಗಾರಿಗಳನ್ನು ಮಾಡುವುದು. **ಟೆಂಡರಿಗಿಟ್ಟ ಮೊತ್ತ: ₹.44.39 ಲಕ್ಷಗಳು ಇಎಂಡಿ ₹.89,000.00**
2	ಟಿ. ದಾಸರಹಳ್ಳಿ ಉಪವಿಭಾಗ ವಾರ್ಡ್ ಸಂಖ್ಯೆ–18 ಬಾಗಲಗುಂಟೆಯ ಡಿಫೆನ್ಸ್ ಕಾಲೋನಿ & ಹಾವನೂರು ಬಡಾವಣೆ, ಎಂ.ಎಸ್ ರಾಮಯ್ಯ ಬಡಾವಣೆ, ಮುನೇಶ್ವರ ನಗರ, ಮುನಿಕೊಂಡಪ್ಪ ಬಡಾವಣೆ, ಅಶೋಕ ನಗರ, ಮಂಜುನಾಥ ನಗರ, ಬಾಗಲಗುಂಟೆ ಗ್ರಾಮ, ಎಂಇಐ ಬಡಾವಣೆ, ವಿಶ್ವೇಶ್ವರಯ್ಯ ಬಡಾವಣೆ, ಭೈರವೇಶ್ವರ ನಗರ, ಶೇಷಾದ್ರಿ ಬಡಾವಣೆ, ಕರೆಕಲ್ಲು (ಎಸ್‌ಸಿಪಿ/ಟಿಎಸ್‌ಪಿ) ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು, ಚರಂಡಿಗಳ ಸುಧಾರಣೆ ಮತ್ತು ಪಾದಚಾರಿಮಾರ್ಗ ಕಾಮಗಾರಿಗಳನ್ನು ಮಾಡುವುದು. **ಟೆಂಡರಿಗಿಟ್ಟ ಮೊತ್ತ: ₹.44.39 ಲಕ್ಷಗಳು ಇಎಂಡಿ ₹.89,000.00**
3	ಹೆಗ್ಗನಹಳ್ಳಿ ಉಪವಿಭಾಗ ವಾರ್ಡ್ ಸಂಖ್ಯೆ–25 ಸುಂಕದಕಟ್ಟೆಯ ಸಂಜೀವಿನಿ ನಗರದ 1ನೇ, 2ನೇ, 3ನೇ ಹಂತ, ವಿಘ್ನೇಶ್ವರ ನಗರ, ಲಕ್ಷ್ಮಣ ನಗರ. ಗಜಾನನ ನಗರ, ಶ್ರೀಗಂಧ ನಗರ, ಮುನೇಶ್ವರ ನಗರ, ಫ್ರೆಂಡ್ಸ್ ಕಾಲೋನಿ, ಮಾರುತಿ ನಗರ, ಪಿಳ್ಳಪ್ಪ ಕೈಗಾರಿಕೆ ಪ್ರದೇಶ ಮತ್ತು ನಡ್ಕೇರಪ್ಪ ಕೈಗಾರಿಕೆ ಪ್ರದೇಶ, ಶಿವಾನಂದ ನಗರ (ಎಸ್‌ಸಿಪಿ/ಟಿಎಸ್‌ಪಿ)ಯಲ್ಲಿ ರಸ್ತೆಗಳು, ಚರಂಡಿಗಳ ಸುಧಾರಣೆ ಮತ್ತು ಪಾದಚಾರಿಮಾರ್ಗ ಕಾಮಗಾರಿಗಳನ್ನು ಮಾಡುವುದು. **ಟೆಂಡರಿಗಿಟ್ಟ ಮೊತ್ತ: ₹.44.39 ಲಕ್ಷಗಳು ಇಎಂಡಿ ₹.89,000.00**

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ **03.08.2024**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್ ಮುಖಾಂತರ ಸಲ್ಲಿಸುವ ದಿನಾಂಕ **12.08.2024**ರ ಸಂಜೆ **4:00** ಗಂಟೆಯವರೆಗೆ ಅಥವಾ ಮುಂಚಿತವಾಗಿ. (3) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **13.08.2024**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು. (4) ಆರ್ಥಿಕ ಬಿಡ್‌ಗಳನ್ನು ದಿನಾಂಕ **14.08.2024**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು (ಸಾಧ್ಯವಾದಲ್ಲಿ)

ಸಹಿ/– ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ

ಆನೇಕಲ್ ಯೋಜನಾ ಪ್ರಾಧಿಕಾರ

‘ಅಣ್ಣ’ ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು–560099

www.anekal.tpa.gov.in, www.e-vinyasa.kar.nic.in

ಸಂಖ್ಯೆ: ಆಯೋಪ್ರಾ/ಭೂ.ಬ/67/2023–24 ದಿನಾಂಕ: 31.07.2024

ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69ರ ತಿದ್ದುಪಡಿ ಕಾಯ್ದೆಯಂತೆ)

ಆನೇಕಲ್ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 151 ಬಿಎಂಆರ್ 2013, ಬೆಂಗಳೂರು **ದಿನಾಂಕ: 03.09.2014** ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(2)ರನ್ವಯ ಮಹಾಯೋಜನೆಯಲ್ಲಿ ಸಾರ್ವಜನಿಕ ಉಪಯೋಗಗಳಿಗೆ ಕಾಯ್ದಿರಿಸಿರುವ ಪ್ರದೇಶದ ಭೂ ಉಪಯೋಗವು ರದ್ದಾಗುತ್ತದೆ. ಆದ್ದರಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69ರನ್ವಯ ಈ ಕೆಳಕಂಡ ಭೂ ಉಪಯೋಗ ನಿಗಧಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(3)ರ ಅಡಿಯಲ್ಲಿ ಈ ಕೆಳಕಂಡಂತೆ ಭೂ ಉಪಯೋಗ ನಿಗಧಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15(ಹದಿನೈದು) ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ ಎ/ಗು	ಅನುಮೋದಿತ ಮಹಾಯೋಜನೆ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1.	ಶ್ರೀ ಪಿ.ಗಗನ್ ರೆಡ್ಡಿ ಬಿನ್ ಲೇ. ಪಿ.ವಿ.ಎನ್.ವಿದ್ಯಾಕರ್ ರೆಡ್ಡಿ	ಆನೇಕಲ್	ಸರ್ಜಾಪುರ	ಕೂತಗಾನಹಳ್ಳಿ	69/2	1–20.08	ಸಾರ್ವಜನಿಕ/ಅರೆ ಸಾರ್ವಜನಿಕ	ವಸತಿ

ಸಹಿ/–
ಸದಸ್ಯ–ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್

DIPR/CP/VCPL/1209/2024-25

icmr INDIAN COUNCIL OF MEDICAL RESEARCH — ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್

Serving the nation since 1911

“ಸರ್ಕಾರವು ಲಿಂಗ ಸಮಾನತೆಯನ್ನು ಪ್ರತಿಫಲಿಸುವ ಕಾರ್ಯಪಡೆ ಹೊಂದಿರಲು ಹಾತೊರೆಯುತ್ತದೆ ಮತ್ತು ಮಹಿಳಾ ಅಭ್ಯರ್ಥಿಗಳನ್ನು ಅರ್ಜಿ ಸಲ್ಲಿಸಲು ಉತ್ತೇಜಿಸುತ್ತದೆ”

ಜಾ.ಸಂ.ಐಸಿಎಂಆರ್/ನೇಮಕಾತಿ/ಜೆಟಿಒ–ಡಿಆರ್/02/2024–ಎಸ್ಟಾ.

ದಿನಾಂಕ: 30.07.2024

ಕಿರಿಯ ಅನುವಾದ ಅಧಿಕಾರಿ ಹುದ್ದೆಗಳಿಗೆ ನೇಮಕಾತಿ ಪ್ರಕಟಣೆ

ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಆರೋಗ್ಯ ಸಂಶೋಧನಾ ಇಲಾಖೆ ಅಡಿಯಲ್ಲಿನ ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ (ಐಸಿಎಂಆರ್) ಸಂಸ್ಥೆಯು, ದೇಶಾದ್ಯಂತ ಸ್ಥಿತಗೊಂಡಿರುವ ತನ್ನ ವಿವಿಧ ಕ್ಷೇತ್ರ ನಿಲ್ದಾಣಗಳು ಮತ್ತು 27 ಸಂಸ್ಥೆಗಳು/ಕೇಂದ್ರಗಳು ಮತ್ತು ನವದೆಹಲ್ಲಿನ ತನ್ನ ಪ್ರಧಾನ ಕಚೇರಿಯ ಮುಖಾಂತರ, ರಾಷ್ಟ್ರೀಯ/ಅಂತರರಾಷ್ಟ್ರೀಯ ಸಂಸ್ಥೆಗಳ ಸಹಭಾಗಿತ್ವದೊಂದಿಗೆ, ವಿವಿಧ ಕೇತ್ರಗಳಲ್ಲಿ ಬಯೋಮೆಡಿಕಲ್/ಆರೋಗ್ಯ ಸಂಶೋಧನೆಗಳನ್ನು ಕೈಗೊಳ್ಳುತ್ತಲಿದೆ.

2. ಇದೀಗ, ಐಸಿಎಂಆರ್ ಸಂಸ್ಥೆಯು, ದೇಶಾದ್ಯಂತ ಸ್ಥಿತಗೊಂಡಿರುವ ತನ್ನ ಐಸಿಎಂಆರ್ ಪ್ರಧಾನ ಕಚೇರಿ ನವದೆಹಲಿ ಮತ್ತು ಐಸಿಎಂಆರ್ ಸಂಸ್ಥೆಗಳ/ಕೇಂದ್ರಗಳ ಅಡಿಯಲ್ಲಿರುವ ಕೆಳಕಂಡ ಹಿಂದಿ ಕೇಡರ್, ಗ್ರೂಪ್ ‘ಬಿ’ ಹುದ್ದೆಗಳನ್ನು ಭರ್ತಿ ಮಾಡಲು, ಪರಿಷತ್ತಿನ ಅಡಿಯಲ್ಲಿ ಅಖಿಲ ಭಾರತದಾದ್ಯಂತ ವರ್ಗಾವಣೆ ಹೊಣೆಗಾರಿಕೆ ಜೊತೆಗೆ ನಿಯಮಿತ ಆಧಾರದಲ್ಲಿ ನೇಮಕಾತಿಗಾಗಿ ಭಾರತೀಯ ನಾಗರಿಕರಿಂದ ಆನ್‌ಲೈನ್ ಅರ್ಜಿ ಆಹ್ವಾನಿಸಿರುತ್ತದೆ:–

ಹುದ್ದೆಯ ಹೆಸರು ಮತ್ತು ಪ್ರವರ್ಗ	ವೇತನ ಶ್ರೇಣಿ	ಪ್ರಾಯ
ಜೂನಿಯರ್ ಟ್ರಾನ್ಸ್‌ಲೇಶನ್ ಆಫೀಸರ್ (ಜೆಟಿಒ) 03 ಹುದ್ದೆಗಳು (ಯುಆರ್–02, ಎಸ್‌ಸಿ–01)	ವೇತನ ಹಂತ–6 ವೇತನ ಶ್ರೇಢಿ (ರೂ. 35400–1, 12, 400) (7ನೇ ಸಿಪಿಸಿ ಸ್ಕೇಲ್) ಮತ್ತು ಕಾಲಕಾಲಕ್ಕೆ ಅನ್ವಯವಾಗುವ ಸಾಮಾನ್ಯ ಭತ್ಯೆಗಳು	30 ವರ್ಷ ಮೀರಿರಬಾರದು

ಸೂಚನೆಗಳು:–

1. 01 ಜೆಟಿಒ ಹುದ್ದೆಯು ನಿರ್ದಿಷ್ಟ ಪ್ರಮಾಣದ ವೈಕಲ್ಯತೆ ಹೊಂದಿರುವ ವ್ಯಕ್ತಿಗಳಿಗೆ ಸೂಕ್ತವೆಂದು ಗುರುತಿಸಲಾಗಿರುತ್ತದೆ ಮತ್ತು ಪಿಡಬ್ಲ್ಯುಬಿಡಿ (ಡೆಫ್ & ಹೆಚ್‌ಹೆಚ್) ಪ್ರವರ್ಗಕ್ಕೆ ಮೀಸಲಾಗಿರುತ್ತದೆ.
2. ಆನ್‌ಲೈನ್ ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ 31.08.2024 ಆಗಿರುತ್ತದೆ.
   ಅಗತ್ಯ ಅರ್ಹತಾ ಮಾನದಂಡಗಳು ಮತ್ತು ಇನ್ನಿತರ ಸಾಮಾನ್ಯ ಷರತ್ತು ಹಾಗೂ ನಿಬಂಧನೆಗಳಿಗಾಗಿ, ದಯವಿಟ್ಟು ಐಸಿಎಂಆರ್ ಸಂಸ್ಥೆಯ www.icmr.nic.in ವೆಬ್‌ಸೈಟ್‌ಗೆ ಭೇಟಿ ಕೊಡಿ.

ಸಹಾಯಕ ಮಹಾನಿರ್ದೇಶಕರು
(ಆಡಳಿತ)

CBC 17152/12/0013/2425

ಶ್ರೀ ಭೈರವೇಶ್ವರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ.,

ರಿ.ನಂ.: ಎ.ಆರ್.ಬಿ.ಐ./ಬಿ/ಆರ್.ಇ.ಜಿ.ಎನ್/5214:80–81

ನಂ. 575/ಬಿ, 8ನೇ ಮುಖ್ಯರಸ್ತೆ, 22ನೇ ಕ್ರಾಸ್, ಎಂ.ಆರ್.ಸಿ.ಆರ್. ಬಡಾವಣೆ, ವಿಜಯನಗರ, ಬೆಂಗಳೂರು–560 040. ದೂ : 080–23383530, E-mail: bhyracoopsociety@gmail.com

43ನೇ ವಾರ್ಷಿಕ ಸರ್ವಸದಸ್ಯರ ಸಭೆ

ಸಹಕಾರಿ ಬಂಧುಗಳೇ,

ಸಂಘದ 2023–24ನೇ ಸಾಲಿನ 43ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ದಿನಾಂಕ : 04–08–2024 ನೇ ಭಾನುವಾರ ಬೆಳಿಗ್ಗೆ 10–00 ಗಂಟೆಗೆ ಶ್ರೀ ಆದಿಚುಂಚನಗಿರಿ ಸಮುದಾಯ ಭವನ, ವಿಜಯನಗರ, ಬೆಂಗಳೂರು–40 ಇಲ್ಲಿ ಕರೆಯಲಾಗಿದೆ. ಮಾನ್ಯ ಸಾಮಾನ್ಯ ಸದಸ್ಯರು ಸಭೆಗೆ ಆಗಮಿಸಿ ಕಾರ್ಯಕಲಾಪಗಳಲ್ಲಿ ಭಾಗವಹಿಸಲು ಕೋರಲಾಗಿದೆ.

ದಿನಾಂಕ : 02–08–2024
ಬೆಂಗಳೂರು

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಶಶಿಕುಮಾರ ಬಿ ಆರ್.
ಕಾರ್ಯದರ್ಶಿ

ನಂ.: 6–2(13)/2019–ಎಸ್ಟಾ. 30 ಜುಲೈ 2024

ಖಾಲಿಹುದ್ದೆ ಸುತ್ತೋಲೆ – 01/2024

ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಆರೋಗ್ಯ ಸಂಶೋಧನಾ ಇಲಾಖೆ ಅಡಿಯಲ್ಲಿನ ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ (ಐಸಿಎಂಆರ್) ಎಂಬ ಸ್ವಾಯುತ್ತ ಸಂಸ್ಥೆಯು, **ಅಸಿಸ್ಟಂಟ್ ಡೈರೆಕ್ಟರ್ ಜನರಲ್ (ಅಡ್ಮಿನಿಸ್ಟ್ರೇಶನ್) ಎಂಬ ಒಂದು ಹುದ್ದೆಯನ್ನು ವೇತನ ಹಂತ–12 ರಲ್ಲಿ ಅಲ್ಪಾವಧಿ ಗುತ್ತಿಗೆ ಸೇರಿದಂತೆ ಡೆಪ್ಯುಟೇಶನ್ ಆಧಾರದಲ್ಲಿ** ಭರ್ತಿ ಮಾಡಿಕೊಳ್ಳಲು ಕೇಂದ್ರ/ರಾಜ್ಯ ಸರ್ಕಾರಿ/ಸ್ವಾಯುತ್ತ ಅಂಗ/ಪಿಎಸ್‌ಯು'ಗಳಲ್ಲಿನ ಅರ್ಹ ಉದ್ಯೋಗಿಗಳಿಂದ **31.08.2024** ರವರೆಗೆ ಅರ್ಜಿಗಳನ್ನು ಆಹ್ವಾನಿಸಿರುತ್ತದೆ. ಸದರಿ ನೇಮಕಾತಿಯು ಮೂರು ವರ್ಷಗಳ ಅವಧಿಯದಾಗಿದ್ದು, ನಂತರದಲ್ಲಿ ಅಗತ್ಯವಾದರೆ, ಐಸಿಎಂಆರ್ ಪ್ರಧಾನ ಕಚೇರಿಯಿಂದ ಈ ಅವಧಿಯನ್ನು ವಿಸ್ತರಿಸಬಹುದಾಗಿರುತ್ತದೆ ಅಥವಾ ಮೊಟಕುಗೊಳಿಸಬಹುದಾಗಿರುತ್ತದೆ.

2. ಹೆಚ್ಚಿನ ವಿವರಗಳಿಗಾಗಿ ದಯುವಿಟ್ಟು ಭೇಟಿ ಕೊಡಿ https://main.icmr.nic.in. ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕದ ಬಳಿಕ ಸಲ್ಲಿಕೆಯಾಗುವ ಅರ್ಜಿಗಳನ್ನು ಅಥವಾ ಅಪೂರ್ಣ ಭರ್ತಿ ಮಾಡಿರುವ ಅಥವಾ ಸೂಕ್ತ ವಿಧಾನದಲ್ಲಿ ಸಲ್ಲಿಕೆಯಾಗದಿರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಾಯಕ ಮಹಾನಿರ್ದೇಶಕರು
(ಆಡಳಿತ)

CBC 17152/12/0015/2425

ಪುರಸಭೆ ಕಾರ್ಯಾಲಯ, ಹುಣಸಮಾರನಹಳ್ಳಿ

ಯಲಹಂಕ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–562157

ಇ–ಮೇಲ್: itstaff_ulb_hmhalli@gmail.com ದೂ: 080–23901864

ಸಂ: ಹು.ಪು/ತಾ.ಶಾ/ಸಿ.ಆರ್/03/2024–25 ದಿನಾಂಕ: 01–08–2024

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಹುಣಸಮಾರನಹಳ್ಳಿ ಪುರಸಭಾ ವ್ಯಾಪ್ತಿಯಲ್ಲಿ 2024–25ನೇ ಸಾಲಿನ 15ನೇ ಹಣಕಾಸು ಯೋಜನೆ ಮತ್ತು 2024–25ನೇ ಸಾಲಿನ ಎಸ್.ಎಫ್.ಸಿ ಮುಕ್ತನಿಧಿ ಮತ್ತು ಪುರಸಭಾ ನಿಧಿ ಅನುದಾನದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಲೋಕೋಪಯೋಗಿ ಇಲಾಖೆ ಮತ್ತು ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಯಲ್ಲಿ ನೊಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರು ಹಾಗೂ ನೊಂದಾಯಿತ ಅರ್ಹ ಏಜೆನ್ಸಿದಾರರಿಂದ ಕಾಮಗಾರಿಗಳನ್ನು ನಿರ್ವಹಿಸಲು ಮೊಹರಾದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕ್ರ ಸಂ.	ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
	2024–25ನೇ ಸಾಲಿನ 15ನೇ ಹಣಕಾಸು ಯೋಜನೆ	
1	DMA/2024-25/RD/WORK_INDENT19788/Call-2	28.00
2	DMA/2024-25/RD/WORK_INDENT19795/Call-2	22.00
3	DMA/2024-25/RD/WORK_INDENT19799/Call-2	10.40
4	DMA/2024-25/WS/WORK_INDENT19791/Call-2	49.90
	2024–25ನೇ ಸಾಲಿನ ಎಸ್.ಎಫ್.ಸಿ ಮುಕ್ತನಿಧಿ ಅನುದಾನ	
1	DMA/2024-25/WS/WORK_INDENT19807/Call-2	1.00
2	DMA/2024-25/RD/WORK_INDENT19780/Call-2	22.74
3	DMA/2024-25/RD/WORK_INDENT197802/Call-2	5.76
4	DMA/2024-25/OW/WORK_INDENT19804/Call-2	14.10
5	DMA/2024-25/BR/WORK_INDENT24075	2.40
	2024–25ನೇ ಸಾಲಿನ ಪುರಸಭಾ ನಿಧಿ ಯೋಜನೆ	
1	DMA/2023-24/IND1636/Call-2	8.00
2	DMA/2024-25/RD/WORK_INDENT23824	8.27
3	DMA/2024-25/WT/WORK_INDENT23852	26.00
4	DMA/2024-25/WT/WORK_INDENT23851	25.00
	ವರ್ಗ: ಸಾಮಾನ್ಯ	

ಟೆಂಡರ್ ಸಲ್ಲಿಸುವ ವಿವರಗಳು: (1) ಆಕ್ಷೇಪಣೆ / ಮಾಹಿತಿಯನ್ನು ಸಲ್ಲಿಸಲು ದಿನಾಂಕ: **05.08.2024ರ ಸಂಜೆ 5.00 ಗಂಟೆಯವರೆಗೆ.** (2) ಕಾಮಗಾರಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **09.08.2024ರ ಸಂಜೆ 5.00 ಗಂಟೆಯವರೆಗೆ.** (3) ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **12.08.2024ರ ಬೆಳಗ್ಗೆ 11.00 ಗಂಟೆಗೆ.** (4) ಟೆಂಡರ್‌ನ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **14.08.2024ರ ಬೆಳಗ್ಗೆ 11.00 ಗಂಟೆಗೆ.** ಹೆಚ್ಚಿನ ವಿವರಗಳಿಗೆ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಿ ತಿಳಿದುಕೊಳ್ಳುವುದು ಮತ್ತು ಯಾವುದೇ ತಿದ್ದುಪಡಿ / ಬದಲಾವಣೆಯಿದ್ದಲ್ಲಿ ಕೆ.ಪಿ.ಪಿ ಪೋರ್ಟಲ್ ವಿಳಾಸ https://kppp.karnataka.gov.in ಮೂಲಕ ಮಾತ್ರ ತಿಳಿಸಲಾಗುವುದು.

ಸಹಿ/– ಮುಖ್ಯಾಧಿಕಾರಿಗಳು, ಪುರಸಭೆ, ಹುಣಸಮಾರನಹಳ್ಳಿ

ಸಹಿ/– ಆಡಳಿತಾಧಿಕಾರಿಗಳು, ಪುರಸಭೆ, ಹುಣಸಮಾರನಹಳ್ಳಿ

DIPR/CP/SPAN/1207/2024-25

ಬಾಕಿದಾರರ ಮೇಲೆ ಕಾನೂನು ಕ್ರಮ– ಮುಖ್ಯ ಆಯುಕ್ತ ತುಷಾರ್ ಗಿರಿನಾಥ್

ಬಿಬಿಎಂಪಿ: ಕಳೆದ ವರ್ಷಕ್ಕಿಂತ ಅಧಿಕ ಪಾವತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ವರ್ಷಕ್ಕೆ ಹೋಲಿಸಿದರೆ ಈ ಆರ್ಥಿಕ ವರ್ಷದ ಮೊದಲ ನಾಲ್ಕು ತಿಂಗಳಲ್ಲಿ ₹750 ಕೋಟಿಗೂ ಹೆಚ್ಚು ಆಸ್ತಿ ತೆರಿಗೆ ಸಂಗ್ರಹವಾಗಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.


ಒಂದು ಬಾರಿ ಪರಿಹಾರ (ಒಟಿಎಸ್) ಯೋಜನೆಯಡಿ ಹಲವು ವರ್ಷಗಳಿಂದ ತೆರಿಗೆ ಬಾಕಿ ಉಳಿಸಿಕೊಂಡಿದ್ದ 1.07 ಲಕ್ಷ ಆಸ್ತಿಗಳ ಮಾಲೀಕರು ಪ್ರಯೋಜನ ಪಡೆದುಕೊಂಡಿದ್ದು, ₹217.50 ಕೋಟಿ ಪಾವತಿಸಿದ್ದಾರೆ. 6,723 ಆಸ್ತಿಗಳ ತೆರಿಗೆಯನ್ನು ಪುನರ್ ವಿಮರ್ಶೆ ಮಾಡಿದ್ದರಿಂದ, ಈ ಬಾಬ್ತಿನಲ್ಲಿ ₹163.13 ಕೋಟಿ ಸಂದಾಯವಾಗಿದೆ. ಇನ್ನುಳಿದಂತೆ, ಜುಲೈ 31ರವರೆಗಿದ್ದ ಶೇ 5ರಷ್ಟು ರಿಯಾಯಿತಿಯನ್ನು ಬಳಸಿಕೊಂಡು ಆಸ್ತಿ ಮಾಲೀಕರು ತೆರಿಗೆ ಪಾವತಿ ಮಾಡಿದ್ದಾರೆ ಎಂದು ಸುದ್ದಿಗಾರರಿಗೆ ಗುರುವಾರ ಮಾಹಿತಿ ನೀಡಿದರು.

ಒಟಿಎಸ್ ಯೋಜನೆಯಡಿ ಬಡ್ಡಿ ಹಾಗೂ ದಂಡಕ್ಕೆ ವಿನಾಯಿತಿ ಇತ್ತು. ಇದೀಗ ಯೋಜನೆ ಮುಗಿದಿದ್ದು, ಬಾಕಿಯಿರುವ ವರ್ಷದಿಂದ ಬಡ್ಡಿ, ದಂಡ ವಿಧಿಸಲಾಗುತ್ತದೆ. ತೆರಿಗೆ ಪಾವತಿಸದವರಿಗೆ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದರು.

ಆಸ್ತಿ ತೆರಿಗೆ ಪಾವತಿಸದವರಿಗೆ ನೋಟಿಸ್ ನೀಡಿ, ಚರಾಸ್ತಿ, ಸ್ಥಿರಾಸ್ತಿಯನ್ನು ಜಪ್ತಿ ಮಾಡುವ ಅವಕಾಶವಿದೆ. ಕಾನೂನುಗಳು ತಿದ್ದುಪಡಿಯಾಗಿರುವುದರಿಂದ ಆಸ್ತಿ ಮಾರಾಟ, ಹರಾಜಿಗೂ ಅವಕಾಶ ಇದೆ ಎಂದು ತುಷಾರ್ ಗಿರಿನಾಥ್ ಮಾಹಿತಿ ನೀಡಿದರು.

ವಿಸ್ತರಣೆಗೆ ಪ್ರಸ್ತಾವ: 'ಒಟಿಎಸ್ ಯೋಜನೆಯ ಕೊನೆಯಾಗುವ ಎರಡು ದಿನಗಳಲ್ಲಿ ಸಾಕಷ್ಟು ಜನರು ಸಾಲುಗಟ್ಟಿ ತೆರಿಗೆ ಪಾವತಿಸಿದ್ದಾರೆ. ಸರ್ವರ್ ಸಮಸ್ಯೆ ಇದ್ದು, ಅದನ್ನೂ ಪರಿಗಣಿಸಲಾಗುತ್ತಿದೆ. ಹಲವು ಸಂಘ–ಸಂಸ್ಥೆಗಳು, ನಿವಾಸಿಗಳ ಸಂಘದವರು ಒಟಿಎಸ್ ವಿಸ್ತರಿಸಲು ಮನವಿ ಮಾಡಿದ್ದಾರೆ. ಕಂದಾಯ ವಿಭಾಗದಿಂದ ವರದಿ ಪಡೆದು, ಅದರ ಆಧಾರದಲ್ಲಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗುವುದು' ಎಂದು ಮುಖ್ಯ ಆಯುಕ್ತರು ತಿಳಿಸಿದರು.

₹1,200 ಕೋಟಿ: 'ಜುಲೈ ಎರಡನೇ ವಾರದ ನಂತರವೇ ಸಮಾರು ₹1,200 ಕೋಟಿ ಆಸ್ತಿ ತೆರಿಗೆ ಸಂಗ್ರಹವಾಗಿವೆ. ಕೊನೆಯ ದಿನಗಳಲ್ಲಿ ಆನ್‌ಲೈನ್ ಅಲ್ಲದೆ ಡಿ.ಡಿ ಹಾಗೂ ಚೆಕ್‌ಗಳ ರೂಪದಲ್ಲಿಯೂ ಸುಮಾರು ₹150 ಕೋಟಿ ಆಸ್ತಿ ತೆರಿಗೆಯನ್ನು ಸಂದಾಯ ಮಾಡಲಾಗಿದೆ. ಇದೆಲ್ಲ ಮೊತ್ತವನ್ನೂ ಕ್ರೋಡೀಕರಿಸಲಾಗುತ್ತಿದೆ. ಇದೆಲ್ಲದರ ಮಾಹಿತಿ ಇನ್ನೆರಡು ದಿನದಲ್ಲಿ ಲಭ್ಯವಾಗಲಿದ್ದು, ನಂತರ ಸ್ಪಷ್ಟ ಮೊತ್ತದ ಲೆಕ್ಕ ಸಿಗಲಿದೆ' ಎಂದು ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಅವರು ತಿಳಿಸಿದ್ದಾರೆ.



₹2,457.30 ಕೋಟಿ	2023ರ ಏಪ್ರಿಲ್‌ನಿಂದ ಜುಲೈವರೆಗೆ ಸಂಗ್ರಹವಾದ ಆಸ್ತಿ ತೆರಿಗೆ
₹3,200 ಕೋಟಿ	2024ರ ಏಪ್ರಿಲ್‌ನಿಂದ ಜುಲೈವರೆಗೆ ಸಂಗ್ರಹವಾದ ಆಸ್ತಿ ತೆರಿಗೆ
4,11,751 ಆಸ್ತಿಗಳು	2024ರ ಏಪ್ರಿಲ್‌ನಂತೆ ತೆರಿಗೆ ಹಿಂಬಾಕಿ ಉಳಿಸಿಕೊಂಡಿದ್ದ ಆಸ್ತಿಗಳು
₹956.09 ಕೋಟಿ	2024ರ ಏಪ್ರಿಲ್‌ನಂತೆ ಹಿಂಬಾಕಿ
1,14,067 ಆಸ್ತಿಗಳು	ಒಟಿಎಸ್ ಯೋಜನೆ ಫಲಾನುಭವಿಗಳು
₹380.63 ಕೋಟಿ	ಒಟಿಎಸ್ ಯೋಜನೆಯಿಂದ ಸಂಗ್ರಹವಾದ ಮೊತ್ತ
3,04,810 ಆಸ್ತಿಗಳು	2024ರ ಆಗಸ್ಟ್ 1ರಂತೆ ತೆರಿಗೆ ಹಿಂಬಾಕಿ
₹831.53 ಕೋಟಿ	2024ರ ಆಗಸ್ಟ್ 1ರಂತೆ ತೆರಿಗೆ ಹಿಂಬಾಕಿ ಮೊತ್ತ

'ಪ್ರವೇಶ ನಿರಾಕರಿಸಿದರೆ ಪರವಾನಗಿ ರದ್ದು'

ಬೆಂಗಳೂರು: ನಾಗರಿಕರ ಪ್ರವೇಶ ನಿರಾಕರಿಸುವ ಮಾಲ್, ವಾಣಿಜ್ಯ ಸಂಕೀರ್ಣಗಳ ವ್ಯಾಪಾರ ಪರವಾನಗಿಯನ್ನು ರದ್ದು ಮಾಡುವಂತೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಆದೇಶಿಸಿದ್ದಾರೆ.

ಗುರುವಾರ ಕಚೇರಿ ಆದೇಶ ಹೊರಡಿಸಿರುವ ಅವರು, 'ಭಾಷೆ, ಜಾತಿ, ಧರ್ಮ, ಉಡುಪು ಆಧರಿತವಾಗಿ ಮಾಲ್ ಅಥವಾ ವಾಣಿಜ್ಯ ಸಂಕೀರ್ಣಗಳಿಗೆ ಪ್ರವೇಶ ನಿರಾಕರಿಸುವಂತಿಲ್ಲ' ಎಂದು ತಿಳಿಸಿದ್ದಾರೆ.

ಮಾಗಡಿ ರಸ್ತೆಯ ಜಿ.ಟಿ. ವರ್ಲ್ಡ್ ಮಾಲ್‌ಗೆ ಪಂಚೆ ಧರಿಸಿದ್ದ ರೈತರಿಗೆ ಪ್ರವೇಶ ನಿರಾಕರಿಸಿದ್ದರಿಂದ ಈ ಆದೇಶ ಹೊರಬಿದ್ದಿದೆ.

'ವ್ಯಾಪಾರ ಪರವಾನಗಿ ರದ್ದುಗೊಳಿಸಿ, ಭಾರತೀಯ ನ್ಯಾಯ ಸಂಹಿತೆ ಪ್ರಕಾರ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ. ಎಲ್ಲ ಆರೋಗ್ಯಾಧಿಕಾರಿಗಳಿಗೆ ಸೂಚನೆ ನೀಡಲಾಗಿದ್ದು, ಮಳಿಗೆ ಹಾಗೂ ವಾಣಿಜ್ಯ ಸಂಕೀರ್ಣಗಳಲ್ಲಿನ ಶುಚಿತ್ವದ ಮೇಲೆ ನಿಗಾವಹಿಸಲು ಆದೇಶಿಸಲಾಗಿದೆ' ಎಂದು ತುಷಾರ್ ಗಿರಿನಾಥ್ ಅವರು ತಿಳಿಸಿದ್ದಾರೆ.

'ಗ್ರಾಹಕರ ಜೊತೆ ಉತ್ತಮವಾಗಿ ನಡೆದುಕೊಳ್ಳಬೇಕು ಹಾಗೂ ಅವಮಾನಕರ ರೀತಿಯಲ್ಲಿ ಮಾತನಾಡಬಾರದು ಎಂದು ಭದ್ರತಾ ಸಿಬ್ಬಂದಿಗೆ ಮಾಲ್‌ಗಳ ಮಾಲೀಕರು ಹಾಗೂ ನಿರ್ವಹಣೆಗಾರರು ಸೂಕ್ತ ರೀತಿಯಲ್ಲಿ ಸೂಚನೆ ನೀಡಿರಬೇಕು' ಎಂದು ಹೇಳಿದ್ದಾರೆ.

ಸಿಂಗಪುರ ಪ್ರವಾಸ: ಬಿಬಿಎಂಪಿ ಪೌರಕಾರ್ಮಿಕರ ಆಯ್ಕೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾಲಿಕೆಯ 225 ಹಿರಿಯ ಪೌರಕಾರ್ಮಿಕರನ್ನು ಸಿಂಗಪುರ ಪ್ರವಾಸಕ್ಕೆ ಕಳುಹಿಸಲು ಬಿಬಿಎಂಪಿ ಆಯ್ಕೆ ಪ್ರಕ್ರಿಯೆ ಆರಂಭಿಸಿದೆ.

ಅತಿ ಹೆಚ್ಚು ಶುಚಿತ್ವ ಕಾಪಾಡುವ ಪೌರಕಾರ್ಮಿಕರನ್ನು ಅವರ ಅನುಭವದ ಮೇರೆಗೆ ಆಯ್ಕೆ ಮಾಡಲಾಗುತ್ತದೆ. ಸಿಂಗಪುರ ಪ್ರವಾಸಕ್ಕೆ ಬಿಬಿಎಂಪಿಯ ಕಲ್ಯಾಣ ವಿಭಾಗ ಹಣ ಒದಗಿಸಲಿವೆ.

'ಈ ಹಿಂದೆಯೂ ಪೌರಕಾರ್ಮಿಕರಿಗೆ ಪ್ರವಾಸಗಳನ್ನು ಆಯೋಜಿಸಲಾಗಿತ್ತು. ಸಾಕಷ್ಟು ಮೊದಲೇ ಅರ್ಹರನ್ನು ಗುರುತಿಸಿ, ಅವರು ಪಾಸ್‌ಪೋರ್ಟ್ ಸಿದ್ಧಪಡಿಸಿಕೊಳ್ಳಲು ಅವಕಾಶ, ನೆರವು ನೀಡಲಾಗುತ್ತದೆ ಎಂದು ಬಿಬಿಎಂಪಿಯ ಆರೋಗ್ಯ ಮತ್ತು ಕಲ್ಯಾಣ ವಿಭಾಗದ ವಿಶೇಷ ಆಯುಕ್ತ ವಿಕಾಸ್ ಸುರಳ್ಕರ್ ಅವರು ತಿಳಿಸಿದರು.

ಬಿಡಿಎ: ಪರ್ಯಾಯ ನಿವೇಶನ ಹಂಚಿಕೆಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬನಶಂಕರಿ 6ನೇ ಹಂತದ ಬಡಾವಣೆಯಲ್ಲಿ 1500ಕ್ಕೂ ಹೆಚ್ಚು ನಿವೇಶನ ಮಾಲೀಕರಿಗೆ ಡಾ.ಶಿವರಾಮ ಕಾರಂತ ಬಡಾವಣೆಯಲ್ಲಿ ಪರ್ಯಾಯ ನಿವೇಶನಗಳನ್ನು ಹಂಚಬೇಕು' ಎಂದು ಶಾಸಕ ಸುರೇಶ್ ಕುಮಾರ್ ಅವರು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಪತ್ರ ಬರೆದಿದ್ದಾರೆ.

'ಬನಶಂಕರಿ 6ನೇ ಹಂತದ ಬಡಾವಣೆಯಲ್ಲಿ, ಬಿಡಿಎ ಅರಣ್ಯ ಪ್ರದೇಶದಲ್ಲಿ (ತುರಹಳ್ಳಿ ಅರಣ್ಯ ಪ್ರದೇಶ) ಮತ್ತು ಅರಣ್ಯ ಪ್ರದೇಶದ ಬಫರ್ ವಲಯದಲ್ಲಿ 2003-2004ರಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. ಇದರಿಂದ ಅಲ್ಲಿನ 1,500ಕ್ಕೂ ಹೆಚ್ಚು ನಿವೇಶನಗಳ ಮಾಲೀಕರು ಮನೆಗಳನ್ನು ನಿರ್ಮಿಸಲು ಸಾಧ್ಯವಾಗಿರುವುದಿಲ್ಲ. 20 ವರ್ಷ ಕಳೆದರೂ ಬಿಡಿಎ, ಅರಣ್ಯ ಇಲಾಖೆ ಅಧಿಕಾರಿಗಳು ಜಮೀನು ಮಾಲೀಕತ್ವದ ಬಗ್ಗೆ ಒಪ್ಪಂದಕ್ಕೆ ಬರಲು ಸಾಧ್ಯವಾಗಿಲ್ಲ' ಎಂದು ಹೇಳಿದ್ದಾರೆ..



ಸುರೇಶ್ ಕುಮಾರ್

'ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ವಿವಿಧ ನ್ಯಾಯಾಲಯಗಳಲ್ಲಿ ಅನೇಕ ದಾವೆಗಳು ಬಾಕಿ ಇರುವುದರಿಂದ ಬನಶಂಕರಿ 6ನೇ ಹಂತ, ಅರ್ಕಾವತಿ ಲೇಔಟ್, ವಿಶ್ವೇಶ್ವರಯ್ಯ ಲೇಔಟ್ ಹಾಗೂ ಅಂಜನಾಪುರದಂತಹ ಬಿಡಿಎ ಅಭಿವೃದ್ಧಿಪಡಿಸಿರುವ ಕೆಲವು ಬಡಾವಣೆಗಳಲ್ಲಿನ ಸುಮಾರು ಐದು ಸಾವಿರಕ್ಕೂ ಹೆಚ್ಚು ನಿವೇಶನಗಳ ಮಾಲೀಕರು ಜಮೀನಿನ ನೈಜ ಸ್ವಾಧೀನದಲ್ಲಿಲ್ಲದ ಕಾರಣ ಮನೆಗಳನ್ನು ಕಟ್ಟಿಕೊಳ್ಳಲು ಸಾಧ್ಯವಾಗಿಲ್ಲ. ಅವರ ಪರಿಸ್ಥಿತಿ, ಸಂಕಟ ಹೇಳತೀರದು' ಎಂದಿದ್ದಾರೆ.

'ಈ ಕಾರಣದಿಂದ ನಿವೇಶನದಾರರ ಕುಂದು ಕೊರತೆಗಳನ್ನು ಆದ್ಯತೆಯ ಮೇರೆಗೆ ಪರಿಗಣಿಸಿ, ಡಾ. ಶಿವರಾಮ ಕಾರಂತ ಬಡಾವಣೆಯಲ್ಲಿ ಲಭ್ಯವಿರುವ ನಿವೇಶನಗಳನ್ನು ಸಾರ್ವಜನಿಕರಿಂದ ಹಂಚಿಕೆಗಾಗಿ ಅರ್ಜಿಗಳನ್ನು ಆಹ್ವಾನಿಸುವ ಮುನ್ನ, ಈ ಸಂತ್ರಸ್ತರಿಗೆ ಪರ್ಯಾಯ ನಿವೇಶನ ನೀಡಬೇಕು' ಎಂದು ಸುರೇಶ್ ಕುಮಾರ್ ವಿನಂತಿಸಿಕೊಂಡಿದ್ದಾರೆ.

ನಾಗಸಂದ್ರ–ಮಾದಾವರ ಪರೀಕ್ಷಾ ಸಂಚಾರ ಆ.16ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ ಹಸಿರು ಮಾರ್ಗದಲ್ಲಿ ಈ ವರ್ಷದ ಅಂತ್ಯದ ಒಳಗೆ ನಾಗಸಂದ್ರದಿಂದ ಮಾದಾವರವರೆಗೆ ರೈಲು ಸಂಚಾರ ಆರಂಭಗೊಳ್ಳಲಿದೆ. ಅದಕ್ಕಾಗಿ ಆಗಸ್ಟ್ 16ರಿಂದ ವಿವಿಧ ಪರೀಕ್ಷೆಗಳನ್ನು ನಡೆಸಲು ಪ್ರಾಯೋಗಿಕ ಸಂಚಾರ ನಡೆಯಲಿದೆ.

ಮೆಟ್ರೊ ರೈಲಿನಲ್ಲಿ ಬಿಎಂಆರ್‌ಸಿಎಲ್ ತಾಂತ್ರಿಕ ತಂಡವು ಸಂಚರಿಸಿ ಪರೀಕ್ಷೆಗಳನ್ನು ನಡೆಸಲಿದೆ ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಮಹೇಶ್ವರ ರಾವ್ ತಿಳಿಸಿದ್ದಾರೆ.

ಸುಮಾರು ಎರಡೂವರೆ ತಿಂಗಳು ವಿವಿಧ ಪರೀಕ್ಷೆಗಳು ನಡೆಯಲಿವೆ. ಪರೀಕ್ಷೆ ಯಶಸ್ವಿಯಾದ ಬಳಿಕ ಸಿಗ್ನಲಿಂಗ್, ದೂರಸಂಪರ್ಕ, ವಿದ್ಯುತ್ ಸರಬರಾಜು ವ್ಯವಸ್ಥೆಗಳೊಂದಿಗೆ ಸಿಸ್ಟಂ ಸಂಯೋಜನೆ ನಡೆಯಲಿದೆ. ಪರೀಕ್ಷೆ ಪೂರ್ಣಗೊಂಡ ಬಳಿಕ ಗುಣಮಟ್ಟ ತಪಾಸಣಾ ಸಂಸ್ಥೆಗಳು ಸುರಕ್ಷತಾ ಪರೀಕ್ಷೆ ನಡೆಸಿ ವರದಿ ನೀಡಲಿವೆ. ವರದಿ ಸಕಾರಾತ್ಮಕವಾಗಿದ್ದರೆ ರೈಲ್ವೆ ಮಂಡಳಿಯು ಮೆಟ್ರೊ ರೈಲು ಸಂಚಾರ ಆರಂಭಿಸಲು ಅನುಮತಿ ನೀಡಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಹಸಿರು ಮಾರ್ಗದಲ್ಲಿ ವಿಸ್ತರಿತಗೊಂಡಿರುವ ಈ ಪ್ರದೇಶದಲ್ಲಿ ಮಂಜುನಾಥನಗರ, ಚಿಕ್ಕಬಿದರಕಲ್ಲು (ಜಿಂದಾಲ್), ಮಾದಾವರ ಮೆಟ್ರೊ ನಿಲ್ದಾಣಗಳಿದ್ದು, ಎಲ್ಲ ನಿಲ್ದಾಣಗಳ ಸಿವಿಲ್ ಕಾಮಗಾರಿ ಮುಕ್ತಾಯಗೊಂಡಿದೆ. 3.7 ಕಿಲೋಮೀಟರ್ ದೂರದ ಈ ಮಾರ್ಗದಲ್ಲಿ ಗರ್ಡರ್ (ಸಿಮೆಂಟ್ ತೊಲೆ) ಅಳವಡಿಕೆ ಸಹಿತ ಸಿವಿಲ್ ಕಾಮಗಾರಿಗಳು ಪೂರ್ಣಗೊಂಡಿವೆ.

ವಿಸ್ತರಿತ ಮಾರ್ಗದ ಕಾಮಗಾರಿಗೆ 2017ರ ಮೇ ತಿಂಗಳಲ್ಲಿ ಚಾಲನೆ ನೀಡಲಾಗಿತ್ತು. ಭೂಸ್ವಾಧೀನ ಪ್ರಕ್ರಿಯೆಯಲ್ಲಿ ತೊಡಕು ಸಹಿತ ವಿವಿಧ ಕಾರಣಗಳಿಂದ ಕಾಮಗಾರಿ ನಿಧಾನವಾಗಿತ್ತು. 2023ರ ಜೂನ್ ವೇಳೆಗೆ ರೈಲು ಸಂಚಾರ ಆರಂಭಿಸುವ ಗುರಿಯನ್ನು ಬಿಎಂಆರ್‌ಸಿಎಲ್ ಇಟ್ಟುಕೊಂಡಿತ್ತು. ಆದರೆ ನಿಗದಿತ ಸಮಯದಲ್ಲಿ ಕಾಮಗಾರಿ ಪೂರ್ಣವಾಗದ ಕಾರಣ ಅವಧಿ ವಿಸ್ತರಿಸಲಾಗಿತ್ತು. ಇದೀಗ ಕಾಮಗಾರಿ ಅಂತಿಮ ಹಂತಕ್ಕೆ ತಲುಪಿದೆ.

ಮೆಟ್ರೊ: 2 ತಿಂಗಳಲ್ಲಿ ಸುರಂಗ ಪೂರ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ ಗುಲಾಬಿ ಮಾರ್ಗದಲ್ಲಿ ಸುರಂಗ ಕೊರೆಯುವ ಕಾರ್ಯ ಭರದಿಂದ ಸಾಗಿದ್ದು, ಜುಲೈ ಒಂದೇ ತಿಂಗಳಲ್ಲಿ 308 ಮೀಟರ್ ಕೊರೆದಿದೆ. ನಿರ್ಮಾಣಗೊಳ್ಳುತ್ತಿರುವ ಒಟ್ಟು 20.99 ಕಿಲೋಮೀಟರ್ ಸುರಂಗ ಮಾರ್ಗದಲ್ಲಿ ಇನ್ನು ಒಂದು ಕಿ.ಮೀ. ಮಾತ್ರ ಬಾಕಿ ಉಳಿದಿದೆ.

ಹಂತ–2ರ ಯೋಜನೆಯಡಿ ರೀಚ್–6 ಮಾರ್ಗ ಇದಾಗಿದ್ದು, 'ವರದ', 'ಅವನಿ', 'ಊರ್ಜಾ', 'ವಿಂಧ್ಯಾ', 'ಲವಿ', 'ವಮಿಕ', 'ರುದ್ರ' ಸುರಂಗ ಕೊರೆಯುವ ಯಂತ್ರಗಳು ಕಾಳೇನ ಅಗ್ರಹಾರದಿಂದ ನಾಗವಾರ ಮಾರ್ಗದಲ್ಲಿ ಒಂಬತ್ತು ಸುರಂಗಗಳ ಕೊರೆಯುವ ಕಾರ್ಯವನ್ನು ಪೂರ್ಣಗೊಳಿಸಿವೆ. 'ತುಂಗಾ' ಮತ್ತು 'ಭದ್ರಾ' ಯಂತ್ರಗಳು ಕೊನೇ ಹಂತದ ಸುರಂಗ ಕೊರೆಯುತ್ತಿವೆ. 'ಭದ್ರಾ' 624 ಮೀಟರ್ ಮತ್ತು 'ತುಂಗಾ' 469 ಮೀಟರ್ ಕೊರೆಯಲು ಬಾಕಿ ಉಳಿದಿದೆ. ಇನ್ನೆರಡು ತಿಂಗಳಲ್ಲಿ ಸುರಂಗ ಕೊರೆಯುವ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಗುಲಾಬಿ ಮಾರ್ಗದಲ್ಲಿ ಕಾಳೇನ ಅಗ್ರಹಾರ, ಹುಳಿಮಾವು, ಐಐಎಂಬಿ, ಜೆ.ಪಿ. ನಗರ 4ನೇ ಹಂತ, ಜಯದೇವ ಆಸ್ಪತ್ರೆ, ಸ್ವಾಗತ್ ರೋಡ್ ಕ್ರಾಸ್, ಡೇರಿ ಸರ್ಕಲ್, ಮೈಕೊ ಇಂಡಸ್ಟ್ರೀಸ್, ಲ್ಯಾಂಗ್‌ಫೋರ್ಡ್ ಟೌನ್, ವೆಲ್ಲಾರ, ಎಂ.ಜಿ. ರಸ್ತೆ, ಶಿವಾಜಿನಗರ, ಕಂಟೋನ್ಮೆಂಟ್, ಪಾಟರಿ ಟೌನ್, ಟ್ಯಾನರಿ ರಸ್ತೆ, ವೆಂಕಟೇಶಪುರ, ಅರೇಬಿಕ್ ಕಾಲೇಜು, ನಾಗವಾರದಲ್ಲಿ ಮೆಟ್ರೊ ನಿಲ್ದಾಣಗಳು ನಿರ್ಮಾಣಗೊಳ್ಳುತ್ತಿವೆ.

2025ರ ಅಂತ್ಯಕ್ಕೆ ಈ ಮಾರ್ಗದಲ್ಲಿ ರೈಲು ಸಂಚಾರ ಆರಂಭ ಆಗಲಿದೆ.



ನಮ್ಮ ಮೆಟ್ರೊ ಗುಲಾಬಿ ಮಾರ್ಗದಲ್ಲಿ ಸುರಂಗ ಮಾರ್ಗ ನಿರ್ಮಾಣವಾಗಿರುವುದು

ಮೆಟ್ರೊದಲ್ಲಿ ಒಂದೇ ದಿನ 8 ಲಕ್ಷ ಜನರ ಪ್ರಯಾಣ

ನಮ್ಮ ಮೆಟ್ರೊ ನೇರಳೆ ಮತ್ತು ಹಸಿರು ಮಾರ್ಗದಲ್ಲಿ ಜೂನ್ ತಿಂಗಳಲ್ಲಿ 2.23 ಕೋಟಿ ಮಂದಿ ಪ್ರಯಾಣಿಸಿದ್ದು, ಜೂನ್ 19ರಂದು ಒಂದೇ ದಿನ ದಾಖಲೆಯ 8.08 ಲಕ್ಷ ಜನ ಪ್ರಯಾಣಿಸಿದ್ದಾರೆ.

ಶೇ 50.06ರಷ್ಟು ಪ್ರಯಾಣಿಕರು ಸ್ಮಾರ್ಟ್‌ಕಾರ್ಡ್ ಬಳಕೆ ಮಾಡಿದ್ದಾರೆ. ಶೇ 30.45ರಷ್ಟು ಪ್ರಯಾಣಿಕರು ಟೋಕನ್ ಬಳಸಿದ್ದಾರೆ. ಶೇ 19.49ರಷ್ಟು ಮಂದಿ ಕ್ಯೂಆರ್ ಕೋಡ್ ಟಿಕೆಟ್ ಮೂಲಕ ಪ್ರಯಾಣಿಸಿದ್ದಾರೆ. ಜೂನ್ ತಿಂಗಳಲ್ಲಿ ಬಿಎಂಆರ್‌ಸಿಎಲ್‌ಗೆ ₹ 58.23 ಕೋಟಿ ಆದಾಯ ಬಂದಿದೆ.

ಹೆಚ್ಚಿದ ಪ್ರಮಾಣ: ನಗರದ ವಾಹನದಟ್ಟಣೆಯಿಂದ ತಪ್ಪಿಸಿಕೊಳ್ಳಲು ಜನರು ನಮ್ಮ ಮೆಟ್ರೊವನ್ನು ಅವಲಂಬಿಸುವುದು ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ನೇರಳೆ ಮಾರ್ಗದಲ್ಲಿ ಬೈಯಪ್ಪನಹಳ್ಳಿ–ಕೆ.ಆರ್.ಪುರ ನಡುವಿನ ಕಾಮಗಾರಿ ಪೂರ್ಣಗೊಂಡು ವೈಟ್‌ಫೀಲ್ಡ್‌ವರೆಗೆ ನೇರ ಮೆಟ್ರೊ ರೈಲು ಆರಂಭಗೊಂಡ ಬಳಿಕ ಹಸಿರು ಮತ್ತು ನೇರಳೆ ಮಾರ್ಗದಲ್ಲಿ 6.5 ಲಕ್ಷ ಜನರು ಪ್ರಯಾಣಿಸುತ್ತಿದ್ದರು. ಕೆಲವು ತಿಂಗಳಿನಿಂದ 7 ಲಕ್ಷ ದಾಟಿತ್ತು. ಜುಲೈ ತಿಂಗಳಲ್ಲಿ ಪ್ರತಿದಿನ ಸರಾಸರಿ 7.45 ಲಕ್ಷ ಜನರು ಪ್ರಯಾಣಿಸಿದ್ದಾರೆ.

ನೇರಳೆ ಮಾರ್ಗದಲ್ಲಿ ಬೆಳಿಗ್ಗೆ ಮತ್ತು ಸಂಜೆಯ ಹೊತ್ತು ವಿಪರೀತ ಜನಸಂದಣಿ ಇದ್ದು, ರೈಲಿನ ಬಾಗಿಲು ಮುಚ್ಚಲು ಕಷ್ಟಪಡುವಷ್ಟು ಪ್ರಯಾಣಿಕರು ತುಂಬಿರುತ್ತಾರೆ. ದಟ್ಟಣೆಯ ಅವಧಿಯಲ್ಲಿ ಮೆಜೆಸ್ಟಿಕ್‌ನಿಂದ ಹೆಚ್ಚುವರಿಯಾಗಿ 15 ರೈಲುಗಳು ಸಂಚರಿಸುತ್ತಿದ್ದರೂ ಸಾಕಾಗುತ್ತಿಲ್ಲ. 2025ರ ಜೂನ್‌ವರೆಗೆ ಈಗಿರುವ ಕೋಚ್‌ಗಳೇ ಇರಲಿವೆ. ಆನಂತರ 21 ಕೋಚ್‌ಗಳು ಸೇರ್ಪಡೆಗೊಳ್ಳಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಅಧಿಕಾರಿಗಳು ಗೈರು; ಶಾಸಕ ಅಸಮಾಧಾನ

ಪ್ರಜಾವಾಣಿ ವಾರ್ತೆ

ಯಲಹಂಕ: ರಾಜಾನುಕುಂಟೆ ಗ್ರಾಮ ಪಂಚಾಯಿತಿ ಸಭೆಗೆ ಹಾಜರಾಗದ ತಹಶೀಲ್ದಾರ್, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ವಿರುದ್ಧ ಶಾಸಕ ಎಸ್.ಆರ್. ವಿಶ್ವನಾಥ್ ಅಸಮಾಧಾನ ವ್ಯಕ್ತಪಡಿಸಿದರು.

ರಾಜಾನುಕುಂಟೆ ಗ್ರಾಮ ಪಂಚಾಯಿತಿಯ 2024–25ನೇ ಸಾಲಿನ ಮೊದಲ ಸುತ್ತಿನ ಗ್ರಾಮಸಭೆ ಉದ್ಘಾಟಿಸಿ ಮಾತನಾಡಿದ ಅವರು, 'ಗ್ರಾಮ ಸಭೆಯಲ್ಲಿ ಸಾರ್ವಜನಿಕರು ಮತ್ತು ರೈತರಿಗೆ ಸಂಬಂಧಿಸಿದ ಹಲವು ಸಮಸ್ಯೆಗಳು ಚರ್ಚೆಯಾಗುತ್ತವೆ. ಅವುಗಳಿಗೆ ಸೂಕ್ತ ಪರಿಹಾರ ನೀಡಲು ಕಂದಾಯ ಇಲಾಖೆಯ ಅಧಿಕಾರಿಗಳ ಹಾಜರಾತಿ ಅತ್ಯಗತ್ಯ. ಆದರೆ, ಹಿರಿಯ ಅಧಿಕಾರಿಗಳ ಕುಂಟುನೆಪಗಳನ್ನು ಹೇಳಿ ಗ್ರಾಮಸಭೆಗಳಿಗೆ ಗೈರಾಗಿ, ನೆಪಮಾತ್ರಕ್ಕೆ ತಮ್ಮ ಸಿಬ್ಬಂದಿಯನ್ನು ಪ್ರತಿನಿಧಿಗಳನ್ನಾಗಿ ಕಳುಹಿಸುತ್ತಾರೆ' ಎಂದು ಬೇಸರ ವ್ಯಕ್ತಪಡಿಸಿದರು.

ಸವಲತ್ತುಗಳ ವಿತರಣೆ: ಕಾರ್ಯಕ್ರಮದಲ್ಲಿ ಫಲಾನುಭವಿಗಳಿಗೆ ಹಕ್ಕುಪತ್ರ, ಅಂಗವಿಕಲರಿಗೆ ಸಹಾಯಧನದ ಚೆಕ್, ಸರ್ಕಾರಿ ಶಾಲಾ ಮಕ್ಕಳಿಗೆ ನೋಟ್‌ಪುಸ್ತಕ ಮತ್ತು ಕ್ರೀಡಾ ಸಾಮಗ್ರಿಗಳ ಕಿಟ್ ವಿತರಿಸಿದರು. ಎಸ್.ಎಸ್.ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನದ ಚೆಕ್ ನೀಡಿದರು.

ರಾಜಾನುಕುಂಟೆ ಗ್ರಾಮದಲ್ಲಿ ಸರ್ಕಾರಿ ಶಾಲೆಯಲ್ಲಿ ನಾಲ್ಕು ನೂತನ ಕೊಠಡಿಗಳನ್ನು ಉದ್ಘಾಟಿಸಿದರು. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ (ಎಲ್.ಕೆಜಿ) ಆಂಗ್ಲಮಾಧ್ಯಮ ತರಗತಿಗೆ ಚಾಲನೆ ನೀಡಿದರು.

ಅಂಡರ್‌ಪಾಸ್‌ನಲ್ಲಿ ಕಾರು ಮುಳುಗಿ ಮಹಿಳೆ ಸಾವು ಪ್ರಕರಣ

ಆರೋಪಪಟ್ಟಿಗೆ ಬಿಬಿಎಂಪಿ ಎಂಜಿನಿಯರ್‌ಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರ್ಷದ ಹಿಂದೆ ಕೆ.ಆರ್. ಸರ್ಕಲ್ ಕೆಳ ಸೇತುವೆಯಲ್ಲಿ ಕಾರು ಮುಳುಗಿ ಮಹಿಳೆ ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಬಿಎಂಪಿಯ ಮೂವರು ಎಂಜಿನಿಯರ್‌ಗಳ ವಿರುದ್ಧ ಆರೋಪ ಪಟ್ಟಿ ಸಲ್ಲಿಸಲು ಅನುಮತಿ ನೀಡುವಂತೆ ಕೋರಿ ಪೊಲೀಸರು ಸಕ್ಷಮ ಪ್ರಾಧಿಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದಾರೆ.

2023ರ ಮೇ 21ರಂದು ಆಂಧ್ರಪ್ರದೇಶದ ಟೆಕ್ಕಿ ಬತುಲಾ ಭಾನು ರೇಖಾ (23) ಅವರು ಕುಟುಂಬದ ಸದಸ್ಯರೊಂದಿಗೆ ಕಾರಿನಲ್ಲಿ ಪ್ರವಾಸ ಹೊರಟಿದ್ದರು. ಮಳೆಗೆ ಕೆ.ಆರ್. ಸರ್ಕಲ್‌ಕೆಳ ಸೇತುವೆ ಜಲಾವೃತಗೊಂಡಿತ್ತು. ಚಾಲಕ ಈ ಕೆಳ ಸೇತುವೆಯಲ್ಲಿ ಕಾರು ಚಲಾಯಿಸಿದ್ದರು. ಕಾರು ಅರ್ಧದಲ್ಲಿಯೇ ನಿಂತಿತ್ತು. ಚಾಲಕ ಮತ್ತು ಇತರರು ಇಳಿದು ಪಾರಾಗಿದ್ದರು. ರೇಖಾ ಅವರು ಕಾರಲ್ಲಿಯೇ ಸಿಲುಕಿ ಮೃತಪಟ್ಟಿದ್ದರು. ಹಲಸೂರು ಗೇಟ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿದ್ದರು.

ಚಾಲಕ ಹರೀಶ್ ಗೌಡ ಪ್ರಮುಖ ಆರೋಪಿಯಾಗಿದ್ದರು. 14 ತಿಂಗಳ ಬಳಿಕ ಆರೋಪ ಪಟ್ಟಿ ಸಿದ್ಧಗೊಂಡಿದೆ. ಕೆಳಸೇತುವೆಯನ್ನು ಸರಿಯಾಗಿ ನಿರ್ವಹಿಸದ ಆರೋಪದಲ್ಲಿ ಕಾರ್ಯನಿರ್ವಾಹಕ ಎಂಜಿನಿಯರ್, ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಮತ್ತು ಜೂನಿಯರ್ ಎಂಜಿನಿಯರ್‌ಗಳ ವಿರುದ್ಧವೂ ಆರೋಪಪಟ್ಟಿ ಸಲ್ಲಿಸಲು ಅನುಮತಿ ನೀಡುವಂತೆ ಪತ್ರದಲ್ಲಿ ಕೋರಿದ್ದಾರೆ.

ರಾಯಚೂರು ವಿ.ವಿ: ನೇಮಕಾತಿಗೆ ಅರ್ಜಿ

ಬೆಂಗಳೂರು: ರಾಯಚೂರು ವಿಶ್ವವಿದ್ಯಾಲಯದಲ್ಲಿ ವಿವಿಧ ವಿಷಯಗಳ 24 ಸಹಾಯಕ ಪ್ರಾಧ್ಯಾಪಕರ ನೇರ ನೇಮಕಾತಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅರ್ಜಿ ಆಹ್ವಾನಿಸಿದೆ.

ಮಾಹಿತಿಗೆ http://kea.kar.nic.in ಸಂಪರ್ಕಿಸಬಹುದು.

ನಗರದಲ್ಲಿ ಇಂದು

'ಎಐ ಆಧಾರಿತ ಕಲಿಕೆ' ಕುರಿತು ರಾಷ್ಟ್ರೀಯ ಸಮ್ಮೇಳನ: ಅತಿಥಿಗಳು: ಸಿಸಿಲ್ ಸುಂದರ್, ರಮಣ್ ಪುಷ್ಕರ್, ವಿಭಾ ಮಿಶ್ರಾ, ಚೆನ್‌ರಾಜ್ ರಾಯಚಂದ್, ರಾಜ್ ಸಿಂಗ್, ದಿನೇಶ್ ನೀಲಕಂಠ, ಜಿತೇಂದ್ರ ಮಿಶ್ರಾ, ಆಯೋಜನೆ ಮತ್ತು ಸ್ಥಳ: ಜೈನ್ ವಿಶ್ವವಿದ್ಯಾಲಯ, ಸೆಂಟರ್ ಫಾರ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ಲಾಲ್‌ಬಾಗ್ ಮುಖ್ಯರಸ್ತೆ, ವಿನೋಬಾ ನಗರ, ಬೆಳಿಗ್ಗೆ 9.30

ಜಯರಾಮ ಕೃಷ್ಣನ್ ಅವರ ಏಕವ್ಯಕ್ತಿ ಕಲಾಕೃತಿಗಳ ಪ್ರದರ್ಶನ: ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ಎಂ.ಎನ್. ಜಯಕುಮಾರ್ ಅವರ 'ವನ್ಯಜೀವಿ ಛಾಯಾಚಿತ್ರ ಪ್ರದರ್ಶನ: ಸ್ಥಳ: ಸಬ್‌ಲೈಮ್ ಗ್ಯಾಲರಿ, ಎಂಟನೇ ಮಹಡಿ, ಯುಬಿ ಸಿಟಿ, ಬೆಳಿಗ್ಗೆ 11.30

'ರಂಗ ಚಾವಡಿ' ಉದ್ಘಾಟನೆ: ಅತಿಥಿಗಳು: ಪ್ರಸನ್ನ, ಧರಣಿದೇವಿ ಮಾಲಗತ್ತಿ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ರಂಗಚಾವಡಿ, ಕರ್ನಾಟಕ ನಾಟಕ ಅಕಾಡೆಮಿ ಆವರಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5

'ನೃತ್ಯ ನೀರಾಜನ' ನೃತ್ಯೋತ್ಸವ: ಪಿ. ಭೂಷಿತಾ, ಎ. ಪಾರ್ನಿಕ, ಡಿ. ಶ್ರಾಗ್ವಿ, ನಿರ್ದೇಶನ: ದರ್ಶಿನಿ ಮಂಜುನಾಥ್, ಅಧ್ಯಕ್ಷತೆ: ಉಷಾ ಬಸಪ್ಪ, ಆಯೋಜನೆ: ನೃತ್ಯ ದಿಶಾ ಟ್ರಸ್ಟ್, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5.30

ಹರಿನಾಮ ಸಂಕೀರ್ತನೆ: ಗಾಯನ: ರಮ್ಯಾ ಸುಧೀರ್, ಪಿಟೀಲು: ಶಶಿಧರ್, ಮೃದಂಗ: ಶ್ರೀನಿವಾಸ ಅನಂತರಾಮಯ್ಯ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಯಲಹಂಕ ಉಪನಗರ, ಸಂಜೆ 6.30

'ನಮ್ಮ ನಿಮ್ಮೊಳಗೊಬ್ಬ' ನಾಟಕ ಪ್ರದರ್ಶನ: ನಿರ್ದೇಶನ: ಗಿರೀಶ್ ಚಿಂದಪ್ಪ, ಆಯೋಜನೆ: ನಾಟ್ಯ ಸುಚಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 7

ಧಾರ್ಮಿಕ ಪ್ರವಚನ: ಪ್ರಶಾಂತ ಭಾರ್ಗವಾಚಾರ್ಯ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಸುಧೀಂದ್ರನಗರ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.
nagaradalli_indu@prajavani.co.in

‘ನೀಟ್‌–ಯುಜಿ’ ಪ್ರಶ್ನೆಪತ್ರಿಕೆ ಸೋರಿಕೆ ಸಿಬಿಐನಿಂದ ಮೊದಲ ಆರೋಪಪಟ್ಟಿ

ನವದೆಹಲಿ(ಪಿಟಿಐ): ‘ನೀಟ್‌-ಯುಜಿ’ ಪ್ರಶ್ನೆ ಪತ್ರಿಕೆ ಸೋರಿಕೆ ಆರೋಪದ ಪ್ರಕರಣದಲ್ಲಿ ಸಿಬಿಐ ಮೊದಲ ಆರೋಪಪಟ್ಟಿ ಸಲ್ಲಿಸಿದ್ದು, 13 ಆರೋಪಿಗಳ ಹೆಸರುಗಳನ್ನು ಉಲ್ಲೇಖಿಸಲಾಗಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ವೈದ್ಯಕೀಯ ಕೋರ್ಸ್‌ ಪ್ರವೇಶ ಪರೀಕ್ಷೆಯಲ್ಲಿ (ನೀಟ್‌-ಯುಜಿ) ನಡೆದಿದೆ ಎನ್ನಲಾದ ಅಕ್ರಮಗಳಿಗೆ ಸಂಬಂಧಿಸಿ ಸಿಬಿಐ ಒಟ್ಟು ಆರು ಎಫ್‌ಐಆರ್‌ಗಳನ್ನು ದಾಖಲಿಸಿದೆ.

ಬಿಹಾರದಲ್ಲಿ ನಡೆದಿದೆ ಎನ್ನಲಾದ ಪ್ರಶ್ನೆಪತ್ರಿಕೆ ಸೋರಿಕೆ ಕುರಿತು ಒಂದು ಎಫ್‌ಐಆರ್‌ ದಾಖಲಿಸಲಾಗಿದೆ. ಉಳಿದ ಎಫ್‌ಐಆರ್‌ಗಳು ಗುಜರಾತ್‌, ರಾಜಸ್ಥಾನ ಮತ್ತು ಮಹಾರಾಷ್ಟ್ರದಲ್ಲಿ ನಡೆದಿದೆ ಎನ್ನಲಾದ ವಂಚನೆ ಹಾಗೂ ಅಭ್ಯರ್ಥಿಗಳ ಬದಲು ಬೇರೆಯವರು ಪರೀಕ್ಷೆಗೆ ಹಾಜರಾಗಿದ್ದಕ್ಕೆ ಸಂಬಂಧಿಸಿದ್ದವು ಎಂದು ಅಧಿಕಾರಿಗಳು ಹೇಳಿದ್ದಾರೆ.

ಉದ್ಯೋಗ ಮೇಳ ಆಗಸ್ಟ್‌ 17ಕ್ಕೆ

ಬೆಂಗಳೂರು: ‘ಪದ್ಮನಾಭನಗರದ ಪುಟ್ಟಲಿಂಗಯ್ಯ ಆಟದ ಮೈದಾನದಲ್ಲಿ ಆಗಸ್ಟ್‌ 17ರಂದು ‘ಬೃಹತ್‌ ಉದ್ಯೋಗ ಮೇಳ’ವನ್ನು ಹಮ್ಮಿಕೊಳ್ಳಲಾಗಿದೆ’ ಎಂದು ಬಿಜೆಪಿ ಮುಖಂಡ ಎನ್‌.ಆರ್‌. ರಮೇಶ್‌ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರಾಜಧಾನಿ ಬೆಂಗಳೂರಿನಲ್ಲಿರುವ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸುವ ಉದ್ದೇಶದಿಂದ ಈ ಉದ್ಯೋಗ ಮೇಳವನ್ನು ಆಯೋಜಿಸಲಾಗುತ್ತಿದೆ. ಮೇಳದಲ್ಲಿ 150ಕ್ಕೂ ಹೆಚ್ಚು ಕಾರ್ಪೊರೇಟ್‌ ಹಾಗೂ ಬಹುರಾಷ್ಟ್ರೀಯ ಕಂಪನಿಗಳು ಭಾಗವಹಿಸಲಿವೆ.

ಮಾಹಿತಿಗೆ: 98441 59891, 91086 36275ಗೆ ಸಂಪರ್ಕಿಸಬಹುದು.

ಕೆಇಎ: ‘ಕಾಗದ ರಹಿತ’ ಪರೀಕ್ಷೆಗೆ ಅಸ್ತು

20 ಸಾವಿರಕ್ಕಿಂತ ಕಡಿಮೆ ಅಭ್ಯರ್ಥಿಗಳಿಗೆ ಅನ್ವಯ: ಮಂಡಳಿ ಸಭೆಯಲ್ಲಿ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 20 ಸಾವಿರಕ್ಕಿಂತ ಕಡಿಮೆ ಅಭ್ಯರ್ಥಿಗಳು ಹಾಜರಾಗುವ ಸ್ಪರ್ಧಾತ್ಮಕ ಪರೀಕ್ಷೆಗಳು ಇನ್ನು ಮುಂದೆ ‘ಕಾಗದ ರಹಿತ’ ಆಗಲಿವೆ.

ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ ಪಾಟೀಲ, ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್‌ ನೇತೃತ್ವದಲ್ಲಿ ಗುರುವಾರ ನಡೆದ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಆಡಳಿತ ಮಂಡಳಿ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಪರೀಕ್ಷೆಗಳಲ್ಲಿ ಪಾರದರ್ಶಕತೆ ತರಲು ಇಂತಹ ನಿರ್ಧಾರ ಕೈಗೊಳ್ಳಲಾಗಿದ್ದು, 20 ಸಾವಿರಕ್ಕಿಂತ ಕಡಿಮೆ ಅಭ್ಯರ್ಥಿಗಳು ಇರುವ ಪದವಿ ಹಾಗೂ



ಸ್ನಾತಕೋತ್ತರ ಪದವಿ ಆಧಾರಿತ ಪರೀಕ್ಷೆಗಳನ್ನು ಕಂಪ್ಯೂಟರ್‌ ಮೂಲಕ ನಡೆಸುವುದನ್ನು ಕಡ್ಡಾಯಗೊಳಿಸಲಾಗುತ್ತದೆ. ಹಂತಹಂತವಾಗಿ ಉಳಿದ ಎಲ್ಲ ಪರೀಕ್ಷೆಗಳನ್ನೂ ‘ಕಾಗದ ರಹಿತ’ವಾಗಿ ನಡೆಸಲು ಕ್ರಮ ಕೈಗೊಳ್ಳಲು ಸಭೆ ನಿರ್ಧರಿಸಿದೆ.

ಆಧುನಿಕ ತಂತ್ರಜ್ಞಾನ ಬಳಕೆಗೆ ₹10 ಕೋಟಿ: ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಯ ಜೊತೆಗೆ ವಿವಿಧ ಇಲಾಖೆಗಳ ಖಾಲಿ ಹುದ್ದೆಗಳ ನೇಮಕಾತಿಗೆ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಅಳವಡಿಸಿಕೊಂಡು ವೆಬ್‌ ಕಾಸ್ಟಿಂಗ್‌ ಮಾಡಲು ಸಭೆ ಅನುಮೋದನೆ ನೀಡಿತು. ಅದಕ್ಕಾಗಿ ₹10 ಕೋಟಿ ಮೊತ್ತದ ಟೆಂಡರ್‌ ಕರೆಯಲು ಸಮ್ಮತಿ ನೀಡಿದೆ. ಮುಂದಿನ ಎಲ್ಲಾ ಪರೀಕ್ಷೆಗಳಲ್ಲಿ ಪ್ರತಿ ಪರೀಕ್ಷಾ ಕೊಠಡಿಗಳಲ್ಲೂ ಅತ್ಯಧುನಿಕ ತಂತ್ರಜ್ಞಾನವನ್ನು ಅಳವಡಿಸಲಾಗುತ್ತಿದೆ.

21ರಿಂದ ಸಿಇಟಿ ಕೌನ್ಸೆಲಿಂಗ್‌

ಎಂಜಿನಿಯರಿಂಗ್‌ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಆ.21ರಿಂದ ಕೌನ್ಸೆಲಿಂಗ್‌ ಆರಂಭಿಸಲು ಗುರುವಾರ ನಡೆದ ಕೆಇಎ ಆಡಳಿತ ಮಂಡಳಿ ಸೂಚಿಸಿದೆ.

ರಾಷ್ಟ್ರ ಮಟ್ಟದಲ್ಲಿ ಆ.14ರಿಂದ ನೀಟ್‌ ಕೌನ್ಸೆಲಿಂಗ್‌ ಆರಂಭವಾಗಲಿದ್ದು, ನಂತರ ರಾಜ್ಯದಲ್ಲೂ ಏಕಕಾಲಕ್ಕೆ ವೈದ್ಯಕೀಯ ಮತ್ತು ತಾಂತ್ರಿಕ ಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕೆ ಕೌನ್ಸೆಲಿಂಗ್‌ ನಡೆಯಲಿವೆ. ಎಂಜಿನಿಯರಿಂಗ್‌, ವಾಸ್ತುಶಿಲ್ಪ ಶಾಸ್ತ್ರ, ನ್ಯಾಚುರೋಪಥಿ- ಯೋಗ, ಪಶು ವೈದ್ಯಕೀಯ ಇತ್ಯಾದಿ ಕೋರ್ಸುಗಳ ಪ್ರವೇಶಕ್ಕೆ ಆಯ್ಕೆಗಳನ್ನು ದಾಖಲಿಸುವ ಪ್ರಕ್ರಿಯೆಗಳು ಈಗಾಗಲೇ ಆರಂಭವಾಗಿದ್ದು, ಅವಧಿಯನ್ನು ಮತ್ತಷ್ಟು ದಿನ ವಿಸ್ತರಿಸಲಾಗಿದೆ.

ಸುದ್ದಿ 2 ನಿಮಿಷ

ಯಡಿಯೂರಪ್ಪ ಬಂಧನ ಬೇಡ ಮಧ್ಯಂತರ ಆದೇಶ ವಿಸ್ತರಣೆ

ಬೆಂಗಳೂರು: ‘ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್‌.ಯಡಿಯೂರಪ್ಪ ವಿರುದ್ಧದ ಪೋಕ್ಸೊ ಪ್ರಕರಣದಲ್ಲಿ; ಪೊಲೀಸರು ಅವರನ್ನು ಬಂಧಿಸಬಾರದು ಮತ್ತು ವಿಚಾರಣೆಗಾಗಿ ಅವರ ಖುದ್ದು ಹಾಜರಾತಿಗೆ ವಿನಾಯಿತಿ ನೀಡಲಾಗಿದೆ’ ಎಂಬ ಈ ಹಿಂದಿನ ಮಧ್ಯಂತರ ಆದೇಶವನ್ನು ಹೈಕೋರ್ಟ್‌ ಪುನಃ ವಿಸ್ತರಿಸಿದೆ.

ಪ್ರಕರಣ ರದ್ದು ಕೋರಿ ಯಡಿಯೂರಪ್ಪ ಸಲ್ಲಿಸಿರುವ ಅರ್ಜಿಯನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್‌ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಾಲಯದ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು



ಗುರುವಾರ ಈ ಕುರಿತಂತೆ ಆದೇಶಿಸಿದರು.

ವಿಚಾರಣೆ ವೇಳೆ, ಬಿಎಸ್‌ವೈ ಪರ ಹಾಜರಾಗಿದ್ದ ಹಿರಿಯ ವಕೀಲ ಸಿ.ವಿ.ನಾಗೇಶ್‌ ಅವರು, ‘ಪ್ರಕರಣದಲ್ಲಿ ಪ್ರಾಸಿಕ್ಯೂಷನ್‌ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದೆ. ಆದ ಕಾರಣ ದೋಷಾರೋಪ ಪಟ್ಟಿಯನ್ನು ಪ್ರಶ್ನಿಸಿದ ತಿದ್ದುಪಡಿ ಅರ್ಜಿ ಸಲ್ಲಿಸಲಾಗುವುದು. ಅದಕ್ಕಾಗಿ ಕಾಲಾವಕಾಶ ಬೇಕು’ ಎಂದು ಮನವಿ ಮಾಡಿದರು.

ಇದಕ್ಕೆ ನ್ಯಾಯಪೀಠ, ರಾಜ್ಯ ಪ್ರಾಸಿಕ್ಯೂಟರ್‌ ಬಿ.ಎ.ಬೆಳ್ಳಿಯಪ್ಪ ಅವರನ್ನು, ‘ಅರ್ಜಿ ತಿದ್ದುಪಡಿಗೆ ನಿಮ್ಮದೇನೂ ಆಕ್ಷೇಪಣೆ ಇಲ್ಲವೇ’ ಎಂದು ಪ್ರಶ್ನಿಸಿತು. ಇದಕ್ಕೆ ಬೆಳ್ಳಿಯಪ್ಪ, ‘ಆಕ್ಷೇಪಣೆ ಇಲ್ಲ’ ಎಂದರು.

ಇದೇ ವೇಳೆ, ‘ಯಡಿಯೂರಪ್ಪ ಅವರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಬೇಕು’ ಎಂದು ಕೋರಿದ ಸಂತ್ರಸ್ತೆಯ ಪರ ವಕೀಲ ಬಾಲನ್‌, ವಾದ ಮಂಡಿಸಲು ಕಾಲಾವಕಾಶ ಕೇಳಿದರು. ಈ ಅಂಶ ದಾಖಲಿಸಿಕೊಂಡ ಪೀಠ ವಿಚಾರಣೆಯನ್ನು 22ಕ್ಕೆ ಮುಂದೂಡಿತು.

ವ್ಹೀಲಿ: 30 ಪ್ರಕರಣ, 19 ಮಂದಿ ಸೆರೆ

ಬೆಂಗಳೂರು: ನಗರದ ವಿವಿಧ ಬಡಾವಣೆ ಹಾಗೂ ಮೇಲ್ಸೇತುವೆಗಳಲ್ಲಿ ರಾತ್ರಿ ವೇಳೆ ವ್ಹೀಲಿ ನಡೆಸುತ್ತಿದ್ದವರ ವಿರುದ್ಧ ವಿಶೇಷ ಕಾರ್ಯಾಚರಣೆ ಮುಂದುವರಿಸಿರುವ ನಗರ ಸಂಚಾರ ಪೊಲೀಸರು, 19 ಮಂದಿಯನ್ನು ಬಂಧಿಸಿದ್ದಾರೆ. ವ್ಹೀಲಿ ನಡೆಸುವವರ ವಿರುದ್ಧ ನಗರದ ವಿವಿಧ ಸಂಚಾರ ಪೊಲೀಸ್‌ ಠಾಣೆಗಳ ವ್ಯಾಪ್ತಿಯಲ್ಲಿ ಜುಲೈ 23ರಿಂದ 31ರವರೆಗೆ ವಿಶೇಷ ಕಾರ್ಯಾಚರಣೆ ನಡೆಸಲಾಗಿತ್ತು.

ಒಟ್ಟು 30 ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ. 27 ದ್ವಿಚಕ್ರ ವಾಹನ ಜಪ್ತಿ ಮಾಡಿ, ಮೂರು ಚಾಲನಾ ಪರವಾನಗಿ ಅಮಾನತುಪಡಿಸಲಾಗಿದೆ. ಒಂಬತ್ತು ನೋಂದಣಿ ಪ್ರಮಾಣಪತ್ರಗಳನ್ನು (ಆರ್‌.ಸಿ) ರದ್ದುಪಡಿಸುವಂತೆ ಸಾರಿಗೆ ಇಲಾಖೆಗೆ ಪತ್ರ ಬರೆಯಲಾಗಿದೆ. ವ್ಹೀಲಿ ನಡೆಸುತ್ತಿದ್ದ ಮೂರು ಬಾಲಕರನ್ನು ಪತ್ತೆಹಚ್ಚಿ, ಅವರ ಪೋಷಕರ ವಿರುದ್ಧ ಎಫ್‌ಐಆರ್‌ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

₹15 ಲಕ್ಷ ದಂಡ ಸಂಗ್ರಹ: ಹೆಚ್ಚು ಪ್ರಖರ ಬೆಳಕು ಹೊರಹಾಕುವ ದೀಪ ಅಳವಡಿಸಿಕೊಂಡ 3,065 ಚಾಲಕರ ವಿರುದ್ಧ ಸಂಚಾರ ಪೂರ್ವ ವಿಭಾಗದ ಪೊಲೀಸರು ಎಫ್‌ಐಆರ್‌ ದಾಖಲಿಸಿದ್ದಾರೆ.

ಜುಲೈ 1ರಿಂದ 31ರ ಅವಧಿಯಲ್ಲಿ ನಡೆದ ವಿಶೇಷ ಕಾರ್ಯಾಚರಣೆಯಲ್ಲಿ ಸಂಚಾರ ನಿಯಮ ಉಲ್ಲಂಘಿಸಿದವರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. ಅಲ್ಲದೇ, ಚಾಲಕರಿಂದ ₹15.32 ಲಕ್ಷ ದಂಡ ಸಂಗ್ರಹಿಸಲಾಗಿದೆ.



ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ‘ನಮ್ಮ ಯಾತ್ರಿ’ ವಿದ್ಯಾರ್ಥಿ ವೇತನ ಪಡೆದ ಅಭ್ಯರ್ಥಿಗಳೊಂದಿಗೆ ಪೋಷಕರು ಪಾಲ್ಗೊಂಡಿದ್ದರು

ನಮ್ಮ ಯಾತ್ರಿ: ಚಾಲಕರ ಮಕ್ಕಳಿಗೆ ವಿದ್ಯಾರ್ಥಿ ವೇತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಯಾತ್ರಿ ಕಂಪನಿಯು ಆಟೊ ರಿಕ್ಷಾ ಹಾಗೂ ಕ್ಯಾಬ್‌ ಚಾಲಕರ 48 ಮಕ್ಕಳಿಗೆ ವಿದ್ಯಾರ್ಥಿ ವೇತನ ವಿತರಿಸಿದೆ.

ಚೆನ್ನೈನಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ 18 ವಿದ್ಯಾರ್ಥಿಗಳಿಗೆ ಹಾಗೂ ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ 30 ವಿದ್ಯಾರ್ಥಿಗಳಿಗೆ ತಲಾ ₹15 ಸಾವಿರದಿಂದ ₹20 ಸಾವಿರದವರೆಗೆ ವಿದ್ಯಾರ್ಥಿ ವೇತನ ವಿತರಣೆ ಮಾಡಲಾಗಿದೆ.

‘ನಮ್ಮ ಯಾತ್ರಿ ರೈಸಿಂಗ್‌ ಸ್ಟಾರ್ಸ್‌’ ಹೆಸರಿನಲ್ಲಿ ಈ ಶಿಷ್ಯವೇತನ ಪ್ರಾರಂಭಿಸಲಾಗಿದೆ. ಕಂಪನಿಯಡಿ ನೋಂದಣಿಯಾಗಿರುವ ಬೆಂಗಳೂರು ಮತ್ತು ಚೆನ್ನೈನ ಚಾಲಕರ ಮಕ್ಕಳು ಈ ವಿದ್ಯಾರ್ಥಿ ವೇತನ ಪಡೆಯಲು ಅರ್ಹರಾಗಿರುತ್ತಾರೆ. ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ದ್ವಿತೀಯ ವರ್ಷದಲ್ಲಿ ಅಧಿಕ ಅಂಕ ಪಡೆದವರಿಗೆ ಉನ್ನತ ಶಿಕ್ಷಣ ಪಡೆಯಲು ಬೆಂಬಲ ನೀಡಲಾಗುತ್ತದೆ’ ಎಂದು ಕಂಪನಿ ತಿಳಿಸಿದೆ.

‘ಪ್ರತಿ ವರ್ಷ 500ಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡುವ ಗುರಿ ಹೊಂದಲಾಗಿದೆ. ಬೆಂಗಳೂರಿನ ನಮ್ಮ ಯಾತ್ರಿ ಆಟೊ ರಿಕ್ಷಾ ಚಾಲಕ ಸಿದ್ದೇಗೌಡ ಅವರ ಪುತ್ರಿ ಭಾವನಾ ಅವರು ಎಸ್ಸೆಸ್ಸೆಲ್ಸಿಯಲ್ಲಿ 625 ಅಂಕ ಪಡೆಯುವ ಮೂಲಕ ಸಾಧನೆ ಮಾಡಿದ್ದರು’ ಎಂದು ಕಂಪನಿ ಹೇಳಿದೆ.

‘ವಿದ್ಯಾರ್ಥಿ ವೇತನದ ಯೋಜನೆಯನ್ನು ಇನ್ನಷ್ಟು ನಗರಗಳಿಗೆ ವಿಸ್ತರಿಸುವ ಗುರಿ ಹಮ್ಮಿಕೊಳ್ಳಲಾಗಿದೆ’ ಎಂದು ಕಂಪನಿ ತಿಳಿಸಿದೆ.

ಮಾರಕಾಸ್ತ್ರಗಳಿಂದ ರೌಡಿಶೀಟರ್‌ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಳೇ ದ್ವೇಷದ ಕಾರಣಕ್ಕೆ ರೌಡಿಶೀಟರ್‌ನನ್ನು ಗುರುವಾರ ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಲಾಗಿದ್ದು, ಈ ಸಂಬಂಧ ಶೇಷಾದ್ರಿಪುರ ಪೊಲೀಸ್‌ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಜಿತ್‌ಕುಮಾರ್‌ (25) ಕೊಲೆಯಾದವರು.

ಠಾಣಾ ವ್ಯಾಪ್ತಿಯ ರಿಸಲ್ದಾರ್‌ ಸ್ಟ್ರೀಟ್‌ನಲ್ಲಿ ಗುರುವಾರ ಸಂಜೆ 4.30ರ ಸುಮಾರಿಗೆ ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಲಾಗಿದೆ. ಆರೋಪಿಗಳ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ. ರಾಮಮೂರ್ತಿ ನಗರದ ಬ್ಲಡ್‌ ಬ್ಯಾಂಕ್‌ನಲ್ಲಿ ಅಜಿತ್‌ ಕೆಲಸ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು.

ಮೂವರಿಂದ ಕೃತ್ಯ ಶಂಕೆ: ಅಜಿತ್‌ ವಿರುದ್ಧ ಕೊಲೆ ಹಾಗೂ ಕೊಲೆ ಯತ್ನ ಪ್ರಕರಣಗಳು ದಾಖಲಾಗಿದ್ದವು. ಕೊಲೆ ಪ್ರಕರಣದಲ್ಲಿ ಅಜಿತ್‌ ಜೈಲಿಗೆ ಹೋಗಿದ್ದರು. ಜಾಮೀನ ಮೇಲೆ ಬಿಡುಗಡೆಯಾಗಿದ್ದರು. ಗುರುವಾರ ಮನೆಯಲ್ಲೇ ಇದ್ದ ಅಜಿತ್‌, ಊಟ ಮುಗಿಸಿ ಸಂಜೆ ಮನೆಯಿಂದ ಹೊರಬಂದು, ರಿಸಲ್ದಾರ್‌ ಸ್ಟ್ರೀಟ್‌ನಲ್ಲಿ ನಡೆದು ತೆರಳುತ್ತಿದ್ದರು. ಬೈಕ್‌ನಲ್ಲಿ ಬಂದ ಮೂವರು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿ ಪರಾರಿಯಾಗಿದ್ದಾರೆ ಎಂದು ಮೂಲಗಳು ಹೇಳಿವೆ.

ಕೃತ್ಯ ನಡೆದ ಸ್ಥಳದ ಆಸುಪಾಸಿನ ಸಿಸಿ ಟಿ.ವಿ ಕ್ಯಾಮೆರಾ ದೃಶ್ಯಾವಳಿ ಪರಿಶೀಲಿಸಲಾಗಿದೆ. ಆರೋಪಿಗಳ ಸುಳಿವು ಸಿಕ್ಕಿದ್ದು, ಬಂಧನಕ್ಕೆ ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಇನ್ನು ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಪೋಷಕರು, ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟಿತ್ತು.

‘2022ರಲ್ಲಿ ನಡೆದ ಕೊಲೆ ಪ್ರಕರಣದಲ್ಲಿ ಅಜಿತ್‌ ಜೈಲಿಗೆ ಹೋಗಿದ್ದರು. ಹಳೇ ದ್ವೇಷದಿಂದಲೇ ಕೃತ್ಯ ಎಸಗಲಾಗಿದೆ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ’ ಎಂದು ಪೊಲೀಸರು ಹೇಳಿದರು.

ಸ್ಥಳಕ್ಕೆ ಕೇಂದ್ರ ವಿಭಾಗದ ಡಿಸಿಪಿ ಶೇಖರ್‌ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮೃತದೇಹವನ್ನು ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬಸ್ಥರಿಗೆ ನೀಡಲಾಗಿದೆ ಎಂದು ಪೊಲೀಸರು ಹೇಳಿದರು.

ರಸ್ತೆ ಅಪಘಾತ: ವ್ಯಕ್ತಿ ಸಾವು

ಬೆಂಗಳೂರು: ಹೆಬ್ಬಾಳ ಮೇಲ್ಸೇತುವೆಯಲ್ಲಿ ಬುಧವಾರ ರಾತ್ರಿ ಸಂಭವಿಸಿದ ಅಪಘಾತದಲ್ಲಿ ಬೈಕ್‌ ಸವಾರರೊಬ್ಬರು ಮೃತಪಟ್ಟಿದ್ದಾರೆ.

‘ತುಮಕೂರು ಜಿಲ್ಲೆಯ ಲೋಕೇಶ್‌ (45) ಮೃತಪಟ್ಟವರು. ಅವರು, ಕೋರಮಂಗಲದ ವೆಂಕಟಾಪುರದಲ್ಲಿ ನೆಲೆಸಿದ್ದರು. ವ್ಯಾಪಾರ ವೃತ್ತಿ ಮಾಡುತ್ತಿದ್ದರು. ಕೆಲಸದ ನಿಮಿತ್ತ ಹೆಬ್ಬಾಳಕ್ಕೆ ಬುಧವಾರ ರಾತ್ರಿ ತೆರಳುತ್ತಿದ್ದರು. ಆಗ ನಡೆದ ಅಪಘಾತದಲ್ಲಿ ಮೃತಪಟ್ಟಿದ್ದಾರೆ’ ಎಂದು ಪೊಲೀಸರು ಹೇಳಿದರು


‘ಮೇಲ್ಸೇತುವೆಯಲ್ಲಿ ಹಿಂದಿನಿಂದ ವೇಗವಾಗಿ ಬಂದ ಟೆಂಪೊವೊಂದು ಬೈಕ್‌ಗೆ ಡಿಕ್ಕಿಯಾಗಿದೆ. ಡಿಕ್ಕಿಯ ರಭಸಕ್ಕೆ ಕೆಳಕ್ಕೆ ಬಿದ್ದ ಲೋಕೇಶ್‌ ಅವರ ಮೇಲೆಯೇ ವಾಹನದ ಚಕ್ರ ಹರಿದ ಪರಿಣಾಮ ಗಂಭೀರವಾಗಿ ಗಾಯಗೊಂಡಿದ್ದರು. ಅವರನ್ನು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯದಲ್ಲಿ ಮೃತಪಟ್ಟಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ಚಾಲಕ ವಾಹನ ನಿಲುಗಡೆ ಮಾಡದೇ ಪರಾರಿಯಾಗಿದ್ದು, ಅವರ ಪತ್ತೆಗೆ ಶೋಧ ನಡೆಸಲಾಗುತ್ತಿದೆ. ಸಿಸಿ ಟಿ.ವಿ ಕ್ಯಾಮೆರಾ ಪರಿಶೀಲನೆ ನಡೆಸಲಾಗುತ್ತಿದೆ’ ಎಂದು ಸಂಚಾರ ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಪಿ.ಜಿಗಳಲ್ಲಿ ಸಿಸಿ ಟಿ.ವಿ ಕ್ಯಾಮೆರಾ ಅಳವಡಿಕೆ ಕಡ್ಡಾಯ: ದಯಾನಂದ

ಪ್ರಜಾವಾಣಿ ವಾರ್ತೆ



ಬಿ.ದಯಾನಂದ

ಬೆಂಗಳೂರು: ನಗರದಲ್ಲಿರುವ ಪೇಯಿಂಗ್‌ ಗೆಸ್ಟ್‌ಗಳಲ್ಲಿ(ಪಿ.ಜಿ) ಸಿಸಿ ಟಿ.ವಿ ಕ್ಯಾಮೆರಾ ಅಳವಡಿಕೆ ಕಡ್ಡಾಯ ಎಂದು ನಗರ ಪೊಲೀಸ್‌ ಕಮಿಷನರ್‌ ಬಿ.ದಯಾನಂದ ಅವರು ಸೂಚಿಸಿದ್ದಾರೆ.

ಕೋರಮಂಗಲದ ವಿ.ಆರ್‌. ಬಡಾವಣೆಯ ಭಾರ್ಗವಿ ಪಿ.ಜಿಗೆ ಆರೋಪಿಯೊಬ್ಬ ನುಗ್ಗಿ ಯುವತಿಯ ಕತ್ತು ಸೀಳಿ ಹತ್ಯೆ ಮಾಡಿದ ಪ್ರಕರಣದ ಬಳಿಕ ಎಚ್ಚೆತ್ತಿರುವ ನಗರ ಪೊಲೀಸರು, 13 ಅಂಶಗಳ ಮಾರ್ಗಸೂಚಿ ಪ್ರಕಟಿಸಿದ್ದಾರೆ. ಅನಧಿಕೃತ ಪಿ.ಜಿಗಳ ವಿರುದ್ಧ ಕ್ರಮ ಕೈಗೊಳ್ಳಲು ಮುಂದಾಗಿದ್ದಾರೆ.

ಪೊಲೀಸ್‌ ಕಮಿಷನರ್‌ ಸೂಚನೆ ಮೇರೆಗೆ ಆಯಾ ವ್ಯಾಪ್ತಿಯ ಪಿ.ಜಿಗಳಿಗೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದಾರೆ. ಅಲ್ಲದೇ ಮಾರ್ಗಸೂಚಿ ಪಾಲಿಸುವಂತೆ ಸೂಚನೆ ನೀಡುತ್ತಿದ್ದಾರೆ. ಮಾರ್ಗಸೂಚಿ ಪಾಲಿಸದಿದ್ದರೆ ಪಿ.ಜಿ ಬಂದ್‌ ಮಾಡುವುದಾಗಿ ಎಚ್ಚರಿಕೆ ನೀಡಲಾಗಿದೆ.

ಪಿ.ಜಿಗಳಲ್ಲಿ ಭದ್ರತಾ ಸಿಬ್ಬಂದಿ ನೇಮಿಸಿಕೊಳ್ಳಬೇಕು. ಅಪರಿಚಿತರಿಗೆ ಪ್ರವೇಶ ನೀಡಬಾರದು. ಪಿ.ಜಿಯಲ್ಲಿ ನೆಲೆಸಿರುವವರ ಮಾಹಿತಿ ಸಂಗ್ರಹಿಸಬೇಕು. ದಾಖಲೆಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳಬೇಕು. ಹೊಸದಾಗಿ ಜಾರಿಗೆ ತಂದಿರುವ ತಂತ್ರಾಂಶದಲ್ಲಿ ಎಲ್ಲ ಮಾಹಿತಿ ದಾಖಲಿಸಬೇಕು ಎಂದು ಸೂಚನೆ ನೀಡಿದ್ದಾರೆ.

ಪಿ.ಜಿ ನಿವಾಸಿಗಳ ಸುರಕ್ಷತಾ ಕ್ರಮ ಕೈಗೊಳ್ಳಬೇಕು. ಆಹಾರದ ಗುಣಮಟ್ಟದ ಬಗ್ಗೆ ಗಮನ ಹರಿಸಬೇಕು ಎಂದು ಸೂಚಿಸಿದ್ದಾರೆ.

ತಮ್ಮ ವ್ಯಾಪ್ತಿಯ ಪಿಜಿಗಳಿಗೆ ಪೊಲೀಸರು ಭೇಟಿ ನೀಡಿ, ಪರವಾನಗಿ ಪರಿಶೀಲಿಸಬೇಕು. ಪ್ರತಿ ತಿಂಗಳು ತಮ್ಮ ವ್ಯಾಪ್ತಿಯಲ್ಲಿರುವ ಪಿ.ಜಿಗಳಿಗೆ ಭೇಟಿ ಕಡ್ಡಾಯ. ಅನಧಿಕೃತವೆಂದು ಕಂಡುಬಂದರೆ ಬಿಬಿಎಂಪಿ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು. ಅಕ್ರಮ, ಅನೈತಿಕ ಚಟುವಟಿಕೆ ನಡೆಯುತ್ತಿದ್ದರೆ ಮಾಹಿತಿ ಕಲೆ ಹಾಕಬೇಕು. ಯಾವುದೇ ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕೆ ವಹಿಸಬೇಕು ಎಂದು ಸೂಚನೆ ನೀಡಿದ್ದಾರೆ.

ವ್ಯಕ್ತಿ ನಾಪತ್ತೆ



ಬಾಬು

ಬೆಂಗಳೂರು: ನಗರದ ಕೋಡಿಚಿಕ್ಕನಹಳ್ಳಿಯಿಂದ ವ್ಯಕ್ತಿಯೊಬ್ಬರು ನಾಪತ್ತೆಯಾಗಿದ್ದು, ಅವರ ಸುಳಿವು ಸಿಕ್ಕಿದರೆ ಮಾಹಿತಿ ನೀಡುವಂತೆ ಕುಟುಂಬಸ್ಥರು ಮನವಿ ಮಾಡಿದ್ದಾರೆ.

ಬಾಬು ಅಲಿಯಾಸ್‌ ವಿಜಯ ಕುಮಾರ್‌(67) ನಾಪತ್ತೆಯಾದವರು.

ಮಲಯಾಳಿ ಭಾಷೆ ಮಾತನಾಡುತ್ತಾರೆ. 5.4 ಅಡಿ ಎತ್ತರವಿದ್ದಾರೆ. ಬೂದು ಬಣ್ಣದ ಟಿ–ಶರ್ಟ್‌ ಧರಿಸಿದ್ದು ಬುಧವಾರ ಬೆಳಿಗ್ಗೆ 7.20ರ ಸುಮಾರಿಗೆ ಕೋಡಿಚಿಕ್ಕನಹಳ್ಳಿ ಮನೆಯಿಂದ ಹೊರಗೆ ತೆರಳಿದ್ದರು. ಅದಾದ ಮೇಲೆ ಬೆಳಿಗ್ಗೆ 9 ಗಂಟೆ ಸುಮಾರಿಗೆ ದೇವರಚಿಕ್ಕನಹಳ್ಳಿ ವ್ಯಾಪ್ತಿಯಲ್ಲಿ ಇದ್ದರು. ನಂತರ, ಅವರ ಸುಳಿವು ಸಿಕ್ಕಿಲ್ಲ. ಯಾರಾದರೂ ಬಾಬು ಅವರನ್ನು ನೋಡಿದ್ದರೆ ಆರ್‌. ಕೃಷ್ಣಕುಮಾರ್‌ ಅವರ ಮೊಬೈಲ್‌ ಸಂಖ್ಯೆ 9995819370/9446377370 ಸಂಪರ್ಕಿಸಿ ಮಾಹಿತಿ ನೀಡುವಂತೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

60 ರಾಷ್ಟ್ರಗಳಿಗೆ ದಾಖಲೆ ಮಾವು ರಫ್ತು

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರ-ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಸಕ್ತ ಸಾಲಿನಲ್ಲಿ 822 ಮೆಟ್ರಿಕ್‌ ಟನ್‌ ಮಾವು ರಫ್ತು ಮಾಡಿ ಹೊಸ ದಾಖಲೆ ಬರೆದಿದೆ.

ಕಳೆದ ವರ್ಷ 685 ಮೆಟ್ರಿಕ್‌ ಟನ್‌ ಮಾವು ರಫ್ತು ಮಾಡಲಾಗಿತ್ತು. ಈ ಬಾರಿ ಮಾವು ರಫ್ತು ಶೇ 20ರಷ್ಟು ಏರಿಕೆಯಾಗಿದೆ. ಈ ಬಾರಿ ಒಟ್ಟು 27 ಲಕ್ಷ ಮಾವಿನ ಹಣ್ಣುಗಳನ್ನು ವಿದೇಶಕ್ಕೆ ರಫ್ತು ಮಾಡಲಾಗಿದೆ. 60ಕ್ಕೂ ಹೆಚ್ಚು ರಾಷ್ಟ್ರಗಳಿಗೆ ಇಲ್ಲಿಂದ ಮಾವು ರಫ್ತು ಮಾಡಲಾಗಿದ್ದು, ಅಮೆರಿಕಕ್ಕೆ ಹೆಚ್ಚು ಮಾವು ಕಳಿಸಲಾಗಿದೆ.

ರಾಜ್ಯದ ಕೃಷಿ ಉತ್ಪನ್ನಗಳು ಬೆಂಗಳೂರು ವಿಮಾನ ನಿಲ್ದಾಣ ಸಮರ್ಥವಾಗಿ ಜಾಗತಿಕ ಮಾರುಕಟ್ಟೆ ತಲುಪಿಸುತ್ತಿದೆ ಎಂದು ವಿಮಾನ ನಿಲ್ದಾಣದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸತ್ಯಕಿ ರಘುನಾಥ್‌ ತಿಳಿಸಿದ್ದಾರೆ.



ಮಾವಿನ ಹಣ್ಣಿನ ಬಾಕ್ಸ್‌

ಪರಿಶಿಷ್ಟರ ಮೀಸಲಾತಿ: ‘ಸುಪ್ರೀಂ’ ತೀರ್ಪು ಸ್ವಾಗತಿಸಿದ ಚಿ.ನಾ. ರಾಮು

ಬೆಂಗಳೂರು: ‘ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿಯಲ್ಲಿ ಕೆನೆಪದರ ನೀತಿ ಅಳವಡಿಸುವಂತೆ ಸುಪ್ರೀಂ ಕೋರ್ಟ್‌ ನೀಡಿರುವ ತೀರ್ಪು, ದಲಿತರಲ್ಲೇ ದನಿ ಇಲ್ಲದವರಿಗೆ ಹೊಸಬೆಳಕು ನೀಡಿದೆ’ ಎಂದು ಅಖಿಲ ಭಾರತ ದಲಿತ ಕ್ರಿಯಾ ಸಮಿತಿಯ ಅಧ್ಯಕ್ಷ ಚಿ.ನಾ.ರಾಮು ಹೇಳಿದ್ದಾರೆ.

‘ಕೆನೆಪದರ ನೀತಿ ಜಾರಿಗಾಗಿ ಸುಪ್ರೀಂ ಕೋರ್ಟ್‌ ಮುಂದೆ ಹಲವು ಅರ್ಜಿಗಳು ಸಲ್ಲಿಕೆಯಾಗಿದ್ದವು. ಅವುಗಳಲ್ಲಿ ನಮ್ಮದು ಪ್ರಮುಖ ಅರ್ಜಿ. ಮೀಸಲಾತಿಯು ಕೆಲವು ಸಮುದಾಯಗಳಿಗಷ್ಟೇ ದೊರೆತು, ದಲಿತರಲ್ಲೇ ಹಲವರು ಹಿಂದುಳಿದಿದ್ದಾರೆ. ಮೀಸಲಾತಿಯ ಪ್ರಯೋಜನ ದೊರೆತವರು ಮತ್ತು ಮೀಸಲಾತಿ ಸಿಗದೇ ಇರುವವರ ಮಧ್ಯೆ ಅಂತರ ಇದೆ ಎಂಬುದನ್ನು ಅಂಕಿ–ಅಂಶ ಸಮೇತ ಸುಪ್ರೀಂ ಕೋರ್ಟ್‌ಗೆ ವಿವರಿಸಿದ್ದೆವು’ ಎಂದಿದ್ದಾರೆ.

‘ಪರಿಶಿಷ್ಟರ ಮೀಸಲಾತಿಯಲ್ಲೂ ಕೆನೆಪದರ ನೀತಿಯನ್ನು ಜಾರಿಗೆ ತಂದು, ಒಂದು ತಲೆಮಾರಿಗಷ್ಟೇ ಮೀಸಲಾತಿ ದೊರೆಯುವಂತೆ ಮಾಡಬೇಕು. ಪರಿಶಿಷ್ಟರಲ್ಲಿ ಕೆನೆಪದರವನ್ನು ಗುರುತಿಸಲು, ಒಬಿಸಿಯಲ್ಲಿ ಕೆನೆಪದರ ಗುರುತಿಸುವುದಕ್ಕಿಂತ ಭಿನ್ನವಾದ ಮಾನದಂಡವನ್ನು ರೂಪಿಸಬೇಕು ಎಂದು ನ್ಯಾಯಮೂರ್ತಿ ಗವಾಯಿ ಅವರು ತೀರ್ಪು ನೀಡಿದ್ದಾರೆ. ಈ ತೀರ್ಪು ನಮ್ಮ ಹೋರಾಟಕ್ಕೆ ಸಿಕ್ಕ ಜಯ’ ಎಂದಿದ್ದಾರೆ.

ವಾಣಿಜ್ಯ ಸಂಕೀರ್ಣ ನಿರ್ಮಾಣ; ಪರಿಶೀಲಿಸಿ ಕ್ರಮ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಎಚ್‌ಎಂಟಿ ಬಡಾವಣೆಯಲ್ಲಿ ಸಾರ್ವಜನಿಕ ಸೌಲಭ್ಯಕ್ಕಾಗಿ ಮೀಸಲಿಟ್ಟ ಜಾಗದಲ್ಲಿ ಯಾವ ರೀತಿಯ ಅಭಿವೃದ್ಧಿ ಕಾರ್ಯ ಅನುಕೂಲವಾಗುತ್ತದೆ ಎಂಬುದನ್ನು ಪರಿಶೀಲಿಸಿ, ಕ್ರಮ ಕೈಗೊಳ್ಳಲಾಗುತ್ತದೆ’ ಎಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎನ್‌.ಎ.ಹ್ಯಾರಿಸ್‌ ಹೇಳಿದರು.

ಚೊಕ್ಕಸಂದ್ರ ವಾರ್ಡ್‌ನ ಎಚ್‌.ಎಂ.ಟಿ ಬಡಾವಣೆಯಲ್ಲಿರುವ 3 ಎಕರೆ 23 ಗುಂಟೆ ಖಾಲಿ ಜಾಗವನ್ನು ಗುರುವಾರ ಪರಿಶೀಲಿಸಿ ಅವರು ಮಾತನಾಡಿದರು.

'ಶಾಸಕ ಮುನಿರಾಜು ಅವರ ಮನವಿ ಮೇರೆಗೆ ಸ್ಥಳ ಪರಿಶೀಲಿಸಲಾಗಿದೆ. ಅವರ ಬೇಡಿಕೆಯಂತೆ ವಾಣಿಜ್ಯ ಸಂಕೀರ್ಣ ನಿರ್ಮಾಣ ಮಾಡುವ ಕುರಿತು ಯೋಚಿಸಲಾಗುವುದು’ ಎಂದು ತಿಳಿಸಿದರು.

ಶಾಸಕ ಎಸ್‌. ಮುನಿರಾಜು ಮಾತನಾಡಿ 'ಈ ಬಡಾವಣೆ ನಿರ್ಮಾಣ ಮಾಡಿದಾಗ 3 ಎಕರೆ 23 ಗುಂಟೆ ಜಾಗವನ್ನು ವಾಣಿಜ್ಯ ಸಂಕೀರ್ಣ ನಿರ್ಮಾಣಕ್ಕಾಗಿ ಮೀಸಲಿಡಲಾಗಿತ್ತು. ಆದರೆ, ಅದು ಸಾಧ್ಯವಾಗಿರಲಿಲ್ಲ. ಇತ್ತೀಚಿಗೆ ಸಚಿವ ಡಿ.ಕೆ ಶಿವಕುಮಾರ್‌ ಅವರು ಜನಸ್ಪಂದನಾ ಕಾರ್ಯಕ್ರಮ ನಡೆಸಿದಾಗ, ಈ ಬೇಡಿಕೆಯನ್ನು ಇಟ್ಟಿದ್ದೆ. ನಂತರ ಶಾಸಕರ ಸಭೆಯಲ್ಲೂ ವಿಷಯ ಪ್ರಸ್ತಾಪಿಸಿದ್ದೆ, ಅದಕ್ಕಾಗಿ ಅವರು ಜಾಗ ಪರಿಶೀಲನೆಗೆ ಕಳುಹಿಸಿದ್ದಾರೆ' ಎಂದರು.

ಬಿಡಿಎ ಆಯುಕ್ತ ಎನ್‌.ಜಯರಾಮ್‌, ಎಂಜಿನಿಯರ್‌ ನಿರಂಜನ್‌, ಬಿಡಿಎ ಅಧಿಕಾರಿ ನಾರಾಯಣಗೌಡ, ಸ್ಥಳೀಯರು ಹಾಜರಿದ್ದರು.



ಚೊಕ್ಕಸಂದ್ರ ವಾರ್ಡ್‌ನ ಎಚ್‌.ಎಂ.ಟಿ ಬಡಾವಣೆಯಲ್ಲಿ ಸಾರ್ವಜನಿಕ ಸೌಲಭ್ಯಕ್ಕಾಗಿ ಮೀಸಲಿಟ್ಟಿರುವ ಜಾಗದ ನಕ್ಷೆಯನ್ನು ಬಿಡಿಎ ಅಧ್ಯಕ್ಷ ಎನ್‌.ಎ.ಹ್ಯಾರಿಸ್‌ ಮತ್ತು ಶಾಸಕ ಎಸ್‌. ಮುನಿರಾಜು ವೀಕ್ಷಿಸಿದರು.

ನೈರುತ್ಯ ರೈಲ್ವೆ: ಜುಲೈನಲ್ಲಿ ₹286.28 ಕೋಟಿ ಆದಾಯ

ಹುಬ್ಬಳ್ಳಿ: ನೈರುತ್ಯ ರೈಲ್ವೆಯು ಕಳೆದ ಜುಲೈ ತಿಂಗಳಲ್ಲಿ ವಿವಿಧ ವಿಭಾಗಗಳಲ್ಲಿ ಗಣನೀಯ ಬೆಳವಣಿಗೆ ಸಾಧಿಸಿದೆ. ಪ್ರಯಾಣಿಕರಿಂದ ₹286.28 ಕೋಟಿ ಆದಾಯ ಗಳಿಸಿದೆ. ಇದು ಹಿಂದಿನ ವರ್ಷದ ₹266.27 ಕೋಟಿಗೆ ಹೋಲಿಸಿದರೆ ಶೇ 7.51 ರಷ್ಟು ಹೆಚ್ಚಳವಾಗಿದೆ.

ಪಾರ್ಸಲ್‌ ಆದಾಯವು ₹14.19 ಕೋಟಿಗೆ ತಲುಪಿದ್ದು, ಹಿಂದಿನ ವರ್ಷ ₹12.83 ಕೋಟಿ ಗಳಿಸಿತ್ತು. ಶೇ 10.60ರಷ್ಟು ಏರಿಕೆಯಾಗಿದೆ. ಹೆಚ್ಚುವರಿಯಾಗಿ, ಇತರ ಕೋಚಿಂಗ್‌ ಆದಾಯವು ಕಳೆದ ವರ್ಷದ ₹ 23.67 ಕೋಟಿಯಿಂದ ₹25.01 ಕೋಟಿಗೆ ಏರಿದೆ. ಶೇ 5.66ರಷ್ಟು ವೃದ್ಧಿಯಾಗಿದೆ.

ಈ ಅವಧಿಯಲ್ಲಿ 13.25 ಮಿಲಿಯನ್‌ (ದಶಲಕ್ಷ) ಜನರು ಪ್ರಯಾಣಿಸಿದ್ದಾರೆ. ಹಿಂದಿನ ವರ್ಷದಲ್ಲಿ 13 ದಶಲಕ್ಷ ಜನರು ಪ್ರಯಾಣಿಸಿದ್ದರು. ಶೇ 1.92 ವೃದ್ಧಿಯಾಗಿದೆ.

ಕೇಜ್ರಿವಾಲ್ ಆಪ್ತನಿಂದ ಎಎಪಿ ಸಂಸದೆ ಸ್ವಾತಿ ಮಾಲಿವಾಲ್ ಮೇಲೆ ನಡೆದಿದ್ದ ಹಲ್ಲೆ ಪ್ರಕರಣ

ಬಿಭವ್‌ಕುಮಾರ್‌ಗೆ 'ಸುಪ್ರೀಂ' ಛೀಮಾರಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಆಮ್ ಆದ್ಮಿ ಪಕ್ಷದ (ಎಎಪಿ) ರಾಜ್ಯಸಭಾ ಸಂಸದೆ ಸ್ವಾತಿ ಮಾಲಿವಾಲ್ ಮೇಲೆ ನಡೆದಿದೆ ಎನ್ನಲಾದ ಹಲ್ಲೆ ಪ್ರಕರಣದ ಆರೋಪಿಯಾಗಿರುವ, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಆಪ್ತ ಬಿಭವ್ ಕುಮಾರ್ ಅವರಿಗೆ ಸುಪ್ರೀಂ ಕೋರ್ಟ್ ಗುರುವಾರ ಛೀಮಾರಿ ಹಾಕಿದೆ.

ದೆಹಲಿ ಮುಖ್ಯಮಂತ್ರಿಯ ಅಧಿಕೃತ ನಿವಾಸದಲ್ಲಿ ಈ ಘಟನೆ ನಡೆದಿದೆ ಎನ್ನಲಾಗಿದ್ದು, ಇದು ಆಘಾತಕಾರಿ ಎಂದೂ ಹೇಳಿದೆ.

ನ್ಯಾಯಮೂರ್ತಿಗಳಾದ ಸೂರ್ಯಕಾಂತ, ದೀಪಂಕರ್ ದತ್ತಾ ಹಾಗೂ ಉಜ್ಜಲ್ ಭುಯಾನ್ ಅವರಿದ್ದ ನ್ಯಾಯಪೀಠ, 'ಈ ಘಟನೆ ಕುರಿತಂತೆ ಬಿಭವ್ ಕುಮಾರ್ ಅವರಿಗೆ ನಾಚಿಕೆಯಾದಂತಿಲ್ಲ ಮತ್ತು ಅಧಿಕಾರ ಅವರ ನೆತ್ತಿಗೇರಿದಂತೆ ಕಾಣುತ್ತದೆ' ಎಂದು ಮೌಖಿಕ ಅಭಿಪ್ರಾಯ ವ್ಯಕ್ತಪಡಿಸಿದೆ.

ಜಾಮೀನು ಕೋರಿ ಬಿಭವ್ ಕುಮಾರ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಪೀಠ ನಡೆಸಿತು.

'ಮುಖ್ಯಮಂತ್ರಿಗಳ ನಿವಾಸ ಖಾಸಗಿ ಬಂಗಲೆಯೇ? ಇಂತಹ ಗೂಂಡಾ ಪ್ರವೃತ್ತಿಯ ವ್ಯಕ್ತಿ ಮುಖ್ಯಮಂತ್ರಿಗಳ ನಿವಾಸದಲ್ಲಿ ಕೆಲಸ ಮಾಡಬಹುದೇ' ಎಂದು ಬಿಭವ್‌ಕುಮಾರ್ ಪರ ಹಾಜರಿದ್ದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ ಅವರನ್ನು ಪೀಠ ಪ್ರಶ್ನಿಸಿತು.

ಆಗ, 'ಇದು ಕೊಲೆ ಪ್ರಕರಣವಲ್ಲ. ದೂರುದಾರರಿಗೆ ಸಣ್ಣ ಗಾಯಗಳಾಗಿವೆ.



ಮುಖ್ಯಾಂಶಗಳು

- ಜಾಮೀನು ಕೋರಿ ಬಿಭವ್ ಕುಮಾರ್ ಸಲ್ಲಿಸಿದ್ದ ಅರ್ಜಿ ವಿಚಾರಣೆ
- ಗೂಂಡಾ ಪ್ರವೃತ್ತಿಯ ವ್ಯಕ್ತಿ ಮುಖ್ಯಮಂತ್ರಿ ನಿವಾಸದಲ್ಲಿ ಕೆಲಸ ಮಾಡಬಹುದೇ?
- ಮುಖ್ಯಮಂತ್ರಿಗಳ ನಿವಾಸ ಖಾಸಗಿ ಬಂಗಲೆಯೇ: ನ್ಯಾಯಪೀಠ ಪ್ರಶ್ನೆ

ವಿಚಾರಣಾ ನ್ಯಾಯಾಲಯವೇ ಅರ್ಜಿದಾರರಿಗೆ ಜಾಮೀನು ನೀಡಬಹುದಿತ್ತು' ಎಂದು ಸಿಂಘ್ವಿ ಪೀಠಕ್ಕೆ ತಿಳಿಸಿದರು.

'ಎಫ್‌ಐಆರ್ ದಾಖಲಿಸುವಲ್ಲಿ ಕೂಡ ವಿಳಂಬವಾಗಿದೆ. ಮೇ 13ರಂದು ಘಟನೆ ನಡೆದಿದ್ದರೂ, ಮೇ 16ರಂದು ಎಫ್‌ಐಆರ್ ದಾಖಲಿಸಲಾಗಿದೆ' ಎಂದರು.

'ಎಫ್‌ಐಆರ್ ದಾಖಲಿಸಿದ ಸನ್ನಿವೇಶವೂ ವಿಚಿತ್ರವಾಗಿದೆ. ಸ್ವಾತಿ ಮಾಲಿವಾಲ್ ಅವರು ಘಟನೆ ನಡೆದ ದಿನವೇ ಪೊಲೀಸ್ ಠಾಣೆಗೆ ಹೋಗಿದ್ದರೂ ಎಫ್‌ಐಆರ್ ದಾಖಲಿಸಲಿಲ್ಲ. ಮೂರು ದಿನಗಳ ನಂತರ ದಾಖಲಿಸಿದ್ದಾರೆ' ಎಂದು ಸಿಂಘ್ವಿ ಹೇಳಿದರು.

'ಇದು ದೊಡ್ಡ ಅಥವಾ ಸಣ್ಣ ಗಾಯಗಳಿಗೆ ಸಂಬಂಧಿಸಿದ್ದಲ್ಲ' ಎಂದು ನ್ಯಾಯಮೂರ್ತಿಗಳು ಹೇಳಿದರು.

ಎಫ್‌ಐಆರ್‌ನಲ್ಲಿ ವಿವರಗಳನ್ನು ಉಲ್ಲೇಖಿಸಿದ ಪೀಠ, 'ಅರ್ಜಿದಾರ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಅಲ್ಲ. ಘಟನೆ ನಡೆದ ದಿನ ಆತ ಸರ್ಕಾರಿ ನೌಕರನೇ ಆಗಿದ್ದ. ಅಧಿಕಾರದ ಮದ ನೆತ್ತಿಗೇರಿತ್ತು ಎಂದು ಅವರು ಭಾವಿಸಿದ್ದರೆ' ಎಂದು ಪ್ರಶ್ನಿಸಿತು.

'ಈ ಎಲ್ಲ ವಿವರಗಳನ್ನು ಪರಿಶೀಲಿಸಲು ಇದು ಕೊಲೆ ಪ್ರಕರಣ ಅಲ್ಲ. ಇದು ವಿಚಾರಣಾ ನ್ಯಾಯಾಲಯದ ಕೆಲಸ. ಎಫ್‌ಐಆರ್‌ನಲ್ಲಿರುವುದೇ ಅಂತಿಮ ಸತ್ಯ ಎಂಬಂತೆ ನ್ಯಾಯಾಲಯ ಹೇಳುತ್ತಿದೆ' ಎಂದು ಸಿಂಘ್ವಿ ಪ್ರತಿಕ್ರಿಯಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಪೀಠ, 'ನಿಮ್ಮ ಆಂತರಿಕ ವಿಚಾರ ಮತ್ತು ಇತರ ರಾಜಕೀಯ ನಮಗೆ ಬೇಕಿಲ್ಲ. ಅಪರಾಧಕ್ಕೆ ಸಂಬಂಧಿಸಿದ ನ್ಯಾಯ ಪ್ರಕ್ರಿಯೆ ಮತ್ತು ಎಫ್‌ಐಆರ್‌ನಲ್ಲಿನ ಮಾಹಿತಿ ಆಧಾರದಲ್ಲಿ ಮಾತನಾಡುತ್ತೇವೆ' ಎಂದು ನ್ಯಾಯಮೂರ್ತಿಗಳು ಹೇಳಿದರು.

ಆರೋಪಪಟ್ಟಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುವಂತೆ ಅರ್ಜಿದಾರನಿಗೆ ಸೂಚಿಸಿದ ನ್ಯಾಯಪೀಠ, ವಿಚಾರಣೆಯನ್ನು ಬುಧವಾರಕ್ಕೆ ಮುಂದೂಡಿತು.

ಜಾಮೀನು ಅರ್ಜಿಗೆ ಪ್ರತಿಕ್ರಿಯಿಸುವಂತೆ ದೆಹಲಿ ಪೊಲೀಸರಿಗೂ ಪೀಠ ನೋಟಿಸ್ ಜಾರಿ ಮಾಡಿತು.

ದಾಖಲೆಗಳ ದೃಢೀಕರಣ ಇಲ್ಲದೆ ನೇಮಕಾತಿ ಸರಿಯೇ: 'ಸುಪ್ರೀಂ' ಪ್ರಶ್ನೆ

ನವದೆಹಲಿ(ಪಿಟಿಐ): ದಾಖಲೆಗಳನ್ನು ಸರಿಯಾಗಿ ಪರಿಶೀಲನೆ ಮಾಡದೇ ಹಾಗೂ ದೃಢೀಕರಿಸದೇ ಒಬ್ಬ ವ್ಯಕ್ತಿಯನ್ನು ಸರ್ಕಾರಿ ಹುದ್ದೆಗೆ ನೇಮಕ ಮಾಡಲು ಹೇಗೆ ಸಾಧ್ಯ ಎಂದು ಸುಪ್ರೀಂ ಕೋರ್ಟ್ ಗುರುವಾರ ಪ್ರಶ್ನಿಸಿದೆ.

ನಕಲಿ ದಾಖಲೆಗಳನ್ನು ಆಧರಿಸಿ ರೈಲ್ವೆ ಇಲಾಖೆಯಲ್ಲಿ ಕೆಲವರನ್ನು ನೇಮಕ ಮಾಡಿಕೊಂಡಿರುವ ಕುರಿತು ಸುಪ್ರೀಂ ಕೋರ್ಟ್ ಅಚ್ಚರಿಯನ್ನೂ ವ್ಯಕ್ತಪಡಿಸಿದೆ.

ಪೂರ್ವ ರೈಲ್ವೆಯಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಗೊಂಡಿದ್ದ ಕೆಲ ನೌಕರರನ್ನು ವಜಾಗೊಳಿಸಿದ್ದ ಪ್ರಕರಣದ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಜೆ.ಕೆ.ಮಾಹೇಶ್ವರಿ ಮತ್ತು ಸಂಜಯ್ ಕರೋಲ್ ಅವರು ಇದ್ದ ಪೀಠ ನಡೆಸಿತು.

ರೈಲ್ವೆಯು ದೇಶದ ಅತಿದೊಡ್ಡ ಉದ್ಯೋಗದಾತ ಇಲಾಖೆ. ಇಂತಹ ನೇಮಕಾತಿಗಳ ಸಂದರ್ಭಗಳಲ್ಲಿ ಅಭ್ಯರ್ಥಿಗಳ ದಾಖಲೆಗಳನ್ನು ಸಮರ್ಪಕವಾಗಿ ಪರಿಶೀಲನೆ ನಡೆಸಬೇಕು ಎಂದೂ ನ್ಯಾಯಪೀಠ ಹೇಳಿದೆ.

'ಅನುಕಂಪದ ಆಧಾರದ ನೌಕರಿ ಹಕ್ಕು ಆಗುವುದಿಲ್ಲ. ಈ ಆಧಾರದಲ್ಲಿ ನೌಕರಿ ಕೇಳುವವರು, ಮೃತ ವ್ಯಕ್ತಿಯೊಂದಿಗಿನ ತಮ್ಮ ಸಂಬಂಧವನ್ನು ದೃಢೀಕರಿಸಬೇಕು ಹಾಗೂ ನೇಮಕಾತಿಗೆ ತಾನು ಯಾಕೆ ಅರ್ಹ ಎಂಬುದನ್ನು ಸಮರ್ಥಿಸಬೇಕು' ಎಂದು ನ್ಯಾಯಪೀಠ ಹೇಳಿದೆ.

ಈ ಪ್ರಕರಣದಲ್ಲಿ ಕಲ್ಕತ್ತ ಹೈಕೋರ್ಟ್‌ನ ಆದೇಶವನ್ನು ರದ್ದುಪಡಿಸಿದ ನ್ಯಾಯಪೀಠ, ನೌಕರರನ್ನು ಕೆಲಸದಿಂದ ವಜಾಗೊಳಿಸಿದ್ದಕ್ಕೆ ಸಂಬಂಧಿಸಿ ಸಿಎಟಿ ಹೊರಡಿಸಿದ್ದ ಆದೇಶವನ್ನು ಎತ್ತಿ ಹಿಡಿಯಿತು.

ತಮ್ಮನ್ನು ನೌಕರಿಯಿಂದ ವಜಾಗೊಳಿಸಿದ್ದನ್ನು ಪ್ರಶ್ನಿಸಿ, ಅನುಕಂಪದ ಆಧಾರದಲ್ಲಿ ನೇಮಕಗೊಂಡಿದ್ದವರು ಕೇಂದ್ರೀಯ ಆಡಳಿತಾತ್ಮಕ ನ್ಯಾಯಮಂಡಳಿಯ (ಸಿಎಟಿ) ಕಲ್ಕತ್ತ ಪೀಠಕ್ಕೆ ಅರ್ಜಿ ಸಲ್ಲಿಸಿದ್ದರು.

ಸಿಎಟಿ ಪೀಠವು ನೌಕರರ ಅರ್ಜಿಯನ್ನು ವಜಾಗೊಳಿಸಿತ್ತು. ನಂತರ ನೌಕರರು ಕಲ್ಕತ್ತ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ಈ ಕುರಿತು 2012ರಲ್ಲಿ ತೀರ್ಪು ನೀಡಿದ್ದ ಹೈಕೋರ್ಟ್, ನ್ಯಾಯಮಂಡಳಿಯ ಆದೇಶವನ್ನು ರದ್ದುಪಡಿಸಿತ್ತು.

ಕಲ್ಕತ್ತ ಹೈಕೋರ್ಟ್‌ನ ಆದೇಶ ಪ್ರಶ್ನಿಸಿ ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು.

ಸಿಯುಇಟಿ: ಖಾಲಿ ಸೀಟುಗಳಿಗೆ ವಿ.ವಿಗಳೇ ಪ್ರವೇಶ ಪರೀಕ್ಷೆ ನಡೆಸಬಹುದು–ಯುಜಿಸಿ

ನವದೆಹಲಿ (ಪಿಟಿಐ): ಕೇಂದ್ರೀಯ ವಿಶ್ವವಿದ್ಯಾಲಯಗಳ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಯುಇಟಿ) ಮೂಲಕ ಹಂಚಿಕೆ ಮಾಡಿದ ಬಳಿಕ, ಖಾಲಿ ಉಳಿಯುವ ಸೀಟುಗಳ ಭರ್ತಿಗೆ ವಿಶ್ವವಿದ್ಯಾಲಯಗಳು ತಮ್ಮದೇ ಆದ ಪ್ರವೇಶ ಪರೀಕ್ಷೆ ನಡೆಸಬಹುದು ಎಂದು ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಹೇಳಿದೆ.

ಮೂರರಿಂದ ನಾಲ್ಕು ಸುತ್ತಿನ ಕೌನ್ಸೆಲಿಂಗ್ ಬಳಿಕವೂ ಕೆಲ ವಿ.ವಿಗಳಲ್ಲಿ ಸೀಟುಗಳು ಖಾಲಿ ಇರುವುದು ಯುಜಿಸಿ ಗಮನಕ್ಕೆ ಬಂದಿದೆ. ಶೈಕ್ಷಣಿಕ ವರ್ಷ ಪೂರ್ತಿ ಸೀಟುಗಳನ್ನು ಖಾಲಿ ಇಡುವುದು ಸರಿಯಲ್ಲ. ಇದರಿಂದ ವಿ.ವಿಗಳಲ್ಲಿ ಉನ್ನತ ವ್ಯಾಸಂಗ ಮಾಡಲು ಬಯಸುವ ಅನೇಕ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ನಿರಾಕರಿಸಿದಂತಾಗುತ್ತದೆ ಎಂದು ಹೇಳಿದೆ.

ಕೋರ್ಸ್‌ಗಳಿಗೆ ದಾಖಲಾತಿ ಮಾಡಿಕೊಳ್ಳುವಾಗ ಪ್ರವೇಶ ಪರೀಕ್ಷೆ ಅಥವಾ ಅರ್ಹತಾ ಪರೀಕ್ಷೆಯ ಅಂಕಗಳೇ ಮಾನದಂಡವಾಗಿರುತ್ತದೆ ಎಂದು ಯುಜಿಸಿ ಅಧ್ಯಕ್ಷ ಎಂ. ಜಗದೀಶ್ ಕುಮಾರ್ ಗುರುವಾರ ತಿಳಿಸಿದ್ದಾರೆ.

'ರಾಜ್ಯಕ್ಕೆ ಕೇಳಿದಷ್ಟು ಅಕ್ಕಿ ಕೊಡಲು ಸಿದ್ಧ'

ನವದೆಹಲಿ: ಕರ್ನಾಟಕ ಸರ್ಕಾರ ಸೇರಿ ಯಾವುದೇ ಸರ್ಕಾರ ಕೇಳಿದಷ್ಟು ಅಕ್ಕಿ ಕೊಡಲು ಕೇಂದ್ರ ಸರ್ಕಾರ ಸಿದ್ಧವಿದೆ ಎಂದು ಕೇಂದ್ರ ಆಹಾರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಗುರುವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಕಳೆದ ವರ್ಷ ವಿಶ್ವದಾದ್ಯಂತ ಬರಗಾಲ ಇತ್ತು. ಸಾಕಷ್ಟು ಅಕ್ಕಿ ದಾಸ್ತಾನು ಇರಲಿಲ್ಲ. ಈ ಸಲ ಅಂತಹ ಸಮಸ್ಯೆ ಇಲ್ಲ. ಪ್ರತಿ ಕೆ.ಜಿ. ಅಕ್ಕಿಗೆ ಕಳೆದ ವರ್ಷ ₹34 ನಿಗದಿ ಮಾಡಲಾಗಿತ್ತು. ಈಗ ₹28 ನಿಗದಿಪಡಿಸಲಾಗಿದೆ. ರಾಜ್ಯ ಸರ್ಕಾರ ಈ ಸಂಬಂಧ ಪ್ರಸ್ತಾವನೆ ಸಲ್ಲಿಸಬೇಕು. ರಾಜ್ಯಗಳು ಇ–ಹರಾಜಿನಲ್ಲಿ ಭಾಗವಹಿಸದೆಯೇ ನೇರವಾಗಿ ಭಾರತೀಯ ಆಹಾರ ನಿಗಮದಿಂದ ಖರೀದಿ ಮಾಡಬಹುದು' ಎಂದರು.

ರಾಹುಲ್ ಗಾಂಧಿ ಹೊಲಿದ ಚಪ್ಪಲಿಗೆ ಬೇಡಿಕೆ • ಗಾಜಿನ ಚೌಕಟ್ಟು ಹಾಕಿ ಕಾಪಿಡುವೆ–ರಾಮ್ ಚೇತ್

₹10 ಲಕ್ಷ ಕೊಟ್ಟರೂ ಮಾರಲು ನಿರಾಕರಿಸಿದ ಚಮ್ಮಾರ

ಸುಲ್ತಾನಪುರ(ಉತ್ತರ ಪ್ರದೇಶ)(ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ತನ್ನ ಅಂಗಡಿಗೆ ಭೇಟಿ ನೀಡಿದ್ದ ವೇಳೆ ಹೊಲಿದಿದ್ದ ಚಪ್ಪಲಿಗಳನ್ನು ₹10 ಲಕ್ಷ ಕೊಟ್ಟು ಖರೀದಿಸಲು ಕೆಲವರು ಮುಂದೆ ಬಂದಿದ್ದರೂ, ಅವುಗಳನ್ನು ಮಾರಾಟ ಮಾಡುವುದಕ್ಕೆ ಇಲ್ಲಿನ ಚಮ್ಮಾರ ರಾಮ್ ಚೇತ್ ನಿರಾಕರಿಸಿದ್ದಾರೆ.

'ರಾಹುಲ್ ಗಾಂಧಿ ಹೊಲಿದಿರುವ ಈ ಚಪ್ಪಲಿಗಳನ್ನು ನನ್ನ ಅದೃಷ್ಟದ ಪಾದರಕ್ಷೆಗಳೆಂದು ಭಾವಿಸಿ, ಅವುಗಳಿಗೆ ಗಾಜಿನ ಚೌಕಟ್ಟು ಹಾಕಿಸಿ, ಜೋಪಾನವಾಗಿಡುತ್ತೇನೆ' ಎಂದು ರಾಮ್ ಚೇತ್ ಹೇಳಿದ್ದಾರೆ.

ರಾಮ್ ಚೇತ್ ಅವರು ಈಗ ತಮ್ಮೂರಿನಲ್ಲಿ 'ಸೆಲೆಬ್ರಿಟಿ' ಆಗಿದ್ದಾರೆ. ಅವರ ಅಂಗಡಿಗೆ ರಾಹುಲ್ ಗಾಂಧಿ ಭೇಟಿ ನೀಡಿದ್ದೇ ಇದಕ್ಕೆ ಕಾರಣ.

ಸುಲ್ತಾನಪುರದ ಹೊರವಲಯದ ವಿಧಾಯಕನಗರದಲ್ಲಿ ರಾಮ್ ಚೇತ್ ಪುಟ್ಟ ಅಂಗಡಿ ಇಟ್ಟುಕೊಂಡಿದ್ದಾರೆ. ಜುಲೈ 26ರಂದು ಆ ಮಾರ್ಗವಾಗಿ ತೆರಳುತ್ತಿದ್ದ ವೇಳೆ, ರಾಹುಲ್ ಗಾಂಧಿ ಅವರು ರಾಮ್ ಚೇತ್ ಅಂಗಡಿಗೆ ಭೇಟಿ ನೀಡಿ, ಅವರ ಕುಟುಂಬ ಹಾಗೂ ಕಷ್ಟಗಳ ಕುರಿತು ಮಾತನಾಡಿದ್ದರು.

ಅದೇ ವೇಳೆ, ಚಪ್ಪಲಿಯನ್ನು ಹೊಲಿದಿದ್ದ ರಾಹುಲ್ ಗಾಂಧಿ, ಶೂ ಕೂಡ ಸಿದ್ಧಪಡಿಸಿದ್ದರು.

'ರಾಹುಲ್ ಗಾಂಧಿ ಅವರು ಭೇಟಿ ನೀಡಿದ ನಂತರ ನನ್ನ ಅದೃಷ್ಟವೇ ಖುಲಾಯಿಸಿದೆ. ಈ ಮೊದಲು ನಾನು ಯಾರು ಎಂಬುದೇ ಜನರಿಗೆ ತಿಳಿದಿರಲಿಲ್ಲ. ಈಗ ಜನರು ನನ್ನನ್ನು ಗುರುತಿಸುತ್ತಿದ್ದಾರೆ. ಅಂಗಡಿಗೆ ಬಂದು, ನನ್ನ ಜೊತೆ ಸೆಲ್ಫಿ ತೆಗೆದುಕೊಳ್ಳುತ್ತಿದ್ದಾರೆ' ಎಂದು ರಾಮ್ ಚೇತ್ ಹೇಳುತ್ತಾರೆ.

ಇನ್ನೊಂದೆಡೆ, ರಾಮ್ ಚೇತ್ ಎದುರಿಸುತ್ತಿರುವ ತೊಂದರೆಗಳ ಕುರಿತು ಮಾಹಿತಿ ಪಡೆಯುವುದಕ್ಕಾಗಿ ವಿವಿಧ ಇಲಾಖೆಗಳ ಅಧಿಕಾರಿಗಳು ಅವರನ್ನು ಭೇಟಿ ಮಾಡುತ್ತಿದ್ದಾರೆ.

'ರಾಹುಲ್ ಗಾಂಧಿ ಹೊಲಿದಿರುವ ಚಪ್ಪಲಿಗಳನ್ನು ಖರೀದಿಸಲು ಬಹಳಷ್ಟು ಜನರು ಆಸಕ್ತಿ ತೋರುತ್ತಿದ್ದಾರೆ. ಹಲವರಿಂದ ಕರೆಗಳೂ ಬಂದಿವೆ. ಪ್ರತಾಪಗಢದಿಂದ ಮಂಗಳವಾರ ಕರೆ ಮಾಡಿದ್ದ ವ್ಯಕ್ತಿಯೊಬ್ಬರು ₹10 ಲಕ್ಷ ನೀಡಿ ಖರೀದಿಸುವುದಾಗಿ ಹೇಳಿದರು. ಇದು, ಚಪ್ಪಲಿ ಖರೀದಿಗೆ ನೀಡುವುದಾಗಿ ಹೇಳಿದ ಗರಿಷ್ಠ ಮೊತ್ತ' ಎಂದರು.


ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಉತ್ತರ ಪ್ರದೇಶದ ಸುಲ್ತಾನಪುರದಲ್ಲಿ ಜುಲೈ 26ರಂದು ಚಮ್ಮಾರನ ಅಂಗಡಿಗೆ ಭೇಟಿ ನೀಡಿದ್ದ ಸಂದರ್ಭದ ಚಿತ್ರ

'ಮೊದಲು ಅವರು ₹5 ಲಕ್ಷ ಕೊಡುವುದಾಗಿ ಹೇಳಿದರು. ಮಾರಾಟ ಮಾಡುವುದಕ್ಕೆ ನಾನು ನಿರಾಕರಿಸಿದೆ. ಆಗ, ಅವರು ₹10 ಲಕ್ಷ ನೀಡುವುದಾಗಿ ತಿಳಿಸಿದರು. ಇವು ನನ್ನ ಪಾಲಿಗೆ ಅದೃಷ್ಟದ ಪಾದರಕ್ಷೆಗಳಾಗಿದ್ದು, ಇವುಗಳನ್ನು ನಾನು ಮಾರಾಟ ಮಾಡುವುದಿಲ್ಲ ಎಂದು ಸ್ಪಷ್ಟಪಡಿಸಿದೆ' ಎಂದೂ ಹೇಳಿದರು.

'ನನ್ನೊಂದಿಗೆ ಅಂಗಡಿಯಲ್ಲಿ ಕುಳಿತು, ಚಪ್ಪಲಿ ಹೊಲಿಯುವ ಮೂಲಕ ರಾಹುಲ್ ಗಾಂಧಿ ನನ್ನ ಪಾಲುದಾರರಾಗಿದ್ದಾರೆ' ಎಂದು ಅಭಿಮಾನದ ನಗೆ ಬೀರಿದರು.

2018ರ ಮೇನಲ್ಲಿ ಚುನಾವಣೆ ಪ್ರಚಾರಕ್ಕಾಗಿ ಕರ್ನಾಟಕ ಪ್ರವಾಸದಲ್ಲಿದ್ದ ರಾಹುಲ್ ಗಾಂಧಿ ಬೆಂಗಳೂರಿನಲ್ಲಿ ಪತ್ರಿಕಾಗೋಷ್ಠಿ ನಡೆಸಿದ್ದರು. ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿದ್ದಾರೆ ಎಂದು ದೂರಿ, ಸುಲ್ತಾನಪುರದ ಬಿಜೆಪಿ ಮುಖಂಡ ವಿಜಯ್ ಮಿಶ್ರಾ ಎಂಬುವವರು 2018ರ ಆಗಸ್ಟ್ 4ರಂದು ರಾಹುಲ್ ಗಾಂಧಿ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದರು. ಸಂಸದರ–ಶಾಸಕರ ನ್ಯಾಯಾಲಯದಲ್ಲಿ ನಡೆದ ವಿಚಾರಣೆಗೆ ಹಾಜರಾಗುವುದಕ್ಕೆ ಸುಲ್ತಾನಪುರಕ್ಕೆ ತೆರಳಿದ್ದ ರಾಹುಲ್ ಗಾಂಧಿ, ಮಾರ್ಗ ಮಧ್ಯೆ ರಾಮ್ ಚೇತ್ ಅಂಗಡಿಗೂ ಭೇಟಿ ನೀಡಿದ್ದರು.

ಸುದ್ದಿ 2 ನಿಮಿಷ

'ಸುಪ್ರೀಂ', ಹೈಕೋರ್ಟ್‌ಗಳಲ್ಲಿ 109 ಮಹಿಳಾ ನ್ಯಾಯಮೂರ್ತಿಗಳು

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್‌ನಲ್ಲಿ ಮೂವರು ಸೇರಿದಂತೆ ದೇಶದ ಹೈಕೋರ್ಟ್‌ಗಳಲ್ಲಿ ಒಟ್ಟು 109 ಮಹಿಳಾ ನ್ಯಾಯಮೂರ್ತಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ಕೇಂದ್ರ ಸರ್ಕಾರವು ಗುರುವಾರ ರಾಜ್ಯಸಭೆಗೆ ತಿಳಿಸಿದೆ.

ರಾಜ್ಯಸಭೆಯಲ್ಲಿ ಈ ಬಗ್ಗೆ ಲಿಖಿತ ಉತ್ತರ ನೀಡಿರುವ ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್, ' ಸುಪ್ರೀಂ ಕೋರ್ಟ್‌ನಲ್ಲಿ ಮೂವರು ಮಹಿಳೆಯರು ಮತ್ತು ವಿವಿಧ ಹೈಕೋರ್ಟ್‌ಗಳಲ್ಲಿ 106 ಮಹಿಳಾ ನ್ಯಾಯಮೂರ್ತಿಗಳಿದ್ದಾರೆ' ಎಂದು ತಿಳಿಸಿದರು.



ಸುಪ್ರೀಂ ಕೋರ್ಟ್ ಮತ್ತು ದೇಶದ 25 ಹೈಕೋರ್ಟ್‌ಗಳಲ್ಲಿ ನ್ಯಾಯಮೂರ್ತಿಗಳ ನೇಮಕಾತಿಗೆ ಯಾವುದೇ ಜಾತಿ ಅಥವಾ ವರ್ಗದ ಜನರಿಗೆ ಮೀಸಲಾತಿ ಕಲ್ಪಿಸಲು ಸಂವಿಧಾನ ಅವಕಾಶ ಕಲ್ಪಿಸುವುದಿಲ್ಲ ಎಂದೂ ಅವರು ತಿಳಿಸಿದರು.

'2018ರಿಂದ 2024ರ ಜುಲೈ 25ರವರೆಗೆ ದೇಶದ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳಲ್ಲಿರುವ ಒಟ್ಟು 661 ನ್ಯಾಯಮೂರ್ತಿಗಳ ಪೈಕಿ 21 ನ್ಯಾಯಮೂರ್ತಿಗಳು ಪರಿಶಿಷ್ಟ ಜಾತಿ, 12 ಮಂದಿ ಪರಿಶಿಷ್ಟ ಪಂಗಡ ಮತ್ತು 78 ನ್ಯಾಯಮೂರ್ತಿಗಳು ಇತರೆ ಹಿಂದುಳಿದ ವರ್ಗಗಳ ಸಮುದಾಯಕ್ಕೆ ಸೇರಿದವರು ಎಂದು ದಾಖಲೆಗಳು ಹೇಳುತ್ತವೆ' ಎಂಬುದಾಗಿ ಮಾಹಿತಿ ನೀಡಿದ್ದಾರೆ.

ಪ್ರತಿಭಟನೆ: 9 ಜನರಿಗೆ ಗಾಯ

ಗುವಾಹಟಿ: ಜನಾಂಗೀಯ ಸಂಘರ್ಷ ಪೀಡಿತ ರಾಜ್ಯ ಮಣಿಪುರದಲ್ಲಿ ಶಾಂತಿ ಮರುಸ್ಥಾಪನೆಗೆ ಆಗ್ರಹಿಸಿ ಪ್ರತಿಭಟನೆ ನಡೆಸುತ್ತಿದ್ದವರ ಮೇಲೆ ಪೊಲೀಸರು ಗುರುವಾರ ಅಶ್ರುವಾಯು ಶೆಲ್ ದಾಳಿ ನಡೆಸಿದ್ದಾರೆ. ಇದರಿಂದ ಮೈತೇಯಿ ಸಮುದಾಯಕ್ಕೆ ಸೇರಿದ ಎಂಟು ಜನರು ಮತ್ತು ವಿಡಿಯೊ ಪತ್ರಕರ್ತರೊಬ್ಬರು ಗಾಯಗೊಂಡಿದ್ದಾರೆ.

ಇಂಫಾಲ್‌ನ ಅಖಂಪತ್ ಪ್ರದೇಶದಲ್ಲಿನ ಪರಿಹಾರ ಶಿಬಿರದ ಕಡೆಯಿಂದ ಪ್ರತಿಭಟನಾ ಮೆರವಣಿಗೆ ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಅವರ ಅಧಿಕೃತ ನಿವಾಸದ ಕಡೆಗೆ ಸಾಗಿದಾಗ, ಪೊಲೀಸರು ಅಶ್ರುವಾಯು ಶೆಲ್ ದಾಳಿ ನಡೆಸಿದರು ಎಂದು ಮೂಲಗಳು ತಿಳಿಸಿವೆ.

ಸಂಪುಟ ಸಭೆಗೂ ಮುನ್ನ ಸಿ.ಎಂ 'ಉಪಾಹಾರ' ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಡಾ ಬದಲಿ ನಿವೇಶನ ಹಂಚಿಕೆ ಪ್ರಕರಣದಲ್ಲಿ ತಮ್ಮ ವಿರುದ್ಧದ ಆರೋಪಗಳ ಕುರಿತು ವಿವರಣೆ ನೀಡುವಂತೆ ರಾಜ್ಯಪಾಲರು ನೋಟಿಸ್ ನೀಡಿದ್ದ ಕಾರಣ, ತಮ್ಮ ಸರ್ಕಾರಿ ನಿವಾಸ 'ಕಾವೇರಿ'ಯಲ್ಲಿ ಗುರುವಾರ ಬೆಳಿಗ್ಗೆ ಸಂಪುಟ ಸಚಿವರ ಜೊತೆ ಮುಖ್ಯಮಂತ್ರಿ ಸಿದ್ದರಾಮಯ್ಯ 'ಉಪಾಹಾರ' ಸಭೆ ನಡೆಸಿದರು.

ರಾಜ್ಯಪಾಲರು ನೀಡಿರುವ ನೋಟಿಸ್‌ಗೆ ಸಂಬಂಧಿಸಿದಂತೆ ತೆಗೆದುಕೊಳ್ಳಬೇಕಾದ ನಿಲುವಿನ ಬಗ್ಗೆ ಸಂಪುಟ ಸಭೆಯಲ್ಲಿ ಚರ್ಚಿಸುವುದಕ್ಕೂ ಮೊದಲು ಎಲ್ಲ ಸಚಿವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಉದ್ದೇಶದಿಂದ ಮುಖ್ಯಮಂತ್ರಿ ಈ ಉಪಾಹಾರ ಕೂಟ ಆಯೋಜಿಸಿದ್ದರು.

ಮುಖ್ಯಮಂತ್ರಿಗೆ ನೀಡಿರುವ ನೋಟಿಸ್ ಅನ್ನು ಹಿಂಪಡೆಯುವಂತೆ ರಾಜ್ಯಪಾಲರ ಬಳಿ ಮನವಿ ಮಾಡಲು ಮತ್ತು ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರು ಅನುಮತಿ ನೀಡಿದರೆ, ಅದರ ವಿರುದ್ಧ ಕಾನೂನು ಹೋರಾಟ ನಡೆಸುವ ಕುರಿತು ಆ ಸಭೆಯಲ್ಲಿ ಚರ್ಚೆ ನಡೆಯಿತು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಕೆ.ಜೆ. ಜಾರ್ಜ್, ಜಿ. ಪರಮೇಶ್ವರ, ಎಚ್.ಸಿ. ಮಹದೇವಪ್ಪ, ಡಿ. ಸುಧಾಕರ್, ಈಶ್ವರ್ ಖಂಡ್ರೆ, ಕೆ.ಎಚ್. ಮುನಿಯಪ್ಪ, ದಿನೇಶ್ ಗುಂಡೂರಾವ್, ಪ್ರಿಯಾಂಕ್ ಖರ್ಗೆ, ರಹೀಂ ಖಾನ್, ಎನ್. ಚಲುವರಾಯಸ್ವಾಮಿ ಸೇರಿದಂತೆ ಬಹುತೇಕ ಎಲ್ಲ ಸಚಿವರು, ಮುಖ್ಯಮಂತ್ರಿಯ ಕಾನೂನು ಸಲಹೆಗಾರರೂ ಆಗಿರುವ ಶಾಸಕ ಎ.ಎಸ್. ಪೊನ್ನಣ್ಣ, ಅಡ್ವೊಕೇಟ್ ಜನರಲ್ ಶಶಿ ಕಿರಣ್ ಶೆಟ್ಟಿ ಸಭೆಯಲ್ಲಿದ್ದರು.

ಉಪಾಹಾರ ಕೂಟಕ್ಕೂ ಮೊದಲು ಗೃಹ ಸಚಿವ ಜಿ. ಪರಮೇಶ್ವರ ನಿವಾಸಕ್ಕೆ ತೆರಳಿದ ಸಚಿವ ಪ್ರಿಯಾಂಕ್ ಖರ್ಗೆ ಕೆಲಹೊತ್ತು ಚರ್ಚೆ ನಡೆಸಿದರು.

ಜಾರ್ಜ್ ನಿವಾಸದಲ್ಲಿ ಸಭೆ: ಇಂಧನ ಸಚಿವ ಕೆ.ಜೆ. ಜಾರ್ಜ್ ನಿವಾಸಕ್ಕೆ ಬುಧವಾರ ರಾತ್ರಿ ತೆರಳಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಅಲ್ಲಿ ತಮ್ಮ ಆಪ್ತ ಕೆಲವು ಸಚಿವರ ಜೊತೆ ಸುಮಾರು ಎರಡು ತಾಸು ಚರ್ಚೆ ನಡೆಸಿದ್ದಾರೆ. ಅಲ್ಲದೆ, ಹೈಕಮಾಂಡ್ ನಾಯಕರನ್ನೂ ಸಂಪರ್ಕಿಸಿ, ವಿಚಾರ ವಿನಿಮಯ ನಡೆಸಿದ್ದಾರೆ. ಈ ವೇಳೆ ಸಚಿವರಾದ ಎಚ್.ಸಿ. ಮಹದೇವಪ್ಪ, ಜಮೀರ್ ಅಹಮದ್ ಜೊತೆಗಿದ್ದರು ಎಂದು ಮೂಲಗಳು ತಿಳಿಸಿವೆ.

ಮುಡಾ ವಿಚಾರದಲ್ಲಿ ಹೈಕಮಾಂಡ್ ತಮ್ಮ ಬೆನ್ನಿಗೆ ನಿಲ್ಲಲಿದೆ ಎಂಬ ಬಲವಾದ ವಿಶ್ವಾಸವನ್ನು ಆಪ್ತ ಸಚಿವರ ಜೊತೆಗಿನ ಮಾತುಕತೆಯ ವೇಳೆ ಸಿದ್ದರಾಮಯ್ಯ ವ್ಯಕ್ತಪಡಿಸಿದರು ಎಂದೂ ಗೊತ್ತಾಗಿದೆ.

ಸರ್ಕಾರದ ಕಾರ್ಯವೈಖರಿ ಬಗ್ಗೆ ಪ್ರತಿಪಕ್ಷಗಳು, ಜನಸಾಮಾನ್ಯರ ಲೇವಡಿ

ಹೊಸ ಸಂಸತ್ ಭವನದಲ್ಲಿ ಸೋರಿಕೆ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ನೂತನ ಸಂಸತ್ ಭವನದ ಮೊಗಸಾಲೆಯಲ್ಲಿ ಗುರುವಾರ ಮಳೆ ನೀರು ಸೋರುತ್ತಿದ್ದ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದು, ಇದು ಭಾರಿ ಚರ್ಚೆಗೆ ಗ್ರಾಸವಾಗಿದೆ. ಕಳೆದ ವರ್ಷವಷ್ಟೇ ಉದ್ಘಾಟನೆಯಾಗಿರುವ ಭವನವು ಸೋರುತ್ತಿರುವುದರಿಂದ ವಿರೋಧ ಪಕ್ಷಗಳು ಸೇರಿದಂತೆ ಸಾರ್ವಜನಿಕರು ಲೇವಡಿ ಮಾಡಿದ್ದಾರೆ.

'ಸೆಂಟ್ರಲ್ ವಿಸ್ತಾ ಯೋಜನೆಯ ವೆಚ್ಚ ₹20,000 ಕೋಟಿ. ನೂತನ ಸಂಸತ್ ಭವನ ನಿರ್ಮಾಣಕ್ಕೆ ವೆಚ್ಚ ಮಾಡಿದ್ದು, ₹971 ಕೋಟಿ. ಇಷ್ಟೊಂದು ಪ್ರಮಾಣದ ಹಣ ವೆಚ್ಚ ಮಾಡಿದರೂ ಒಂದೇ ವರ್ಷಕ್ಕೆ ಕಟ್ಟಡವು ಸೋರುತ್ತಿದೆ. ನಮ್ಮ ತೆರಿಗೆಯನ್ನು ಕೇಂದ್ರ ಸರ್ಕಾರವು ಪೋಲು ಮಾಡಿದೆ' ಎಂದು ಸಾರ್ವಜನಿಕರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಹೊರಗೆ ಪ್ರಶ್ನೆ ಪತ್ರಿಕೆ ಸೋರಿಕೆಯಾಗುತ್ತಿದ್ದರೆ, ಸಂಸತ್ ಭವನದ ಒಳಗೆ ಮಳೆ ನೀರು ಸೋರುತ್ತಿದೆ' ಎಂದು ವಿರೋಧ ಪಕ್ಷಗಳ ನಾಯಕರು ವ್ಯಂಗ್ಯವಾಡಿದ್ದಾರೆ. ಹಳೆಯ ಸಂಸತ್ ಭವನ ಕಟ್ಟಡ ಹಾಗೂ ನೂತನ ಸಂಸತ್ ಭವನದ ಕಾಮಗಾರಿ ಗುಣಮಟ್ಟವನ್ನು ಹೋಲಿಕೆ ಮಾಡಿ ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತವಾಗಿದೆ.


ನೂತನ ಸಂಸತ್ ಭವನದಲ್ಲಿ ಮಳೆ ನೀರು ಸೋರುತ್ತಿದ್ದ ಕಾರಣ ಭವನದ ಸಿಬ್ಬಂದಿ ಬಕೆಟ್ ಇಟ್ಟಿದ್ದರು

ನೀರು ಸೋರುತ್ತಿರುವ ದೃಶ್ಯಗಳನ್ನು 'ಎಕ್ಸ್'ನಲ್ಲಿ ಹಂಚಿಕೊಂಡಿರುವ ಕಾಂಗ್ರೆಸ್ ಶಾಸಕ ಮಾಣಿಕ್ಕಂ ಟ್ಯಾಗೋರ್ ಅವರು, ನೂತನ ಭವನದಲ್ಲಿ ನೀರು ಸೋರಿಕೆಯಾಗುತ್ತಿರುವ ಬಗ್ಗೆ ಲೋಕಸಭೆಯಲ್ಲಿ ಚರ್ಚೆ ನಡೆಸಬೇಕು ಎಂದು ಕೋರಿ ನಿಲುವಳಿ ಸೂಚನೆ ಮಂಡಿಸಿದ್ದಾರೆ. 'ಒಂದು ವರ್ಷದ ಹಿಂದಷ್ಟೇ ಉದ್ಘಾಟನೆಗೊಂಡಿರುವ ಕಟ್ಟಡದಲ್ಲಿ ನೀರು ಸೋರುತ್ತಿದೆ. ಎಲ್ಲ ಋತುವಿನಲ್ಲೂ ಈ ಕಟ್ಟಡವು ಬಳಕೆಗೆ ಯೋಗ್ಯವೇ ಎಂಬುದನ್ನು ತುರ್ತಾಗಿ ಪರಿಶೀಲಿಸಬೇಕು' ಎಂದಿದ್ದಾರೆ.

'ನೂತನ ಸಂಸತ್ ಕಟ್ಟಡಕ್ಕಿಂತ ಹಳೆಯ ಕಟ್ಟಡವೇ ಉತ್ತಮವಾಗಿತ್ತು. ನೂತನ ಸಂಸತ್ ಕಟ್ಟಡದಲ್ಲಿ ಮಳೆ ನೀರು ಸೋರಿಕೆಯಾಗುವ ಕಾರ್ಯಕ್ರಮ ನಡೆಯುತ್ತಿದೆ. ಆದ್ದರಿಂದ ಇನ್ನೂ ಕಾಲ ಮಿಂಚಿಲ್ಲ. ನಾವೆಲ್ಲರೂ ಹಳೆಯ ಕಟ್ಟಡಕ್ಕೆ ಯಾಕೆ ವಾಪಸಾಗಬಾರದು' ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ, ಸಂಸದ ಅಖಿಲೇಶ್ ಯಾದವ್ ಲೇವಡಿ ಮಾಡಿದ್ದಾರೆ.

'ಸಂಸತ್ತಿನಿಂದ ಹಿಡಿದು ದೆಹಲಿಯ ರಸ್ತೆಗಳಲ್ಲಿ ನೀರು ನಿಂತಿದೆ. ಹಳೆಯ ಸಂಸತ್ ಭವನದ ಕಟ್ಟಡವು 100 ವರ್ಷ ಹಿಂದೆ ನಿರ್ಮಿಸಿದ್ದು, ಇಲ್ಲಿಯವರೆಗೂ ಒಂದು ಹನಿ ನೀರೂ ಸೋರಿರಲಿಲ್ಲ. ಆದರೆ, ನೂತನ ಸಂಸತ್ ಭವನವು ಕಳೆದ ವರ್ಷ ನಿರ್ಮಿಸಿದ್ದು, ಈಗಾಗಲೇ ಸೋರುತ್ತಿದೆ' ಎಂದು ಕಾಂಗ್ರೆಸ್ ಸಂಸದ ಸಯ್ಯದ್ ನಸೀರ್ ಹುಸೇನ್ 'ಎಕ್ಸ್'ನಲ್ಲಿ ಬರೆದುಕೊಂಡಿದ್ದಾರೆ.

ಸಣ್ಣ ಪ್ರಮಾಣದ ಸೋರಿಕೆ

ಸಂಸತ್ ಭವನದ ಮೊಗಸಾಲೆಯಲ್ಲಿ ಗಾಜಿನ ಛಾವಣಿ ನಿರ್ಮಿಸಲಾಗಿದೆ. ಗಾಜುಗಳನ್ನು ಜೋಡಿಸಿದ ಅಂಟು ಕಳಚಿದ್ದರಿಂದ ಸಣ್ಣ ಪ್ರಮಾಣದಲ್ಲಿ ನೀರು ಸೋರಿಕೆಯಾಗಿದೆ. ತಕ್ಷಣದಲ್ಲಿಯೇ ಇದನ್ನು ಸರಿಪಡಿಸಲಾಗಿದೆ. ಕಟ್ಟಡ ಬೇರೆಲ್ಲೂ ಸೋರಿಕೆಯಾಗದಂತೆ ಎಚ್ಚರ ವಹಿಸಲಾಗಿದೆ

ಲೋಕಸಭೆ ಕಾರ್ಯಾಲಯ

ಬಿಜೆಪಿ ಸರ್ಕಾರವು ನಿರ್ಮಿಸಿದ ಎಲ್ಲ ಹೊಸ ಕಟ್ಟಡಗಳ ಛಾವಣಿಗಳೂ ಸೋರುತ್ತಿವೆ. ಇದು ಈ ಸರ್ಕಾರದ ವಿನ್ಯಾಸದ ಭಾಗವೇ ಅಥವಾ ಬೇರೆಯದೇ ಎಂದು ಜನರು ಕೇಳುತ್ತಿದ್ದಾರೆ

ಅಖಿಲೇಶ್ ಯಾದವ್, ಸಮಾಜವಾದಿ ಪಕ್ಷದ ಮುಖ್ಯಸ್ಥ, ಸಂಸದ

ಪಾದಯಾತ್ರೆ ಅಬಾಧಿತ

ಒಂದನೇ ಪುಟದಿಂದ...

'ವಾಲ್ಮೀಕಿ ನಿಗಮದ ಹಗರಣ ಮತ್ತು ಮುಡಾ ಹಗರಣ ಮುಂದಿಟ್ಟು ಬಿಜೆಪಿ ಮತ್ತು ಜೆಡಿಎಸ್ ನಾಯಕರು ಸದನದಲ್ಲಿ ಒಟ್ಟಾಗಿ ಹೋರಾಟ ಮಾಡಿದ್ದೆವು. ಈ ಹೋರಾಟ ಮುಂದುವರೆಸಲು ನಿರ್ಧರಿಸಲಾಗಿತ್ತು. ಸಣ್ಣ ಗೊಂದಲ ಸೃಷ್ಟಿಯಾಗಿತ್ತು. ರಾಷ್ಟ್ರೀಯ ನಾಯಕರ ಸಮ್ಮುಖದಲ್ಲಿ ನಾವೆಲ್ಲ ಕೂತು ಚರ್ಚಿಸಿದ್ದೇವೆ. ಎಲ್ಲವೂ ಇತ್ಯರ್ಥ ಆಗಿದೆ. ಶನಿವಾರ ಬೆಳಿಗ್ಗೆ 8.30ಕ್ಕೆ ನೈಸ್ ರಸ್ತೆ ಜಂಕ್ಷನ್‌ನಿಂದ ಪಾದಯಾತ್ರೆ ಹೊರಡಲಿದೆ' ಎಂದರು.

ರಾಧಾಮೋಹನ್ ದಾಸ್ ಅಗರವಾಲ್ ಮಾತನಾಡಿ, 'ಪಾದಯಾತ್ರೆಯಲ್ಲಿ ಎರಡೂ ಪಕ್ಷಗಳ ಜನಪ್ರತಿನಿಧಿಗಳು, ಕಾರ್ಯಕರ್ತರು ಉತ್ಸಾಹದಿಂದ ಭಾಗವಹಿಸುತ್ತಾರೆ. ಬಿಜೆಪಿ- ಜೆಡಿಎಸ್ ನಡುವೆ ಯಾವುದೇ ಗೊಂದಲಗಳಿಲ್ಲ. ಇಲ್ಲಿ ಯಾವುದೇ ವ್ಯಕ್ತಿಗೆ ಮಹತ್ವ ಇಲ್ಲ' ಎಂದು ಸ್ಪಷ್ಟಪಡಿಸಿದರು.

'ಮುಡಾದಲ್ಲಿ ₹4 ಸಾವಿರ ಕೋಟಿಯ ಹಗರಣ ನಡೆದಿದೆ. ವಾಲ್ಮೀಕಿ ನಿಗಮದಲ್ಲಿ ಭ್ರಷ್ಟಾಚಾರ ಆಗಿರುವುದನ್ನು ಮುಖ್ಯಮಂತ್ರಿಯವರೇ ಸದನದಲ್ಲಿ ಒಪ್ಪಿಕೊಂಡಿದ್ದಾರೆ. ಈ ವಿಷಯದಲ್ಲಿ ನಾಗರಿಕರಲ್ಲಿ ಆಕ್ರೋಶವಿದೆ. ಅದು ಯಾವುದೇ ಕ್ಷಣದಲ್ಲಿ ಸ್ಫೋಟವಾಗಬಹುದು' ಎಂದರು.

'ಸಣ್ಣ ಮಾತಿಗೆ ಮಾನ್ಯತೆ ಬೇಡ': ಶಾಸಕರಾದ ಬಸನಗೌಡ ಪಾಟೀಲ ಹಾಗೂ ರಮೇಶ ಜಾರಕಿಹೊಳಿ ಪಾದಯಾತ್ರೆ ಬಗ್ಗೆ ಪ್ರತಿಕ್ರಿಯಿಸಿದ ರಾಧಾಮೋಹನ್ ದಾಸ್ ಅಗರವಾಲ್, 'ನಮ್ಮದು ದೊಡ್ಡ ಪರಿವಾರ. ದೊಡ್ಡ ಪರಿವಾರದಲ್ಲಿ ಸಣ್ಣ ಪುಟ್ಟ ಮಾತುಗಳಿಗೆ ಮಾನ್ಯತೆ ಕೊಡಬಾರದು' ಎಂದರು.

ರಾಜಭವನ ಜತೆ ಸರ್ಕಾರ ಸಂಘರ್ಷ

ಒಂದನೇ ಪುಟದಿಂದ...

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಜುಲೈ 5ರಂದು ರಾಜ್ಯಪಾಲರು ಮಾಧ್ಯಮಗಳಲ್ಲಿ ಪ್ರಕಟವಾದ ವರದಿಗಳನ್ನು ಆಧರಿಸಿ ವರದಿ ನೀಡುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಸೂಚಿಸಿದ್ದರು.

ಅಲ್ಲದೇ, ಜುಲೈ 15ರಂದು ರಾಜ್ಯಪಾಲರು ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆದು, 'ಮುಡಾದಲ್ಲಿ ಅಕ್ರಮವಾಗಿ ನಿವೇಶನ ಹಂಚಿಕೆ ಮಾಡಿದ್ದು, ಈ ಪ್ರಕರಣದ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಕರ್ನಾಟಕ ರಾಜ್ಯ ರೈತ ಒಕ್ಕೂಟವು ಮನವಿ ಸಲ್ಲಿಸಿದ್ದು, ಆದಷ್ಟು ಬೇಗ ವರದಿ ನೀಡಬೇಕು' ಎಂದು ಸೂಚಿಸಿದ್ದರು.

ರಾಜ್ಯಪಾಲರ ಪತ್ರವನ್ನು ಗಂಭೀರವಾಗಿ ಪರಿಗಣಿಸಿದ್ದ ಮುಖ್ಯಮಂತ್ರಿಯವರು ಅವರನ್ನು ಗೌರವಿಸಬೇಕು ಎಂಬ ಆಶಯದಡಿಯೇ ನ್ಯಾಯಾಂಗ ತನಿಖೆಗೆ ಆದೇಶ ನೀಡಿದರು. ಆ ಬಳಿಕ, ಟಿ.ಜೆ.ಅಬ್ರಾಹಂ ಅವರು ಜುಲೈ 26ರಂದು ದೂರು ನೀಡಿದರು. ಅದೇ ದಿನ ಮುಖ್ಯ ಕಾರ್ಯದರ್ಶಿಯವರು ಪ್ರಕರಣಕ್ಕೆ ಸಂಬಂಧಿಸಿದ ವರದಿಯನ್ನು ರಾಜ್ಯಪಾಲರಿಗೆ ಸಲ್ಲಿಸಿದರು. ಆದರೆ, ರಾಜ್ಯಪಾಲರು ಮುಖ್ಯ ಕಾರ್ಯದರ್ಶಿಯವರ ವರದಿಯನ್ನು ಸಂಪೂರ್ಣವಾಗಿ ಪರಿಶೀಲಿಸುವ ಮುನ್ನವೇ ಶೋಕಾಸ್ ನೋಟಿಸ್ ನೀಡಿದ್ದಾರೆ ಎಂದರು.

'ಇಷ್ಟು ತರಾತುರಿಯಲ್ಲಿ ಇಂತಹ ತೀರ್ಮಾನ ಮಾಡುತ್ತಿರುವುದೇಕೆ? ನಮ್ಮ ಅನುಭವದ ಪ್ರಕಾರ ಯಾವುದೇ ದೂರು ದಾಖಲಾದರೂ ತನಿಖೆಗೆ ಆದೇಶ ನೀಡುವ ಮುನ್ನ ಆರೋಪ ಸಾಬೀತುಪಡಿಸಲು ಪೂರಕ ಸಾಕ್ಷ್ಯಾಧಾರಗಳು ಬೇಕು. ಅಥವಾ ಯಾವುದಾದರೂ ತನಿಖಾ ಸಂಸ್ಥೆಗಳು ಅನುಮತಿಗೆ ಮನವಿ ನೀಡುತ್ತಾರೆ. ಆದರೆ, ಈ ಪ್ರಕರಣದಲ್ಲಿ ತನಿಖೆ ಮಾಡುವ ಮುನ್ನವೇ ಶೋಕಾಸ್ ನೋಟಿಸ್ ನೀಡಲಾಗಿದೆ' ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಸಚಿವರಾದ ಕೃಷ್ಣಬೈರೇಗೌಡ, ಎಂ.ಬಿ. ಪಾಟೀಲ, ಜಿ.ಪರಮೇಶ್ವರ, ಎಚ್.ಕೆ. ಪಾಟೀಲ, ಕೆ.ಎಚ್. ಮುನಿಯಪ್ಪ, ಬೈರತಿ ಸುರೇಶ್ ಮಾತನಾಡಿದರು.

'ಇದು ರಾಜಕೀಯ ಪಿತೂರಿ'

'ಖಾಸಗಿ ವ್ಯಕ್ತಿ ನೀಡಿದ ದೂರಿನ ಆಧಾರದಲ್ಲಿ ರಾಜ್ಯಪಾಲರು ನೋಟಿಸ್ ನೀಡಿರುವುದು ರಾಜಕೀಯ ಪಿತೂರಿ ಮಾತ್ರವಲ್ಲ, ಕಾನೂನಿಗೆ ವಿರುದ್ಧ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಕಿಡಿಕಾರಿದರು.

'ಅಬ್ರಹಾಂ ಅವರ 200 ಪುಟಗಳ ದೂರು ನೀಡಿದ್ದರು. ಅದನ್ನು ಓದದೇ ನೋಟಿಸ್ ನೀಡಿದ್ದಾರೆ. ಸರ್ಕಾರದ ಮುಖ್ಯಕಾರ್ಯದರ್ಶಿ ಬರೆದ ಪತ್ರವನ್ನೂ ಅವರು ಓದಿದಂತಿಲ್ಲ. ಹಿಂದಿನ ಸರ್ಕಾರ ಸಚಿವರಾಗಿದ್ದ ಶಶಿಕಲಾ ಜೊಲ್ಲೆ, ಮುರುಗೇಶ ನಿರಾಣಿ ಮತ್ತು ಹಾಲಿ ಶಾಸಕ ಜನಾರ್ದನ ರೆಡ್ಡಿ ವಿರುದ್ಧ ದೂರುಗಳನ್ನು ರಾಜ್ಯಪಾಲರಿಗೆ ನೀಡಲಾಗಿದೆ. ಆದರೆ, ಈವರೆಗೂ ರಾಜ್ಯಪಾಲರು ಯಾವುದೇ ಕ್ರಮ ತೆಗೆದುಕೊಂಡಿಲ್ಲ' ಎಂದು ಹರಿಹಾಯ್ದರು.

'ನಮ್ಮ ಸಲಹೆಗೆ ಮಾನ್ಯತೆ ನೀಡದೇ ಇದ್ದರೆ, ಈ ದೇಶದಲ್ಲಿ ಕಾನೂನು ಇದೆ, ಸುಪ್ರೀಂಕೋರ್ಟ್ ಇದೆ' ಎಂದೂ ಹೇಳಿದರು.

ರಾಜ್ಯಪಾಲರು ಬಹಳ ಲೆಕ್ಕಾಚಾರದಿಂದ ಹೆಜ್ಜೆ ಇಡಬೇಕಾಗುತ್ತದೆ. ಏನೇ ಒತ್ತಡ ಇದ್ದರೂ ಅವರು ತಮ್ಮ ಸ್ಥಾನದ ಘನತೆ ಹಾಳಾಗದಂತೆ ಜವಾಬ್ದಾರಿ ನಿರ್ವಹಿಸಲಿದ್ದಾರೆ.

ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಮುಖ್ಯಮಂತ್ರಿ ಇಲ್ಲದೆಯೇ ಸಭೆ

ರಾಜ್ಯದ ಇತ್ತೀಚಿನ ವರ್ಷಗಳ ಇತಿಹಾಸದಲ್ಲಿ ಮುಖ್ಯಮಂತ್ರಿಯವರ ಅನುಪಸ್ಥಿತಿಯಲ್ಲಿ ಮೊದಲ ಬಾರಿಗೆ ಮಂತ್ರಿ ಪರಿಷತ್ ಸಭೆ ನಡೆದಿದೆ.

ಮುಖ್ಯಮಂತ್ರಿ ವಿರುದ್ಧವೇ ಆರೋಪ ಎದುರಾಗಿದ್ದು, ಆ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಲಿದ್ದ ಹಿನ್ನೆಲೆಯೊಳಗೆ ಸಿದ್ದರಾಮಯ್ಯ ಅವರು ಸಭೆಯಲ್ಲಿ ಪಾಲ್ಗೊಳ್ಳದೇ ಇರುವ ತೀರ್ಮಾನ ಮಾಡಿದ್ದರು. ಹೀಗಾಗಿ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.

'ಸಿ.ಎಂ ಪತ್ನಿ ಹಕ್ಕು ಕಳೆದುಕೊಳ್ಳಬೇಕಾ?'

'ಮುಖ್ಯಮಂತ್ರಿಗಳ ಪತ್ನಿಯಾದ ಮಾತ್ರಕ್ಕೆ ಪಾರ್ವತಿ ಅವರು ತಮ್ಮ ಹಕ್ಕನ್ನು ಕಳೆದುಕೊಳ್ಳಬೇಕಾ? ತನ್ನ ಅಣ್ಣ ಕೊಟ್ಟ ಜಮೀನನ್ನು ಉಳಿಸಿಕೊಂಡು ತನ್ನ ಮಕ್ಕಳ ಭವಿಷ್ಯ ರಕ್ಷಣೆ ಮಾಡಿಕೊಳ್ಳುವುದು ತಪ್ಪಾ' ಎಂದು ಡಿ.ಕೆ.ಶಿವಕುಮಾರ್ ಪ್ರಶ್ನಿಸಿದರು.

ಪಾರ್ವತಿ ಅವರು ಸಾಮಾನ್ಯ ಮಹಿಳೆ ಅಲ್ಲ, ಮುಖ್ಯಮಂತ್ರಿಯವರ ಪತ್ನಿ ಆಗಿದ್ದು, ಈ ಪ್ರಕರಣ ಸ್ವಜಪಕ್ಷಪಾತವಲ್ಲವೇ ಎಂಬ ಪ್ರಶ್ನೆಗೆ ಅವರು ಮೇಲಿನಂತೆ ಉತ್ತರಿಸಿದರು.

'ಸಿದ್ದರಾಮಯ್ಯ ಅವರು 40 ವರ್ಷಗಳ ರಾಜಕಾರಣ ಮಾಡಿದ್ದಾರೆ. ಮಂತ್ರಿ, ಉಪಮುಖ್ಯಮಂತ್ರಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ಆರು ವರ್ಷ ರಾಜ್ಯದ ಮುಖ್ಯಮಂತ್ರಿ ಆಗಿದ್ದಾರೆ. ಆದರೂ ಅವರ ಪತ್ನಿ ಎಂದಿಗೂ ಸಾರ್ವಜನಿಕವಾಗಿ ಗುರುತಿಸಿಕೊಂಡಿಲ್ಲ. ಅವರಿಗೆ ಅಧಿಕಾರ ಇದ್ದರೂ ಅದನ್ನು ಬಳಸಿಕೊಂಡಿಲ್ಲ. ನಾವು ಅವಕಾಶ ಸಿಕ್ಕಾಗ ನಮ್ಮ ಮನೆಯವರನ್ನು ಕರೆದುಕೊಂಡು ಹೋಗಿದ್ದೇವೆ. ಆದರೆ, ಪಾರ್ವತಿ ಅವರು ಎಂದಿಗೂ ಅಧಿಕಾರ ಬಳಸಿಕೊಂಡವರಲ್ಲ. ಈ ವಿಚಾರವಾಗಿ ಅವರನ್ನು ಎಲ್ಲರೂ ಪ್ರಶಂಸಿಸಬೇಕು. ಅವರಿಗೆ ತಮ್ಮ ತವರಿನಿಂದ ಬಂದ ಆಸ್ತಿ ಉಳಿಸಿಕೊಳ್ಳುವ ಹಕ್ಕು ಇದೆ' ಎಂದು ಶಿವಕುಮಾರ್ ಹೇಳಿದರು.

ಎಸ್‌ಸಿ ಒಳಮೀಸಲು: ರಾಜ್ಯಕ್ಕೆ ಅಧಿಕಾರ

ಒಂದನೇ ಪುಟದಿಂದ...

ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಹಾಗೂ ಯಾವುದೇ ಒಂದು ವರ್ಗಕ್ಕೆ ಹೆಚ್ಚಿನ ಮೀಸಲಾತಿ ಸೌಲಭ್ಯ ಕಲ್ಪಿಸುವ ತೀರ್ಮಾನವನ್ನು ನ್ಯಾಯಾಂಗವು ಪರಿಶೀಲನೆಗೆ ಒಳಪಡಿಸಲು ಅವಕಾಶ ಇದೆ ಎಂದು ಸಿಜೆಐ ಸ್ಪಷ್ಟಪಡಿಸಿದ್ದಾರೆ.

ಮೀಸಲಾತಿ ವಿಚಾರವಾಗಿ ಮಂಡಲ್ ತೀರ್ಪಿನಲ್ಲಿ ಹೇಳಿರುವ ಮಾತುಗಳನ್ನು ಉಲ್ಲೇಖಿಸಿರುವ ಪೀಠವು, ಒಳ ಮೀಸಲಾತಿಯು ಇತರೆ ಹಿಂದುಳಿದ ವರ್ಗಗಳಿಗೆ (ಒಬಿಸಿ) ಮಾತ್ರ ಸೀಮಿತವಾಗಿಲ್ಲ ಎಂಬುದನ್ನು ಸ್ಪಷ್ಟಪಡಿಸಿದೆ.

ಭಿನ್ನಮತದ ತೀರ್ಪು ಬರೆದಿರುವ ನ್ಯಾಯಮೂರ್ತಿ ತ್ರಿವೇದಿ ಅವರು ಸಂವಿಧಾನದ 341ನೆಯ ವಿಧಿಯ ಅಡಿಯಲ್ಲಿ ಅಧಿಸೂಚಿತವಾಗಿರುವ ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ಬದಲಾವಣೆ ತರುವ ಅಧಿಕಾರವು ರಾಜ್ಯಗಳಿಗೆ ಇಲ್ಲ ಎಂದು ಹೇಳಿದ್ದಾರೆ. ರಾಜ್ಯಗಳು ಜಾರಿಗೆ ತರುವ ಸದಾಶಯದ ಕ್ರಮಗಳು ಸಂವಿಧಾನ ವಿಧಿಸಿರುವ ಚೌಕಟ್ಟನ್ನು ಮೀರುವಂತೆ ಇಲ್ಲ ಎಂದು ಹೇಳಿದ್ದಾರೆ.

ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ಜಾತಿಯೊಂದರ ಹೆಸರನ್ನು ಸೇರಿಸುವ ಅಥವಾ ಆ ಪಟ್ಟಿಯಿಂದ ಜಾತಿಯೊಂದರ ಹೆಸರನ್ನು ಹೊರಗೆ ತರುವ ಅಧಿಕಾರ ಇರುವುದು ಸಂಸತ್ತಿಗೆ ಮಾತ್ರ ಎಂದು ತ್ರಿವೇದಿ ಅವರು ಹೇಳಿದ್ದಾರೆ.

ಚಿನ್ನಯ್ಯ ಪ್ರಕರಣದಲ್ಲಿ ಹೇಳಿದ್ದು...

ಇ.ವಿ. ಚಿನ್ನಯ್ಯ ಮತ್ತು ಆಂಧ್ರಪ್ರದೇಶ ಸರ್ಕಾರದ ನಡುವಿನ ಪ್ರಕರಣದಲ್ಲಿ ನೀಡಿದ ತೀರ್ಪನ್ನು ಪುನರ್ ಪರಿಶೀಲಿಸುವಂತೆ ಕೋರಿ ಸಲ್ಲಿಕೆಯಾದ ಅರ್ಜಿಗಳ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್‌ನ ಏಳು ನ್ಯಾಯಮೂರ್ತಿಗಳು ಇರುವ ಸಂವಿಧಾನ ಪೀಠವು ತನ್ನ ತೀರ್ಪನ್ನು ಫೆಬ್ರುವರಿ 8ರಂದು ಕಾಯ್ದಿರಿಸಿತ್ತು.

ಶತಮಾನಗಳ ಕಾಲ ಅವಮಾನವನ್ನು, ತಾರತಮ್ಯವನ್ನು ಹಾಗೂ ಬಹಿಷ್ಕಾರವನ್ನು ಎದುರಿಸಿದ ಪರಿಶಿಷ್ಟ ಜಾತಿ ಸಮುದಾಯಗಳು ಒಂದು ಏಕರೂಪಿ ವರ್ಗ; ಆ ವರ್ಗವನ್ನು ಮತ್ತೆ ವರ್ಗೀಕರಿಸಲು ಆಗುವುದಿಲ್ಲ ಎಂದು ಚಿನ್ನಯ್ಯ ಪ್ರಕರಣದ ತೀರ್ಪಿನಲ್ಲಿ ಕೋರ್ಟ್ ಹೇಳಿತ್ತು.

ಎಸ್‌ಸಿ ಹಾಗೂ ಎಸ್‌ಟಿ ಸಮುದಾಯಗಳಲ್ಲಿ ಹೆಚ್ಚು ದುರ್ಬಲವಾಗಿರುವ ಜಾತಿಗಳಿಗೆ ಮೀಸಲಾತಿಯಲ್ಲಿ ಒಳಮೀಸಲಾತಿಯನ್ನು ಕಲ್ಪಿಸಲು, ರಾಜ್ಯಗಳು ಒಳವರ್ಗೀಕರಣ ಮಾಡಲು ಆಗುವುದಿಲ್ಲ ಎಂದು ಕೋರ್ಟ್ 2004ರಲ್ಲಿ ಹೇಳಿತ್ತು. ಪಂಜಾಬ್ ಸೇರಿದಂತೆ ಕೆಲವು ರಾಜ್ಯಗಳು ನಿರ್ದಿಷ್ಟ ಜಾತಿಗಳಿಗೆ ಹೆಚ್ಚಿನ ಮೀಸಲಾತಿ ನೀಡಲು ಪರಿಶಿಷ್ಟ ಜಾತಿಗಳ ಒಳವರ್ಗೀಕರಣಕ್ಕೆ ಪ್ರತ್ಯೇಕ ಕಾನೂನು ರೂಪಿಸಿದ ನಂತರದಲ್ಲಿ ವಿವಾದ ಸೃಷ್ಟಿಯಾಗಿತ್ತು.

'ಜಾರಿಗೆ ಇದ್ದ ಅಡ್ಡಿ ನಿವಾರಣೆ'


ಒಂದನೇ ಪುಟದಿಂದ...

'ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಕಲ್ಪಿಸಲು ಕಾಂಗ್ರೆಸ್ ಬದ್ಧ. ಹಿಂದೆ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದಾಗಲೇ ರಚಿಸಿದ್ದ ನ್ಯಾ.ಎ.ಜೆ. ಸದಾಶಿವ ಆಯೋಗದ ವರದಿಯನ್ನು ಅನುಷ್ಠಾನಗೊಳಿಸುವುದಾಗಿ ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ನಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಗೆ ಸರ್ಕಾರ ಬದ್ಧವಾಗಿದೆ' ಎಂದಿದ್ದಾರೆ.

'ಕಳೆದ ವಿಧಾನಸಭಾ ಚುನಾವಣೆಯ ಪೂರ್ವದಲ್ಲಿ ರಾಜ್ಯದಲ್ಲಿದ್ದ ಬಿಜೆಪಿ ಸರ್ಕಾರ ಒಳಮೀಸಲಾತಿ ಬಗ್ಗೆ ಅವಸರದಲ್ಲಿ ತೀರ್ಮಾನ ಕೈಗೊಂಡು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿತ್ತು. ಪರಿಶಿಷ್ಟ ಜಾತಿಯೊಳಗಿನ ಮೀಸಲಾತಿಯನ್ನು ಸಂವಿಧಾನ ತಿದ್ದುಪಡಿಯ ಮೂಲಕ ಜಾರಿ ಮಾಡಬಹುದು ಎಂದು ಕೇಂದ್ರ ಸರ್ಕಾರವೇ ರಚಿಸಿದ್ದ ಉಷಾ ಮೆಹ್ರಾ ಸಮಿತಿ ಸ್ಪಷ್ಟವಾಗಿ ಹೇಳಿತ್ತು. ಹಾಗಿದ್ದರೂ, ಕೇಂದ್ರ ಸರ್ಕಾರ ಇಲ್ಲಿಯವರೆಗೆ ತೀರ್ಮಾನ ಕೈಗೊಳ್ಳದೆ ಮೂಲೆಗೆ ಸರಿಸಿತ್ತು' ಎಂದೂ ಅವರು ಹೇಳಿದ್ದಾರೆ.

'ಕತ್ತಲಲ್ಲಿ ಇದ್ದವರಿಗೆ ಬದುಕುವ ಭರವಸೆ'

ಪ್ರಜಾವಾಣಿ ವಾರ್ತೆ



ಎಚ್. ಆಂಜನೇಯ

ಚಿತ್ರದುರ್ಗ: 'ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನಿಂದ ಕತ್ತಲಲ್ಲಿದ್ದ ಮಾದಿಗ ಸಮುದಾಯಕ್ಕೆ, ಐಸಿಯುನಲ್ಲಿದ್ದ ಸಮುದಾಯಗಳಿಗೆ ಬದುಕುವ ಭರವಸೆ ಸಿಕ್ಕಿದೆ. ಕರ್ನಾಟಕ ಸರ್ಕಾರ ಒಳಮೀಸಲಾತಿ ಜಾರಿಗೆ ಮಂದಾಗಿದ್ದ ನಡೆಗೆ ಸುಪ್ರೀಂ ಕೋರ್ಟ್ ಅಸ್ತು ಎಂದಿದೆ. ಆ ಮೂಲಕ ಮೀಸಲಾತಿ ವರ್ಗೀಕರಣ ಸಂವಿಧಾನಾತ್ಮಕ ನಿರ್ಧಾರ ಎಂಬ ಸಂದೇಶವನ್ನು ನ್ಯಾಯಾಲಯ ನೀಡಿದೆ' ಎಂದು ಮಾಜಿ ಸಚಿವ, ಕಾಂಗ್ರೆಸ್ ಮುಖಂಡ ಎಚ್. ಆಂಜನೇಯ ತಿಳಿಸಿದ್ದಾರೆ.

'ಶೇ 6ರಷ್ಟು ಜನಸಂಖ್ಯೆ ಹೊಂದಿರುವ ಮಾದಿಗ ಸಮುದಾಯ ಶೇ 1ರಷ್ಟು ಮೀಸಲಾತಿ ಪಡೆದುಕೊಳ್ಳಲು ಸಾಧ್ಯವಾಗಿಲ್ಲ ಎಂದು ಹಲವು ವರದಿಗಳು ಉಲ್ಲೇಖಿಸಿವೆ. ರಾಜ್ಯ ಸರ್ಕಾರ ಕೂಡಲೇ ಸುಪ್ರೀಂ ಕೋರ್ಟ್ ತೀರ್ಪಿನಂತೆ ಒಳ ಮೀಸಲಾತಿ ಕಲ್ಪಿಸಲು ಕ್ರಮ ವಹಿಸಬೇಕು. ಮುಖ್ಯವಾಗಿ ಕರ್ನಾಟಕ ಲೋಕಸೇವಾ ಆಯೋಗ ಸೇರಿ ವಿವಿಧ ಇಲಾಖೆ ಆರಂಭಿಸಿರುವ ಉದ್ಯೋಗ ನೇಮಕಾತಿ ಪ್ರಕ್ರಿಯೆಯನ್ನು ತಕ್ಷಣ ಸ್ಥಗಿತಗೊಳಿಸಿ ಒಳ ಮೀಸಲಾತಿ ವರ್ಗೀಕರಣದ ಬಳಿಕ ನೇಮಕಾತಿ ಮಾಡಿಕೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

'ಮೀಸಲಾತಿ ವರ್ಗೀಕರಣವನ್ನು ಕೋರ್ಟ್ ಒಪ್ಪುವುದಿಲ್ಲ ಎನ್ನುತ್ತಿದ್ದ ಕೆಲವು ಪಟ್ಟಭದ್ರ ಹಿತಾಸಕ್ತಿಗಳಿಗೆ ಸುಪ್ರೀಂ ಕೋರ್ಟ್ ಉತ್ತರ ನೀಡಿದೆ. ತೀರ್ಪನ್ನು ತುರ್ತಾಗಿ ಅನುಷ್ಠಾನಕ್ಕೆ ತರುವ ಮೂಲಕ ಕರ್ನಾಟಕ ಸರ್ಕಾರ ರಾಷ್ಟ್ರಕ್ಕೆ ಮಾದರಿಯಾಗಬೇಕು. ದಶಕಗಳಿಂದ ಮಾದಿಗ ಸಮುದಾಯಕ್ಕೆ ಆಗಿದ್ದ ಅನ್ಯಾಯವನ್ನು ಸರಿಪಡಿಸಬೇಕು' ಎಂದು ಆಗ್ರಹಿಸಿದ್ದಾರೆ.

ಹೋರಾಟಕ್ಕೆ ಗೆಲುವು: ಮಾದಾರ ಶ್ರೀ



'ಒಳ ಮೀಸಲಾತಿ ಕುರಿತ ಸುಪ್ರೀಂ ಕೋರ್ಟ್‌ನ ಏಳು ಸದಸ್ಯರ ಸಂವಿಧಾನ ಪೀಠ ನೀಡಿರುವ ತೀರ್ಪು ಐತಿಹಾಸಿಕವಾದುದು. ಇದರಿಂದ ಸುದೀರ್ಘ ಹೋರಾಟಕ್ಕೆ ಜಯ ಸಿಕ್ಕಂತಾಗಿದೆ' ಎಂದು ಚಿತ್ರದುರ್ಗದ ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ತಿಳಿಸಿದ್ದಾರೆ.

'ಈ ತೀರ್ಪು ಕಳೆದ ಮೂರು ದಶಕಗಳ ಸುದೀರ್ಘ ಹೋರಾಟಕ್ಕೆ ಸಿಕ್ಕ ಪ್ರತಿಫಲವಾಗಿದೆ. ಪರಿಶಿಷ್ಟ ಜಾತಿಗಳ ಮೀಸಲಾತಿಯನ್ನು ಜನಸಂಖ್ಯಾವಾರು ನ್ಯಾಯಯುತವಾಗಿ ಹಂಚಿಕೆ ಆಗಬೇಕು. ಈ ವರ್ಗೀಕರಣದ ಅಧಿಕಾರ ರಾಜ್ಯಗಳಿಗೆ ಇರಬೇಕು ಎಂದು ನ್ಯಾಯಮೂರ್ತಿ ಅರುಣ್ ಮಿಶ್ರಾ ಪೀಠ ಪ್ರತಿಪಾದಿಸಿತ್ತು. ಈ ಅಂಶವನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ. ಮೀಸಲಾತಿಯ ನ್ಯಾಯಯುತ ಹಂಚಿಕೆಯ ಮೂಲಕ ಎಲ್ಲ 101 ಪರಿಶಿಷ್ಟ ಜಾತಿಗಳಿಗೆ ಸಾಮಾಜಿಕ ನ್ಯಾಯ ದೊರಕಿಸುವಲ್ಲಿ ಈ ತೀರ್ಪು ನೆರವಾಗಲಿದೆ' ಎಂದಿದ್ದಾರೆ.

ಒಳಮೀಸಲಾತಿ ಕೂಡಲೇ ಜಾರಿಗೆ ಸಂಸದರ ಆಗ್ರಹ

ಪ್ರಜಾವಾಣಿ ವಾರ್ತೆ

ನವದೆಹಲಿ: ಮೀಸಲಾತಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ತೀರ್ಪನ್ನು ಸ್ವಾಗತಿಸಿರುವ ಪರಿಶಿಷ್ಟ ಜಾತಿಯ ಎಡಗೈ ಸಮುದಾಯದ ಸಂಸದರು, ಕರ್ನಾಟಕದ ಕಾಂಗ್ರೆಸ್ ಸರ್ಕಾರ ಕೂಡಲೇ ಒಳಮೀಸಲಾತಿಯನ್ನು ಜಾರಿ ಮಾಡಬೇಕು ಎಂದು ಆಗ್ರಹಿಸಿದರು.

ವಿಜಯಪುರ ಸಂಸದ ರಮೇಶ ಜಿಗಜಿಣಗಿ, 'ಮೀಸಲಾತಿಗಾಗಿ ಅನೇಕ ಯುವಕರು ಜೀವ ಕಳೆದುಕೊಂಡಿದ್ದಾರೆ. ಅವರ ಹೋರಾಟಕ್ಕೆ ಈಗ ಪ್ರತಿಫಲ ಸಿಕ್ಕಿದೆ. ಸುಪ್ರೀಂ ಕೋರ್ಟ್ ತೀರ್ಪು ಸ್ವಾಗತಾರ್ಹ. ಕರ್ನಾಟಕ ಸರ್ಕಾರ ಯಾವುದೇ ಸಬೂಬು ಹೇಳದೆ ಒಳ ಮೀಸಲಾತಿ ಜಾರಿಗೊಳಿಸಬೇಕು' ಎಂದು ಆಗ್ರಹಿಸಿದರು.

ಚಿತ್ರದುರ್ಗ ಸಂಸದ ಗೋವಿಂದ ಕಾರಜೋಳ, 'ಕರ್ನಾಟಕ, ಆಂಧ್ರ ಪ್ರದೇಶ, ತಮಿಳುನಾಡು ಹಾಗೂ ಕೇರಳದಲ್ಲಿ ಮೀಸಲಾತಿಗಾಗಿ ಹೋರಾಟ ನಡೆದಿತ್ತು. ಹಲವು ಬಾರಿ ಪರ ವಿರೋಧ ಹೋರಾಟಗಳು ನಡೆದಿದ್ದವು. ಇದೀಗ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಸ್ವಾಗತಾರ್ಹ. ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರವು ಒಳಮೀಸಲಾತಿಗಾಗಿ ಸಮಿತಿ ರಚನೆ ಮಾಡಿತ್ತು. ಮಾದಿಗರಿಗೆ ಶೇ 6 ಹಾಗೂ ಛಲವಾದಿಗಳಿಗೆ ಶೇ 5.5 ಮೀಸಲಾತಿ ನೀಡಬೇಕು ಎಂದು ಸಮಿತಿ ವರದಿ ನೀಡಿತ್ತು. ಕರ್ನಾಟಕ ಸರ್ಕಾರವು ಸುಪ್ರೀಂ ಕೋರ್ಟ್ ತೀರ್ಪನ್ನು ಜಾರಿಗೆ ತಂದು ಬದ್ಧತೆ ತೋರಿಸಬೇಕು' ಎಂದು ಒತ್ತಾಯಿಸಿದರು.

ಕೇಂದ್ರದ ಮಾಜಿ ಸಚಿವ ಎ.ನಾರಾಯಣಸ್ವಾಮಿ, 'ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಅಗತ್ಯ ಇದೆ. ಈ ಸಂಬಂಧ ಬೊಮ್ಮಾಯಿ ಸರ್ಕಾರ ಕೇಂದ್ರಕ್ಕೆ ಶಿಫಾರಸು ಮಾಡಿತ್ತು. ಸುಪ್ರೀಂ ಕೋರ್ಟ್ ತೀರ್ಪಿನಿಂದ ಅಡೆತಡೆಗಳೆಲ್ಲ ನಿವಾರಣೆಯಾಗಿವೆ. ಕರ್ನಾಟಕ ಸರ್ಕಾರ ಮುತುವರ್ಜಿ ವಹಿಸಿ ಒಳಮೀಸಲಾತಿ ನೀಡಬೇಕು' ಎಂದು ಆಗ್ರಹಿಸಿದರು.

'ಕೆನೆಪದರಕ್ಕೆ ಮೀಸಲಾತಿ ಬೇಡ'

ಒಂದನೇ ಪುಟದಿಂದ...

ಎಸ್‌ಸಿ ಹಾಗೂ ಎಸ್‌ಟಿ ಸಮುದಾಯಗಳಿಗೆ ಕೆನೆಪದರದ ತತ್ವವು ಅನ್ವಯ ಆಗಬೇಕು ಎಂಬ ವಿಚಾರದಲ್ಲಿ ತಾವು ಗವಾಯಿ ಅವರೊಂದಿಗೆ ಸಹಮತ ಹೊಂದಿರುವುದಾಗಿ ನ್ಯಾಯಮೂರ್ತಿ ವಿಕ್ರಮನಾಥ್ ಹೇಳಿದ್ದಾರೆ. ಆದರೆ, 'ಕೆನೆಪದರವನ್ನು ಗುರುತಿಸಲು ಬಳಸುವ ಮಾನದಂಡಗಳು ಒಬಿಸಿ ವರ್ಗಗಳಲ್ಲಿ ಕೆನೆಪದರ ಗುರುತಿಸಲು ಬಳಸುವ ಮಾನದಂಡಗಳಿಗಿಂತ ಭಿನ್ನವಾಗಿರಬಹುದು' ಎಂದಿದ್ದಾರೆ.

ಮೀಸಲಾತಿಯ ಪ್ರಯೋಜನವನ್ನು ಪಡೆದು, ಸಾಮಾನ್ಯ ವರ್ಗದವರ ಜೊತೆ ಸಮಾನವಾಗಿ ಹೆಜ್ಜೆಹಾಕುವ ಸಾಮರ್ಥ್ಯ ಪಡೆದಿರುವವರನ್ನು ಗುರುತಿಸಿ ಮೀಸಲಾತಿ ವ್ಯಾಪ್ತಿಯಿಂದ ಹೊರಗಿರಿಸಲು ಕಾಲಕಾಲಕ್ಕೆ ಕ್ರಮ ವಹಿಸಬೇಕು ಎಂದು ನ್ಯಾಯಮೂರ್ತಿ ಪಂಕಜ್ ಮಿತ್ತಲ್ ಹೇಳಿದ್ದಾರೆ.

'ಮೀಸಲಾತಿಯ ಸೌಲಭ್ಯವನ್ನು ಮೊದಲ ತಲೆಮಾರಿಗೆ ಮಾತ್ರ ಅಥವಾ ಒಂದು ತಲೆಮಾರಿಗೆ ಮಾತ್ರ ಸೀಮಿತವಾಗಿಸಬೇಕು. ಕುಟುಂಬದ ಯಾವುದೇ ಒಂದು ತಲೆಮಾರು ಮೀಸಲಾತಿಯ ಸೌಲಭ್ಯವನ್ನು ಪಡೆದುಕೊಂಡು ಉನ್ನತ ಸ್ಥಾನವನ್ನು ತಲುಪಿದೆ ಎಂದಾದರೆ, ಎರಡನೆಯ ತಲೆಮಾರಿಗೆ ಮೀಸಲಾತಿಯ ಸೌಲಭ್ಯವು ತಾರ್ಕಿಕವಾಗಿ ಸಿಗುವಂತಿರಬಾರದು' ಎಂದು ಮಿತ್ತಲ್ ವಿವರಿಸಿದ್ದಾರೆ.

ಎಸ್‌ಸಿ ಹಾಗೂ ಎಸ್‌ಟಿಗಳ ನಡುವೆ ಕೆನೆಪದರವನ್ನು ಗುರುತಿಸುವ ಕೆಲಸವು ರಾಜ್ಯ ಸರ್ಕಾರಗಳ ಪಾಲಿಗೆ ಸಾಂವಿಧಾನಿಕ ಅನಿವಾರ್ಯ ಆಗಬೇಕು ಎಂದು ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮ ಹೇಳಿದ್ದಾರೆ.

ನ್ಯಾಯಮೂರ್ತಿ ಗವಾಯಿ ಹೇಳಿದ್ದು...

- ಸಂವಿಧಾನ ಜಾರಿಗೆ ಬಂದು, ಎಸ್‌ಸಿ, ಎಸ್‌ಟಿ ಹಾಗೂ ಒಬಿಸಿ ಸಮುದಾಯಗಳ ಒಳಿತಿಗಾಗಿ ವಿಶೇಷ ಅವಕಾಶಗಳನ್ನು ಕಲ್ಪಿಸಿ ಸರಿಸುಮಾರು 75 ವರ್ಷಗಳು ಸಂದಿವೆ
- ಎಸ್‌ಸಿಗಳ ನಡುವಿನ ಅಸಮಾನರನ್ನು ಸಮಾನ ನೆಲೆಯಲ್ಲಿ ಕಂಡಾಗ ಸಂವಿಧಾನದ ಗುರಿಯಾದ ಸಮಾನತೆಯನ್ನು ಸಾಧಿಸಲು ಸಾಧ್ಯವೇ? ಅಥವಾ ಈ ರೀತಿ ಮಾಡುವುದರಿಂದ ಸಮಾನತೆಯ ಉದ್ದೇಶಕ್ಕೆ ಅಡ್ಡಿ ಉಂಟಾಗುತ್ತದೆಯೇ?
- ಮೀಸಲಾತಿಯ ಪ್ರಯೋಜನ ಪಡೆದು ವ್ಯಕ್ತಿಯೊಬ್ಬ ಜವಾನ ಅಥವಾ ಕಸಗುಡಿಸುವ ಹುದ್ದೆ ಪಡೆದರೆ, ಆತ ಹಿಂದುಳಿದವನಾಗಿಯೇ ಇರುತ್ತಾನೆ. ಆದರೆ ಮೀಸಲಾತಿಯ ಪ್ರಯೋಜನ ಪಡೆದು ಜೀವನದಲ್ಲಿ ಉನ್ನತ ಸ್ಥಾನ ತಲುಪಿದಾಗ, ಆತನನ್ನು ಹಿಂದುಳಿದವ ಎಂದು ಗುರುತಿಸಲಾಗದು
- ಮೀಸಲಾತಿ ಪ್ರಯೋಜನವು ಹೆಚ್ಚು ಹಿಂದುಳಿದವರಿಗೆ, ಕಡಿಮೆ ಪ್ರಾತಿನಿಧ್ಯ ಪಡೆದಿರುವವರಿಗೆ ಸಿಗುವಂತೆ ಮಾಡಲು ರಾಜ್ಯಗಳು ಯತ್ನಿಸಿದಾಗ, ಪರಿಶಿಷ್ಟ ಜಾತಿಗಳಲ್ಲಿ ಆ ನಡೆ ವಿರೋಧಿಸುವ ವರ್ಗಗಳು ತಮ್ಮನ್ನು ತುಳಿದವರ ರೀತಿಯಲ್ಲೇ ನಡೆದುಕೊಂಡಂತೆ ಆಗುತ್ತದೆ

ಭೀಮನಾಗಿ ಬಂದ ದುನಿಯಾ ವಿಜಯ್



ದುನಿಯಾ ವಿಜಯ್ ನಟಿಸಿ, ನಿರ್ದೇಶಿಸಿರುವ 'ಭೀಮ' ಚಿತ್ರ ಆ.9 ರಂದು ತೆರೆಗೆ ಬರುತ್ತಿದೆ. ಡ್ರಗ್ಸ್ ಮಾಫಿಯಾದಲ್ಲಿ ಸಿಲುಕಿಕೊಳ್ಳುತ್ತಿರುವ ಯುವಕರ ಕಥಾವಸ್ತು ಹೊಂದಿರುವ ಚಿತ್ರದ ಕುರಿತು ಮಾತನಾಡಿದ್ದಾರೆ.

ವಿನಾಯಕ ಕೆ.ಎಸ್

- **ಚಿತ್ರದ ಶೀರ್ಷಿಕೆ 'ಭೀಮ' ಯಾವ ಅರ್ಥದಲ್ಲಿ ಬಳಕೆಯಾಗಿದೆ?**

ಸಾಮಾನ್ಯವಾಗಿ ಬಲವಿದ್ದವನಿಗೆ 'ಭೀಮ' ಎನ್ನುತ್ತೇವೆ. ಅದೇ ಅರ್ಥದಲ್ಲಿ ಚಿತ್ರದ ಶೀರ್ಷಿಕೆಯಿದೆ. ನಾನಾ ಕಾರಣಗಳಿಂದಾಗಿ ಪ್ರತಿ ಮನೆಯಲ್ಲಿಯೂ ಒಬ್ಬ 'ಭೀಮ'ನಿರಬೇಕು. ಈ ಸಿನಿಮಾದಲ್ಲಿ ಒಂದು ಜವಾಬ್ದಾರಿ ಹೊತ್ತಿದ್ದೇನೆ. ಪ್ರಸ್ತುತ ಯುವಕರ ಸ್ಥಿತಿಗತಿ ತೆರೆದಿಟ್ಟಿರುವೆ. ಕೆಲಸದಲ್ಲಿರುವ ಪಾಲಕರ ಮಕ್ಕಳು ಬದುಕನ್ನು ಯಾವ ರೀತಿ ಮಾಡಿಕೊಂಡಿದ್ದಾರೆ ಎಂಬುದನ್ನು ಈ ಚಿತ್ರದಲ್ಲಿ ಹೇಳಿರುವೆ. ಇದಕ್ಕೂ ಅಂಬೇಡ್ಕರ್‌ಗೂ ಸಂಬಂಧವಿಲ್ಲ. ಅಥವಾ ಹಿಂದುಳಿದ ವರ್ಗಗಳ ಕಥೆಯಲ್ಲ. ಇಲ್ಲಿಯೂ ಒಂದು ಹೋರಾಟವಿದೆ. ಚಿತ್ರ ನೋಡಿದಾಗ ಗೊತ್ತಾಗುತ್ತದೆ.

- **ಚಿತ್ರದಲ್ಲಿ ಕಲಾವಿದರಲ್ಲದ ಅನೇಕರು ನಟಿಸಿದ್ದಾರೆಯೇ?**

ಸತ್ಯ ಘಟನೆಗಳನ್ನು ನೋಡಿ, ವ್ಯಕ್ತಿಗಳನ್ನು ಲೈವ್ ಆಗಿ ಇಂಟರ್‌ವ್ಯೂ ಮಾಡಿ, ಅದಕ್ಕೆ ಹೋಲುವಂತಹ ಕಲಾವಿದರಿಂದ ನಟನೆ ಮಾಡಿಸಿದ್ದೇನೆ. ಸ್ಕ್ರಿಪ್ಟ್ ಬರೆಯುವಾಗ ಒಂದಷ್ಟು ಯುವಕರನ್ನು ಭೇಟಿ ಮಾಡಿದೆ. ಒಬ್ಬೊಬ್ಬರದ್ದು ಒಂದೊಂದು ರೀತಿಯ ವಿಚಿತ್ರ ವ್ಯಕ್ತಿತ್ವ. 'ಡಾರ್ಕ್ ಶೇಡ್ ಆಫ್ ದಿ ಯೂತ್' ಅಂತಾರಲ್ಲ, ಆ ರೀತಿಯ ಕಥೆಗಳು. ಅವರಲ್ಲಿ ಕೆಲವರು ನೋಡಲಿಕ್ಕೆ ತುಂಬ ವಿಚಿತ್ರವಾಗಿದ್ದರು. ಅವರ ಮಾತಿನ ಶೈಲಿ ಭಿನ್ನವಾಗಿತ್ತು. ಹೀಗಾಗಿ ಅಂತಹ ಪಾತ್ರಗಳನ್ನು ಅದೇ ಹುಡುಗರಿಂದಲೇ ಮಾಡಿಸಿದ್ದೇನೆ. ನಟನೆ ಗೊತ್ತಿಲ್ಲದವರಿಂದ ನಟನೆ ಮಾಡಿಸಿದ್ದೇನೆ. ತುಂಬಾ ಚೆನ್ನಾಗಿ ನಟಿಸಿದ್ದಾರೆ. ನಾನು ಯಾವತ್ತೂ 'ಮೈನಸ್' ಎಂಬ ಪದವನ್ನು ಯೋಚಿಸುವುದಿಲ್ಲ. ಹಾಗೆ ಯೋಚಿಸುತ್ತ ಕುಳಿತರೆ ಯಾವ ಕೆಲಸವನ್ನೂ ಮಾಡಲು ಸಾಧ್ಯವಿಲ್ಲ. 'ಪ್ಲಸ್' ಅಂತಲೇ ಹೋಗಬೇಕು. ಇವರ ನಟನೆ ಪ್ಲಸ್ ಆಗಿದೆ.

- **ಚಿತ್ರ ಪೂರ್ಣವಾಗಿ ಡ್ರಗ್ಸ್ ಕುರಿತ ಕಥೆ ಹೊಂದಿದೆಯಾ?**

ಡ್ರಗ್ಸ್ ಎಂಬುದಕ್ಕಿಂತ ಇಂದಿನ ಯುವಕರ ಸ್ಥಿತಿಗತಿಯ ಕಥೆ. ತಂದೆ, ತಾಯಿಗೆ ಏನು ಬೆಲೆ ಕೊಡುತ್ತಾರೆ, ಕಾಲೇಜಿನಲ್ಲಿ ಏನೆಲ್ಲ ನಡೆಸುತ್ತಾರೆ ಎಂಬ ರೀತಿ ವಿಷಯಗಳನ್ನು ಹೇಳಿದ್ದೇನೆ. 'ಭೀಮ' ಒಂದು ವಿಶೇಷ ಊಟ. ವೆಜ್, ನಾನ್‌ವೆಜ್ ಎರಡೂ ಇದೆ. ಜೊತೆಗೆ ಸಿಹಿ ಕೂಡ ಇದೆ. ಅದು ಸರ್ಪ್ರೈಸ್. ಚಿತ್ರ ನೋಡಿದ ಮೇಲೆ ನಿಮಗೆ ಅದರೊಳಗಿರುವ ಸಿಹಿಯ ಬಗ್ಗೆ ತಿಳಿಯಲಿದೆ.

- **ಈ ಚಿತ್ರವು ಮುಚ್ಚುತ್ತಿರುವ ಚಿತ್ರಮಂದಿರಗಳ ಬಾಗಿಲು ತೆರೆಸುತ್ತದೆಯಾ?**

ಆ ಚಿತ್ರಮಂದಿರಗಳ ಸುತ್ತಲಿನ ಜನ ಬಂದು ನೋಡುತ್ತಾರೆ ಎಂಬ ಭರವಸೆ ಇದೆ. ಜನರ ಪ್ರತಿಕ್ರಿಯೆ ಹೇಗಿರುತ್ತದೆ ಎಂಬುದನ್ನು ನೋಡಲು ಕಾಯುತ್ತಿದ್ದೇನೆ. ವಿಷಯ ಚೆನ್ನಾಗಿದ್ದರೆ ಸಿನಿಮಾ ನೋಡುತ್ತಾರೆ. ಹೊಸಬರ ಸಿನಿಮಾ ಅಂದಾಗ ಮೌತ್ ಪಬ್ಲಿಸಿಟಿ ಹೆಚ್ಚು ಬೇಕಾಗುತ್ತದೆ. ಚಿರಪರಿಚಿತ ನಟರಿದ್ದರೆ ಜನ ಬೇಗ ಬರುತ್ತಾರೆ. ಪ್ರೇಕ್ಷಕರಿಗೆ ನಟನ ಪರಿಚಯ ಎಷ್ಟಿದೆ ಎಂಬುದು ಕೂಡ ಮುಖ್ಯ. ಮಾಮೂಲಿ ರೀತಿಯ ಸಿನಿಮಾ ನೋಡುವವರು ವಿಶ್ವಾಸದಿಂದ ಬರುತ್ತಾರೆ.

- **'ಸಲಗ'ಕ್ಕಿಂತ 'ಭೀಮ' ಹೇಗೆ ಭಿನ್ನ...**

ನಮ್ಮ ಕೆಲಸವನ್ನು ಇನ್ನೊಬ್ಬರಿಗೆ ಕೊಡಲು ಸಾಧ್ಯವಿಲ್ಲ. ಕೆಲವೊಮ್ಮೆ ಅವರಿಗೆ ಅರ್ಥ ಮಾಡಿಸುವುದು ಕಷ್ಟವಾಗುತ್ತದೆ. ಹೀಗಾಗಿ ನಿರ್ದೇಶನಕ್ಕೆ ಇಳಿದೆ. ಇರುವ ಕ್ಷೇತ್ರದಲ್ಲಿ ಬೆಳವಣಿಗೆ ಹೊಂದಲು 'ಸಲಗ' ನಿರ್ದೇಶನ ಮಾಡಿದೆ. ಈಗ 'ಭೀಮ' ಆಗಿದೆ. ಎರಡರಲ್ಲಿಯೂ ಮಾಸ್ ಮತ್ತು ಮನರಂಜನೆ ಅಂಶಗಳಿವೆ. ಆದರೆ ಈ ಚಿತ್ರ ಬೇರೆಯದೇ ರೀತಿಯ ಕಥೆ ಮತ್ತು ನಿರೂಪಣೆ ಹೊಂದಿದೆ. ಇದು ಗಮನಹರಿಸಿರುವ ಕ್ಷೇತ್ರವೇ ಬೇರೆ. ಮಾಮೂಲಿ ಆ್ಯಕ್ಷನ್ ಚಿತ್ರವಲ್ಲ.

- **ಕೊಳೆಗೇರಿ ಪ್ರದೇಶಗಳಲ್ಲಿಯೇ ಹೆಚ್ಚು ಚಿತ್ರೀಕರಣ ನಡೆಸಿದ್ದರ ಹಿನ್ನೆಲೆ ಏನು?**

ಹಾಗೇನಿಲ್ಲ. ಪೂರ್ತಿ ಬೆಂಗಳೂರಿನಲ್ಲಿ ಚಿತ್ರೀಕರಣ ನಡೆದಿದೆ. ಇದು ಒಂದು ವರ್ಗದ ಪ್ರೇಕ್ಷಕರಿಗೆ ಸೀಮಿತವಾದ ಚಿತ್ರವಲ್ಲ. ಕ್ಲಾಸ್ ವರ್ಗ ಕೂಡ ನೋಡುವಂತಹ ಚಿತ್ರ.

- **ನಿಮ್ಮ ಮುಂದಿನ ಸಿನಿಮಾಗಳು...?**

ಸದ್ಯ ಪೂರ್ತಿ ಗಮನ ಈ ಚಿತ್ರದ ಮೇಲಿದೆ. ಇದಕ್ಕಾಗಿ ವರ್ಷಗಳನ್ನು ಕೊಟ್ಟಿರುವೆ. 'ಕಾಟೇರ' ನಿರ್ದೇಶಕ ಜಡೇಶ್ ಹಂಪಿ ಜೊತೆ ಈಗಾಗಲೇ ಇನ್ನೊಂದು ಸಿನಿಮಾ ಘೋಷಣೆಯಾಗಿದೆ. ಶೇ 50ರಷ್ಟು ಚಿತ್ರೀಕರಣವೂ ಮುಗಿದಿದೆ. 'ಭೀಮ' ಬಿಡುಗಡೆ ನಂತರ ಆ ಸಿನಿಮಾ ಪೂರ್ಣಗೊಳಿಸಬೇಕಿದೆ. ನನ್ನ ಸಹಾಯಕ ಮಹೇಶ್ ಒಂದು ಸ್ಕ್ರಿಪ್ಟ್ ರೆಡಿ ಮಾಡಿದ್ದಾರೆ. ಆ ಚಿತ್ರವೂ ಪ್ರಾರಂಭವಾಗಬೇಕಿದೆ.

ಗೆಲುವಿನ ಹಿಂದೊಂದು ದೊಡ್ಡ ನೋವಿರುತ್ತದೆ!

- **ನಿಮ್ಮ ಈತನಕದ ಸಿನಿಪಯಣ ಹೇಗಿತ್ತು?**

ಜೀವನದಲ್ಲಿ ಯಾವುದೇ ವೃತ್ತಿಯಾದರೂ ಒಂದು ಪಯಣ. ಒಂದು ಹೋರಾಟ. ಇಲ್ಲಿ ಸೋಲು, ಗೆಲುವುಗಳು ಮುಖ್ಯವಾಗುವುದಿಲ್ಲ. ಒಂದು ನಿರಂತರತೆ ಬೇಕು. ಹಾಗೆ ನೋಡಿದರೆ ಪ್ರತಿ ಯಶಸ್ಸಿನ ಹಿಂದೆಯೂ ಒಂದು ದೊಡ್ಡ ನೋವಿರುತ್ತದೆ. ಆದರೆ ಆ ಯಶಸ್ಸು ಎಲ್ಲ ನೋವುಗಳನ್ನು ಮರೆಸುತ್ತದೆ. ಚಿತ್ರರಂಗವೂ ಹಾಗೇ. ಸಾಕಷ್ಟು ಸೋಲು, ಗೆಲುವುಗಳನ್ನು ಕಂಡಿರುವೆ. ಒಂದೇ ಸಲಕ್ಕೆ ಇಲ್ಲಿ ಯಶಸ್ಸು ಕಷ್ಟ. ಗೆಲುವು ಬಂತೆಂದು ಮೈಮರೆತರೆ ಸೋಲು ಬೆನ್ನ ಹಿಂದೆಯೇ ಇರುತ್ತದೆ. ನೆಗೆಟಿವ್ ಅಂಶಗಳನ್ನು ಬದಿಗಿಟ್ಟು ಪಾಸಿಟಿವ್ ಆಗಿರಬೇಕು. ಪ್ರಯತ್ನ ನಿರಂತರವಾಗಿರಬೇಕಷ್ಟೆ. ಇದು ಇಲ್ಲಿಯ ತನಕದ ಪಯಣದಲ್ಲಿ ಕಲಿತುಕೊಂಡ ಬದುಕಿನ ಪಾಠ.



ಅನುಷಾ ರೈ

ಹಳೆ ನಿರ್ದೇಶಕನ ಹೊಸ ಚಿತ್ರ

ಈ ಹಿಂದೆ ವಿಜಯ ರಾಘವೇಂದ್ರ ನಟನೆಯ 'ಓ ಮನಸೇ' ಸೇರಿದಂತೆ ಕೆಲವು ಚಿತ್ರಗಳನ್ನು ನಿರ್ದೇಶಿಸಿದ್ದ ಡಿ.ಜಿ. ಉಮೇಶ್ ಗೌಡ ಅವರೀಗ ಮತ್ತೊಂದು ಚಿತ್ರಕ್ಕೆ ಕೈ ಹಾಕಿದ್ದಾರೆ. ಲವ್, ಆ್ಯಕ್ಷನ್ ಕಥೆಯುಳ್ಳ ಈ ಚಿತ್ರದ ನಾಯಕನಾಗಿ ಸಂತೋಷ್ ಕಾಣಿಸಿಕೊಳ್ಳಲಿದ್ದಾರೆ. ನಾಯಕಿಯಾಗಿ ಅನುಷಾ ರೈ ನಟಿಸುತ್ತಿದ್ದಾರೆ. ಶ್ರೀ ಸ್ನೇಹ ಕಂಬೈನ್ಸ್ ಬ್ಯಾನರ್ ಅಡಿ ಶೇಖರ್ ನಾ ಕಾಲೇರಿ ಬಂಡವಾಳ ಹೂಡಲಿದ್ದಾರೆ.

'ಶೀಘ್ರದಲ್ಲಿ ಚಿತ್ರೀಕರಣ ಪ್ರಾರಂಭವಾಗಲಿದೆ. ಬೆಳಗಾವಿ, ಬೆಂಗಳೂರು ಸುತ್ತಮುತ್ತ 50 ದಿನಗಳ ಕಾಲ ಮೊದಲ ಹಂತದ ಚಿತ್ರೀಕರಣ ನಡೆಯಲಿದೆ. ಚಿತ್ರದಲ್ಲಿ 5 ಹಾಡುಗಳಿದ್ದು ಕೇರಳ, ಮಂಗಳೂರು, ಸಕಲೇಶಪುರ, ಚಿಕ್ಕಮಗಳೂರಿನಲ್ಲಿ ಚಿತ್ರೀಕರಿಸುವ ಯೋಜನೆ ಹಾಕಿಕೊಳ್ಳಲಾಗಿದೆ' ಎಂದಿದ್ದಾರೆ ನಿರ್ದೇಶಕರು.

ಶೋಭರಾಜ್, ಸುಚೇಂದ್ರ ಪ್ರಸಾದ್, ಸಾಧು ಕೋಕಿಲ, ಅಭಿಜಿತ್, ಶಂಕರ್ ಅಶ್ವಥ್, ದಿವ್ಯಾ ಗೌಡ ಮುಂತಾದವರು ನಟಿಸುತ್ತಿದ್ದಾರೆ. ಈ ಚಿತ್ರಕ್ಕೆ ಡಿ.ಜಿ.ಉಮೇಶ್ ಗೌಡ ಅವರೇ ಕಥೆ, ಚಿತ್ರಕಥೆ ಬರೆದಿದ್ದಾರೆ. ಬಾಬುರಾಜ್ ಛಾಯಾಚಿತ್ರಗ್ರಹಣ, ಮಳವಳ್ಳಿ ಸಾಯಿಕೃಷ್ಣ ಅವರ ಸಂಭಾಷಣೆ, ಸೂರಜ್ ಸಂಗೀತವಿದೆ.

ಸೆಟ್ಟೇರಿದ 'ನವ ದಿಗಂತ'




ಚಿತ್ರದ ಮುಹೂರ್ತ ಸಮಾರಂಭ

ಐಟಿ ಕ್ಷೇತ್ರದವರು ಸಿನಿಮಾರಂಗದತ್ತ ಆಕರ್ಷಿತರಾಗಿ ಬರುವುದು ಹೊಸತೇನಲ್ಲ. ಹಾಗೆಯೇ ಐಟಿ ಕ್ಷೇತ್ರದಲ್ಲಿನ ಒಂದಷ್ಟು ಮನಸುಗಳು ಒಟ್ಟಾಗಿ ನಿರ್ಮಿಸುತ್ತಿರುವ 'ನವ ದಿಗಂತ' ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ಐಟಿ ಕಂಪನಿಯೊಂದರಲ್ಲಿ ವ್ಯವಸ್ಥಾಪಕರಾಗಿರುವ ದುರ್ಗಾ ಮೋಹನ್ ಅವರು ಚಿನ್ಮಯ ಸಿನಿ ಕ್ರಿಯೇಶನ್ಸ್ ಮೂಲಕ ಈ ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ. ಜೊತೆಗೆ ನಿರ್ದೇಶನದ ಜವಾಬ್ದಾರಿಯನ್ನೂ ಹೊತ್ತಿದ್ದಾರೆ.

'ಪ್ರತಿಯೊಬ್ಬರಿಗೂ ಪ್ರತಿಭೆ ಎಂಬುದು ಹುಟ್ಟಿನಿಂದಲೇ ಬಂದಿರುತ್ತದೆ. ಆದರೆ ಅದನ್ನು ಮರೆತು ಜೀವನಕ್ಕಾಗಿ ಬೇರೆ ಉದ್ಯೋಗ ಮಾಡುತ್ತಿರುತ್ತೇವೆ. ನಿಜವಾದ ಸಂತೋಷ ಸಿಗುವುದು ಕಲೆಯಿಂದ ಎಂದು ತಿಳಿಯದೆ ಜೀವನ ಸಾಗಿಸುತ್ತಿರುತ್ತೇವೆ. ಸಂಗೀತ, ನೃತ್ಯ, ಕ್ರೀಡೆ, ಬರವಣಿಗೆ ಏನೇ ತೆಗೆದುಕೊಂಡರೂ ಅದು ಕಲೆಯಾಗಿರುತ್ತದೆಯೇ ಹೊರತು ಬೇರೇನೂ ಆಗಿರುವುದಿಲ್ಲ. ಕಲೆಗೆ ಸಾವಿಲ್ಲ ಎಂಬುದನ್ನು ಈ ಚಿತ್ರ ಹೇಳುತ್ತದೆ. ಪೋಷಕರಿಗೂ ಹಾಗೂ ವಿದ್ಯಾರ್ಥಿಗಳಿಗೂ ಒಂದು ಒಳ್ಳೆಯ ಸಂದೇಶ ಕೊಡಲಿದೆ' ಎಂದರು ನಿರ್ದೇಶಕಿ.

ಮೇಘನಾ, ಚೇತನ್, ರೋಷನ್, ಅಭಿಜಿತ್ ಮೊದಲಾದ ಹೊಸ ಕಲಾವಿದರು ಚಿತ್ರದಲ್ಲಿದ್ದಾರೆ. ನಾಲ್ಕು ಹಾಡುಗಳಿಗೆ ಶರತ್-ಪ್ರಫುಲ್ಲಾ ಸಂಗೀತ, ಪ್ರಜ್ವಲ್ ವಿನೋದ್ ಛಾಯಾಚಿತ್ರಗ್ರಹಣವಿದೆ. ಬೆಂಗಳೂರು ಸುತ್ತಮುತ್ತ 30 ದಿನಗಳ ಕಾಲ ಎರಡು ಹಂತದಲ್ಲಿ ಚಿತ್ರೀಕರಣ ನಡೆಸಲು ತಂಡವು ಯೋಜನೆ ರೂಪಿಸಿಕೊಂಡಿದೆ.

2 ಸಿನಿಮಾಗಳು ತೆರೆಗೆ



ಕಳೆದ ಎರಡು ವಾರಗಳಿಗೆ ಹೋಲಿಸಿದರೆ ಈ ವಾರ ತೆರೆಗೆ ಬರುತ್ತಿರುವ ಸಿನಿಮಾಗಳ ಸಂಖ್ಯೆ ಗಣನೀಯವಾಗಿ ಕುಸಿದಿದೆ. ಚಿತ್ರಮಂದಿರಗಳಿಗೆ ಜನವೇ ಬಾರದೇ ಬಿಡುಗಡೆಗೊಂಡ ಬಹುತೇಕ ಚಿತ್ರ ಪ್ರದರ್ಶನಗಳು ರದ್ದಾಗುತ್ತಿರುವುದು ನಿರ್ಮಾಪಕರನ್ನು ಕಂಗೆಡಿಸಿದೆ. ಮುಂದಿನ ವಾರ ತೆರೆ ಕಾಣುತ್ತಿರುವ 'ಭೀಮ' ಸಾಕಷ್ಟು ಚಿತ್ರಮಂದಿರಗಳನ್ನು ಆಕ್ರಮಿಸಿಕೊಳ್ಳಲಿದೆ. ಈ ಎಲ್ಲ ಕಾರಣಗಳಿಂದಾಗಿ ಈ ವಾರ ಕೇವಲ ಎರಡು ಚಿತ್ರಗಳು ತೆರೆಗೆ ಬರುತ್ತಿವೆ.

ಅಡವಿಕಟ್ಟೆ: ನಟ ಅಭಿಜಿತ್ ಪ್ರಮುಖ ಪಾತ್ರದಲ್ಲಿ ನಟಿಸಿರುವ 'ಅಡವಿಕಟ್ಟೆ' ಚಿತ್ರ ತೆರೆ ಕಾಣುತ್ತಿದೆ. ಉಮ ಎಸ್.ನಿರ್ಮಿಸಿ, ಸಂಜೀವ್ ಗಾವಂಡಿ ನಿರ್ದೇಶಿಸಿರುವ ಈ ಚಿತ್ರ ಸಸ್ಪೆನ್ಸ್, ಥ್ರಿಲ್ಲರ್ ಕಥೆ ಹೊಂದಿದೆ. ಗೋಕಾಕ್ ನಗರದ ಸುತ್ತಮುತ್ತ ಚಿತ್ರೀಕರಣಗೊಂಡಿದೆ.

ಎಸ್.ಎನ್. ಈಶ್ವರ್ ಸಂಗೀತ ನಿರ್ದೇಶನ, ವೀರೇಶ್ ಛಾಯಾಚಿತ್ರಗ್ರಹಣವಿದೆ. ನಾಗರಾಜು, ಶಾಂತಿ ಮೊದಲಾದ ಕಲಾವಿದರು ತಾರಾಗಣದಲ್ಲಿದ್ದಾರೆ.

ಇಷ್ಕ್: ಬಹುತೇಕ ಹೊಸಬರಿಂದಲೇ ಕೂಡಿರುವ 'ಇಷ್ಕ್' ಕೂಡ ತೆರೆಗೆ ಬರುತ್ತಿದೆ. ವಿನಯ್ ರಾಘವೇಂದ್ರ ನಿರ್ದೇಶನದ ಚಿತ್ರದಲ್ಲಿ ರಾಜು ತ್ಯಾಗರಾಜು ನಾಯಕನಾಗಿ ನಟಿಸಿರುವುದರ ಜೊತೆಗೆ ಬಂಡವಾಳವನ್ನು ಹೂಡಿದ್ದಾರೆ. ಶ್ವೇತಾ ಭಟ್ ಕಾರವಾರ ನಾಯಕಿ. ಶ್ರೀರಾಮ್ ಗಂಧರ್ವ ಸಂಗೀತ ಚಿತ್ರಕ್ಕಿದೆ. ನಿರ್ದೇಶಕರೇ ಛಾಯಾಚಿತ್ರಗ್ರಹಣ ಮಾಡಿದ್ದಾರೆ. ಚೇತನ್ ದುರ್ಗ, ಶಿಲ್ಪಾಶ್ರೀ ಶಾಂತಕುಮಾರ್, ಸೃಜನ್ ಬೆಳ್ಮಣ್ಣು, ಶಶಾಂಕ್ ರಾಘವೇಂದ್ರ ಮುಂತಾದವರು ಚಿತ್ರದಲ್ಲಿದ್ದಾರೆ.

ಮರು ಬಿಡುಗಡೆ ಪರ್ವ: ನಟ ಸುದೀಪ್, ಅಮಲಾ ಪೌಲ್ ನಟನೆಯ 'ಹೆಬ್ಬುಲಿ' ಚಿತ್ರ ಮರು ಬಿಡುಗಡೆಗೊಳ್ಳುತ್ತಿದೆ. ಎಸ್.ಕೃಷ್ಣ ನಿರ್ದೇಶನದ ಚಿತ್ರ 2017ರಲ್ಲಿ ತೆರೆ ಕಂಡಿತ್ತು. 'ಮಾಣಿಕ್ಯ' ಚಿತ್ರದ ನಂತರ ಮತ್ತೆ ಸುದೀಪ್ ಮತ್ತು ವಿ. ರವಿಚಂದ್ರನ್ ಒಟ್ಟಿಗೆ ನಟಿಸಿದ್ದರು. ಚಿತ್ರಮಂದಿರದಲ್ಲಿ ಸಾಮಾನ್ಯ ಪ್ರತಿಕ್ರಿಯೆ ಕಂಡಿದ್ದ ಚಿತ್ರವೀಗ ಮತ್ತೆ ತೆರೆಯ ಮೇಲೆ ಬರುತ್ತಿದೆ. ಎಸ್.ಆರ್.ವಿ.ಪ್ರೊಡಕ್ಷನ್ಸ್ ಚಿತ್ರವನ್ನು ನಿರ್ಮಿಸಿತ್ತು. ಇದರೊಂದಿಗೆ ಯಶ್ ನಟನೆಯ 'ರಾಜಾಹುಲಿ', ದರ್ಶನ್ ಅಭಿನಯದ 'ಶಾಸ್ತ್ರಿ' ಸಿನಿಮಾಗಳು ಕೂಡ ತೆರೆಯಲ್ಲಿವೆ.

ಫುಲ್ ಮೀಲ್ಸ್ ಹೊಸ ಪೋಸ್ಟರ್



ಫುಲ್ ಮೀಲ್ಸ್
ಲಿಖಿತ್, ಖುಷಿ ರವಿ

ಲಿಖಿತ್ ಶೆಟ್ಟಿ ನಟನೆಯ 'ಫುಲ್ ಮೀಲ್ಸ್' ಚಿತ್ರದ ನೂತನ ಮೋಷನ್ ಪೋಸ್ಟರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಎನ್.ವಿನಾಯಕ ಮೊದಲ ಬಾರಿಗೆ ನಿರ್ದೇಶನದ ಜವಾಬ್ದಾರಿ ಹೊತ್ತಿದ್ದಾರೆ. ಲಿಖಿತ್ ಅವರೇ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಈ ಹಿಂದೆ ಅವರು 'ಸಂಕಷ್ಟಕರ ಗಣಪತಿ', 'ಫ್ಯಾಮಿಲಿ ಪ್ಯಾಕ್' ಚಿತ್ರಗಳಲ್ಲಿ ಕಾಣಿಸಿಕೊಂಡಿದ್ದರು. ಈ ಎರಡೂ ಸಿನಿಮಾಗಳು ಚಿತ್ರಮಂದಿರದಲ್ಲಿ ಅಂಥ ಯಶಸ್ಸು ಕಂಡಿರದಿದ್ದರೂ, ಒಟಿಟಿಯಲ್ಲಿ ಉತ್ತಮ ಪ್ರತಿಕ್ರಿಯೆ ಗಳಿಸಿತ್ತು.

'ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸ ಬಹುತೇಕ ಸಂಪೂರ್ಣವಾಗಿದ್ದು, ಸದ್ಯ ರೀರೆಕಾರ್ಡಿಂಗ್ ನಡೆಯುತ್ತಿದೆ. ವರ್ಷಾಂತ್ಯದೊಳಗೆ ಚಿತ್ರವನ್ನು ತೆರೆಗೆ ತರುವ ಯೋಚನೆಯಿದೆ. ಹಾಸ್ಯಮಯ ಕಥಾ ಹಂದರ ಹೊಂದಿರುವ ಚಿತ್ರವಿದು. ಮದುವೆ ಫೋಟೊ ತೆಗೆಯಲು ಬಂದ ಛಾಯಾಗ್ರಾಹಕನಿಗೆ ಮದುಮಗಳ ಮೇಲೆಯೇ ಪ್ರೀತಿಯಾದರೆ ಏನಾಗುತ್ತದೆ? ಎಂಬುದು ಈ ಚಿತ್ರದಲ್ಲಿ ತಿಳಿಯುತ್ತದೆ' ಎಂದಿದ್ದಾರೆ ಲಿಖಿತ್ ಶೆಟ್ಟಿ.

ನಾಯಕಿಯರಾಗಿ ಖುಷಿ ರವಿ ಮತ್ತು ತೇಜಸ್ವಿನಿ ಶರ್ಮ ಅಭಿನಯಿಸಿದ್ದು, ಉಳಿದಂತೆ ತಾರಾಗಣದಲ್ಲಿ ರಂಗಾಯಣ ರಘು, ಸೂರಜ್ ಲೋಕ್ರೆ, ವಿಜಯ್ ಚೆಂಡೂರ್, ರವಿ ಶಂಕರ್ ಗೌಡ, ರಾಜೇಶ್ ನಟರಂಗ, ಸುಜಯ್ ಶಾಸ್ತ್ರಿ ಮುಂತಾದವರಿದ್ದಾರೆ. ಮನೋಹರ್ ಜೋಷಿ ಛಾಯಾಚಿತ್ರಗ್ರಹಣ, ಗುರು ಕಿರಣ್ ಸಂಗೀತವಿದೆ.

ಹಲವು ಭಾಷೆಗಳಲ್ಲಿ ಮಾರ್ಟಿನ್

ಧ್ರುವ ಸರ್ಜಾ ನಟನೆಯ 'ಮಾರ್ಟಿನ್' ಚಿತ್ರ ಸಾಕಷ್ಟು ವಿಷಯಗಳಿಂದ ಆಗಾಗ ಸುದ್ದಿಯಾಗುತ್ತಲೇ ಇದೆ. ಇದೀಗ ಚಿತ್ರ ಪ್ಯಾನ್ ಇಂಡಿಯಾವನ್ನು ದಾಟಿ ಜಾಗತಿಕ ಮಟ್ಟದತ್ತ ಹೊರಟಿದೆ. ಅಕ್ಟೋಬರ್ 11ರಂದು ಚಿತ್ರ ತೆರೆಗೆ ಬರಲಿದೆ ಎಂದು ತಂಡ ಈ ಹಿಂದೆಯೇ ಹೇಳಿತ್ತು. ಆ ವಿಚಾರ ಹಂಚಿಕೊಳ್ಳಲು ತಂಡ ಮಾಧ್ಯಮದೆದುರು ಬಂದಿತ್ತು. ಆದರೆ ಅಲ್ಲಿ ಮುಖ್ಯವಾಗಿ ಚರ್ಚೆಯಾಗಿದ್ದು ಚಿತ್ರದ ನಿರ್ದೇಶಕ ಮತ್ತು ನಿರ್ಮಾಪಕರ ನಡುವಿನ ಇತ್ತೀಚಿನ ವಿವಾದಗಳ ಕುರಿತು.

'ನಮ್ಮ ನಡುವೆ ಯಾವುದೇ ಭಿನ್ನಾಭಿಪ್ರಾಯವಿಲ್ಲ. ನಾವು ಒಟ್ಟಿಗಿದ್ದೇವೆ. ಮನೆಯ ಒಳಗೆ ಸಣ್ಣಪುಟ್ಟ ಗೊಂದಲಗಳು ಇರುತ್ತವೆ. ಹಾಗೆಯೇ ಕೆಲವಷ್ಟು ಘಟನೆಗಳು ನಡೆದಿದ್ದು ನಿಜ. ಅವೆಲ್ಲವೂ ಈಗ ಮುಗಿದಿದೆ. ಸದ್ಯ ಚಿತ್ರವನ್ನು ದೊಡ್ಡ ಮಟ್ಟದಲ್ಲಿ ಜನರಿಗೆ ತಲುಪಿಸುವುದೇ ನಮ್ಮ ಗುರಿ' ಎಂದರು ಚಿತ್ರದ ನಿರ್ಮಾಪಕ ಉದಯ್ ಮೆಹ್ತಾ. ಆದರೆ ಅವರು ಚಿತ್ರದ ಬಜೆಟ್, ತಂಡ ವಾಣಿಜ್ಯ ಮಂಡಳಿ ಮೆಟ್ಟಿಲು ಹತ್ತಿದ್ದು, ಚರ್ಚೆಯಾಗುತ್ತಿರುವ ಗ್ರಾಫಿಕ್ಸ್ ಕಮಿಷನ್ ಮೊದಲಾದ ವಿಷಯಗಳ ಬಗ್ಗೆ ಯಾವುದೇ ಸ್ಪಷ್ಟನೆ ನೀಡಲಿಲ್ಲ.



ಎ.ಪಿ. ಅರ್ಜುನ್

ಇನ್ನು ಚಿತ್ರದ ನಿರ್ದೇಶಕ ಎ.ಪಿ. ಅರ್ಜುನ್ ಕೂಡ ತಮ್ಮ ಮೇಲೆ ಬಂದಿದ್ದ ಗ್ರಾಫಿಕ್ಸ್‌ಗಾಗಿ ಕಮಿಷನ್ ಪಡೆದ ಆರೋಪವನ್ನು ತಳ್ಳಿ ಹಾಕಿದ್ದಾರೆ. 'ಮೋಸ ಮಾಡಿದ ಗ್ರಾಫಿಕ್ಸ್ ಸಂಸ್ಥೆ ವಿರುದ್ಧ ಎಫ್‌ಐಆರ್ ದಾಖಲಾಗಿ, ಆರೋಪಿಗಳನ್ನು ಬಂಧಿಸಿ, ಜಾಮೀನಿನ ಮೇಲೆ ಬಿಟ್ಟು ಕಳುಹಿಸಿ 15 ದಿನಗಳು ಕಳೆದಿವೆ. ಈಗ ಕೆಲವರು ಆ ವಿವಾದವನ್ನು ಮುನ್ನೆಲೆಗೆ ತಂದಿದ್ದಾರೆ. ನಾನು ಕಮಿಷನ್ ಪಡೆದಿದ್ದಕ್ಕೆ ದಾಖಲೆಗಳಿದ್ದರೆ ನೀಡಿ ಆರೋಪಿ ಸಾಬೀತುಪಡಿಸಲಿ' ಎಂದು ನಿರ್ದೇಶಕರು ಸವಾಲು ಹಾಕಿದರು.

ನಾಯಕ ಧ್ರುವ ಸರ್ಜಾ ಮಾತನಾಡಿ, 'ಆಗಸ್ಟ್ 5ರಂದು ಮುಂಬೈನಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಚಿತ್ರದ ಟ್ರೇಲರ್ ಬಿಡುಗಡೆಯಾಗಲಿದೆ. ಕನ್ನಡ ಸೇರಿದಂತೆ ಅರೇಬಿಕ್, ಕೊರಿಯನ್, ಬಂಗಾಲಿ ಸೇರಿ 13 ಭಾಷೆಗಳಲ್ಲಿ ಟ್ರೇಲರ್ ಬಿಡುಗಡೆಗೊಳ್ಳಲಿದೆ. ನಂತರದ ದಿನಗಳಲ್ಲಿ ಅಲ್ಲಿನ ಭಾಷೆಗಳ ವಿತರಕರು ಮುಂದೆ ಬಂದರೆ ಅದೇ ಭಾಷೆಗಳಲ್ಲಿ ಚಿತ್ರ ಬಿಡುಗಡೆ ಮಾಡುತ್ತೇವೆ. ಅಂದು ಅಂತರರಾಷ್ಟ್ರೀಯ ಮಟ್ಟದ ಸುದ್ದಿಗೋಷ್ಠಿ ಕೂಡ ಇರುತ್ತದೆ. 21 ದೇಶಗಳಿಂದ 27 ವರದಿಗಾರರು ಬರುತ್ತಿದ್ದಾರೆ. ಆ.4ರಂದು ಬೆಂಗಳೂರಿನ ವೀರೇಶ್ ಚಿತ್ರಮಂದಿರದಲ್ಲಿ ಅಭಿಮಾನಿಗಳಿಗಾಗಿ ಟ್ರೇಲರ್ ಬಿಡುಗಡೆಗೊಳ್ಳಲಿದೆ. ಈಗಾಗಲೇ ಇದಕ್ಕೆ ಟಿಕೆಟ್ ಬುಕ್ಕಿಂಗ್ ಪ್ರಾರಂಭವಾಗಿದೆ' ಎಂದು ಮಾಹಿತಿ ನೀಡಿದರು.

ಚಿತ್ರಕ್ಕೆ ರವಿ ಬಸ್ರೂರು ಸಂಗೀತ, ಸತ್ಯ ಹೆಗಡೆ ಛಾಯಾಚಿತ್ರಗ್ರಹಣವಿದೆ. ವೈಭವಿ ಶಾಂಡಿಲ್ಯ ಚಿತ್ರದ ನಾಯಕಿ. ಭಾರತ ಮತ್ತು ಪಾಕಿಸ್ತಾನ ನಡುವಿನ ಕಥೆಯಲ್ಲಿ ದೇಶಭಕ್ತಿಯ ಎಳೆಯನ್ನು ಹೊಂದಿರುವ ಚಿತ್ರವಿದು.



ವೈಭವಿ ಶಾಂಡಿಲ್ಯ, ಧ್ರುವ ಸರ್ಜಾ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು–01
ಇ–ಮೇಲ್ : editpage@prajavani.co.in



ಸುಭಾಷಿತ

ನಿಮ್ಮ ಕೋಪ ನಿಮಗೇ ಶಿಕ್ಷೆ ನೀಡುತ್ತದೆ.
–ಗೌತಮ ಬುದ್ಧ

ನೀತಿ ಆಯೋಗದ ಸಭೆ ಒಗ್ಗಟ್ಟಿನ ಬದಲು ಒಡಕಿನ ಬಿಂಬ

ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಈಚೆಗೆ ನಡೆದ ನೀತಿ ಆಯೋಗದ ಸಭೆಯು ಒಗ್ಗಟ್ಟಿನಿಂದ ಕೆಲಸ ಮಾಡುವ ಮನೋಭಾವವನ್ನು ಪ್ರದರ್ಶಿಸುವ ಬದಲು, ಒಡಕನ್ನು ತೋರಿಸುವ ಮೂಲಕ ಮುಕ್ತಾಯ ಕಂಡಿದೆ. ಈ ಸಭೆಯ ಪ್ರಧಾನ ವಿಷಯ 'ವಿಕಸಿತ ಭಾರತ @ 2047' ಆಗಿತ್ತು. ಹತ್ತು ರಾಜ್ಯಗಳ ಮುಖ್ಯಮಂತ್ರಿಗಳು ಸಭೆಯಿಂದ ದೂರ ಉಳಿದರು. ಈ ಪೈಕಿ, ಬಿಜೆಪಿಯನ್ನು ರಾಜಕೀಯವಾಗಿ ವಿರೋಧಿಸುವ ಪಕ್ಷಗಳ ನೇತೃತ್ವದ ಸರ್ಕಾರಗಳು ಇರುವ ಏಳು ರಾಜ್ಯಗಳ ಮುಖ್ಯಮಂತ್ರಿಗಳು ಸಭೆಯನ್ನು ಬಹಿಷ್ಕರಿಸಿದ್ದರು. ಇವರಲ್ಲಿ ಕರ್ನಾಟಕದ ಮುಖ್ಯಮಂತ್ರಿಯೂ ಇದ್ದಾರೆ. ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಸಭೆಗೆ ಬಂದಿದ್ದರಾದರೂ ಮಧ್ಯದಲ್ಲೇ ಎದ್ದು ಹೊರನಡೆದರು. ತಮ್ಮ ಕ್ರಮವನ್ನು ಅವರು ಬಹಿಷ್ಕಾರ ಎಂದೇ ಕರೆದರು. ನೀತಿ ಆಯೋಗದ ಚಟುವಟಿಕೆಗಳ ಕುರಿತು ಹಿಂದೆಯೂ ಟೀಕೆಗಳು ಇದ್ದವು. ಆದರೆ ಈಗಿನ ಬಹಿಷ್ಕಾರವು ಒಕ್ಕೂಟ ವ್ಯವಸ್ಥೆಯಲ್ಲಿನ ಸಂಬಂಧಗಳು ಹಾಗೂ ಅಭಿವೃದ್ಧಿಯ ವಿಚಾರದಲ್ಲಿ ನೀತಿ ಆಯೋಗದ ಪಾತ್ರದ ಬಗ್ಗೆ ಹೆಚ್ಚಿನ ಗಮನಹರಿಸುವಂತೆ ಮಾಡಿದೆ. ನೀತಿ ಆಯೋಗವನ್ನು ಮೋದಿ ನೇತೃತ್ವದ ಸರ್ಕಾರವು 2015ರಲ್ಲಿ ಸಲಹಾ ಸಂಸ್ಥೆಯ ರೂಪದಲ್ಲಿ ರಚಿಸಿತ್ತು. ಅದುವರೆಗೆ ಇದ್ದ ಯೋಜನಾ ಆಯೋಗದ ಬದಲಿಗೆ ನೀತಿ ಆಯೋಗವನ್ನು ರಚಿಸಲಾಯಿತು. ನೀತಿ ಆಯೋಗವು ಸಹಕಾರ ಒಕ್ಕೂಟ ವ್ಯವಸ್ಥೆಗೆ ಇಂಬು ಕೊಡುತ್ತದೆ ಎಂಬ ನಿರೀಕ್ಷೆ ಹೊಂದಲಾಗಿತ್ತು.



ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಡುವೆ ಸಂವಾದಕ್ಕೆ ಅವಕಾಶ ಮಾಡಿಕೊಡಬೇಕಾದ ವೇದಿಕೆಗಳು ಎಂದಿಗೂ ದುರ್ಬಲವಾಗಬಾರದು

ಕೇಂದ್ರ ಬಜೆಟ್‌ನಲ್ಲಿ ನ್ಯಾಯಸಮ್ಮತವಾದ ಪಾಲು ಸಿಕ್ಕಿಲ್ಲ, ಯೋಜನೆಗಳ ಹಂಚಿಕೆಯಲ್ಲಿ ತಾರತಮ್ಯ ಆಗಿದೆ ಎಂದು ಅನ್ನಿಸಿದ ಕಾರಣಕ್ಕೆ ರಾಜ್ಯಗಳು ಸಭೆಯನ್ನು ಬಹಿಷ್ಕರಿಸಿದ್ದವು. ಆದರೆ, ಈ ರೀತಿ ಬಹಿಷ್ಕಾರ ಮಾಡಿರುವುದಕ್ಕೆ ಹಳೆಯ ಕಾರಣಗಳು ಇವೆ. ನೀತಿ ಆಯೋಗವು ಯಾವಾಗಲೂ ಕೇಂದ್ರ ಸರ್ಕಾರದ ಜೊತೆ ನಿಂತಿದೆಯೇ ವಿನಾ ಅದು ರಾಜ್ಯಗಳ ಜೊತೆ ಹೆಚ್ಚು ಸಂವಾದ ನಡೆಸಿಲ್ಲ. ಆಯೋಗವು ರಾಜ್ಯಗಳ ಸಕ್ರಿಯ ಭಾಗೀದಾರಿಕೆಗೆ ಅವಕಾಶ ಕಲ್ಪಿಸುತ್ತದೆ ಎಂಬ ನಿರೀಕ್ಷೆ ಇತ್ತು. ಆದರೆ, ಅದು ಕೇಂದ್ರ ಸರ್ಕಾರದ ಸಲಹಾ ಸಂಸ್ಥೆಯ ರೂಪದಲ್ಲಿಯೇ ಕೆಲಸ ಮಾಡುತ್ತಾ ಬಂದಿದೆ. ರಾಜ್ಯಗಳಿಗೆ ಸಂಪನ್ಮೂಲ ಹಂಚುವುದರಲ್ಲಿ ಯೋಜನಾ ಆಯೋಗದ ಪಾತ್ರವು ಇರುತ್ತಿತ್ತು. ಆದರೆ, ನೀತಿ ಆಯೋಗಕ್ಕೆ ಅಂತಹ ಪಾತ್ರ ಇಲ್ಲ. ಚರ್ಚೆ, ಸಂವಾದ ಹಾಗೂ ನಿರ್ಣಯಗಳನ್ನು ಕೈಗೊಳ್ಳುವುದಕ್ಕಾಗಿ ರೂಪಿಸಿದ ರಾಷ್ಟ್ರೀಯ ಅಭಿವೃದ್ಧಿ ಮಂಡಳಿ (ಎನ್‌ಡಿಸಿ) ಈಗ ಬಹುತೇಕ ನಿಷ್ಕ್ರಿಯವಾಗಿದೆ. ಈ ಮಂಡಳಿಯು ಒಕ್ಕೂಟ ವ್ಯವಸ್ಥೆಗೆ ಅಗತ್ಯವಿದ್ದಂತಹ ವೇದಿಕೆಯಾಗಿತ್ತು. ತಮಗೆ ಸಂಬಂಧಿಸಿದ ನೀತಿಗಳು ಹಾಗೂ ನಿರ್ಧಾರಗಳಲ್ಲಿ ತಮ್ಮ ಮಾತಿಗೆ ಬೆಲೆ ಇಲ್ಲವಾಗಿದೆ ಎಂದು ಹಲವು ರಾಜ್ಯಗಳಿಗೆ ಅನ್ನಿಸುತ್ತಿದೆ. ರಾಜ್ಯಗಳ ಜೊತೆ ಮಾತುಕತೆಯೂ ನಡೆಯುತ್ತಿಲ್ಲ.

ನೀತಿ ಆಯೋಗದ ಸಭೆಯು ಹಲವು ವಿಷಯಗಳ ಬಗ್ಗೆ ಚರ್ಚಿಸಿತು. ರಾಜ್ಯಗಳಿಗೆ ಹೂಡಿಕೆದಾರಸ್ನೇಹಿ ಸೂಚ್ಯಂಕವೊಂದನ್ನು ರೂಪಿಸುವುದು, ಬಡತನವನ್ನು ಹೋಗಲಾಡಿಸುವುದು ಹಾಗೂ ನದಿಗಳ ಜೋಡಣೆ ಕುರಿತು ಚರ್ಚೆಗಳು ನಡೆದವು ಎಂದು ವರದಿಗಳು ಹೇಳಿವೆ. ಈ ವಿಚಾರಗಳಲ್ಲಿ ಕ್ರಿಯಾಶೀಲರಾಗಬೇಕು ಎಂದು ಪ್ರಧಾನಿಯವರು ಪ್ರತಿಪಾದಿಸಿದರು. ಯುವಕರನ್ನು ಉದ್ಯೋಗ ನಿಪುಣರನ್ನಾಗಿ ಸಜ್ಜುಗೊಳಿಸುವುದನ್ನು ಸಾಧ್ಯವಾಗಿಸಬೇಕು ಎಂದೂ ಅವರು ಹೇಳಿದ್ದಾರೆ. ಸಭೆಯಲ್ಲಿ ನಡೆದ ಚರ್ಚೆಗಳಲ್ಲಿ ರಾಜ್ಯಗಳು ಬಹಳ ಹುರುಪಿನಿಂದ ಭಾಗಿಯಾಗಿದ್ದವು, ಹಲವು ಸಲಹೆಗಳನ್ನು ನೀಡಿದವು ಎಂದು ಕೂಡ ಹೇಳಲಾಗಿದೆ. ಆದರೆ, ಭಾರತದ ದೊಡ್ಡ ಭೂಭಾಗವನ್ನು ಪ್ರತಿನಿಧಿಸುವ ರಾಜ್ಯಗಳು ಸಭೆಯಲ್ಲಿ ಭಾಗಿಯಾಗಿರಲಿಲ್ಲ, ಈ ಸಭೆಯು ಕೇಂದ್ರ ಹಾಗೂ ಹಲವು ರಾಜ್ಯಗಳ ನಡುವೆ ಮೂಡಿರುವ ಅವಿಶ್ವಾಸದ ದ್ಯೋತಕವಾಯಿತು ಎಂಬುದು ಮುಖ್ಯವಾಗುತ್ತದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಡುವೆ ಸಂವಾದಕ್ಕೆ ಅವಕಾಶ ಮಾಡಿಕೊಡಬೇಕಿದ್ದ ವೇದಿಕೆಗಳು ದುರ್ಬಲಗೊಂಡಿವೆ, ಕೆಲವು ವೇದಿಕೆಗಳು ನಿಷ್ಕ್ರಿಯವಾಗಿವೆ. ಇದು, ಗಂಭೀರ ಕಳವಳಕ್ಕೆ ಕಾರಣವಾಗುವ ಸಂಗತಿಯೇ ಹೌದು.

ದಿನದ ಟ್ವೀಟ್

ಒಗ್ಗಟ್ಟು ತೋರೋಣ...



ವಯನಾಡ್‌ನಲ್ಲಿ ಸಂಭವಿಸಿರುವ ವಿನಾಶಕಾರಿ ಭೂಕುಸಿತಗಳು ಅನೇಕ ಕುಟುಂಬಗಳನ್ನು ಭೀಕರವಾಗಿ ಬಾಧಿಸಿವೆ. ನೂರಾರು ಜನರ ಜೀವಹಾನಿಯಾಗಿದೆ. ಹಲವು ಮನೆಗಳು ನಾಶವಾಗಿವೆ... ಇಂತಹ ಸಮಯದಲ್ಲಿ ನಾವು ತೋರುವ ಸಹಾನುಭೂತಿ ಮತ್ತು ನೀಡುವ ಬೆಂಬಲವು ಬಹಳಷ್ಟು ಬದಲಾವಣೆಯನ್ನು ತರಬಲ್ಲವು. ಈ ಸಂಕಷ್ಟದ ಸಮಯದಲ್ಲಿ ವಯನಾಡ್ ಜತೆಗೆ ನಿಲ್ಲೋಣ. ಮಾನವೀಯತೆಯೊಂದಿಗೆ ಒಗ್ಗಟ್ಟನ್ನು ಪ್ರದರ್ಶಿಸೋಣ. ಪ್ರತಿ ಕೊಡುಗೆಗೂ ಬೆಲೆ ಇದೆ.

ಸೋನಲ್ ಗೋಯಲ್, ಐಎಎಸ್ ಅಧಿಕಾರಿ

ಕಿಡಿನುಡಿ



ಮುಡಾ ನಿವೇಶನ ಅಕ್ರಮ ಹಂಚಿಕೆ ಆರೋಪದ ವಿಚಾರವಾಗಿ ಎದ್ದಿರುವ ಬಿರುಗಾಳಿ ಅಲ್ಲಿಗೇ ತಣ್ಣಗಾಗದೆ, ರಾಜ್ಯದಲ್ಲಿ ಬೇರೆ ಬೇರೆ ಕಡೆ ವಿವಿಧ ರಾಜಕೀಯ ಪಕ್ಷಗಳ ಮುಖಂಡರಿಗೆ ಸಂಬಂಧಿಸಿರಬಹುದಾದ ಅಕ್ರಮ ನಿವೇಶನ ಅಥವಾ ಭೂ ವರ್ಗಾವಣೆ ಬಗ್ಗೆಯೂ ತನಿಖೆ ನಡೆಯಲಿ. ಎಲ್ಲಾ ತರಹದ ಅಕ್ರಮ ಬೇನಾಮಿ ಹೊರಬರಲಿ...

ರೋಹಿತ್ ಸಿಂಹ, ಎಂಜಿನಿಯರ್

25 ವರ್ಷಗಳ ಹಿಂದೆ
ಸೋಮವಾರ, 2-8-1999

• **ಶಸ್ತ್ರಸಜ್ಜಿತ ಉಗ್ರರನ್ನು ನುಸುಳಿಸುವ ಪಾಕಿಸ್ತಾನದ ಯತ್ನ ವಿಫಲ; 6 ಸಾವು**

ಶ್ರೀನಗರ, ಆ. 1 (ಪಿಟಿಐ)– ಕಾಶ್ಮೀರ ಕಣಿವೆಗೆ ಶಸ್ತ್ರಸಜ್ಜಿತ ಉಗ್ರಗಾಮಿಗಳನ್ನು ನುಸುಳಿಸುವ ಪಾಕಿಸ್ತಾನದ ಮುಂದುವರಿದ ಪ್ರಯತ್ನವನ್ನು ಸೇನಾಪಡೆಗಳು ವಿಫಲಗೊಳಿಸಿ, ಕುಪ್ವಾರ ಜಿಲ್ಲೆಯ ನೌಗಾಂನಲ್ಲಿ ಆರು ಮಂದಿ ಅತಿಕ್ರಮಣಕಾರರನ್ನು ಗುಂಡಿಕ್ಕಿ ಕೊಂದಿವೆ.

ನೌಗಾಂ ವಲಯದಲ್ಲಿ ಗೂರ್ಖಾ ರೈಫಲ್ಸ್ ಪಡೆಯು ನಿನ್ನೆ ಸಂಜೆ ಭಾರಿ ಗಸ್ತು ನಡೆಸುತ್ತಿದ್ದಾಗ ಬಾಡಿಗೆ ಹಂತಕರನ್ನು ಕಣಿವೆಗೆ ನುಸುಳಿಸುವ ಪಾಕಿಸ್ತಾನದ ಸಂಚು ಪತ್ತೆ ಹಚ್ಚಿದೆ ಎಂದು ಮೂಲಗಳು ತಿಳಿಸಿವೆ.

ಕಾರ್ಗಿಲ್ ಪಟ್ಟಣದಲ್ಲಿರುವ ಜಿಲ್ಲಾ ಆಸ್ಪತ್ರೆ ಮೇಲೆ, ಯಾವುದೇ ಪ್ರಚೋದನೆ ಇಲ್ಲದೆ ಪಾಕಿಸ್ತಾನದ ಪಡೆಗಳು ಇಂದು ಮಧ್ಯಾಹ್ನ ಷೆಲ್ ದಾಳಿ ನಡೆಸಿರುವುದರಿಂದ ರೋಗಿಗಳು ಹಾಗೂ ಸ್ಥಳೀಯ ಜನರು ಭಯಭೀತರಾಗಿದ್ದಾರೆ. ಆದರೆ, ಇತರ ವಲಯಗಳು ಶಾಂತಿಯುತವಾಗಿವೆ ಎಂದು ಕಾರ್ಗಿಲ್‌ನಿಂದ ಬಂದಿರುವ ವರದಿಗಳು ತಿಳಿಸಿವೆ.

• **ಪಟೇಲ್ ಕುರ್ಚಿ ಬಿಡಬೇಕಿತ್ತು: ಸಿದ್ದರಾಮಯ್ಯ**

ಹಾಸನ, ಆ. 1– 'ಜೆ.ಎಚ್. ಪಟೇಲ್ ಅವರಿಗೆ ಸ್ವಲ್ಪವಾದರೂ ಮಾನ–ಮರ್ಯಾದೆ ಇದ್ದಿದ್ದರೆ ಮುಖ್ಯಮಂತ್ರಿ ಕುರ್ಚಿ ಬಿಟ್ಟು ಹೋಗಬೇಕಿತ್ತು' ಎಂದು ಮಾಜಿ ಉಪಮುಖ್ಯಮಂತ್ರಿ ಹಾಗೂ ಪ್ರದೇಶ ಜನತಾದಳ (ದೇವೇಗೌಡ ಬಣ) ಅಧ್ಯಕ್ಷ ಸಿದ್ದರಾಮಯ್ಯ ಇಂದು ಇಲ್ಲಿ ಜೆ.ಎಚ್. ಪಟೇಲರನ್ನು ಛೇಡಿಸಿದರು.

ಇಲ್ಲಿ ನಡೆದ ಪಕ್ಷದ ಕಾರ್ಯಕರ್ತರ ಸಮಾವೇಶದಲ್ಲಿ ಮಾತನಾಡಿದ ಅವರು, 'ಪಟೇಲರು ತಮ್ಮೊಂದಿಗೆ ಮುಖ್ಯಮಂತ್ರಿ ಕುರ್ಚಿಯನ್ನೂ ಎತ್ತಿಕೊಂಡು ಹೋಗಿದ್ದಾರೆ. ಈ ತಂತ್ರವನ್ನು ರಾಮಕೃಷ್ಣ ಹೆಗಡೆ, ಪಟೇಲ್, ಬೈರೇಗೌಡ ಮತ್ತು ನಾಗೇಗೌಡರನ್ನು ಒಳಗೊಂಡ ಶಕ್ತಿಯು ರೂಪಿಸಿತು' ಎಂದು ಟೀಕಿಸಿದರು.

50 ವರ್ಷಗಳ ಹಿಂದೆ
ಶುಕ್ರವಾರ, 2-8-1974

• **ನಾಗಾ ದಂಗೆಕೋರರ ಅಧಿಕ ಹಿಂಸಾಚಾರದ ವಿರುದ್ಧ ಬಿರುಸು ಕ್ರಮ**

ನವದೆಹಲಿ, ಆ. 1– ನಾಗಾಲ್ಯಾಂಡ್ ಅಥವಾ ಮಿಜೋರಾಂಗೆ ಸ್ವತಂತ್ರ ಸ್ಥಾನಮಾನ ನೀಡುವ ವಿಚಾರವನ್ನು ಸರ್ಕಾರ ಯಾವುದೇ ಪರಿಸ್ಥಿತಿಯಲ್ಲೂ ಪರಿಶೀಲಿಸಬಹುದೆಂದು ಇಂದು ಲೋಕಸಭೆಯಲ್ಲಿ ಗೃಹ ಸಚಿವ ಉಮಾಶಂಕರ ದೀಕ್ಷಿತ್ ಖಂಡತುಂಡವಾಗಿ ತಿಳಿಸಿದರು.

ದಂಗೆಕೋರರ ಹಿಂಸಾಚಾರ ಈಚೆಗೆ ಹೆಚ್ಚುತ್ತಿದ್ದು, ಭದ್ರತಾ ಕಾರ್ಯಾಚರಣೆಗಳನ್ನೂ ಬಿರುಸುಗೊಳಿಸಲಾಗಿದೆಯೆಂದ ಅವರು, ಬಂಡಾಯಕೋರರು, ಕದನಕೋರರ ಧೋರಣೆಯನ್ನು ಇನ್ನು ಸಹಿಸಲಾಗದೆಂದರು.

ಜನರ ಅಪಹರಣ ನಡೆಯುತ್ತಿದೆ. ಅವರನ್ನು ದಂಗೆಕೋರರ ಗುಂಪಿಗೆ ಬಲಾತ್ಕಾರವಾಗಿ ಸೇರಿಸಿಕೊಳ್ಳಲಾಗುತ್ತಿದೆ. ಜನರ ಪ್ರಾಣ ಮತ್ತು ಆಸ್ತಿ ರಕ್ಷಿಸಲು ಸರ್ಕಾರ ಸಾಕಷ್ಟು ಕ್ರಮ ತೆಗೆದುಕೊಳ್ಳಬೇಕು ಎಂದರು.

• **ಎಂ.ಎಸ್. ಸುಬ್ಬುಲಕ್ಷ್ಮಿಗೆ ಮ್ಯಾಗ್ಸೆಸೆ ಪ್ರಶಸ್ತಿ**

ಮನಿಲಾ, ಆ. 1– ದಕ್ಷಿಣ ಭಾರತದ ಶಾಸ್ತ್ರೀಯ ಸಂಗೀತ ಮತ್ತು ಭಜನೆಗಳನ್ನು ಹಾಡಿ ಸಮಾಜ ಕಲ್ಯಾಣ ಕಾರ್ಯಗಳಿಗಾಗಿ ಹತ್ತು ಲಕ್ಷ ಅಮೆರಿಕನ್ ಡಾಲರ್‌ಗಳಿಗೂ ಹೆಚ್ಚು ನಿಧಿ ಕೂಡಿಸಿಕೊಟ್ಟಿರುವ ಭಾರತದ ಗಾನಕೋಗಿಲೆ ಎಂ.ಎಸ್. ಸುಬ್ಬುಲಕ್ಷ್ಮಿ ಅವರಿಗೆ 1974ನೆಯ ಸಾಲಿನ ರೇಮನ್ ಮ್ಯಾಗ್ಸೆಸೆ ಪ್ರಶಸ್ತಿ ಲಭಿಸಿದೆ.

ಸಮಾಜಸೇವೆಗಾಗಿ ನೀಡುವ ಈ ಪ್ರಶಸ್ತಿಯನ್ನು ಈ ಬಾರಿ ಕರ್ನಾಟಕ ಸಂಗೀತ ವಿದುಷಿ ಶ್ರೀಮತಿ ಸುಬ್ಬುಲಕ್ಷ್ಮಿ ಅವರಿಗೆ ನೀಡಲು ಇಂದು ಇಲ್ಲಿ ಸಮಾವೇಶಗೊಂಡಿದ್ದ ಪ್ರಶಸ್ತಿಯ ಧರ್ಮದರ್ಶಿಗಳ ಮಂಡಲಿ ಸಭೆ ನಿರ್ಧರಿಸಿತು.

ಶ್ರೀಮತಿ ಸುಬ್ಬುಲಕ್ಷ್ಮಿಯವರು ಈ ಪ್ರಶಸ್ತಿ ಪಡೆದಿರುವ ಭಾರತೀಯರಲ್ಲಿ ನಾಲ್ಕನೆಯವರು.

ಕೇಂದ್ರದಿಂದ ರಾಜ್ಯಕ್ಕೆ, ರಾಜ್ಯದಿಂದ ಸ್ಥಳೀಯ ಸರ್ಕಾರಕ್ಕೆ ಆಗಬೇಕು ಅಧಿಕಾರ ಹಂಚಿಕೆ

ಬಿಕ್ಕಟ್ಟಿಗೆ ವಿಕೇಂದ್ರೀಕರಣದ ಮದ್ದು



ವಿಶ್ಲೇಷಣೆ
ಟಿ.ಎಸ್.ವೇಣುಗೋಪಾಲ್

'ಇಡೀ ಅಮೆರಿಕಕ್ಕೆ ಸರಿಹೋಗುವ ಒಂದು ನೀತಿಯನ್ನು ರೂಪಿಸುವುದಕ್ಕೆ ಸಾಧ್ಯವಿಲ್ಲ' ಎನ್ನುತ್ತಾರೆ, ಅಮೆರಿಕದ ಆರ್ಥಿಕತೆಯನ್ನು ವಿಶ್ಲೇಷಿಸಿರುವ ಅರ್ಥಶಾಸ್ತ್ರಜ್ಞ ರಾಜ್ ಚೆಟ್ಟಿ. ಈ ಮಾತು ಭಾರತವೂ ಸೇರಿದಂತೆ ಎಲ್ಲ ದೊಡ್ಡ ರಾಷ್ಟ್ರಗಳಿಗೆ ಸಂಬಂಧಿಸಿದಂತೆಯೂ ನಿಜ ಎನಿಸುತ್ತದೆ. ಕಾಶ್ಮೀರಕ್ಕೆ ಅನುಕೂಲಕರ ಆಗಬಹುದಾದ ನೀತಿಯು ಕೇರಳಕ್ಕೋ ರಾಜಸ್ಥಾನಕ್ಕೋ ಅನುಕೂಲಕರ ಆಗದೇ ಇರಬಹುದು. ಆ ರಾಜ್ಯಗಳ ಆರ್ಥಿಕ ಪರಿಸ್ಥಿತಿ, ಸಂಸ್ಕೃತಿ, ಹವಾಮಾನ ಎಲ್ಲವೂ ಬೇರೆ ಬೇರೆಯಾಗಿಯೇ ಇರುತ್ತವೆ.

ದೇಶ ದೊಡ್ಡದಾದಷ್ಟೂ ವೈವಿಧ್ಯ ಹೆಚ್ಚುತ್ತದೆ, ಆದ್ಯತೆಗಳು ಬೇರೆಯಾಗುತ್ತಾ ಹೋಗುತ್ತವೆ. ಎಷ್ಟೇ ಎಚ್ಚರಿಕೆಯಿಂದ ನೀತಿಗಳನ್ನು ರೂಪಿಸಿದರೂ ಅದರ ಬಗ್ಗೆ ಒಂದು ಪ್ರಾಂತ್ಯದವರಿಗೋ ಒಂದು ಸಮುದಾಯದವರಿಗೋ ಅತೃಪ್ತಿ ಇದ್ದೇ ಇರುವ ಸಾಧ್ಯತೆ ಇರುತ್ತದೆ. ಕೆಲವೊಮ್ಮೆ ಈ ಅತೃಪ್ತಿ ಬೆಳೆದು ಹಿಂಸಾತ್ಮಕ ಪ್ರತಿರೋಧವಾಗಿ ಪ್ರಕಟವಾಗಿರುವುದನ್ನೂ ನೋಡಿದ್ದೇವೆ. ಆಡಳಿತವು ಕೇಂದ್ರೀಕೃತವಾದಷ್ಟೂ ಸರ್ಕಾರವು ಜನರಿಂದ ದೂರವಾಗುತ್ತಾ ಹೋಗುತ್ತದೆ. ಪರಿಣಾಮಕಾರಿಯಾದ ಆಡಳಿತ ನೀಡುವುದು ಕಷ್ಟವಾಗುತ್ತದೆ.

ದೊಡ್ಡ ರಾಷ್ಟ್ರಗಳಿಗೆ ಆಂತರಿಕವಾಗಿ ಏಕತೆ ಕಾಪಾಡಿಕೊಳ್ಳುವುದೇ ದೊಡ್ಡ ಸವಾಲು. ಆದರೆ ಅವುಗಳಿಗೆ ಹಲವು ಅನುಕೂಲಗಳೂ ಇವೆ. ಪ್ರಬಲವಾದ ಸೇನೆಯನ್ನು ಕಟ್ಟಿಕೊಳ್ಳಬಹುದು. ಹೊರಗಿನ ಶತ್ರುಗಳನ್ನು ಪರಿಣಾಮಕಾರಿಯಾಗಿ ಎದುರಿಸಬಹುದು. ಕೊಳ್ಳುವವರ ಸಂಖ್ಯೆ ಹೆಚ್ಚಾಗಿ ಇರುವುದರಿಂದ ಕೈಗಾರಿಕೆಗಳು ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಸಣ್ಣ ದೇಶಗಳು ಸಾಮಾನ್ಯವಾಗಿ ಹೆಚ್ಚು ಸಕ್ರಿಯವಾಗಿರುತ್ತವೆ. ಅಲ್ಲಿ ಹೆಚ್ಚಿನ ಬೆಳವಣಿಗೆಯೂ ಆಗಿರುತ್ತದೆ.

ಭಾರತಕ್ಕೆ ದೊಡ್ಡ ರಾಷ್ಟ್ರಗಳಿಗೆ ಇರುವಂತಹ ಅನುಕೂಲವೂ ಇದೆ, ಸಣ್ಣ ರಾಷ್ಟ್ರಗಳಿಗೆ ಲಭ್ಯವಾಗುವಂತಹ ಅನುಕೂಲವೂ ಇದೆ. ಒಕ್ಕೂಟ ವ್ಯವಸ್ಥೆಯಿಂದಾಗಿ ದಕ್ಕಿರುವ ಅನುಕೂಲಗಳು ಅವು. ರಾಷ್ಟ್ರಮಟ್ಟದಲ್ಲಿ ದೊಡ್ಡ ಪ್ರಮಾಣದಲ್ಲಿ ನಿರ್ವಹಿಸಬೇಕಾದ ರಕ್ಷಣೆ, ಅಂತರರಾಷ್ಟ್ರೀಯ ವ್ಯಾಪಾರ, ನಾಣ್ಯಗಳ ನಿರ್ವಹಣೆ ಎಲ್ಲವನ್ನೂ ಕೇಂದ್ರ ನಿರ್ವಹಿಸುತ್ತದೆ. ಶಿಕ್ಷಣ, ಆರೋಗ್ಯ, ನೈರ್ಮಲ್ಯಕ್ಕೆ ಸಂಬಂಧಿಸಿದ ವಿಷಯಗಳನ್ನು ರಾಜ್ಯ ಹಾಗೂ ಸ್ಥಳೀಯ ಸರ್ಕಾರಗಳು ನೋಡಿಕೊಳ್ಳುತ್ತವೆ.


ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳ ಜವಾಬ್ದಾರಿಗಳನ್ನು ಸಂವಿಧಾನದಲ್ಲಿ ಸ್ಪಷ್ಟವಾಗಿ ವಿಂಗಡಿಸಲಾಗಿದೆ. ಹಾಗಿದ್ದಾಗ್ಯೂ ಕೆಲವೊಮ್ಮೆ ರಾಜ್ಯಗಳು ಮತ್ತು ಕೇಂದ್ರದ ನಡುವೆ ಘರ್ಷಣೆಯಿರುತ್ತದೆ. ಅಧಿಕಾರ ಯಾರ ಬಳಿ ಇರಬೇಕು ಎನ್ನುವುದಕ್ಕಿಂತ ಯಾರು ಅದನ್ನು ಹೆಚ್ಚು ಪರಿಣಾಮಕಾರಿಯಾಗಿ, ಜನತೆಗೆ ಅನುಕೂಲವಾಗುವ ರೀತಿಯಲ್ಲಿ ನಿರ್ವಹಿಸಬಲ್ಲರು ಎನ್ನುವುದು ಮುಖ್ಯವಾಗಬೇಕು. ಅದಕ್ಕೆ ತಕ್ಕಂತೆ ಅಧಿಕಾರ ಹಾಗೂ ಸಂಪನ್ಮೂಲ ಹಂಚಿಕೆಯಾಗಬೇಕು.

ಬೇರೆ ದೇಶಗಳಿಗೆ ಹೋಲಿಸಿದರೆ ನಮ್ಮದು ರಾಜಕೀಯವಾಗಿ, ಆರ್ಥಿಕವಾಗಿ ಹೆಚ್ಚು ಕೇಂದ್ರೀಕೃತವಾಗಿರುವ ರಾಷ್ಟ್ರ. ಒಟ್ಟಾರೆ ಸಂಗ್ರಹವಾದ ತೆರಿಗೆ ಹಣದಲ್ಲಿ ರಾಜ್ಯಗಳಿಗೆ ಸಿಗುವುದು ಶೇ 30ರಷ್ಟು ಮಾತ್ರ. ಸ್ಥಳೀಯ ಸರ್ಕಾರಗಳಿಗೆ ಸಿಗುವುದು ಬರೀ ಶೇ 3ರಷ್ಟು ಪಾಲು. ತೀರಾ ಕೇಂದ್ರೀಕೃತ ರಾಷ್ಟ್ರ ಎಂದು ಭಾವಿಸಿರುವ ಚೀನಾದಲ್ಲಿ ಶಿಕ್ಷಣ, ಆರೋಗ್ಯದಂತಹ ವಿಷಯಗಳಿಗೆ ಸಂಬಂಧಿಸಿದ ದಿನನಿತ್ಯದ ವ್ಯವಹಾರಗಳನ್ನು ಬಹುತೇಕ ಸ್ಥಳೀಯ ಸರ್ಕಾರಗಳೇ ನೋಡಿಕೊಳ್ಳುತ್ತಿವೆ.

ಭಾರತದಲ್ಲಿ ಅತಿ ಕೇಂದ್ರೀಕರಣಕ್ಕೆ ಐತಿಹಾಸಿಕ ಕಾರಣಗಳಿವೆ. ಸ್ವಾತಂತ್ರ್ಯಪೂರ್ವದಲ್ಲಿ ದೇಶವನ್ನು 500ಕ್ಕೂ ಹೆಚ್ಚು ರಾಜರು ಆಳುತ್ತಿದ್ದರು. ಅವರನ್ನು ಒಟ್ಟಿಗೆ ತರಲು ಒಂದು ಬಲವಾದ ಕೇಂದ್ರ ವ್ಯವಸ್ಥೆ ಬೇಕಿತ್ತು. ಈ ಪ್ರಕ್ರಿಯೆಯಲ್ಲಿ ಕೇಂದ್ರ ಸರ್ಕಾರಕ್ಕೆ ವಿಪರೀತ ಎನಿಸುವಷ್ಟು ಅಧಿಕಾರ ಸಿಕ್ಕಿಬಿಟ್ಟಿತು. ಸಾಮಾಜಿಕವಾಗಿ ಅಂಚಿಗೆ ಸರಿದವರಿಗೆ, ಮಹಿಳೆಯರಿಗೆ ಪಿತೃಪ್ರಧಾನ ಮನಃಸ್ಥಿತಿಯ ಸ್ಥಳೀಯ ನಾಯಕರಿಂದ ತೊಂದರೆಯಾಗುತ್ತದೆ ಎನ್ನುವ ಸಹಜ ಆತಂಕ ಅಂಬೇಡ್ಕರ್ ಹಾಗೂ ನೆಹರೂ ಅಂತಹವರಿಗಿತ್ತು. ಅದು ಕೂಡ ಪ್ರಬಲ ಕೇಂದ್ರೀಕರಣಕ್ಕೆ ಇಂಬು ಕೊಟ್ಟಿತು.

ಸಂಗ್ರಹವಾದ ತೆರಿಗೆ ಹಣದಲ್ಲಿ ರಾಜ್ಯಗಳಿಗೆ ಹೆಚ್ಚಿನ ಪಾಲು ದೊರಕಿಸಿಕೊಡಲು ಹಣಕಾಸು ಆಯೋಗಗಳು ಪ್ರಯತ್ನಿಸುತ್ತಾ ಬಂದಿವೆ. ರಾಜ್ಯಗಳಿಗೆ ಒಟ್ಟಾರೆ ತೆರಿಗೆಯಲ್ಲಿ ಸಿಗುತ್ತಿದ್ದ ಪಾಲನ್ನು 14ನೇ ಹಣಕಾಸು ಆಯೋಗ ಶೇ 42ಕ್ಕೆ ಏರಿಸಿತ್ತು. ಆದರೆ ಕೇಂದ್ರವು ರಾಜ್ಯಗಳೊಡನೆ ಹಂಚಿಕೊಳ್ಳದ ಸೆಸ್ ಹಾಗೂ ಸರ್‌ಚಾರ್ಜ್ ಪ್ರಮಾಣವನ್ನು ಏರಿಸುವ ಮೂಲಕ, ರಾಜ್ಯಗಳಿಗೆ ಕೊಡುವ ಪಾಲು ಹೆಚ್ಚಾಗದಂತೆ ನೋಡಿಕೊಂಡಿತು. ಆರ್ಥಿಕವಾಗಿ ಹಿಂದುಳಿದ ರಾಜ್ಯಗಳಿಗೆ ಹೆಚ್ಚಿನ ಪಾಲನ್ನು ಕೊಡುವ ಸಂಪ್ರದಾಯವೂ ಇದೆ. ಹಾಗಾಗಿ, ಉತ್ತರಪ್ರದೇಶ, ಬಿಹಾರದಂತಹ ರಾಜ್ಯಗಳಿಗೆ ಹಲವು ದಶಕಗಳಿಂದ ಹೆಚ್ಚು ಹಣ ಹೋಗುತ್ತಿದೆ. ಆದರೆ ಅದಕ್ಕೆ ತಕ್ಕಂತೆ ಅಲ್ಲಿ ಪ್ರಗತಿ ಸಾಧ್ಯವಾಗಿಲ್ಲ. ಪರಿಣಾಮವಾಗಿ, ತಮ್ಮ ತೆರಿಗೆಯ ಪಾಲನ್ನು ಬಿಟ್ಟುಕೊಟ್ಟ ಕರ್ನಾಟಕ, ತಮಿಳುನಾಡಿನಂತಹ ರಾಜ್ಯಗಳಲ್ಲಿ ಅತೃಪ್ತಿ ಪ್ರಾರಂಭವಾಗುತ್ತಿದೆ.

ಕೇಂದ್ರ ಪ್ರಾಯೋಜಿತ ಹಲವು ಕಾರ್ಯಕ್ರಮಗಳೂ ರಾಜ್ಯಗಳಿಗೆ ಹೊರೆಯಾಗಬಹುದು, ಉಪಯುಕ್ತವೂ ಅಲ್ಲದಿರಬಹುದು. ರಾಷ್ಟ್ರದ ಹಿತದೃಷ್ಟಿಯಿಂದ ಕೇಂದ್ರವು ರಾಜ್ಯಗಳ ಭಾವನೆಗಳಿಗೆ ಸ್ಪಂದಿಸುವುದು ಒಳ್ಳೆಯದು.



ತಮಗೆ ಸೂಕ್ತವಾದ ಯೋಜನೆಗಳನ್ನು ರೂಪಿಸಿಕೊಳ್ಳುವುದಕ್ಕೆ ರಾಜ್ಯಗಳಿಗೆ ಅವಕಾಶ ಇರಬೇಕು. ಆದರೆ ರಾಜ್ಯಗಳಿಗೆ ಅಧಿಕಾರ ಸಿಕ್ಕ ಮಾತ್ರಕ್ಕೆ ವಿಕೇಂದ್ರೀಕರಣ ಆದಂತೆ ಅಲ್ಲ. ರಾಜ್ಯಗಳು ಸ್ಥಳೀಯ ಸರ್ಕಾರಗಳೊಂದಿಗೆ ಅಧಿಕಾರ ಹಂಚಿಕೊಳ್ಳಬೇಕು. ಹಾಗೆ ಮಾಡದ ರಾಜ್ಯ ಸರ್ಕಾರಗಳಿಗೆ ಕೇಂದ್ರದಿಂದ ವಿಕೇಂದ್ರೀಕರಣವನ್ನು ಬಯಸುವುದಕ್ಕೆ ನೈತಿಕ ಹಕ್ಕು ಇರುವುದಿಲ್ಲ.

ಆಡಳಿತವು ಜನರ ಬಳಿ ಹೋದಷ್ಟೂ ಅದರ ವ್ಯಾಪ್ತಿ ಚಿಕ್ಕದಾದಷ್ಟೂ ಅದರ ಕಾರ್ಯನಿರ್ವಹಣೆ ಸುಧಾರಿಸುತ್ತದೆ, ಬೆಳವಣಿಗೆ ಹೆಚ್ಚುತ್ತದೆ. ಹಳ್ಳಿಗಳು, ಜಿಲ್ಲೆಗಳು ಬೆಳೆದಷ್ಟೂ ರಾಜ್ಯ ಬೆಳೆಯುತ್ತದೆ. ಆದರೆ ಈ ಪ್ರಕ್ರಿಯೆಯಲ್ಲಿ ಸಾಮಾಜಿಕ ನ್ಯಾಯಕ್ಕೆ ಧಕ್ಕೆಯಾಗದಂತೆ ನೋಡಿಕೊಳ್ಳಬೇಕು. ನ್ಯಾಯಾಲಯ, ಪೊಲೀಸ್ ಇಲಾಖೆಯಂತಹ ವ್ಯವಸ್ಥೆಯು ಹೆಚ್ಚು ಸ್ವಾಯತ್ತವಾಗಿ, ನ್ಯಾಯಯುತವಾಗಿ ಇರುವಂತೆ ಸಾರ್ವಜನಿಕ ಒತ್ತಾಯ ರೂಪುಗೊಳ್ಳಬೇಕು. ನಮ್ಮ ಎಲ್ಲ ಸಮಸ್ಯೆಗಳಿಗೂ ಒಂದು ಸಾರ್ವತ್ರಿಕವಾದ ಪರಿಹಾರವಿದೆ ಎಂದು ಭಾವಿಸುವುದರಲ್ಲೇ ಸಮಸ್ಯೆಯಿದೆ. ಉದಾಹರಣೆಗೆ, ಬಡತನವನ್ನೇ ಗಮನಿಸಿ. ಅರ್ಥಶಾಸ್ತ್ರಜ್ಞ ಅಭಿಜಿತ್ ಬ್ಯಾನರ್ಜಿ ಅವರು ಹೇಳುವಂತೆ, ಸಂಶೋಧಕರು ತಮ್ಮ ಕೊಠಡಿಗಳಿಂದ ಹೊರಬಂದು ವಾಸ್ತವ ಜಗತ್ತನ್ನು ಗಮನಿಸಿದರೆ, ಬಡವರು ಅನುಭವಿಸುತ್ತಿರುವ ಹಲವು ಸಮಸ್ಯೆಗಳು ಕಾಣುತ್ತವೆ. ಬಡತನವನ್ನು ಪರಿಹರಿಸಬಹುದಾದ ಸಣ್ಣ ಸಣ್ಣ ಸಮಸ್ಯೆಗಳ ಸಮೂಹವಾಗಿ ನೋಡುವುದಕ್ಕೆ ಸಾಧ್ಯವಾಗುತ್ತದೆ. ಬಡತನದ ವಿಶಾಲ ವ್ಯಾಪ್ತಿಯೊಳಗೆ ಆರೋಗ್ಯ, ಶಿಕ್ಷಣ, ಹಣಕಾಸು, ಉದ್ಯಮಶೀಲತೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಎಳೆ ಎಳೆಯಾಗಿ ಬಿಡಿಸಿಕೊಳ್ಳುತ್ತಾ ಹೋಗಬಹುದು. ಪ್ರತಿ ಸಮಸ್ಯೆಯನ್ನೂ ಇನ್ನಷ್ಟು ಸಣ್ಣ ಸಣ್ಣ ಸಮಸ್ಯೆಗಳನ್ನಾಗಿ ಬಿಡಿಸಿಕೊಳ್ಳಲು ಸಾಧ್ಯವಾಗುತ್ತದೆ.

ಆರೋಗ್ಯದ ಸಮಸ್ಯೆಯು ಆಗ ಪೌಷ್ಟಿಕಾಂಶದ ಕೊರತೆ, ಶಿಶುಮರಣ, ಆಮಶಂಕೆಯಂತಹ ಬಿಡಿಸಿಕೊಳ್ಳಬಹುದಾದ ಸಮಸ್ಯೆಗಳಾಗಿ ಕಾಣುತ್ತದೆ. ಇಂತಹ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುತ್ತಾ, ಸಣ್ಣ ಸಣ್ಣ ಹೆಜ್ಜೆಗಳನ್ನು ಎಚ್ಚರಿಕೆಯಿಂದ ಇಡುತ್ತಾ ಜವಾಬ್ದಾರಿಯಿಂದ ಮುಂದುವರಿಯಬೇಕು. ಹೀಗೆ ಸಿಗುವ ಬಿಡಿ ಬಿಡಿಯಾದ ಪರಿಹಾರಗಳು ಒಟ್ಟಾರೆಯಾಗಿ ಬಡತನಕ್ಕೆ ಪರಿಹಾರ ಆಗಬಲ್ಲವು. ವಿಕೇಂದ್ರೀಕರಣದ ಈ ಪ್ರಕ್ರಿಯೆಯಲ್ಲಿ ರಾಷ್ಟ್ರಮಟ್ಟದವೆಂದು ಭಾವಿಸಿದ್ದ ಸಮಸ್ಯೆಗಳನ್ನು ರಾಜ್ಯಮಟ್ಟಕ್ಕೆ ತಂದು, ನಂತರ ಅವನ್ನು ಪರಿಹರಿಸುವ ಪ್ರಕ್ರಿಯೆಯಲ್ಲಿ ಸ್ಥಳೀಯ ಆಡಳಿತವನ್ನು ಜೊತೆಗೆ ಸೇರಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಈ ಪ್ರಕ್ರಿಯೆಯಲ್ಲಿ, ನಾವು ಜಗತ್ತನ್ನು ನೋಡುವ ದೃಷ್ಟಿಕೋನವೇ ಬದಲಾಗುತ್ತದೆ. ಲಾಭಕೇಂದ್ರಿತ ದೊಡ್ಡ ಉದ್ದಿಮೆಗಳು ಬೆಳವಣಿಗೆಯ ಕೇಂದ್ರಗಳಾಗುವುದಿಲ್ಲ. ಸಣ್ಣ ಹಾಗೂ ಮಧ್ಯಮ ವರ್ಗದ ಉದ್ದಿಮೆಗಳು, ಗ್ರಾಮ ಕೈಗಾರಿಕೆಗಳು ಬೆಳವಣಿಗೆಯ ಕೇಂದ್ರಗಳಾಗುತ್ತವೆ. ಬುಲೆಟ್ ರೈಲಿಗಿಂತ ಸ್ಥಳೀಯ ಸಾರಿಗೆ, ವಿದ್ಯುತ್, ನೀರಿನ ವ್ಯವಸ್ಥೆಯಂತಹವು ಆದ್ಯತೆಯ ವಿಷಯಗಳಾಗುತ್ತವೆ. ಬೆಳವಣಿಗೆ ಪ್ರಕ್ರಿಯೆಯು ಸಮಾಜದ ಕಟ್ಟಕಡೆಯ ವ್ಯಕ್ತಿಯ, ತೀರಾ ಹಿಂದುಳಿದ ಸಮುದಾಯದ, ಪ್ರದೇಶದ ಬೆಳವಣಿಗೆಯಿಂದಲೇ ಪ್ರಾರಂಭವಾಗುತ್ತದೆ. ಅದಕ್ಕಾಗಿ, ಸ್ಥಳೀಯ ಆಡಳಿತಕ್ಕೆ ಹೆಚ್ಚಿನ ಅಧಿಕಾರವನ್ನು ಕೊಡುವ ವಿಕೇಂದ್ರೀಕೃತ ಒಕ್ಕೂಟ ವ್ಯವಸ್ಥೆ ರೂಪುಗೊಳ್ಳಬೇಕು.

ಚುರುಮುರಿ



ರಾಜಕೀಯ ಅಂದ್ರೆ..

• ಬಿ.ಎನ್.ಮಲ್ಲೇಶ್

'ರೀ... ನಮ್ ಕಮಲಕ್ಕನ ಎಲೆಕ್ಷನ್ ಏನಾಗಬೋದು? ಗೆಲ್ತಾರ?' ಮಡದಿ ಕೇಳಿದಳು.

'ಯಾವ ಕಮಲಕ್ಕ? ಕರ್ನಾಟಕ ಆರ್ ಡೆಲ್ಲಿ?'

'ನಿಮ್ಮೆಲಿ, ನಾ ಕೇಳಿದ್ದು ಅಮೆರಿಕದ ಕಮಲಕ್ಕ. ಕಮಲಾ ಹ್ಯಾರಿಸ್ ಅಮೆರಿಕದ ಅಧ್ಯಕ್ಷರಾಗ್ತಾರಾ ಅಂತ'.

'ಓ... ಅವರಾ? ಅಲ್ಲಿ ಟ್ರಂಪ್ ಪ್ಲಸ್ ಒನ್ ಬುಲೆಟ್ ಒಂದು ಕಡೆ, ಕಮಲಾ ಪ್ಲಸ್ ಬೈಡನ್ ಪ್ಲಸ್ ಒಬಾಮ ಇನ್ನೊಂದು ಕಡೆ. ರಾಜಕೀಯ ತೂಕ ನಮ್ ಕಡೀಗೇ ಇದೆ. ಗೆದ್ರೂ ಗೆಲ್ಲಬಹುದು'.

'ಕರ್ನಾಟಕದಲ್ಲಿ ನಿಮ್ ಕಮಲಕ್ಕನ ಪಾದಯಾತ್ರೆ ನಡೆಯುತ್ತಾ?'

'ಅದಕ್ಕೆ ತೆನೆಯಕ್ಕ ಅಡ್ಡಿಯಾಗಿದ್ಲು, ಈಗ ಪ್ಯಾಚಪ್ ಆಗೇತಂತೆ...'

'ಯಾಕೆ, ಒಂದಾಗಿದ್ರಲ್ಲ? ಆಗ್ಲೇ ಬಿಟ್ಬೋಯ್ತಾ?'

'ಬಿಟ್ಹೋಗಿಲ್ಲ... ಅದು 'ವಿಷ'ದ ರಾಜಕೀಯ'.

'ಕಮಲಕ್ಕನ ಪಾದಯಾತ್ರೆ ವಿರುದ್ಧ ಕಮಲ ಪಕ್ಷದೋರೇ ಇನ್ನೊಂದು ಪಾದಯಾತ್ರೆ ಮಾಡ್ತಾರಂತೆ?'

'ಅದು ಭಿನ್ನ ರಾಜಕೀಯ. ಕಮಲೇ ಕಲಹೋತ್ಪತ್ತಿಹಿ...'

'ಕಮಲಕ್ಕ ಪಾದಯಾತ್ರೆ ಮಾಡ್ತಿರೋದು ಬಂಡೇನ ಮುಖ್ಯಮಂತ್ರಿ ಮಾಡಾಕೆ ಅಂತ ವಿಜಯಪುರದ ಹುಲಿ ಹೇಳ್ತಿತ್ತು?'

'ಅದು ಒಳರಾಜಕೀಯ... ಇದ್ರೂ ಇರಬೋದು...'

'ಆಮೇಲೆ ಮೊನ್ನೆ ಬಂಡೆ ಸಾಹೇಬ್ರು ಡೆಲ್ಲೀಲಿ ನಮೋ ಸಾಹೇಬ್ರನ್ನ ಭೆಟ್ಟಿಯಾಗಿ ಖುಷ್ ಖುಷಿಯಾಗಿ ಮಾತಾಡಿದ್ರಂತೆ?'

'ಅದು ಪಕ್ಕಾ ಲೆಕ್ಕಾಚಾರದ ರಾಜಕೀಯ'.

'ಹೇ ಹೋಗ್ರಿ... ನಂಗೆ ತಲೆಬುಡ ಅರ್ಥ ಆಗಾವಲ್ದು, ಈ ರಾಜಕೀಯದಲ್ಲಿ ಎಷ್ಟು ನಮೂನಿ ರಾಜಕೀಯ ಅದಾವೆ?'

'ಬಹಳ ಅದಾವೆ. ಒಣ ರಾಜಕೀಯ, ಬಣ ರಾಜಕೀಯ, ಹೆಣ ರಾಜಕೀಯ, ಹಣದ ರಾಜಕೀಯ, ಜಾತಿ ರಾಜಕೀಯ, ದ್ವೇಷ-ಹೊಂದಾಣಿಕೆ ರಾಜಕೀಯ... ಸಾಕಾ ಬೇಕಾ?'

'ಸಾಕು, ಈಗ ಹೇಳ್ರಿ, ಈ ರಾಜಕೀಯ ಅಂದ್ರೇನು?'

'ಅದು ನನಗೆ ಅರ್ಥ ಆದ ಮೇಲೆ ನಿನಗೆ ಹೇಳ್ತೀನಿ, ಹೋಗಿ ಒಂದ್ ಕಪ್ ಕಾಫಿ ಮಾಡ್ಕೊಂಡ್ ಬಾ'.

ಸಂಗತ

ಅಪಾಯಕಾರಿ ಪ್ರವಾಸ: ಯಾಕೀ ದುಸ್ಸಾಹಸ?

ದುರಂತಗಳಿಗೆ ಸಾಕ್ಷಿಯಾದ ತಾಣಗಳಿಗೆ ಕೂಡಲೇ ಭೇಟಿ ನೀಡುವುದು ಅಪಾಯಕಾರಿ. ಅಷ್ಟೇಅಲ್ಲ, ಸ್ಥಳೀಯ ಆಡಳಿತಕ್ಕೂ ಇದು ಹೊರೆಯೆನಿಸುವ ನಡೆ

• ಡಾ. ಕೆ.ಎಸ್.ಚೈತ್ರಾ

'ದೇವರನಾಡು' ಕೇರಳದ ಬೆಟ್ಟ ಗುಡ್ಡಗಳ ನಡುವೆ ಸ್ವರ್ಗದ ತುಣುಕಿನಂತಿದ್ದ ವಯನಾಡ್ ಜಿಲ್ಲೆಯಲ್ಲಿ ಜನರ ಬದುಕೀಗ ಅಕ್ಷರಶಃ ನರಕವಾಗಿದೆ. ಭೂಕುಸಿತ, ಪ್ರವಾಹಕ್ಕೆ ಸಿಲುಕಿದವರ ರಕ್ಷಣೆ, ಕಾಣೆಯಾದವರಿಗಾಗಿ ಶೋಧ, ಮೃತದೇಹಗಳ ಪತ್ತೆ ಕಾರ್ಯದಲ್ಲಿ ಸೈನಿಕರು, ಪೊಲೀಸರು, ವಿವಿಧ ಸಂಸ್ಥೆಗಳ ಪ್ರತಿನಿಧಿಗಳು, ಸ್ವಯಂಸೇವಕರು ಹಗಲಿರುಳೆನ್ನದೇ ಕಾರ್ಯನಿರ್ವಹಿಸುತ್ತಿದ್ದಾರೆ. ಇದೆಲ್ಲದರ ನಡುವೆ ಅಲ್ಲಿನ ಪೊಲೀಸರು ಸಾರ್ವಜನಿಕರಿಗೆ ಮಾಡಿರುವ ಮನವಿಯೆಂದರೆ: 'ದುರಂತ ನಡೆದ ಸ್ಥಳಗಳ ವೀಕ್ಷಣೆಗೆ ದಯಮಾಡಿ ಬರಬೇಡಿ. ಇದರಿಂದ ರಕ್ಷಣಾ ಕಾರ್ಯಕ್ಕೆ ಅಡಚಣೆ ಉಂಟಾಗುತ್ತದೆ'.

ಈ ರೀತಿ ದುರಂತ ನಡೆದ ಸ್ಥಳಗಳ ವೀಕ್ಷಣೆಗೆ ತೆರಳುವುದನ್ನು ಡಾರ್ಕ್ ಟೂರಿಸಂ, ಥಾನಾ ಟೂರಿಸಂ ಅಥವಾ ಕರಾಳ ಪ್ರವಾಸೋದ್ಯಮ ಎಂದು ಕರೆಯಲಾಗುತ್ತದೆ. ಥಾನಾ ಎನ್ನುವ ಪದದ ಮೂಲವು ಗ್ರೀಕ್‌ನ ಥಾನಾಟೋಸ್, ಎಂದರೆ ಸಾವು. ಹಾಗಾಗಿಯೇ ಇದು ಸಾವು ಅಥವಾ ಶೋಕಕ್ಕೆ ಸಂಬಂಧಿಸಿದ ತಾಣಗಳನ್ನು ಸಂದರ್ಶಿಸುವ ಪ್ರವಾಸ. ಬದುಕಿನ ಏಕತಾನತೆಯನ್ನು ಕಳೆದು, ಉಲ್ಲಾಸ ಹೊಂದುವ ಪಯಣದಲ್ಲಿ ಮನರಂಜನೆ ಮುಖ್ಯ ಉದ್ದೇಶವಾದರೂ ಹೊಸತರ ಹುಡುಕಾಟ, ಕಲಿಕೆಯೂ ಅದರಲ್ಲಿ ಸೇರಿವೆ. ಅವರವರ ಅಗತ್ಯ, ಅಭಿರುಚಿ, ಅನುಕೂಲಕ್ಕೆ ತಕ್ಕಂತೆ ಪ್ರವಾಸದಲ್ಲಿಯೂ ಐತಿಹಾಸಿಕ, ಸಾಂಸ್ಕೃತಿಕ, ಶೈಕ್ಷಣಿಕ, ವೈದ್ಯಕೀಯ, ಆಹಾರ... ಹೀಗೆ ಅನೇಕ ಬಗೆ. ಹಾಗೆಯೇ ಡಾರ್ಕ್ ಟೂರಿಸಂ ಇತ್ತೀಚಿನ ದಿನಗಳಲ್ಲಿ ಬಹಳಷ್ಟು ಜನಪ್ರಿಯವಾಗಿರುವ ಒಂದು ಬಗೆ. ಇಂತಹ ಪ್ರವಾಸೋದ್ಯಮದ ಉದ್ದೇಶವಾದರೂ ಏನು?

ಜೈಲು, ಸ್ಮಾರಕ, ಯುದ್ಧಭೂಮಿ, ಸಮಾಧಿ ಸ್ಥಳದಂತಹವುಗಳಿಗೆ ಭೇಟಿಯನ್ನು ಈ ಪ್ರವಾಸ ಒಳಗೊಂಡಿರುತ್ತದೆ. ಉದಾಹರಣೆಗೆ, ಸ್ವಾತಂತ್ರ್ಯ ಸೇನಾನಿಗಳನ್ನು ಬಂಧಿಸಿಟ್ಟಿದ್ದ ಅಂಡಮಾನಿನ ಸೆಲ್ಯುಲರ್ ಜೈಲು, ಸಾವಿರಾರು ಜನರ ಹತ್ಯೆ ನಡೆದ ಅಮೃತಸರದ ಜಲಿಯನ್‌ವಾಲಾ ಬಾಗ್, ಅನಿಲ ದುರಂತ ಘಟಿಸಿದ ಭೋಪಾಲ್‌ನ ಕಾರ್ಬೈಡ್ ಕಾರ್ಖಾನೆಯಂತಹ ಸ್ಥಳಗಳು ಇದರಲ್ಲಿ ಸೇರುತ್ತವೆ. ಈ ಬಗೆಯ ಪ್ರವಾಸ ಮೇಲ್ನೋಟಕ್ಕೆ ವಿಚಿತ್ರವಾಗಿ ಕಂಡರೂ ಇದು ಜನಪ್ರಿಯವಾಗಲು ಅನೇಕ ಕಾರಣಗಳಿವೆ.

ಎಲ್ಲರೂ ಸಂದರ್ಶಿಸುವ ಮಾಮೂಲು ತಾಣಗಳಿಗಿಂತ ಭಿನ್ನವಾಗಿರುವುದು, ಸಾವಿನ ಜತೆಗೆ ಇರುವ ಸಂಬಂಧದಂತಹ ಸಂಗತಿಗಳು ಅವುಗಳೆಡೆಗಿನ ಆಕರ್ಷಣೆಯನ್ನು ಹೆಚ್ಚಿಸುತ್ತವೆ. ಚರಿತ್ರೆಯ ಅಧ್ಯಯನದ ದೃಷ್ಟಿಯಿಂದಲೂ ಇಂತಹ ಪ್ರವಾಸ ಮುಖ್ಯವಾದುದು. ಗತಕಾಲದ ದುರಂತಗಳಿಗೆ ಮೂಕಸಾಕ್ಷಿಗಳಂತೆ ನಿಂತಿರುವ ಈ ಸ್ಥಳಗಳಿಗೆ ಭೇಟಿಯಿತ್ತು, ಅವುಗಳ ಬಗ್ಗೆ ಅರಿಯುವುದು ಇತಿಹಾಸಪ್ರಿಯರಿಗೆ ಕಲಿಕೆಯ ಭಾಗವೇ ಆಗಿರುತ್ತದೆ. ಯುದ್ಧದಲ್ಲಿ ಅಥವಾ ಇನ್ನಾವುದೋ ಕಾರಣಕ್ಕೆ ಬಲಿಯಾದವರಿಗೆ ಗೌರವ ಸಲ್ಲಿಸುವ ಅವಕಾಶವೂ ಸಿಗುತ್ತದೆ. ಹಾಗೆಯೇ ಈ ಸ್ಥಳಗಳು ವೈಯಕ್ತಿಕವಾಗಿ ಆತ್ಮವಿಮರ್ಶೆಗೂ ಸಹಕಾರಿಯಾಗಬಲ್ಲವು. ನಾವು ಇಂದು ಸ್ವತಂತ್ರವಾಗಿ ಜೀವನ ನಡೆಸುತ್ತಿರುವುದಕ್ಕೆ ನಮ್ಮ ಪೂರ್ವಿಕರ ತ್ಯಾಗ, ಬಲಿದಾನ ಕಾರಣವೆಂಬ ಅರಿವೂ ಆಗುತ್ತದೆ. ಇತಿಹಾಸದ ಕರಾಳ ಚಿತ್ರಣವನ್ನು ನೆನೆಯುತ್ತಾ, ಭವಿಷ್ಯದಲ್ಲಿ ಹಾಗಾಗದಂತೆ ಜವಾಬ್ದಾರಿಯಿಂದ ನಡೆಯುವ ಎಚ್ಚರವೂ ಮೂಡುತ್ತದೆ.

ಇವೆಲ್ಲವೂ ಸರಿ. ಆದರೆ ಈ ಕರಾಳ ಪ್ರವಾಸೋದ್ಯಮಕ್ಕೆ ಮತ್ತೊಂದು ಮುಖವೂ ಇದೆ. ದುರಂತಗಳಿಗೆ ಸಾಕ್ಷಿಯಾದ ತಾಣಗಳ ಭೇಟಿಗಷ್ಟೇ ಇದು ಸೀಮಿತವಾಗಿಲ್ಲ. ಬರ, ಪ್ರವಾಹ, ಕಾಳ್ಗಿಚ್ಚು, ಚಂಡಮಾರುತದಂತಹ ನೈಸರ್ಗಿಕ ವಿಪತ್ತುಗಳನ್ನೂ ಇದು ಒಳಗೊಂಡಿದೆ. ಅಮೆರಿಕದಲ್ಲಿ ಕತ್ರಿನಾ ಚಂಡಮಾರುತ ಬೀಸಿದಾಗ, ಅದೆಷ್ಟೋ ಜನ ಅದನ್ನು ಚಿತ್ರೀಕರಿಸಿ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಹಾಕಿದ್ದರು. ಆದರೆ ಆ ಸಂದರ್ಭದಲ್ಲಿ ಕೆಲವರು ಅಪಾಯಕ್ಕೂ ಒಳಗಾಗಿದ್ದು ಸುದ್ದಿಯಾಗಿತ್ತು. ಹಾಗೆಯೇ ಮುಂಬೈ ಮಹಾಮಳೆಯಲ್ಲಿ ಜನ ಪರದಾಡುತ್ತಿದ್ದ ಚಿತ್ರಗಳನ್ನು ಹಿನ್ನೆಲೆಯಾಗಿ ಇರಿಸಿಕೊಂಡು ಕೆಲವು ಯುವಕರು ನಗುತ್ತಾ ರೀಲ್ಸ್ ಮಾಡಿದ್ದಕ್ಕೆ ವಿರೋಧ ಎದುರಿಸಿದ್ದರು. ಹೀಗೆಲ್ಲಾ ಮಾಡಲು ಇರುವ ಪ್ರಮುಖ ಕಾರಣ, ಆದಷ್ಟೂ ಹೆಚ್ಚು ಲೈಕ್‌ಗಳನ್ನು ಪಡೆಯುವ ಬಯಕೆ!



ಸಾಮಾಜಿಕ ಜಾಲತಾಣಗಳಲ್ಲಿ ಈಗ ಸೆಲ್ಫಿ ಮತ್ತು ರೀಲ್ಸ್ ಭರಾಟೆ. ಮರ, ಮನೆ, ಹೂವು, ಉದ್ಯಾನವೆಲ್ಲಾ ಮಾಮೂಲು. ಆದಷ್ಟೂ ಅಪಾಯಕಾರಿ ಜಾಗ, ಚಿತ್ರವಿಚಿತ್ರ ಭಂಗಿಗಳಲ್ಲಿ ರೀಲ್ಸ್ ಮಾಡಬೇಕು. ನೋಡಿದೊಡನೆ ಅಬ್ಬಾ ಎನ್ನುವಂತಿದ್ದರೆ ಲೈಕ್ಸ್, ವ್ಯೂಸ್ ಹೆಚ್ಚು. ಹೀಗಾಗಿ, ರಭಸವಾಗಿ ಹರಿಯುವ ನೀರು, ಬೆಟ್ಟದ ತುದಿ, ಬೀಳುತ್ತಿರುವ ಮರ, ಚಲಿಸುವ ರೈಲು ಎಲ್ಲವೂ ಅವರಿಗೆ 'ಉತ್ತಮ ಆಯ್ಕೆ'! ಜನರಲ್ಲಿ ಈ ರೀತಿಯ ಪ್ರವೃತ್ತಿ ಹೆಚ್ಚಿಸುವಲ್ಲಿ ಮಾಧ್ಯಮಗಳೂ ಪಾತ್ರ ವಹಿಸುತ್ತವೆ. 'ನಮ್ಮಲ್ಲಿಯೇ ಮೊದಲು' ಎಂದು ಬ್ರೇಕಿಂಗ್ ಸುದ್ದಿ ನೀಡುವ ವಾಹಿನಿಗಳಲ್ಲಿ ಈ ರೀತಿಯ ವಿಡಿಯೊ, ಫೋಟೊಗಳಿಗೆ ಎಲ್ಲಿಲ್ಲದ ಬೇಡಿಕೆ.

ಉದ್ದೇಶ ಏನೇ ಇದ್ದರೂ ಇದು ನೋವಿನಲ್ಲಿ ಇರುವವರಿಗೆ, ಮೃತರಿಗೆ ಮತ್ತು ಅವರ ಕುಟುಂಬದವರಿಗೆ ಸಲ್ಲಿಸುವ ಅಗೌರವ. ಸಾವು-ನೋವಿನ ಸುದ್ದಿಯನ್ನು ಜನರಿಗೆ ಮುಟ್ಟಿಸಬೇಕು, ಭೀಕರ ಪರಿಸ್ಥಿತಿಯನ್ನು ತೆರೆದಿಡಬೇಕು ನಿಜ. ಹಾಗೆಂದು ಮಾನವೀಯತೆಯೇ ಇಲ್ಲವಾಗಬಾರದು!

ಸದ್ಯಕ್ಕೆ ಕೇರಳ ಮಾತ್ರವಲ್ಲ ನಮ್ಮಲ್ಲಿಯೂ ಪೊಲೀಸರಿಗೆ ಪ್ರವಾಸಿಗರ ನಿಯಂತ್ರಣ ಕಷ್ಟವಾಗುತ್ತಿದೆ. ಸುರಿಯುತ್ತಿರುವ ಮಳೆ, ಭೋರ್ಗರೆಯುತ್ತಿರುವ ನದಿಗಳು, ಕುಸಿಯುತ್ತಿರುವ ಬೆಟ್ಟಗಳಿಂದ ಪ್ರವಾಸಿಗರಿಗೆ ತೊಂದರೆಯಾಗುವ ಎಲ್ಲಾ ಸಾಧ್ಯತೆ ಇರುತ್ತದೆ. ಆದ್ದರಿಂದ ಅನಗತ್ಯ ಸಾಹಸಕ್ಕೆ ಮುಂದಾಗದೆ, ಅಗತ್ಯ ಇರುವವರಿಗೆ ಆದಷ್ಟು ನೆರವು ನೀಡೋಣ!

ವಾಚಕರ ವಾಣಿ

ಆತಂಕಕಾರಿ ಬೆಳವಣಿಗೆ: ಯಾರು ಹೊಣೆ?

ನಾಲ್ಕೈದು ದಶಕಗಳ ಹಿಂದೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಮಗೆಲ್ಲ 'ಶಿರಾಡಿ ಘಾಟಿಯಲ್ಲಿ ಭೂಕುಸಿತ, ಸಂಚಾರ ಅಸ್ತವ್ಯಸ್ತ' ಎಂಬಂತಹ ಸುದ್ದಿಯನ್ನು ಕೇಳಿಯೇ ಗೊತ್ತಿರಲಿಲ್ಲ. ಚಾರ್ಮಾಡಿ ಘಾಟಿಯಲ್ಲಿ ಮಾತ್ರ ಜೋರು ಮಳೆ ಬಂದಾಗ ಕೆಲವೆಡೆ ಭೂಕುಸಿತ ಉಂಟಾಗುತ್ತಿತ್ತು ಅಷ್ಟೆ. ಹಿಂದಿನ ಕೆಲವು ವರ್ಷಗಳಿಂದ, ಪ್ರತಿ ಮಳೆಗಾಲದಲ್ಲಿ ಶಿರಾಡಿ ಘಾಟಿಯಲ್ಲೂ ಗುಡ್ಡ ಕುಸಿತ, ಕಿಲೊಮೀಟರ್ ಉದ್ದಕ್ಕೆ ವಾಹನಗಳು ಸಾಲುಗಟ್ಟುವಂತಹ ಸುದ್ದಿಗಳು ಮಾಮೂಲಾಗಿವೆ.

ಇಂತಹ ಬೆಳವಣಿಗೆಗಳಿಂದ ಪ್ರಯಾಣಿಕರು ತೀವ್ರ ತೊಂದರೆಗೆ ಒಳಗಾಗುತ್ತಿದ್ದಾರೆ. ಈ ಮಾರ್ಗಗಳಲ್ಲಿ ಸಂಚರಿಸುತ್ತಿರುವ ತೈಲ ಸಾಗಣೆಯ ಟ್ಯಾಂಕರ್‌ಗಳು, ದೊಡ್ಡ ದೊಡ್ಡ ಲಾರಿಗಳು, ಎತ್ತಿನಹೊಳೆ ಯೋಜನೆಯ ಕಾಮಗಾರಿ, ಹೆದ್ದಾರಿ ಅಗಲೀಕರಣದಂತಹ ಕಾರ್ಯಗಳು ಈ ಆತಂಕಕಾರಿ ಬೆಳವಣಿಗೆಗೆ ಕಾರಣವೇ ಎಂಬ ಪ್ರಶ್ನೆ ಸಹಜವಾಗಿಯೇ ಮೂಡುತ್ತದೆ. ತಜ್ಞರು ಇದಕ್ಕೆ ಸೂಕ್ತ ಉತ್ತರ ಕಂಡುಕೊಳ್ಳಬೇಕು.

ಬಿ.ಎನ್.ಭರತ್, ಬೆಂಗಳೂರು

ಆಟಕ್ಕೆ ಬೇಕು ಪ್ರಾಮುಖ್ಯ: ಧೋರಣೆ ಬದಲಾಗಲಿ

ಸದೃಢ ಮನಸ್ಸು ವಿದ್ಯಾರ್ಥಿಗಳ ಸರ್ವಾಂಗೀಣ ಪ್ರಗತಿಗೆ ಪೂರಕ. ಸದೃಢ ದೇಹವು ದೃಢ ಮನಸ್ಸಿನ ಮೂಲ. ಮಕ್ಕಳು ಹೆಚ್ಚು ಅಂಕ ಗಳಿಸಬೇಕೆಂಬ ಕಾರಣಕ್ಕೆ ಅವರು ಪಠ್ಯಪುಸ್ತಕಗಳನ್ನು ಓದುವುದರತ್ತ ಮಾತ್ರ ಪೋಷಕರು ಹಾಗೂ ಶಿಕ್ಷಕರು ಲಕ್ಷ್ಯ ವಹಿಸುವುದು ಅಶಕ್ತ ಪೀಳಿಗೆಯ ಉಗಮಕ್ಕೆ ನಾಂದಿಯಾಗುತ್ತದೆ. ಮನೆ ಮತ್ತು ಶಾಲೆಗಳಲ್ಲಿ ದೈಹಿಕ ಶಿಕ್ಷಣಕ್ಕೂ ಪ್ರಾಮುಖ್ಯ ಇರಬೇಕು. ಭವಿಷ್ಯದಲ್ಲಿ ಉತ್ತಮ ಆರೋಗ್ಯ ಕಾಯ್ದುಕೊಳ್ಳಲು ಮತ್ತು ಜೀವನದ ನೈಜ ಆನಂದ ಸವಿಯಲು ಮಕ್ಕಳಿಗೆ ಆಟಗಳ ಮಹತ್ವವನ್ನು ತಿಳಿಸಿಕೊಡಬೇಕು. ಅವರು ಆಟದಲ್ಲಿ ತೊಡಗುವುದಕ್ಕೆ ಪೂರಕವಾದ ವಾತಾವರಣವನ್ನು ನಿರ್ಮಿಸಬೇಕು.

ಅನಿಲಕುಮಾರ ಮುಗಳಿ, ಧಾರವಾಡ

ಅಂಗನವಾಡಿ: ಹೊಸ ನಾಮಕರಣ ಅನಗತ್ಯ

ಎಲ್‌ಕೆಜಿ, ಯುಕೆಜಿ ಶಿಕ್ಷಣ ನೀಡುವ ರಾಜ್ಯದ ಅಂಗನವಾಡಿಗಳಿಗೆ 'ಸರ್ಕಾರಿ ಮಾಂಟೆಸ್ಸರಿ' ಎಂದು ನಾಮಕರಣ ಮಾಡಲು ಸರ್ಕಾರ ಮುಂದಾಗಿರುವುದು ವಿಪರ್ಯಾಸ. ಅಂಗನವಾಡಿ ಎನ್ನುವ ಹೆಸರು ಮುಂದುವರಿದರೆ ಸರ್ಕಾರಕ್ಕೆ ಯಾವ ರೀತಿ ಮುಜುಗರ ಉಂಟಾಗುತ್ತದೆ ಎಂಬುದು ತಿಳಿಯುವುದಿಲ್ಲ.

ರಮಾನಂದ ಶರ್ಮಾ, ಬೆಂಗಳೂರು

ಪುಸ್ತಕದ ಸಾಂಗತ್ಯ: ಆರೋಗ್ಯಕರ ಹವ್ಯಾಸ

ವಿದ್ಯಾರ್ಥಿಗಳಲ್ಲಿ ಓದುವ ಹವ್ಯಾಸ ಬೆಳೆಸಲು ರಾಜ್ಯದ ಎಲ್ಲ ಶಾಲೆಗಳೂ 'ಮಕ್ಕಳಸ್ನೇಹಿ ಗ್ರಂಥಾಲಯ' ಹೊಂದಬೇಕು ಹಾಗೂ ಪ್ರಾಥಮಿಕ, ಪ್ರೌಢಶಾಲೆಗಳು ವಾರದಲ್ಲಿ ತರಗತಿಯ ಒಂದು ಅವಧಿಯನ್ನು ಗ್ರಂಥಾಲಯ ಬಳಕೆಗೆ ಮೀಸಲಿಡಬೇಕು ಎಂದು ಶಿಕ್ಷಣ ಇಲಾಖೆ ಇತ್ತೀಚೆಗೆ ಹೊರಡಿಸಿರುವ ಸುತ್ತೋಲೆಯು ಒಂದು ಕ್ರಾಂತಿಕಾರಕ ನಡೆಯಾಗಿದೆ. ಮಕ್ಕಳ ಕಲಿಕೆಯಲ್ಲಿನ ಏಕತಾನತೆಯನ್ನು ಹೋಗಲಾಡಿಸಿ ಅವರ ಜ್ಞಾನದ ಪರಿಧಿಯು ವ್ಯಾಪಕವಾಗಿ ವಿಸ್ತರಿಸುವಂತೆ ಮಾಡುವುದಕ್ಕೆ ಈ ಕ್ರಮ ಪೂರಕವಾಗಿದೆ.

ಪುಸ್ತಕದ ಸಾಂಗತ್ಯ ಬೆಳೆಸುವ ಈ ಯೋಜನೆಯು ವಿದ್ಯಾರ್ಥಿಗಳಲ್ಲಿ ಆರೋಗ್ಯಕರ ಹವ್ಯಾಸವನ್ನು ಬೆಳೆಸುತ್ತದೆ. ಶಿಕ್ಷಕರು ಮತ್ತು ಅಧಿಕಾರಿಗಳು ಮನಃಪೂರ್ವಕವಾಗಿ ಈ ಯೋಜನೆಯಲ್ಲಿ ತೊಡಗಿಸಿಕೊಂಡಾಗ ಇಲಾಖೆಯ ಈ ಮಹತ್ತರ ಯೋಜನೆಯ ಆಶಯ ಸಾಕಾರಗೊಳ್ಳಲು ಸಾಧ್ಯ.

ಜಯವೀರ ಎ.ಕೆ., ಖೇಮಲಾಪುರ, ರಾಯಬಾಗ

ಗುಡ್ಡ ಅಗೆತ: ಇರಲಿ ಕಡಿವಾಣ

ಧಾರವಾಡವು ಗುಡ್ಡಗಳ ನಗರ. ಆದರೆ ಈಗ ಬಹುತೇಕ ಗುಡ್ಡಗಳು ಅಗೆತಕ್ಕೆ ಒಳಗಾಗಿ, ಅಲ್ಲಿ ಮನೆಗಳನ್ನು ನಿರ್ಮಿಸುತ್ತಿರುವುದು ಸಾಮಾನ್ಯ ದೃಶ್ಯವಾಗಿದೆ. ಕೆಲವು ಕಡೆ ಗುಡ್ಡವನ್ನು ಅಗೆದು ಸಮತಟ್ಟು ಮಾಡಿ, ಬಿದ್ದ ಮಣ್ಣನ್ನು ಕೂಡ ಪೇರಿಸಿ ಬಡಾವಣೆಗಳನ್ನು ನಿರ್ಮಿಸಲಾಗುತ್ತಿದೆ. ಇಂತಹ ಬಡಾವಣೆಗಳಲ್ಲಿ ನಿವೇಶನಗಳನ್ನು ಹಂಚಿ ಗಂಟುಮಾಡಿಕೊಂಡು ಹೋದಾತ, ದುರಂತ ಸಂಭವಿಸಿದರೆ ಕೈಗೆ ಸಿಗಲಾರ. ಇದನ್ನೆಲ್ಲ ನೋಡುವಾಗ, ಕೇರಳದ ವಯನಾಡ್ ಭೂಕುಸಿತದ ಭಯಾನಕ ದೃಶ್ಯಗಳು ಕಣ್ಮುಂದೆ ಬಂದು ಮನಸ್ಸು ಕ್ಷೋಭೆಗೊಳಗಾಗುತ್ತದೆ.

ಗುಡ್ಡವು ಮಾನವ ನಿರ್ಮಿತವಲ್ಲ, ನಿಸರ್ಗ ನಿರ್ಮಿತ. ಅದು ಅಲ್ಲಿ ಇದೆಯೆಂದರೆ, ಅದಕ್ಕೆ ನೈಸರ್ಗಿಕ ಪ್ರಾಮುಖ್ಯ ಇರಲೇಬೇಕು. ಹೀಗಿರುವಾಗ ಯಾವುದೇ ಗುಡ್ಡ ಅಗೆಯುವಾಗ, ಮಣ್ಣು ತೆಗೆಯುವಾಗ, ಗಣಿಗಾರಿಕೆ ನಡೆಸುವಾಗ ಸ್ಥಳೀಯ ಆಡಳಿತದ ಅನುಮತಿ ಪಡೆಯಬೇಕೆಂಬ ನಿಯಮವನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ಈ ಭೂಮಿ, ಗುಡ್ಡಗಳು ಅಥವಾ ನದಿಗಳು ನಮಗಾಗಿ ಉಚಿತವಾಗಿ ಬಂದ ಬಳುವಳಿಗಳಲ್ಲ. ಅವುಗಳನ್ನು ನಮ್ಮ ಮುಂದಿನ ಪೀಳಿಗೆಗಾಗಿ ಉಳಿಸುವ ಜವಾಬ್ದಾರಿ ನಮ್ಮ ಮೇಲಿದೆ ಎಂಬ ಅರಿವು ಎಲ್ಲರಲ್ಲೂ ಮೂಡಬೇಕು.

ಶಾರದಾ ಗೋಪಾಲ, ಧಾರವಾಡ

ಬತ್ತಿರುವ ಕೆರೆಗಳಿಗೆ ನೀರು ತುಂಬಿಸಿ

ರಾಜ್ಯದ ಎಲ್ಲೆಡೆ ಈ ತಿಂಗಳು ಉತ್ತಮ ಮಳೆ ಆಗುತ್ತಿದ್ದು, ಹತ್ತು ಹಲವು ಅಣೆಕಟ್ಟೆಗಳು ತುಂಬಿ ಹರಿಯುತ್ತಿರುವುದು ಸಂತಸದ ಸಂಗತಿ. ಆದರೆ, ಕೆಲವೆಡೆ ಮಳೆಯೇ ಇಲ್ಲದೆ ಹಲವಾರು ಕೆರೆಗಳು ಬತ್ತಿಹೋಗಿವೆ. ಅರ್ಧ ಟಿಎಂಸಿ ಅಡಿ ಅಥವಾ ಒಂದು ಟಿಎಂಸಿ ಅಡಿ ನೀರು ಸಂಗ್ರಹ ಸಾಮರ್ಥ್ಯವುಳ್ಳ ಕೆರೆಗಳಿಗೆ ಈ ಮಳೆಗಾಲದ ಅವಧಿಯಲ್ಲೇ ನೀರು ತುಂಬಿಸಿದರೆ, ಜನರಿಗೆ, ಪಶು–ಪಕ್ಷಿಗಳಿಗಷ್ಟೇ ಅಲ್ಲದೆ ಆ ಪ್ರದೇಶದ ಅಂತರ್ಜಲ ವೃದ್ಧಿಗೂ ಅನುಕೂಲವಾಗುತ್ತದೆ. ಹಾಗಾಗಿ, ಸಂಬಂಧಪಟ್ಟವರು ಬತ್ತಿರುವ ಕೆರೆಗಳಿಗೆ ನೀರು ತುಂಬಿಸಲು ಗಮನಹರಿಸಲಿ.

ಹೊಸಹಳ್ಳಿ ದಾಳೇಗೌಡ, ಬಿ.ಆರ್. ಪ್ರಾಜೆಕ್ಟ್, ಶಿವಮೊಗ್ಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಪರಿಶಿಷ್ಟ ಜಾತಿಗಳ ಒಳಮೀಸಲಾತಿ ವಿಚಾರ ದಶಕಗಳಿಂದಲೂ ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳಲ್ಲಿ ತೀವ್ರ ಚರ್ಚೆಯಲ್ಲಿದೆ. ಅದಕ್ಕಾಗಿ ಅನೇಕ ಹೋರಾಟಗಳೂ ನಡೆದಿವೆ, ನಡೆಯುತ್ತಿವೆ. ರಾಜಕೀಯ ಅಧಿಕಾರದ ಪ್ರಮುಖ ದಾಳವಾಗಿಯೂ ಇದು ಬಳಕೆಯಾಗಿದೆ. ಜನರ ಬೇಡಿಕೆ ಮತ್ತು ಹೋರಾಟ, ರಾಜಕೀಯ ಪಕ್ಷಗಳ ಅವಕಾಶವಾದಿ ನಿಲುವು, ಕಾನೂನಿನ ತೊಡಕುಗಳಿಂದಾಗಿ ಒಳಮೀಸಲಾತಿಯು ಒಂದು ಸಂಕೀರ್ಣ ಸಮಸ್ಯೆಯಾಗಿ ಮಾರ್ಪಟ್ಟಿತ್ತು. ಸುಪ್ರೀಂ ಕೋರ್ಟ್ ತೀರ್ಪು ಈ ಹೋರಾಟಕ್ಕೆ ಹೊಸ ತಿರುವು ನೀಡಬಹುದು...

ಜನಸಂಖ್ಯೆ ಲೆಕ್ಕಾಚಾರ (2011ರ ಜನಗಣತಿ)

- **1.05** ಕೋಟಿ — ಪರಿಶಿಷ್ಟ ಜಾತಿ (ಶೇ 17.15)
- **42.50** ಲಕ್ಷ — ಪರಿಶಿಷ್ಟ ಪಂಗಡ (ಶೇ 6.65)
- **6.10** ಕೋಟಿ — ಒಟ್ಟು



ಎಸ್‌ಸಿ ಒಳಮೀಸಲಾತಿ ಹೋರಾಟದ ಹಾದಿ

ಒಳಮೀಸಲಾತಿ	ನ್ಯಾ.ಸದಾಶಿವ ಆಯೋಗದ ಶಿಫಾರಸು
ಗುಂಪು–1 (ಎಡಗೈ ಸಮುದಾಯ)	6%
ಗುಂಪು–2 (ಬಲಗೈ ಸಮುದಾಯ)	5%
ಗುಂಪು–3 (ಆದಿ, ಆಂಧ್ರ, ಬೇಡ, ಜಂಗಮ ಸೇರಿ 42 ಜಾತಿಗಳು)	3%
ಗುಂಪು–4 (ಬಂಜಾರ, ಭೋವಿ, ಕೊರಚ ಕೊರಮ, ಇತರೆ ಜಾತಿಗಳು)	1%


ಪಕ್ಷಗಳಿಗೆ ರಾಜಕೀಯ ದಾಳ

ಪರಿಶಿಷ್ಟ ಜಾತಿಗಳ ಮೀಸಲಾತಿಯ ವಿಚಾರವನ್ನು ರಾಜಕೀಯ ಪಕ್ಷಗಳು ಒಂದು ದಾಳವಾಗಿ ಬಳಸುತ್ತಾ ಬಂದಿವೆ. ನ್ಯಾ. ಎ.ಜೆ.ಸದಾಶಿವ ಆಯೋಗದ ವರದಿಯು 2008–2013ರ ಅವಧಿಯಲ್ಲಿದ್ದ ಬಿಜೆಪಿ ಸರ್ಕಾರದ ಕೈಸೇರಿತ್ತು. ವರದಿ ಸ್ವೀಕರಿಸಿದ ಬಿಜೆಪಿ, ಈ ಬಗ್ಗೆ ಯಾವುದೇ ಕ್ರಮ ಜರುಗಿಸಲಿಲ್ಲ. ನಂತರ ಬಂದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಮುಂದೆ ವರದಿ ಜಾರಿಯ ಪ್ರಶ್ನೆ ಉದ್ಭವಿಸಿತ್ತು. ಸಿದ್ದರಾಮಯ್ಯನವರಿಗೆ ವೈಯಕ್ತಿಕವಾಗಿ ಮನಸ್ಸಿದ್ದರೂ ಸಚಿವ ಸಂಪುಟ ಹಾಗೂ ಪಕ್ಷದ ಶಾಸಕರ ವಿರೋಧದಿಂದಾಗಿ ಅದನ್ನು ಅನುಷ್ಠಾನ ಮಾಡಲಿಲ್ಲ.

ಪರಿಶಿಷ್ಟ ಜಾತಿಗೆ ಕಾಂಗ್ರೆಸ್ ಒಳ ಮೀಸಲಾತಿ ನೀಡಲಿಲ್ಲ ಎಂಬ ಕಾರಣಕ್ಕೆ 2018ರ ಕರ್ನಾಟಕ ವಿಧಾನಸಭೆಯ ಚುನಾವಣೆಯಲ್ಲಿ ಮಾದಿಗ (ಎಡಗೈ) ಸಮುದಾಯದವರು ಬಿಜೆಪಿ ಜತೆ ಹೋಗಿದ್ದರು. ಇದರಿಂದ ಕಾಂಗ್ರೆಸ್ ಹೊಡೆತ ತಿಂದಿತ್ತು. ಅಧಿಕಾರ ಚುಕ್ಕಾಣಿ ಹಿಡಿದ ಬಿಜೆಪಿ, ಈ ವಿಷಯದಲ್ಲಿ ಗಟ್ಟಿ ನಿರ್ಧಾರವನ್ನೇನೂ ತೆಗೆದುಕೊಳ್ಳಲಿಲ್ಲ. ಹೀಗಾಗಿ, 2023ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ ಹಿನ್ನಡೆಯಾಯಿತು ಎಂಬ ವಿಶ್ಲೇಷಣೆಗಳು ಕೇಳಿಬಂದಿದ್ದವು.

2023ರಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೇರುತ್ತಿದ್ದಂತೆಯೇ, ಸದಾಶಿವ ಆಯೋಗದ ವರದಿ ಜಾರಿಯ ಬೇಡಿಕೆ ಮತ್ತೆ ಮುಂಚೂಣಿಗೆ ಬಂತು. 2024ರ ಲೋಕಸಭೆ ಚುನಾವಣೆ ವೇಳೆಗೆ ಈ ವಿಷಯ ಮುನ್ನೆಲೆಗೆ ಬರಬಹುದೆಂಬ ಮುನ್ಸೂಚನೆ ಇದ್ದುದರಿಂದಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಒಳಮೀಸಲಾತಿ ವಿಷಯವನ್ನು ಕೇಂದ್ರದ ಹೆಗಲಿಗೆ ದಾಟಿಸಿದ್ದರು. ಈಗ, ಸುಪ್ರೀಂ ಕೋರ್ಟ್ ತೀರ್ಪಿನಿಂದ ಅದು ಮತ್ತೆ ರಾಜ್ಯಗಳ ಅಂಗಳಕ್ಕೆ ಬಂದು ನಿಂತಿದೆ.

ಬಿಜೆಪಿ ಸರ್ಕಾರದ ಒಳಮೀಸಲಾತಿ ಲೆಕ್ಕಾಚಾರ *



* ಒಟ್ಟು ಮೀಸಲಾತಿ ಶೇ 17 ಜಾರಿಗೆ ಬಂದಿದ್ದು, ಒಳ ಮೀಸಲಾತಿ ಪ್ರಮಾಣ ಹಂಚಿಕೆಯಾಗಿಲ್ಲ

ಪ್ರಜಾವಾಣಿ ವಾರ್ತೆ

ದೇಶದಲ್ಲಿ ಮೊದಲ ಬಾರಿಗೆ ಒಳಮೀಸಲಾತಿ ಬೇಡಿಕೆ ಕೇಳಿಬಂದಿದ್ದು ಪರಿಶಿಷ್ಟ ಜಾತಿಯ ಜನಸಂಖ್ಯೆ ಅತಿ ಹೆಚ್ಚಾಗಿರುವ ಪಂಜಾಬ್‌ನಲ್ಲಿ. ಅಲ್ಲಿ ಮೇ 5, 1975ರಂದು ಪರಿಶಿಷ್ಟ ಜಾತಿಗಳ ನಡುವೆ ಒಳಮೀಸಲಾತಿ ಜಾರಿಗೆ ಬಂತು. ಹರಿಯಾಣದಲ್ಲಿ 1994ರಲ್ಲಿ ಪರಿಶಿಷ್ಟ ಜಾತಿಗಳ ನಡುವೆ ಒಳಮೀಸಲಾತಿ ಅನುಷ್ಠಾನಗೊಂಡಿತು. ದೇಶದ ಒಳಮೀಸಲಾತಿಯ ಇತಿಹಾಸದಲ್ಲಿ ನಿರ್ಣಾಯಕವಾದ ಹೋರಾಟ ನಡೆದದ್ದು ಅವಿಭಜಿತ ಆಂಧ್ರ ಪ್ರದೇಶದಲ್ಲಿ.

ಮೀಸಲಾತಿಯಲ್ಲಿ ತಮಗೆ ನ್ಯಾಯಯುತ ಪಾಲು ಸಿಗಬೇಕು ಎಂದರೆ, ಒಳಮೀಸಲಾತಿ ಬೇಕು ಎಂದು ಮಾದಿಗ ದಂಡೋರಾ ಸಂಘಟನೆಯು ಆಂಧ್ರಪ್ರದೇಶದಲ್ಲಿ ಹೋರಾಟಕ್ಕಿಳಿಯಿತು. 'ರಾಜ್ಯದ ಜನಸಂಖ್ಯೆಯಲ್ಲಿ ಮಾದಿಗರ ಸಂಖ್ಯೆಯು ಶೇ 8.5 ಇದ್ದು, ಪರಿಶಿಷ್ಟ ಜಾತಿಗಳ ಪೈಕಿ ತಮ್ಮ ಪ್ರಮಾಣವು ಶೇ 53 ಆಗಿದೆ; ಹೀಗಾಗಿ ಪರಿಶಿಷ್ಟ ಜಾತಿಗಳ ಮೀಸಲಾತಿಯಲ್ಲಿ ಒಳಮೀಸಲಾತಿ ಕಲ್ಪಿಸಬೇಕು' ಎಂದು ಬೇಡಿಕೆಯಿಟ್ಟಿತು. ಅವರ ಬೇಡಿಕೆಯ ಬಗ್ಗೆ ಅಧ್ಯಯನ ಮಾಡಿ ವರದಿ ಸಲ್ಲಿಸಲು ಆಗಿನ ಆಂಧ್ರ ಪ್ರದೇಶ ಸರ್ಕಾರವು 1996ರಲ್ಲಿ ನ್ಯಾ.ರಾಮಚಂದ್ರ ರಾಜು ನೇತೃತ್ವದಲ್ಲಿ ಆಯೋಗ ರಚಿಸಿತು.

ಆಯೋಗವು ರಾಜ್ಯದ 59 ಪರಿಶಿಷ್ಟ ಜಾತಿಗಳನ್ನು ಅವುಗಳ ಹಿಂದುಳಿದಿರುವಿಕೆ ಮತ್ತು ಜನಸಂಖ್ಯೆಯ ಆಧಾರದ ಮೇಲೆ ನಾಲ್ಕು ಗುಂಪುಗಳನ್ನಾಗಿ (ಎ, ಬಿ, ಸಿ, ಡಿ) ವಿಂಗಡಿಸಿ, ಅವರಿಗೆ ಒಳಮೀಸಲಾತಿ ನಿಗದಿಪಡಿಸಿ ಶಿಫಾರಸು ಮಾಡಿತು. ವರದಿಯನ್ನು ಆಂಧ್ರ ವಿಧಾನಸಭೆ ಒಪ್ಪಿಕೊಂಡು ಒಳಮೀಸಲು ಆದೇಶ ಹೊರಡಿಸಿತು. ಆದರೆ, ಆಂಧ್ರ ಹೈಕೋರ್ಟ್‌ನ ಏಕಸದಸ್ಯ ಪೀಠವು 1998ರಲ್ಲಿ ಸರ್ಕಾರದ ಆದೇಶವನ್ನು ರದ್ದುಪಡಿಸಿತು. ತನ್ನ ನಿರ್ಧಾರದಿಂದ ಹಿಂದೆ ಸರಿಯದ ಸರ್ಕಾರವು, 2000ದಲ್ಲಿ ಸುಗ್ರೀವಾಜ್ಞೆ ಮೂಲಕ ಒಳಮೀಸಲಾತಿಯನ್ನು ಕಾಯ್ದೆಬದ್ಧಗೊಳಿಸಿತು. ಮತ್ತೆ ಅದನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಲಾಯಿತಾದರೂ, ಕೋರ್ಟ್ ಸರ್ಕಾರದ ನಿಲುವನ್ನು ಎತ್ತಿಹಿಡಿಯಿತು.

ಒಳಮೀಸಲಾತಿಗಾಗಿ ಆಂಧ್ರ ಕಾಯ್ದೆ ಜಾರಿಗೆ ತಂದಿದ್ದ ವಿಚಾರವನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಾಯಿತು (ಇ.ವಿ. ಚಿನ್ನಯ್ಯ ಮತ್ತು ಆಂಧ್ರಪ್ರದೇಶ ರಾಜ್ಯ ನಡುವಿನ ಪ್ರಕರಣ). ಸುಪ್ರೀಂ ಕೋರ್ಟ್‌ನ ಐವರು ಸದಸ್ಯರ ಪೀಠವು ಆಂಧ್ರಪ್ರದೇಶದ ಕಾಯ್ದೆಯನ್ನು ರದ್ದುಗೊಳಿಸಿದ್ದಷ್ಟೇ ಅಲ್ಲದೇ, ಈ ವಿಚಾರಕ್ಕೆ ಸಂಬಂಧಿಸಿ ಕಾಯ್ದೆ ಮಾಡುವ ಅಧಿಕಾರ ಸಂಸತ್‌ಗೆ ಮಾತ್ರ ಇರುತ್ತದೆ ಎಂದು 2004ರಲ್ಲಿ ತೀರ್ಪು ನೀಡಿತು. ಆಂಧ್ರಪ್ರದೇಶಕ್ಕೆ ಸಂಬಂಧಿಸಿದ ಈ ತೀರ್ಪು ಇದುವರೆಗೆ ದೇಶದ ಹಲವು ರಾಜ್ಯಗಳಲ್ಲಿ ಪರಿಶಿಷ್ಟ ಜಾತಿಗಳ ಒಳಮೀಸಲಾತಿಯ ವಿಚಾರದಲ್ಲಿ ನಿರ್ಣಾಯಕವಾಗಿತ್ತು.

ಅಲ್ಲಿಗೂ ತನ್ನ ಪ್ರಯತ್ನ ನಿಲ್ಲಿಸದ ಆಂಧ್ರ ಸರ್ಕಾರವು, ಪರಿಶಿಷ್ಟ ಜಾತಿಗಳ ಒಳಮೀಸಲಾತಿಯ ವಿಚಾರದಲ್ಲಿ ನ್ಯಾಯ ಸಲ್ಲಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಿತು. ಕೇಂದ್ರವು ಅದಕ್ಕಾಗಿ ನ್ಯಾ. ಉಷಾ ಮೆಹ್ರಾ ನೇತೃತ್ವದಲ್ಲಿ ಆಯೋಗ ರಚಿಸಿತು. ನ್ಯಾ. ಉಷಾ ಮೆಹ್ರಾ ಆಯೋಗವು 2008ರಲ್ಲಿ ತನ್ನ ವರದಿ ಸಲ್ಲಿಸಿ, ಪರಿಶಿಷ್ಟ ಜಾತಿಯ ಒಳಮೀಸಲಾತಿಗಾಗಿ ಸಂವಿಧಾನದ 341ನೇ ವಿಧಿ ತಿದ್ದುಪಡಿ ಮಾಡಿ ಹೊಸ ಸೆಕ್ಷನ್ (3) ಅನ್ನು ಸೇರಿಸಬೇಕು ಎಂದು ಶಿಫಾರಸು ಮಾಡಿತು.

ರಾಜ್ಯದಲ್ಲೂ ಕೇಳಿದ ಕೂಗು

ನೆರೆಯ ಆಂಧ್ರದ ಮಾದಿಗ ದಂಡೋರಾದ ಮಾದರಿಯಲ್ಲೇ ಕರ್ನಾಟಕದಲ್ಲಿಯೂ ಮಾದಿಗರು ಒಳಮೀಸಲಾತಿ ಹೋರಾಟ ಆರಂಭಿಸಿದರು. ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿ ಆಗಿದ್ದಾಗ ಹೋರಾಟ ತೀವ್ರಗೊಂಡಿತ್ತು. ಕೊನೆಗೆ, ಒಳಮೀಸಲಾತಿ ಬಗ್ಗೆ ಅಧ್ಯಯನ ಮಾಡಿ ವರದಿ ನೀಡಲು ಕರ್ನಾಟಕ ಸರ್ಕಾರವು ಆಯೋಗವೊಂದನ್ನು ರಚಿಸಿತು. ಮೊದಲು ನ್ಯಾ.ಎನ್.ವೈ. ಹನುಮಂತಪ್ಪ ಮತ್ತು ನಂತರ ನ್ಯಾ.ಎಚ್.ಜಿ.ಬಾಲಕೃಷ್ಣ ಅಧ್ಯಕ್ಷರಾಗಿ ನೇಮಕವಾದರೂ ಕಾರಣಾಂತರಗಳಿಂದ ಆಯೋಗದ ಕೆಲಸ ಆರಂಭವಾಗಲಿಲ್ಲ. 2005ರಲ್ಲಿ ಅಧ್ಯಕ್ಷರಾಗಿ ಎ.ಜೆ.ಸದಾಶಿವ ನೇಮಕವಾದ ನಂತರ ಆಯೋಗ ಕಾರ್ಯಾರಂಭ ಮಾಡಿತು ಕರ್ನಾಟಕದಲ್ಲಿ ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ 101 ಜಾತಿಗಳಿವೆ.

ಅವುಗಳಲ್ಲಿ ಮಾದಿಗರಂತಹ ಅಸ್ಪೃಶ್ಯ ಜಾತಿಗಳ ಜತೆಗೆ ಭೋವಿ, ಲಂಬಾಣಿ, ಕೊರಚ, ಕೊರಮ ಮುಂತಾದ ಹಲವು ಸ್ಪೃಶ್ಯ ಜಾತಿಗಳೂ ಇವೆ. ಸ್ಪೃಶ್ಯರಾದರೂ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಅವರ ಸ್ಥಿತಿ ಅಸ್ಪೃಶ್ಯರಂತೆಯೇ ಇದೆ ಎಂದು ಮೈಸೂರು ಮಹಾರಾಜರ ಕಾಲದಲ್ಲೇ ಅವರನ್ನು ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ಸೇರಿಸಲಾಗಿತ್ತು. ಸ್ವಾತಂತ್ರ್ಯಾನಂತರವೂ ಅದೇ ಪಟ್ಟಿ ಮುಂದುವರಿಯುತ್ತಿದೆ.


ರಾಜ್ಯದಲ್ಲಿ ಪರಿಶಿಷ್ಟ ಪಂಗಡಗಳ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಬೇಕು ಎನ್ನುವ ಬೇಡಿಕೆ ತೀವ್ರಗೊಂಡಾಗ ನ್ಯಾ. ನಾಗಮೋಹನ್‌ದಾಸ್ ಅಧ್ಯಕ್ಷತೆಯಲ್ಲಿ ಏಕಸದಸ್ಯ ಆಯೋಗವನ್ನು 2019ರಲ್ಲಿ ಬಿಜೆಪಿ ಸರ್ಕಾರ ರಚಿಸಿತು. ಅದರ ವರದಿ ಆಧಾರದ ಮೇಲೆ ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಪ್ರಮಾಣವನ್ನು ಹೆಚ್ಚಳ ಮಾಡಿ ಸರ್ಕಾರ ಆದೇಶ ಹೊರಡಿಸಿತ್ತು. ಆದರೆ, ಕಾನೂನು ತೊಡಕಿನಿಂದ ಅದು ಪೂರ್ಣಪ್ರಮಾಣದಲ್ಲಿ ಜಾರಿಯಾಗಲಿಲ್ಲ.

ಆಧಾರ: ಡಿಜಿಟಲ್ ಸಂಸತ್, ನ್ಯಾ.ಎಚ್.ಎನ್.ನಾಗಮೋಹನ್‌ದಾಸ್ ಆಯೋಗದ ವರದಿ, ಎಸ್‌ಟಿ ರಾಷ್ಟ್ರೀಯ ಆಯೋಗ, ನ್ಯಾ.ಎ.ಜೆ.ಸದಾಶಿವ ಆಯೋಗದ ವರದಿ,

ಒಳ ಮೀಸಲಾತಿ ಅಗತ್ಯ ಪ್ರತಿಪಾದಿಸಿದ್ದ ನ್ಯಾ. ಸದಾಶಿವ ಆಯೋಗ

ಪರಿಶಿಷ್ಟ ಜಾತಿಗಳಲ್ಲಿ ಕೆಲವು ಉಪಜಾತಿಗಳು ಒಳಮೀಸಲಾತಿಗೆ ಒತ್ತಾಯಿಸಿ ನಡೆಸುತ್ತಿದ್ದ ಹೋರಾಟದ ನಡುವೆಯೇ, ರಾಜ್ಯದಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಸಮುದಾಯಗಳ ಸ್ಥಿತಿಗತಿ ಮತ್ತು ಸಂವಿಧಾನದ 15 ಮತ್ತು 16ನೇ ಕಲಂಗಳು ಪರಿಶಿಷ್ಟ ಜಾತಿಗೆ ನೀಡಿರುವ ಮೀಸಲಾತಿ ಸೌಲಭ್ಯ ಎಲ್ಲ ಸಮುದಾಯಗಳಿಗೆ ಸಮನಾಗಿ ಸಿಗುತ್ತಿದೆಯೇ ಎಂಬುದನ್ನು ಅಧ್ಯಯನ ಮಾಡಿ, ವರದಿ ನೀಡಲು 2005ರ ಸೆಪ್ಟೆಂಬರ್ 24ರಂದು ಎನ್.ಧರಂ ಸಿಂಗ್ ನೇತೃತ್ವದ ಕಾಂಗ್ರೆಸ್- ಜೆಡಿಎಸ್ ಮೈತ್ರಿ ಸರ್ಕಾರ ನ್ಯಾಯಮೂರ್ತಿ ಎ.ಜೆ. ಸದಾಶಿವ ನೇತೃತ್ವದಲ್ಲಿ ಏಕ ಸದಸ್ಯ ಆಯೋಗವನ್ನು ನೇಮಿಸಿ ಅಧಿಸೂಚನೆ ಹೊರಡಿಸಿತ್ತು.

2007ರ ಏಪ್ರಿಲ್‌ವರೆಗೂ ಸದಾಶಿವ ಅವರೊಬ್ಬರೇ ಆಯೋಗದಲ್ಲಿದ್ದರು. ನಂತರ ಆಯೋಗಕ್ಕೆ ಕಾರ್ಯದರ್ಶಿ ಮತ್ತು ಉಸ್ತುವಾರಿ ಸಮಿತಿಯ ನೇಮಕ ಮಾಡಿ ಸರ್ಕಾರ ಆದೇಶ ಹೊರಡಿಸಿತ್ತು. ಪರಿಶಿಷ್ಟ ಜಾತಿಯ ಅಡಿಯಲ್ಲಿ ಬರುವ 101 ಜಾತಿಗಳ ಜನರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸ್ಥಿತಿಗಳ ಸಮೀಕ್ಷೆಯನ್ನು ಆಯೋಗ ಮಾಡಿತ್ತು. ಅದಕ್ಕಾಗಿ ಸಮುದಾಯ, ಸಂಘಟನೆಗಳು, ಮುಖಂಡರು, ತಜ್ಞರು ಸೇರಿದಂತೆ ಹಲವರನ್ನು ಭೇಟಿ ಮಾಡಿ ಅಭಿಪ್ರಾಯ ಸಂಗ್ರಹಿಸಿತ್ತು. ಮೀಸಲಾತಿಗೆ ಸಂಬಂಧಿಸಿದಂತೆ ಹಿಂದೆ ರಚಿಸಲಾಗಿದ್ದ ಆಯೋಗಗಳು, ಸುಪ್ರೀಂ ಕೋರ್ಟ್‌ನ ತೀರ್ಪುಗಳನ್ನೂ ಅಧ್ಯಯನ ನಡೆಸಿತ್ತು. 2012ರ ಜೂನ್ 12ರಂದು ಅಂದಿನ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಅವರಿಗೆ ವರದಿ ಸಲ್ಲಿಸಿತ್ತು.



ನ್ಯಾ. ಎ.ಜೆ.ಸದಾಶಿವ ಅವರು 2012ರಲ್ಲಿ ಮುಖ್ಯಮಂತ್ರಿಯಾಗಿದ್ದ ಡಿ.ವಿ.ಸದಾನಂದ ಗೌಡ ಅವರಿಗೆ ವರದಿ ಸಲ್ಲಿಸಿದ ಸಂದರ್ಭದ ಚಿತ್ರ. ಅಂದು ಸಚಿವರಾಗಿದ್ದ ಎ.ನಾರಾಯಣ ಸ್ವಾಮಿ, ಗೋವಿಂದ ಕಾರಜೋಳ ಚಿತ್ರದಲ್ಲಿದ್ದಾರೆ ಪ್ರಜಾವಾಣಿ ಸಂಗ್ರಹ ಚಿತ್ರ

ಸದಾಶಿವ ವರದಿ ಅಪ್ರಸ್ತುತ ಎಂದಿದ್ದ ಬೊಮ್ಮಾಯಿ ಸರ್ಕಾರ

ಕಳೆದ ವಿಧಾನಸಭಾ ಚುನಾವಣೆಯ ಹೊಸ್ತಿಲಿನಲ್ಲಿ' ಮುಸ್ಲಿಮರಿಗಿದ್ದ ಶೇ 4ರಷ್ಟು ಮೀಸಲಾತಿಯನ್ನು ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ರದ್ದುಪಡಿಸಿತು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಮೀಸಲಾತಿಯನ್ನು ಸುಗ್ರೀವಾಜ್ಞೆ ಮೂಲಕ ಹೆಚ್ಚಳ ಮಾಡಿತು. ಒಳಮೀಸಲಾತಿಯನ್ನೂ ಜಾರಿಗೆ ತರುವ ಸಂಬಂಧ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲು 2023ರ ಮಾರ್ಚ್ 24ರ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಂಡಿತ್ತು.

ಒಳಮೀಸಲಾತಿ ಬಗ್ಗೆ ಚರ್ಚಿಸಿ ಶಿಫಾರಸು ಮಾಡಲು ರಚಿಸಿದ್ದ ಸಂಪುಟ ಉಪಸಮಿತಿಯು 2011ರ ಜನಗಣತಿಯಂತೆ ಒಟ್ಟು 101 ಪರಿಶಿಷ್ಟ ಜಾತಿಗಳ ಜಾತಿವಾರು ಜನಸಂಖ್ಯೆಯನ್ನು ಪರಿಗಣಿಸಿ ನಾಲ್ಕು ಗುಂಪುಗಳಾಗಿ ವರ್ಗೀಕರಿಸಿ, ಶೇಕಡವಾರು ಮೀಸಲಾತಿ ನಿಗದಿಪಡಿಸಿ ಸಚಿವ ಸಂಪುಟ ಸಭೆಗೆ ಶಿಫಾರಸು ಮಾಡಿತ್ತು. ಈ ಶಿಫಾರಸಿಗೆ ಅನುಮೋದನೆ ನೀಡಿದ್ದ ಸರ್ಕಾರ, ನ್ಯಾ.ಎ.ಜೆ.ಸದಾಶಿವ ಆಯೋಗದ ವರದಿಯನ್ನು ಈಗ 'ಅಪ್ರಸ್ತುತ' ಎಂದು ಉಲ್ಲೇಖಿಸಿತ್ತು.

ಸಚಿವ ಸಂಪುಟ ಸಭೆ ನೀಡಿದ್ದ ಅನುಮೋದನೆಯಂತೆ ಸಮಾಜ ಕಲ್ಯಾಣ ಇಲಾಖೆಯು 2023ರ ಮಾರ್ಚ್ 27ರಂದು 'ಎ.ಜೆ. ಸದಾಶಿವ ಆಯೋಗದ ಶಿಫಾರಸುಗಳು ಇನ್ನು ಮುಂದೆ ಅಪ್ರಸ್ತುತ' ಎಂಬ ಆದೇಶವನ್ನೂ ಹೊರಡಿಸಿತ್ತು.

ಸಂವಿಧಾನ ತಿದ್ದುಪಡಿಗೆ ಕಾಂಗ್ರೆಸ್ ಸರ್ಕಾರ ಶಿಫಾರಸು

ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿರುವ ವಿವಿಧ ಸಮುದಾಯಗಳಿಗೆ ಒಳ ಮೀಸಲಾತಿ ಕಲ್ಪಿಸಬೇಕು ಎಂಬ ಕೂಗು ಕಾಂಗ್ರೆಸ್ ಪಕ್ಷದ ಒಳಗೂ ಕೇಳಿ ಬಂದಿದ್ದರಿಂದ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಈ ವರ್ಷಾರಂಭದಲ್ಲಿ ಒಳಮೀಸಲಾತಿ ಕಲ್ಪಿಸಲು ಸಂವಿಧಾನದ 341ನೇ ವಿಧಿಗೆ ಮೂರನೇ ಸೆಕ್ಷನ್ ಸೇರಿಸಬೇಕು ಎಂದು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿತ್ತು.

341(3) ವಿಧಿ: ಪರಿಶಿಷ್ಟ ಜಾತಿಗಳಲ್ಲಿ ವರ್ಗೀಕರಣದ ಬಗ್ಗೆ ದೆಹಲಿ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಉಷಾ ಮೆಹ್ರಾ ಅಧ್ಯಕ್ಷತೆಯಲ್ಲಿ ಕೇಂದ್ರ ಸರ್ಕಾರ ರಚಿಸಿದ ರಾಷ್ಟ್ರೀಯ ಆಯೋಗವು ಸಂವಿಧಾನದ ವಿಧಿ 341ರಲ್ಲಿ ಹೊಸತಾಗಿ (3) ನೇ ಸೆಕ್ಷನ್ ಸೇರಿಸುವ ಕುರಿತಂತೆ ಶಿಫಾರಸು ಮಾಡಿದೆ. ಅದನ್ನು ಯಥಾವತ್ ಸೇರಿಸುವಂತೆ ರಾಜ್ಯ ಸರ್ಕಾರ ಕೇಂದ್ರಕ್ಕೆ ಶಿಫಾರಸು ಮಾಡಿತ್ತು.

341(1)ನೇ ವಿಧಿಯಲ್ಲಿ ಅಧಿಸೂಚಿಸಲಾದ ಅಥವಾ 341(2)ನೇ ವಿಧಿಯ ಪ್ರಕಾರ ಸಂಸತ್ತು ರೂಪಿಸಿದ ಪಟ್ಟಿಯಲ್ಲಿರುವ ಯಾವುದೇ ಜಾತಿ, ಜನಾಂಗ ಅಥವಾ ಬುಡಕಟ್ಟು ಅಥವಾ ಜನರ ಗುಂಪುಗಳಿಗೆ ಸಂಬಂಧಿಸಿದಂತೆ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಿಂದ ನೀಡಿದ ಶಿಫಾರಸಿನ ಆಧಾರದಲ್ಲಿ ಉಪ ವರ್ಗೀಕರಣ ಮಾಡಲು ಅಥವಾ ಉಪ ವರ್ಗೀಕರಣವನ್ನು ತೆಗೆದುಹಾಕಲು 341(3) ವಿಧಿಯು ಕೇಂದ್ರ ಸರ್ಕಾರಕ್ಕೆ ಅವಕಾಶ ಕಲ್ಪಿಸುತ್ತದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ಸಂಸತ್ತಿನಲ್ಲಿ ಮಾತನಾಡುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಟೋಲ್ ಬೂತ್‌ಗಳಿಂದ 60 ಕಿ.ಮೀ ವ್ಯಾಪ್ತಿಯ ಗ್ರಾಮ/ಪ್ರದೇಶದ ನಿವಾಸಿಗಳಾಗಿದ್ದರೆ, ಅಂಥವರಿಗೆ ಟೋಲ್ ಶುಲ್ಕ ಪಾವತಿಸುವುದರಿಂದ ವಿನಾಯ್ತಿ ಇದೆ ಎಂದು ಸಚಿವರು ಘೋಷಿಸಿದ್ದಾರೆ ಎಂದು ಅದನ್ನು ಹಂಚಿಕೊಳ್ಳುತ್ತಿರುವವರು ಪ್ರತಿಪಾದನೆ ಮಾಡುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



ಈ ಬಗ್ಗೆ ಯು ಟ್ಯೂಬ್‌ನಲ್ಲಿ ಕೀ ವರ್ಡ್ ಸರ್ಚ್ ಮಾಡಿದಾಗ, ಮಾರ್ಚ್ 22, 2022ರಂದು ನಿತಿನ್ ಗಡ್ಕರಿ ಅವರ ಯು ಟ್ಯೂಬ್ ಚಾನೆಲ್‌ನಲ್ಲಿ ದೀರ್ಘ ಅವಧಿಯ ವಿಡಿಯೊ ಕಂಡುಬಂತು. ಟೋಲ್ ಬೂತ್‌ಗಳ ಸುತ್ತಮುತ್ತಲಿನ ಗ್ರಾಮ/ಪ್ರದೇಶಗಳ ನಿವಾಸಿಗಳಿಗೆ ಉಚಿತ ಪಾಸ್ ನೀಡುವ ಬಗ್ಗೆ ಕೆಲವು ಸಂಸದರು ಸಲಹೆ ನೀಡಿದ್ದಾರೆ ಎಂದು ಸಚಿವರು ವಿಡಿಯೊದಲ್ಲಿ ಹೇಳಿದ್ದಾರೆ. ನಂತರ ಅವರು 60 ಕಿ.ಮೀ ವ್ಯಾಪ್ತಿಯಲ್ಲಿ ಎರಡು ಟೋಲ್ ಬೂತ್‌ಗಳು ಇರುವಂತಿಲ್ಲ ಎಂದು ಹೇಳಿ, ಮೂರು ತಿಂಗಳ ಒಳಗೆ ಇದನ್ನು ಜಾರಿಗೊಳಿಸಲು ಉದ್ದೇಶಿಸಿರುವುದಾಗಿ ತಿಳಿಸಿದ್ದರು. ಸಚಿವರ ಹಳೆಯದಾದ ಎರಡು ಪ್ರತ್ಯೇಕ ವಿಡಿಯೊಗಳನ್ನು ಒಂದುಗೂಡಿಸಿ, ತಪ್ಪು ಅರ್ಥ ಬರುವಂತೆ ಪ್ರಚಾರ ಮಾಡಲಾಗುತ್ತಿದೆ. ಈ ಬಗ್ಗೆ ಆಲ್ಟ್ ನ್ಯೂಸ್ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ.

ಗುಂಡಣ್ಣ



ನುಡಿ ಬೆಳಗು



ಪ್ರೊ.ಎಂ.ಕೃಷ್ಣೇಗೌಡ

ಅವರು ಜೈಲಿನಿಂದ ಅತ್ತುಕೊಂಡೇ ಹೊರಗೆ ಬಂದರು

ಅದು 1932ನೇ ಇಸವಿ.

ಅಸಹಕಾರ ಚಳವಳಿ ತೀವ್ರವಾಗಿತ್ತು. ಆಗ ಲಾಲ್ ಬಹದ್ದೂರ್ ಶಾಸ್ತ್ರಿ ಅವರನ್ನು ಬಂಧಿಸಿ ಬ್ರಿಟಿಷ್ ಸರ್ಕಾರ ಫೈಜಾಬಾದ್ ಜೈಲಿನಲ್ಲಿಟ್ಟಿತ್ತು. ಶಾಸ್ತ್ರಿ ಅವರ ಪತ್ನಿ ಲಲಿತಾದೇವಿ ಆಗ ಅಲಹಾಬಾದ್‌ನಲ್ಲಿದ್ದರು. ರಾಜಕೀಯ ಕೈದಿಗಳನ್ನು ನೋಡಲು ಅವರ ಕುಟುಂಬದವರಿಗೆ ತಿಂಗಳಿಗೊಮ್ಮೆ ಮಾತ್ರ ಅವಕಾಶ ಕೊಡಲಾಗುತ್ತಿತ್ತು. ಲಲಿತಾದೇವಿಯವರಿಗೆ ಗಂಡನನ್ನು ನೋಡಿ ಬರುವುದಕ್ಕೂ ಹಣ ಇರಲಿಲ್ಲ. ಆದರೆ ಪತಿಯನ್ನು ನೋಡಿ ಬರಬೇಕೆಂಬ ತವಕ, ಆಸೆ. ಆರು ತಿಂಗಳು ಅರೆಹೊಟ್ಟೆ ಉಂಡು ಮನೆಯ ಖರ್ಚನ್ನೆಲ್ಲಾ ಕಡಿಮೆ ಮಾಡಿ ಒಂದಿಷ್ಟು ಉಳಿತಾಯ ಮಾಡಿ ರೈಲು ಹತ್ತಿ ಗಂಡನನ್ನು ನೋಡಲು ಹೋದರು. ಅವರೊಂದಿಗೆ ಏನೇನು ಮಾತಾಡಬೇಕೆಂದು ಮನಸ್ಸಿನಲ್ಲೇ ಗುಣುಗುಣಿಸಿಕೊಂಡಿದ್ದರು. ಹೋಗುವಾಗ ಜೈಲಿನಲ್ಲಿರುವ ಅವರಿಗಾಗಿ ಏನನ್ನು ತೆಗೆದುಕೊಂಡು ಹೋಗುವುದು? ಶಾಸ್ತ್ರಿ ಅವರಿಗೆ ಮಾವಿನಹಣ್ಣು ಅಂದರೆ ಪ್ರಾಣ. ಆಗ ಮಾವಿನಹಣ್ಣಿನ ಕಾಲ. ಪತಿಗೆ ನೀಡದೆ ಹೊಸ ತರಕಾರಿ ಅಥವಾ ಹಣ್ಣಿನ ರುಚಿಯನ್ನು ಲಲಿತಾದೇವಿ ನೋಡುತ್ತಿರಲಿಲ್ಲ. ಅದು ಅವರು ಪಾಲಿಸಿಕೊಂಡು ಬಂದಿದ್ದ ಪದ್ಧತಿ.

ಆವತ್ತು ತಮ್ಮ ಪತಿಗಾಗಿ ಲಲಿತಾದೇವಿ ಎರಡು ಅತ್ಯುತ್ತಮವಾದ ಮಾವಿನಹಣ್ಣುಗಳನ್ನು ಕೊಂಡರು. ಇವುಗಳನ್ನು ಕೊಯ್ದು ಹೋಳು ಮಾಡಿ ತಾವೇ ಪತಿಗೆ ತಿನ್ನಿಸಬೇಕು ಎಂಬುದು ಅವರ ಆಸೆ. ಆದರೆ ಜೈಲಿನ ನಿಯಮ ಪ್ರಕಾರ ಬಂಧಿತರಿಗೆ ಸಂದರ್ಶಕರು ಏನನ್ನೂ ನೇರವಾಗಿ ಕೊಡುವಂತಿಲ್ಲ. ಕೊಡುವುದಿದ್ದರೆ ಜೈಲಿನ ಅಧಿಕಾರಿಗಳ ವಶಕ್ಕೆ ಕೊಡಬೇಕು. ಅವರು ಅವುಗಳನ್ನು ಸಂಬಂಧಪಟ್ಟ ಕೈದಿಗೆ ಕೊಡಬೇಕು. ಅದು ನಿಯಮ.

ಆದರೆ ಲಲಿತಾದೇವಿಗೆ ತಾವೇ ಪತಿಗೆ ಕೊಟ್ಟು ತಿನ್ನಿಸಬೇಕೆಂಬ ಆಸೆಯಿತ್ತಲ್ಲ, ಹಣ್ಣುಗಳನ್ನು ತಮ್ಮ ಉಡುಗೆಯಲ್ಲಿ ಮುಚ್ಚಿಕೊಂಡು ಪತಿಯನ್ನು ನೋಡಲು ಹೋದರು.

ತಮ್ಮ ಪತ್ನಿ ನಿಯಮ ಮೀರಿ, ಕದ್ದು ಹೀಗೆ ಮಾವಿನಹಣ್ಣುಗಳನ್ನು ತಂದದ್ದನ್ನು ನೋಡಿ ಶಾಸ್ತ್ರೀಜಿ ಸಿಟ್ಟಿಗೆದ್ದರು. ನೀನು ಮಾಡಿದ್ದು ಮೋಸ, ವಂಚನೆ, ನಿನ್ನ ನಡವಳಿಕೆಯಿಂದ ನನಗೆ ನಾಚಿಕೆಯಾಗಿದೆ ಎಂದು ಬಯ್ದರು. ಈ ಹಣ್ಣುಗಳನ್ನು ತಿನ್ನುವುದಕ್ಕೆ ನನಗೆ ಸಾಧ್ಯವೇ ಇಲ್ಲ ಅಂದುಬಿಟ್ಟರು. ಮತ್ತು ಕೂಡಲೇ ಜೈಲು ಅಧಿಕಾರಿಗಳಿಗೆ ಇದನ್ನು ವರದಿ ಮಾಡಿದರು.

ಲಲಿತಾದೇವಿಯವರ ಕಣ್ಣಿನಿಂದ ಧಾರಾಕಾರ ನೀರು ಸುರಿಯಿತು. ಕಂಠ ಬಿಗಿಯಿತು. ಆರು ತಿಂಗಳಿಂದ ತಮ್ಮ ಪತಿಯೊಂದಿಗೆ ಏನೇನು ಮಾತಾಡಬೇಕು ಎಂದುಕೊಂಡಿದ್ದರೋ ಅದರಲ್ಲಿ ಒಂದು ಮಾತೂ ಹೊರಗೆ ಬರಲಿಲ್ಲ. ಪತಿಯೊಂದಿಗೆ ಒಂದಿಷ್ಟು ಹೊತ್ತು ಸಂತೋಷವಾಗಿ ಇದ್ದು ಬರಬಹುದೆನ್ನುವ ಅವರ ಆಸೆ ಮಣ್ಣಾಗಿಹೋಯಿತು.

ಆಮೇಲೆ ಶಾಸ್ತ್ರೀಜೀಯವರು ತಾವೇ ಸಮಾಧಾನಗೊಂಡರು. ಅಮ್ಮನ ಬಗ್ಗೆ ಕುಟುಂಬದ ಬಗ್ಗೆ ವಿಚಾರಿಸಿದರು. ಲಲಿತಾದೇವಿಯವರಿಗೆ ಹ್ಞಾ ಹ್ಞೂ ಎಂದಷ್ಟೇ ಉತ್ತರ ನೀಡುವುದಕ್ಕೆ ಸಾಧ್ಯವಾಯಿತು. ಅತ್ತುಕೊಂಡು ಜೈಲಿನಿಂದ ಹೊರಬಂದರು.

ಆ ಪುಣ್ಯಾತ್ಮ ವ್ಯಕ್ತಿಯ ನೆನಪು ನಮ್ಮ ಮನಸ್ಸನ್ನು ಒಂದಿಷ್ಟು ಶುಚಿಗೊಳಿಸಲಿ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಆಗಸ್ಟ್ 2, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ದ್ವಾದಶಿ ಗಂ. 15-30 ನಕ್ಷತ್ರ: ಮೃಗಶಿರ ಗಂ. 10-24 ಯೋಗ: ವ್ಯಾಘಾತ ಗಂ. 12-50 ಕರಣ: ತೈತಿಲ ಗಂ. 15-30, ಕರ್ಕಾಟಕ ಮಾಸದ 16 ನೇ ದಿನ, ಮಳೆನಕ್ಷತ್ರ: ಪುಷ್ಯ 4.
ರಾಹುಕಾಲ : ಬೆಳಗ್ಗೆ 10-30 – 12-00
ಸೂರ್ಯೋದಯ : 06-19 ಸೂರ್ಯಾಸ್ತ : 06-54
ಮುಸ್ಲಿಂ ದಿನಾಂಕ : 22 ಮೊಹರಮ್
ಅದೃಷ್ಟ ಸಂಖ್ಯೆ : 4, 10

ಮೇಷ: ಮೇಧಾವಿ ಜನರೊಂದಿಗಿನ ಸಂಪರ್ಕ ಬೆಳೆಯುವುದರಿಂದ ಕೆಲಸ ಕಾರ್ಯಗಳನ್ನು ಸಾಧಿಸಿಕೊಳ್ಳುವಿರಿ. ಸ್ವಾಮಿ ವೆಂಕಟೇಶನ ಒಲುಮೆಯಿಂದ ಕಷ್ಟಗಳು ಪರಿಹಾರವಾಗುವುದು. ಆಹಾರದಲ್ಲಿ ಗುಣಮಟ್ಟ, ಶುಚಿತ್ವ ಕಾಪಾಡಿ.

ವೃಷಭ: ಮರಮಟ್ಟು, ಕೃಷಿ, ಹೈನುಗಾರಿಕೆ ವೃತ್ತಿಗಳಲ್ಲಿರುವವರಿಗೆ ನಿರೀಕ್ಷಿತ ವರಮಾನ ದೊರೆಯಲಿದೆ. ಕೆಲಸವನ್ನು ಸಾಧಿಸಲು ಹೊಸ ಮಾರ್ಗ ಆರಿಸಿಕೊಳ್ಳಬೇಕಾಗುವುದು. ಕನಸುಗಳು ಕೈಗೂಡುವ ದಿನ ಇದಾಗಿದೆ.

ಮಿಥುನ: ಅಸಾಧ್ಯ ಕಾರ್ಯಗಳನ್ನು ಸಾಧಿಸಿ ತೋರಿಸುವಷ್ಟು ಮನೋಬಲ, ಛಲವನ್ನು ವೃದ್ಧಿಸಿಕೊಳ್ಳಿ. ಮನೆಯಲ್ಲಿ ನವ ಶಿಶುವಿನ ಆಗಮನದಿಂದ ಸಂಭ್ರಮ ಉಂಟಾಗುವುದು. ಆಲಂಕಾರಿಕ ವಸ್ತುಗಳ ಮಾರಾಟ ಲಾಭವನ್ನು ತರುವುದು.

ಕರ್ಕಾಟಕ: ಸುತ್ತಲಿನ ವಿದ್ಯಮಾನಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಿ. ಮಗಳಿಗೆ ಆತ್ಮೀಯರೊಬ್ಬರ ಸಹಾಯದಿಂದ ಉದ್ಯೋಗ ದೊರೆಯಲಿದೆ. ನ್ಯಾಯಾಂಗ ಇಲಾಖೆಯವರಿಗೆ ಬಡ್ತಿ ಅಥವಾ ವರ್ಗಾವಣೆ ಉಂಟಾಗುವುದು.

ಸಿಂಹ: ಸಂತೋಷ ಹೊಂದಿದವರಾಗಿ ಹಾಗೂ ಪ್ರೀತಿ ಪಾತ್ರರೊಂದಿಗೆ ಉತ್ತಮ ಹೊಂದಾಣಿಕೆಯಿಂದ ಇರುವಂತಾಗಲಿದೆ. ಸಹೋದ್ಯೋಗಿಗಳೊಡನೆ ಅನವಶ್ಯಕವಾದ ವಾದ-ವಿವಾದಗಳು ನಡೆಯದಂತೆ ವರ್ತಿಸಿ.

ಕನ್ಯಾ: ದಿನಸಿ ವ್ಯಾಪಾರಿಗಳು ವ್ಯಾಪಾರವನ್ನು ವಿಸ್ತರಣೆ ಮಾಡುವುದಕ್ಕಿಂತ ಗುಣಮಟ್ಟ ಕಾಪಾಡುವ ಬಗ್ಗೆ ಗಮನಹರಿಸಿ. ಜಾಹೀರಾತು ಸಂಸ್ಥೆಯ ಜನರಿಗೆ ವಿಶೇಷ ಆದಾಯ ಇರುವುದು. ಶಿಕ್ಷಕ ವರ್ಗದವರಿಗೆ ಅಧಿಕ ಕೆಲಸ.

ತುಲಾ: ಕೃತಕ ಅಂಗಾಂಗಗಳ ಕಸಿಯನ್ನು ಮಾಡಿಸಿಕೊಂಡಿರುವವರಿಗೆ ಅದರಿಂದಾಗಿ ಆರೋಗ್ಯ ತಪ್ಪುವ ಸಾಧ್ಯತೆ ಇದೆ. ಈ ದಿನ ಆಶಾದಾಯಕ. ಮನೆಯಲ್ಲಿ ಎಲ್ಲರ ಆರೋಗ್ಯ ಚೆನ್ನಾಗಿದ್ದು, ಮನಸ್ಸಿಗೆ ನೆಮ್ಮದಿ .

ವೃಶ್ಚಿಕ: ಮುಂಚೆಯೇ ನಿರ್ಧರಿಸಲಾಗಿದ್ದ ಪ್ರಯಾಣವನ್ನು ಅನಿವಾರ್ಯ ಕಾರಣಗಳಿಂದಾಗಿ ಮುಂದೂಡುವ ಅಥವಾ ಕೈಬಿಡುವ ಯೋಚನೆ ಮಾಡುವಿರಿ. ಬಹಳ ದಿನಗಳಿಂದ ಕಾಡುತ್ತಿದ್ದ ಸಮಸ್ಯೆ ದೂರಾಗುವುದು.

ಧನು: ಜೆರಾಕ್ಸ್ ಅಥವಾ ಪ್ರಿಂಟಿಂಗ್ ಪ್ರೆಸ್‌ನವರಿಗೆ ಅತ್ಯಧಿಕ ಮಟ್ಟದ ಗ್ರಾಹಕರು ಬರುತ್ತಾರೆ. ದೇಹದಲ್ಲಿ ವಾಯು ಪೀಡೆಯು ಹೆಚ್ಚಾಗುವುದರಿಂದ ಕಿರಿಕಿರಿ ಎನಿಸಲಿದೆ. ರಸಗೊಬ್ಬರದ ವ್ಯಾಪಾರ ಮಾಡುವವರಿಗೆ ಹೆಚ್ಚಿನ ಲಾಭ.

ಮಕರ: ಕೌಟುಂಬಿಕ ಕಲಹವನ್ನು ಬುದ್ಧಿವಂತಿಕೆ ಉಪಯೋಗಿಸಿ ತಿಳಿಗೊಳಿಸಬೇಕಾಗುತ್ತದೆ. ಮನೆ ಬದಲಾಯಿಸುವ ಯೋಚನೆ ಮಾಡಬೇಕಾಗಲಿದೆ. ಮಹಿಳೆಯರಿಗೆ ಉದ್ಯೋಗದಲ್ಲಿ ಲಾಭವಿರುತ್ತದೆ.

ಕುಂಭ: ಕುಟುಂಬದಲ್ಲಿ ಅಥವಾ ಮನೆಯಲ್ಲಿನ ನಿಮ್ಮ ಮೇಲಿನ ತಪ್ಪು ಕಲ್ಪನೆ ಹೋಗಲಾಡಿಸಿಕೊಳ್ಳುವಿರಿ. ಸಮಯವನ್ನು ವ್ಯರ್ಥ ಮಾಡದಿರಿ. ಮನೆಯ ಜವಾಬ್ದಾರಿಗಳನ್ನು ಮಗನಿಗೆ ಕೊಡುವ ಬಗ್ಗೆ ಯೋಚಿಸಿ.


ಮೀನ: ಮಕ್ಕಳ ವಿದ್ಯಾಭ್ಯಾಸದ ಬಗ್ಗೆ, ತಂದೆ-ತಾಯಿಯ ಆರೋಗ್ಯದ ಬಗ್ಗೆ ಗಮನವಹಿಸುವುದು ಅಗತ್ಯ. ವಸ್ತ್ರ ವಿನ್ಯಾಸದಲ್ಲಿ ವಿಶೇಷ ಪರಿಣತಿಯನ್ನು ಪಡೆದುಕೊಳ್ಳಬಹುದು. ಅನಿರೀಕ್ಷಿತ ಪ್ರಯಾಣದಿಂದಾಗಿ ಖರ್ಚು-ವೆಚ್ಚಗಳು ಅಧಿಕ.

ಪದಬಂಧ 5760

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅನಿರೀಕ್ಷಿತವಾಗಿ ಬಂದ ಅತಿಥಿ (4)
4.ಸೋಂಕು ರೋಗವಿದು (4)
5.ಏರು ತಗ್ಗಿಲ್ಲದಿರುವುದು (3)
7.ಕಾವ್ಯ ರಚನೆಗಾರ ತಿರುಗಿದ್ದಾನೆ (2)
9.ಕಾರ್ಯಕ್ರಮ ನಡೆಯುವಾಗಲೇ ಇತರರಿಗೆ ಅದನ್ನು ಪ್ರಸಾರ ಮಾಡುವಿಕೆ (7)
11.ಸಮ್ಮತದಿಂದ ನೀಡಿದ ಓಟು (2)
12.ಬುಗುಡಿ ಧರಿಸಲು ಅಡ್ಡಿಯಾದ ಶೀತ! (3)
14. 'ಕರ್ನಾಟಕದ ಕಾಶ್ಮೀರ'ಎಂದು ಖ್ಯಾತಿಯಾಗಿರುವ ಉತ್ತರಕನ್ನಡ ಜಿಲ್ಲೆಯ ಊರು (4)
16.ಒಗ್ಗರಣೆಗೆ ಬಳಸುವ ಸೊಪ್ಪು (4)

ಮೇಲಿಂದ ಕೆಳಕ್ಕೆ
1.ಕೀಳುದರ್ಜೆಯವನು ಇಲ್ಲಿದ್ದಾನೆ (3)
2.ತರಲೆಯ ಶಿರ! (2)
3.ಹುಟ್ಟದ ಎಂದು ಹೀಗೆನ್ನಿ (3)
4.ಅಂಕಣದಲ್ಲಿರುವ ಸಂಖ್ಯೆ (2)
6.ಸೂಕ್ಷ್ಮವಾಗಿ ಪರಿಶೀಲಿಸುವವನು (4)
7.ಜಗತ್ತಿನಲ್ಲೆಲ್ಲಾ ಪ್ರಸಿದ್ಧಿಯಾಗಿರುವುದು (5)
8.ರಾಜನ ವಾಸಸ್ಥಾನ (4)
10.ಹರನ ಮುಂದಿರಿಸಿದ ಮಣ್ಣಿನ ಬಾನಿ (3)
11.ಮಧುರ ಫಲ ನೀಡುವ ವೃಕ್ಷ (2)
13.ಕಾವು ಇದ್ದಾಗಿನ ಡೌಲು! (3)
15.ಮಂಕರಿ ಹೊತ್ತಿರುವ ದಡ್ಡ (2)



5759ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ವಿಲಾಸ 4.ಮಹಾತ್ಮಗಾಂಧಿ 6.ವಿರೂಪ 8.ಲಾಲಬಹಾದ್ದೂರ್ ಶಾಸ್ತ್ರಿ 10.ಜಲಾನಯನಪ್ರದೇಶ 12.ಕಸ್ತೂರಿ 14.ಮರಕುಟಕ 16.ಪುಲ್ಲಿಂಗ

ಮೇಲಿಂದ ಕೆಳಕ್ಕೆ: 1.ಸುಮ 2.ವಿಧಿ 3.ಸವಿ 5.ಹಾಗಲಾ 7.ಪರಸ್ತ್ರೀ 9.ಹಾಸನ 10.ಜಟಕ 11.ಶಕಟ 13.ರಿಪು 14.ಮಗ 15.ಕಕ್ಕೆ

ಸುಡೊಕು 6145

9		7						
			4		9	8		7
5		8					6	
		6	5			7		9
7				6	1			
	5		8			3		6
8			3			4		2
	9			8				
6		4		9		1		3

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6144 ಸುಡೊಕು

7	1	5	9	4	6	3	2	8
3	4	6	5	8	2	7	9	1
2	8	9	3	7	1	5	6	4
9	6	4	1	3	7	8	5	2
5	2	8	4	6	9	1	3	7
1	3	7	8	2	5	9	4	6
4	9	3	2	1	8	6	7	5
6	5	1	7	9	4	2	8	3
8	7	2	6	5	3	4	1	9

ಹೆಚ್ಚಿನ ಸಂಖ್ಯೆಯಲ್ಲಿ ವೈದ್ಯರ ಅಗತ್ಯವಿದೆ: ಕರ್ನಾಟಕದ ವೈದ್ಯರ ತಂಡದ ಅಭಿಪ್ರಾಯ

ಮರಣೋತ್ತರ ಪರೀಕ್ಷೆಗೆ ಹರಸಾಹಸ

ಪ್ರಜಾವಾಣಿ ವಾರ್ತೆ

ಮೈಸೂರು: 'ವಯನಾಡ್ ದುರಂತದಲ್ಲಿ ಅಸಂಖ್ಯ ಮೃತದೇಹಗಳು ಪತ್ತೆಯಾಗುತ್ತಿದ್ದು, ರಾತ್ರಿ ಹಗಲೆನ್ನದೆ ಕರ್ತವ್ಯ ನಿರ್ವಹಿಸಿದರೂ ಮರಣೋತ್ತರ ಪರೀಕ್ಷೆ ನಡೆಸುವುದು ಸವಾಲಾಗಿ ಪರಿಣಮಿಸಿದೆ. ಅದಕ್ಕಾಗಿ ಹೆಚ್ಚಿನ ವೈದ್ಯರ ಅಗತ್ಯವಿದೆ' ಎಂದು ಕರ್ನಾಟಕದ ವೈದ್ಯರ ತಂಡವು ಅಭಿಪ್ರಾಯಪಟ್ಟಿದೆ.

ರಾಜ್ಯದ ಇಬ್ಬರು ಐಎಎಸ್ ಅಧಿಕಾರಿಗಳ ನೇತೃತ್ವದಲ್ಲಿ ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಯ 15 ವೈದ್ಯರ ತಂಡವು ದುರಂತ ನಡೆದ ಸ್ಥಳದಿಂದ 18 ಕಿ.ಮೀ ದೂರದಲ್ಲಿರುವ ಮೆಪ್ಪಾಡಿ ಆರೋಗ್ಯ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿದೆ.

'ಇಲ್ಲಿನ ವೈದ್ಯಕೀಯ ವ್ಯವಸ್ಥೆಗಳು ಉನ್ನತ ಮಟ್ಟದಲ್ಲಿದ್ದು, ಸಮರೋಪಾದಿಯಲ್ಲಿ ಮರಣೋತ್ತರ ಪರೀಕ್ಷೆ ನಡೆದಿದೆ. ಆದರೆ ಪ್ರತಿ ಪರೀಕ್ಷೆಗೆ ಕನಿಷ್ಠ ಎರಡು ಗಂಟೆ ಬೇಕು. ಮೃತದೇಹಗಳು ಹೆಚ್ಚಿರುವುದರಿಂದ ಹೆಚ್ಚು ವೈದ್ಯರ ಅಗತ್ಯವಿದೆ' ಎಂದು ವೈದ್ಯಾಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ತಾಂತ್ರಿಕ ಸಮಸ್ಯೆಗಳಿಂದಾಗಿ ಕರ್ನಾಟಕದ ವೈದ್ಯರು ಮರಣೋತ್ತರ ಪರೀಕ್ಷೆ ನಡೆಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಕೇರಳ ಸರ್ಕಾರವು ವೈದ್ಯಕೀಯ ವಿದ್ಯಾರ್ಥಿಗಳನ್ನೂ ನಿಯೋಜಿಸುತ್ತಿದೆ. ತ್ವರಿತವಾಗಿ ಪರೀಕ್ಷೆ ನಡೆಸಿ, ಅಂತ್ಯ ಸಂಸ್ಕಾರ ಮಾಡಬೇಕು' ಎಂದರು.

'ಕುಸಿತದ ಸ್ಥಳದಲ್ಲಿ ಸಾಂಕ್ರಾಮಿಕ ರೋಗ ಹರಡುವ ಸಾಧ್ಯತೆಯೂ ಹೆಚ್ಚಿದ್ದು, ಅದನ್ನು ತಡೆಯುವ ನಿಟ್ಟಿನಲ್ಲಿ ಚಿಂತನೆ ನಡೆಯುತ್ತಿದೆ' ಎಂದರು.

'ದುರಂತ ನಡೆದಿರುವ ಮೂರು ಗ್ರಾಮಗಳಲ್ಲಿ ಕರ್ನಾಟಕ ಮೂಲದ ಶೇ 20ರಷ್ಟು ಮಂದಿ ಇದ್ದಾರೆ. ಗಾಯಾಳುಗಳಲ್ಲಿ ಹೆಚ್ಚಿನವರು ಟೀ ಎಸ್ಟೇಟ್‌ಗಳಲ್ಲಿ ಕೆಲಸ ಮಾಡುತ್ತಿದ್ದವರು. ನಾವು ಕಾಳಜಿ ಕೇಂದ್ರ, ಆರೋಗ್ಯ ಕೇಂದ್ರಗಳಿಗೆ ತೆರಳಿ ಜನರಲ್ಲಿ ಆತ್ಮಸ್ಥೈರ್ಯ ತುಂಬುತ್ತಿದ್ದೇವೆ' ಎಂದು ಮತ್ತೊಬ್ಬ ವೈದ್ಯರು ತಿಳಿಸಿದರು.

ಮೈಸೂರು ಹಾಗೂ ಚಾಮರಾಜ ನಗರ ಜಿಲ್ಲೆಯ ಇಬ್ಬರು ಫಿಸಿಶಿಯನ್, ಇಬ್ಬರು ವೈದ್ಯಾಧಿಕಾರಿಗಳು, ತಲಾ ಒಬ್ಬ ಸರ್ಜನ್, ಮಕ್ಕಳ ತಜ್ಞರು, ಮೂಳೆ ತಜ್ಞರು, ಅರವಳಿಕೆ ತಜ್ಞರು, ಪ್ರಸೂತಿ ತಜ್ಞೆ, ನರ್ಸಿಂಗ್ ಅಧಿಕಾರಿ, ಫಾರ್ಮಸಿ ಅಧಿಕಾರಿ ಕಾರ್ಯನಿರ್ವಹಿಸುತ್ತಿದ್ದಾರೆ.



ವಯನಾಡ್‌ನ ಮುಂಡಕ್ಕೈನಲ್ಲಿ ಸಂಭವಿಸಿದ ಭೂಕುಸಿತದ ತಾಣದಲ್ಲಿ ಗುರುವಾರ ರಕ್ಷಣಾ ಕಾರ್ಯದಲ್ಲಿ ನಿರತರಾಗಿದ್ದ ಸಿಬ್ಬಂದಿ –ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ.



ಎರ್ನಾಕುಳಂನ ರೀಜನಲ್ ಸ್ಪೋರ್ಟ್ಸ್ ಸೆಂಟರ್‌ನಲ್ಲಿ ಆರಂಭಿಸಿರುವ ಕಾಳಜಿ ಕೇಂದ್ರದಲ್ಲಿ ಆಶ್ರಯ ಪಡೆದಿರುವ ಸಂತ್ರಸ್ತರಿಗೆ ಅಗತ್ಯ ವಸ್ತುಗಳನ್ನು ವಿತರಿಸಲಾಯಿತು –ಪಿಟಿಐ ಚಿತ್ರ

'ಓಡಿಹೋಗಲು ಬಯಸಿದ್ದೆ'

ಮರಣೋತ್ತರ ಪರೀಕ್ಷೆಯ ವಾರ್ಡ್‌ನ ಚಿತ್ರಣ ಬಿಚ್ಚಿಟ್ಟ ವೈದ್ಯೆ

ವಯನಾಡ್ (ಪಿಟಿಐ): 'ನನ್ನ ವೃತ್ತಿ ಜೀವನದಲ್ಲಿ ಅನೇಕ ಮೃತದೇಹಗಳನ್ನು ನೋಡಿದ್ದೇನೆ, ಆದರೆ ಇಂತಹ ಜರ್ಜರಿತ ದೇಹಗಳನ್ನು ನೋಡಿಯೇ ಇರಲಿಲ್ಲ. ಭೂಕುಸಿತದ ತೀವ್ರತೆ ಎಷ್ಟಿತ್ತೆಂದರೆ, ಅದು ಹಲವರ ದೇಹಗಳನ್ನು ಪುಡಿಪುಡಿ ಮಾಡಿದೆ'...

ವಯನಾಡ್ ಜಿಲ್ಲೆಯಲ್ಲಿ ಸಂಭವಿಸಿದ ಭೀಕರ ಭೂಕುಸಿತದಲ್ಲಿ ಮೃತಪಟ್ಟವರ ಸಂಖ್ಯೆ ಹೆಚ್ಚುತ್ತಲೇ ಇದೆ. ಹಲವು ಮೃತದೇಹಗಳ ಮರಣೋತ್ತರ ಪರೀಕ್ಷೆ ನಡೆಸಿದ ಸರ್ಕಾರಿ ಆಸ್ಪತ್ರೆಯ ವೈದ್ಯೆಯೊಬ್ಬರು ತಮಗೆ ಕಂಡ ಹೃದಯ ವಿದ್ರಾವಕ ದೃಶ್ಯಗಳನ್ನು ಹಂಚಿಕೊಂಡಿದ್ದಾರೆ. ಮರಣೋತ್ತರ ಪರೀಕ್ಷೆಗಾಗಿ ಸ್ಥಳೀಯ ಆಸ್ಪತ್ರೆಯಲ್ಲಿ ನಿಯೋಜನೆಗೊಂಡಿರುವ ಅವರನ್ನು ಭೂಕುಸಿತದ ತೀವ್ರತೆಯು ಬೆಚ್ಚಿಬೀಳುವಂತೆ ಮಾಡಿದೆ.

'ಶವಪರೀಕ್ಷೆ ಮಾಡುವ ವೃತ್ತಿಗೆ ನಾನು ಒಗ್ಗಿಕೊಂಡಿದ್ದೇನೆ. ಆದರೆ ಇಲ್ಲಿ ನೋಡುತ್ತಿರುವ ನಜ್ಜುಗುಜ್ಜಾದ ದೇಹಗಳನ್ನು ಹಿಂದೆಂದೂ ನೋಡಿಲ್ಲ. ಒಮ್ಮೆ ನೋಡಿದ ದೇಹವನ್ನು ಮತ್ತೊಮ್ಮೆ ನೋಡಲು ಸಾಧ್ಯವಾಗುತ್ತಿರಲಿಲ್ಲ' ಎಂದು ಹೇಳುವಾಗ ಅವರ ಧ್ವನಿ ಕ್ಷೀಣಿಸಿತು.

'ಮರಣೋತ್ತರ ಪರೀಕ್ಷೆ ನಡೆಸಲು ದೊರೆತ ಮೊದಲ ದೇಹವನ್ನು ನೋಡಿದಾಗಲೇ ಮಾನಸಿಕವಾಗಿ ಕುಗ್ಗಿಹೋದೆ. ಇದನ್ನು ನಿಭಾಯಿಸಲು ಸಾಧ್ಯವಿಲ್ಲ ಎಂದು ನನ್ನಲ್ಲೇ ಹೇಳಿಕೊಂಡೆ. ನನಗೆ ದೊರೆತ ಎರಡನೆಯ ಮೃತದೇಹ ಒಂದು ವರ್ಷದ ಮಗುವಿನದ್ದಾಗಿತ್ತು. ಅದನ್ನು ನೋಡಿದಾಗ ಈ ಕೆಲಸ (ಮರಣೋತ್ತರ ಪರೀಕ್ಷೆ) ನನ್ನಿಂದ ಮುಂದುವರಿಸಲು ಸಾಧ್ಯವಿಲ್ಲ ಎಂಬುದು ಖಚಿತವಾಯಿತು. ಆಸ್ಪತ್ರೆಯ ಈ ವಾರ್ಡ್ ಬಿಟ್ಟು ಗಾಯಾಳುಗಳಿಗೆ ಚಿಕಿತ್ಸೆ ನೀಡುವ ವಿಭಾಗಕ್ಕೆ ಓಡಿ ಹೋಗಲು ಬಯಸಿದ್ದೆ. ಆದರೆ ನನ್ನ ಮುಂದೆ ಬೇರೆ ಆಯ್ಕೆ ಇರಲಿಲ್ಲ' ಎಂದು ಅನುಭವ ಬಿಚ್ಚಿಟ್ಟರು.

'ಮರಣೋತ್ತರ ಪರೀಕ್ಷೆ ನಡೆಸಲು ಎಂಟು ಟೇಬಲ್‌ಗಳು ಇದ್ದವು. ಆರಂಭದಲ್ಲಿ ನಾನು ಒಬ್ಬಳೇ ಇದ್ದೆ. ಬೇರೆ ಕಡೆಗಳಿಂದ ವೈದ್ಯರು ಬಂದ ಕಾರಣ ಸಂಜೆಯ ವೇಳೆಗೆ ಪ್ರತಿ ಟೇಬಲ್‌ಗೂ ಒಬ್ಬರು ವೈದ್ಯರು ಲಭ್ಯವಾದರು. ರಾತ್ರಿ 7.30ರ ವೇಳೆಗೆ 53 ದೇಹಗಳ ಮರಣೋತ್ತರ ಪರೀಕ್ಷೆ ನಡೆಸಿದೆವು. ದುರಂತ ನಡೆದ ಮೊದಲ ದಿನದಂದು (ಜುಲೈ 30) ವೈದ್ಯರ ತಂಡ ರಾತ್ರಿ 11.30ರ ವರೆಗೂ ಕೆಲಸ ಮಾಡಿ, 93 ದೇಹಗಳ ಮರಣೋತ್ತರ ಪರೀಕ್ಷೆ ನಡೆಸಿತು' ಎಂದು ಮಾಹಿತಿ ನೀಡಿದರು.



ವಯನಾಡ್‌ನ ಕಾಳಜಿ ಕೇಂದ್ರದಲ್ಲಿ ಆಶ್ರಯ ಪಡೆದಿರುವ ಮಹಿಳೆಯರು ಪರಸ್ಪರ ಸಂತೈಸಿದರು –ಎಎಫ್‌ಪಿ ಚಿತ್ರ

ವೈದ್ಯಕೀಯ ಸಿಬ್ಬಂದಿ ಹೋರಾಟ

ದುರಂತದಲ್ಲಿ ಗಂಭೀರವಾಗಿ ಗಾಯಗೊಂಡವರ ಪ್ರಾಣ ಉಳಿಸಲು ಮತ್ತು ಸಾವಿಗೀಡಾದವರ ಮರಣೋತ್ತರ ಪರೀಕ್ಷೆ ನಡೆಸಲು ವೈದ್ಯಕೀಯ ಸಿಬ್ಬಂದಿ ಹಗಲಿರುಳು ಶ್ರಮಿಸುತ್ತಿದ್ದಾರೆ.

'ಗುರುವಾರ ಬೆಳಿಗ್ಗೆ 7ರವರೆಗೆ 256 ಶವಪರೀಕ್ಷೆಗಳನ್ನು ಪೂರ್ಣಗೊಳಿಸಿದ್ದೇವೆ. ಇದರಲ್ಲಿ ದೇಹದ ಅಂಗಾಂಗಗಳೂ ಸೇರಿವೆ. ಅಂದರೆ 256 ಪೂರ್ಣ ದೇಹಗಳಲ್ಲ. ದೇಹದ ಭಾಗಗಳೂ ಒಳಗೊಂಡಿವೆ. ನಾವು 154 ದೇಹಗಳನ್ನು ಜಿಲ್ಲಾಡಳಿತಕ್ಕೆ ಹಸ್ತಾಂತರಿಸಿದ್ದೇವೆ' ಎಂದು ಕೇರಳದ ಆರೋಗ್ಯ ಸಚಿವೆ ವೀಣಾ ಜಾರ್ಜ್ ತಿಳಿಸಿದರು.

ಚಾಲಿಯಾರ್ ನದಿಯಲ್ಲಿ ಕೊಚ್ಚಿಕೊಂಡು ಹೋಗಿ ಮಲಪ್ಪುರ ಜಿಲ್ಲೆಯ ಪೋತ್ತುಕಲ್‌ನಲ್ಲಿ ಪತ್ತೆಯಾಗಿರುವ ಮೃತದೇಹಗಳ ಮರಣೋತ್ತರ ಪರೀಕ್ಷೆಯೂ ನಡೆದಿದೆ ಎಂದರು.

ದುರಂತಕ್ಕೆ ನಾಡಜನರ ಮಿಡಿತ

ಒಂದನೇ ಪುಟದಿಂದ...

ಈ ಹಾದಿಯ ತುಂಬ ಈಗ ನೆರವಿನ ಕೈಗಳೇ ಕಾಣಿಸುತ್ತಿವೆ. ಕಲ್ಲು–ಕೆಸರು ಮತ್ತು ಜಲ್ಲಿ ತುಂಬಿರುವ ರಸ್ತೆಯಲ್ಲಿ ಜೀಪು, ಕಾರು, ಲಾರಿ, ದ್ವಿಚಕ್ರ ವಾಹನಗಳಲ್ಲಿ ಜನರನ್ನು ಅತ್ತಿಂದಿತ್ತ, ಇತ್ತಿಂದತ್ತ ಕರೆದುಕೊಂಡು ಹೋಗುವವರು ಒಂದು ಕಡೆ, ಘಟನೆ ನಡೆದ ಸ್ಥಳದಲ್ಲಿ ನೀರು, ಆಹಾರ ಇತ್ಯಾದಿಗಳನ್ನು ವಿತರಿಸಿ ಪ್ರೀತಿಯಿಂದ ಉಪಚರಿಸುತ್ತಿರುವ ಹತ್ತಾರು ಸಂಘಟನೆಗಳ ಕಾರ್ಯಕರ್ತರು ಮತ್ತೊಂದೆಡೆ 'ವಯನಾಡ್ ಜೊತೆ ನಾವಿದ್ದೇವೆ' ಎಂಬುದನ್ನು ಸಾರಿ ಹೇಳುತ್ತಿದ್ದಾರೆ.

ಚೂರಲ್‌ಮಲದಿಂದ 25 ಕಿಲೊಮೀಟರ್ ದೂರದ ಊಟಿ ರಸ್ತೆಗೆ 10 ವರ್ಷಗಳ ಹಿಂದೆ ತೆರಳಿದ ಫ್ಲೋರಾ ಅವರ ಸಹೋದರ ಮತ್ತು ಇತರರು ಚೂರಲ್ ಮಲದಲ್ಲೇ ಬದುಕು ಕಟ್ಟಿಕೊಂಡಿದ್ದರು. ಆ ಕುಟುಂಬದ ನಾಲ್ಕು ಮಂದಿ ದುರಂತದಲ್ಲಿ ಮಡಿದಿದ್ದಾರೆ. ಅವರ ಅಂತ್ಯಸಂಸ್ಕಾರ ಗುರುವಾರ ಸಂಜೆ ಸೇಂಟ್ ಸೆಬಾಸ್ಟಿಯನ್ ಚರ್ಚ್‌ನಲ್ಲಿ ನಡೆಯಿತು. ಸಂಸ್ಕಾರದಲ್ಲಿ ಪಾಲ್ಗೊಳ್ಳಲು ಬಂದಿದ್ದ ಫ್ಲೋರಾ ಮತ್ತು ಮಕ್ಕಳನ್ನು ಕರೆದುಕೊಂಡು ಬಂದ ಯುವಕರ ತಂಡ ತಮ್ಮ ಹೆಸರು ಕೂಡ ಹೇಳದೆ 'ಮಣ್ಣಿನಡಿಯಲ್ಲಿ ಹೂತುಹೋದವರೆಲ್ಲರೂ ನಮ್ಮವರೇ ಅಲ್ಲವೇ, ಅವರಿಗಾಗಿ ಒಂದಿಷ್ಟು ಕೆಲಸ ಮಾಡಿದ ನಮ್ಮ ಹೆಸರಿಗೆ ಮಹತ್ವ ಯಾಕೆ' ಎಂದು ಹೇಳಿ ನೆರವಿಗಾಗಿ ಮೊರೆ ಇಡುತ್ತಿರುವ ಯಾರದೋ ಕೂಗು ಕೇಳುತ್ತಿದ್ದಂತೆ ಅಲ್ಲಿಂದ ಸಾಗಿದರು.

ಕೋಯಿಕ್ಕೋಡ್‌ನ 'ತಾಲ್ಲೂಕು ದುರಂತ ರೆಸ್ಪಾನ್ಸ್ ಬಾಯ್ಸ್'ನ 728 ಕಾರ್ಯಕರ್ತರ ಪೈಕಿ ಪ್ರತಿ ದಿನ 50 ಮಂದಿ ಬಂದು ಇಲ್ಲಿ ನೆರವು ನೀಡುತ್ತಿದ್ದಾರೆ. 5 ಜನರೇಟರ್, ಸುತ್ತಲೂ ಬೆಳಕಿನ ವ್ಯವಸ್ಥೆ, ಮಾಹಿತಿ ತಿಳಿಸಲು ಧ್ವನಿವರ್ಧಕ ಸೌಲಭ್ಯ, ಕ್ರೇನ್‌ಗಳು, ಚೈನ್ ಬ್ಲಾಕ್‌ಗಳು, ಕಟಿಂಗ್ ಯಂತ್ರಗಳೊಂದಿಗೆ ಈ ಸಂಸ್ಥೆ ಇಲ್ಲಿಗೆ ಬಂದಿದೆ. ರೈಲು ಅಪಘಾತ, ಬಸ್‌ಗೆ ಬೆಂಕಿ ಬಿದ್ದ ದುರಂತ, ಬಿರುಗಾಳಿಗೆ ಸಿಲುಕಿ ನೂರಾರು ಮಂದಿ ಸಾವಿಗೀಡಾದ ಘಟನೆ ಮುಂತಾದಲ್ಲೆಲ್ಲ ಕೊಳೆತ ಶವಗಳನ್ನು ಮೇಲೆತ್ತಿದ ಮತ್ತಿಲ್ ಅಬ್ದುಲ್ ಅಜೀಜ್ ಇಲ್ಲೂ ಈ ತಂಡದ ನೇತೃತ್ವ ವಹಿಸಿದ್ದು ಮೂರು ದಿನಗಳಲ್ಲಿ 12 ಶವಗಳನ್ನು ಹೊರತೆಗೆದಿದ್ದಾರೆ.



ಅಬ್ದುಲ್ ಅಜೀಜ್

'ರಾತ್ರಿ ಉಂಡು ಮಲಗಿದವರು ಕೆಸರಿನ ಪ್ರವಾಹದಲ್ಲಿ ಲೀನವಾಗಿದ್ದಾರೆ. ಇಲ್ಲಿ ಶವಗಳನ್ನು ಹೊರತೆಗೆಯುವಾಗ ದುಃಖ ತಡೆಯಲು ಆಗುತ್ತಿಲ್ಲ. ಕೆಲವರ ಕೈ ಮಾತ್ರ ಸಿಗುತ್ತಿದೆ. ಕೆಲವರ ತಲೆ ಹೋಳಾಗಿ ಹೋಗಿದೆ. ಮನೆ ಮಾಲೀಕರಿಗಾಗಿ ಪಾರಿವಾಳಗಳು ಇಲ್ಲೇ ಸುತ್ತಾಡುತ್ತಿವೆ. ನಾಯಿ ಮತ್ತು ಬೆಕ್ಕುಗಳು ಆಹಾರ ಕೊಟ್ಟರೆ ಸೇವಿಸುತ್ತಿಲ್ಲ. ಈ ಮೂಕ ಜೀವಿಗಳಿಗೆ ಇಲ್ಲಿನ ವಾಸ್ತವವನ್ನು ಅರ್ಥೈಸುವುದಾದರೂ ಹೇಗೆಂದು ತಿಳಿಯುತ್ತಿಲ್ಲ' ಎಂದು 'ಪ್ರಜಾವಾಣಿ' ಜೊತೆ ಮಾತನಾಡಿದ ಅಬ್ದುಲ್ ಅಜೀಜ್ ಹೇಳಿದರು.

ಜಿಲ್ಲೆಯ 9 ಕಡೆಗಳಲ್ಲಿ ತೆರೆದಿರುವ ಕಾಳಜಿ ಕೇಂದ್ರಗಳಲ್ಲಿರುವ 578 ಕುಟುಂಬಗಳ 2,328 ಮಂದಿಯನ್ನು ನೋಡಿಕೊಳ್ಳುತ್ತಿರುವ ನೆರವು ತಂಡಗಳು ನೋವುಂಡವರಿಗೆ ಹೃದಯದಾಳದಿಂದ ಸಾಂತ್ವನ ಹೇಳುತ್ತಿದ್ದಾರೆ.

ಪರಿಹಾರ ನಿಧಿಗೆ ನೆರವಿನ ಪ್ರವಾಹ

ದುರಂತದಲ್ಲಿ ನಾಶ–ನಷ್ಟ ಅನುಭವಿಸಿದವರ ನೆರವಿಗಾಗಿ ಮತ್ತು ಸಂಪೂರ್ಣ ಇಲ್ಲದಾಗಿರುವ ಊರುಗಳ ಮರುಸ್ಥಾಪನೆಗಾಗಿ ಆರಂಭಿಸಿರುವ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಗುರುವಾರ ಒಂದೇ ದಿನ ₹ 18 ಲಕ್ಷ ಮೊತ್ತ 'ಚೆಕ್‌ಗಳ' ಮೂಲಕ ಬಂದು ತಲುಪಿದೆ ಎಂದು ಕಂಟ್ರೋಲ್ ರೂಂ ಮಾಹಿತಿ ನೀಡಿದೆ.


ದುರಂತದ ಪರಿಶೀಲನೆಗಾಗಿ ಗುರುವಾರ ಇಲ್ಲಿಗೆ ಬಂದ ಮುಖ್ಯಮಂತ್ರಿಗೆ ಆಯುರ್ವೇದ ಮೆಡಿಕಲ್ ಅಸೋಸಿಯೇಷನ್ ಆಫ್ ಇಂಡಿಯಾದ ಪ್ರತಿನಿಧಿಗಳು ₹ 10 ಲಕ್ಷದ ಚೆಕ್ ಹಸ್ತಾಂತರ ಮಾಡಿದರು. ತಿರುನೆಲ್ಲಿ ದೇವಸ್ವಂ ₹ 5 ಲಕ್ಷ ಮತ್ತು ಶ್ರೀ ತ್ರಿಶ್ಶಿಲೇರಿ ದೇವಸ್ವಂ ₹2 ಲಕ್ಷ ಮೊತ್ತದ ಚೆಕ್ ನೀಡಿತು. ಪಾರ್ವತಿ ವಿ.ಎ ಎಂಬವರು ₹1 ಲಕ್ಷದ ಚೆಕ್ ನೀಡಿದರು.

ಮೃತದೇಹಗಳ ಕೊಳೆತ ವಾಸನೆ

ದುರಂತ ನಡೆದು ಎರಡು ದಿನಗಳ ಕಳೆಯುತ್ತಿದ್ದಂತೆ ಮುಂಡಕ್ಕೈ ಮತ್ತು ಚೂರಲ್‌ಮಲದಲ್ಲಿ ತುಂಬಿರುವ ಕೆಸರಿನ ಸುತ್ತ ಮೃತದೇಹದ ಕೊಳೆತ ದುರ್ವಾಸನೆ ಬರುತ್ತಿದೆ. ಹೀಗಾಗಿ ಮಣ್ಣಿನಡಿ ಇನ್ನೂ ದೇಹಗಳು ಅಥವಾ ದೇಹದ ಭಾಗಗಳು ಇರುವ ಸಾಧ್ಯತೆ ಇದೆ ಎಂದು ಅಂದಾಜಿಸಲಾಗಿದೆ.

'ಮಳೆಗಾಲದಲ್ಲಿ ಇಲ್ಲಿಗೆ ಪ್ರವಾಸಿಗರು ಮತ್ತು ಕರ್ನಾಟಕ, ತಮಿಳುನಾಡು ಭಾಗದ ಕೂಲಿಯಾಗಳುಗಳು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ. ಕೊಡಗು ಮಾದರಿಯಲ್ಲಿ ಇಲ್ಲೂ ಲೈನ್‌ಮನೆಗಳು ಇರುವುದರಿಂದ ಒಟ್ಟು ಮನೆಗಳು ಎಷ್ಟಿದ್ದವು, ಅವುಗಳ ಒಳಗೆ ಎಷ್ಟು ಜನರಿದ್ದರು ಎಂಬಿತ್ಯಾದಿ ಮಾಹಿತಿ ನಿಖರವಾಗಿ ಇಲ್ಲ. ಆದ್ದರಿಂದ ನಾಪತ್ತೆಯಾದವರ ಮತ್ತು ಸಾವಿಗೀಡಾದವರ ಸಂಖ್ಯೆ ಎಷ್ಟಿರಬಹುದು ಎಂದು ಊಹಿಸುವುದೂ ಕಷ್ಟವಾಗುತ್ತಿದೆ' ಎಂದು ಅಧಿಕಾರಿಯೊಬ್ಬರು ಹೇಳಿದರು.





ಭೂಕುಸಿತದ ತಾಣದಲ್ಲಿ ರಕ್ಷಿಸಿದ ನಾಯಿಯನ್ನು ರಕ್ಷಣಾ ತಂಡದ ಸದಸ್ಯರು ಆರೈಕೆ ಮಾಡಿದರು (ಎಡಚಿತ್ರ). ಶೋಧಕಾರ್ಯದ ವೇಳೆ ದೊರೆತ ವಾಚ್‌ಗಳು –ಪ್ರಜಾವಾಣಿ ಚಿತ್ರಗಳು

ಪತಿಯ ಅಂತ್ಯಕ್ರಿಯೆ, ಪತ್ನಿಗಾಗಿ ಶೋಧ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ವಯನಾಡ್‌ನಲ್ಲಿ ಗುಡ್ಡಕುಸಿದು ಮೃತಪಟ್ಟಿದ್ದ ಚಾಮರಾಜನಗರ ತಾಲ್ಲೂಕಿನ ರಾಜೇಂದ್ರ ಅವರ ಅಂತ್ಯಕ್ರಿಯೆ ಕೇರಳದ ಮೆಪ್ಪಾಡಿಯ ಸ್ಮಶಾನದಲ್ಲೇ ಗುರುವಾರ ನಡೆಯಿತು. ಶವ ಛಿದ್ರಗೊಂಡಿದ್ದರಿಂದ ನೆರೆಹೊರೆಯವರು ಹಾಗೂ ಸಂಬಂಧಿಕರು ಸೇರಿ ಅಂತ್ಯಕ್ರಿಯೆ ಮುಗಿಸಿದರು.

ರಾಜೇಂದ್ರ ಅವರ ಪತ್ನಿ ರತ್ನಮ್ಮ ಅವರಿಗಾಗಿ ಶೋಧ ಮುಂದುವರಿದಿದೆ. ಅವರ ತವರು ಚಾಮರಾಜನಗರ ತಾಲ್ಲೂಕಿನ ಇರಸವಾಡಿಯಲ್ಲಿ ಪೋಷಕರು ಹಾಗೂ ಸಂಬಂಧಿಕರು ಆತಂಕದಲ್ಲಿದ್ದಾರೆ.

'ಮೇಪಾಡಿಯ ಸೇಂಟ್ ಜೋಸೆಫ್ ಪ್ರೌಢಶಾಲೆಯ ಕಾಳಜಿ ಕೇಂದ್ರದಲ್ಲಿ ಆಶ್ರಯ ಪಡೆದಿದ್ದ ಗುಂಡ್ಲುಪೇಟೆ ತಾಲ್ಲೂಕಿನ ಮೂವರು ಹಾಗೂ ಚಾಮರಾಜನಗರ ತಾಲ್ಲೂಕಿನ ಏಳು ಮಂದಿಯನ್ನು ಜಿಲ್ಲೆಗೆ ಕರೆತರಲಾಗಿದೆ. ವೇತ್ರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ತ್ರಯಂಬಕಪುರದ ಸ್ವಾಮಿಶೆಟ್ಟಿ ಅವರನ್ನು ಮನೆಗೆ ಸೇರಿಸಲಾಗಿದೆ' ಎಂದು ಗುಂಡ್ಲುಪೇಟೆ ತಹಶೀಲ್ದಾರ್ ರಮೇಶ್ ಬಾಬು ತಿಳಿಸಿದ್ದಾರೆ. ಗುಡ್ಡಕುಸಿತದಲ್ಲಿ ಇದುವರೆಗೂ ಜಿಲ್ಲೆಯ ಮೂವರು ಮೃತಪಟ್ಟಿದ್ದಾರೆ.

ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆಯ ಕತ್ತರಘಟ್ಟ ಮೂಲದ ಲೀಲಾವತಿ (55) ಮತ್ತು ಎರಡೂವರೆ ವರ್ಷದ ನಿಹಾಲ್ ಅವರ ಮೃತದೇಹಗಳನ್ನು ವಯನಾಡು ಜಿಲ್ಲಾಡಳಿತವು ಕರ್ನಾಟಕಕ್ಕೆ ಹಸ್ತಾಂತರಿಸಿದೆ' ಎಂದು ತಹಶೀಲ್ದಾರ್ ನಿಸರ್ಗ ಪ್ರಿಯ ತಿಳಿಸಿದರು.

'ಗುರುವಾರ ಸಂಜೆ 5 ಗಂಟೆ ವೇಳೆಗೆ ಪತ್ತೆ ಕಾರ್ಯ ಮುಗಿದು ದೃಢೀಕರಿಸಿದ ನಂತರ, ಅಧಿಕಾರಿಗಳಿಗೆ ಹಸ್ತಾಂತರಿಸಿರುವ ಕುರಿತು ಮಾಹಿತಿ ಬಂದಿದ್ದು, ಗುರುವಾರ ತಡರಾತ್ರಿ ಕತ್ತರಘಟ್ಟ ಗ್ರಾಮಕ್ಕೆ ತಲಪುವ ನಿರೀಕ್ಷೆ ಇದೆ' ಎಂದರು.

ನಿಹಾಲ್‌ನ ಪೋಷಕರಾದ ಝಾನ್ಸಿ ರಾಣಿ – ಅನಿಲ್ ಕುಮಾರ್ ದಂಪತಿ, ತಾತ ದೇವರಾಜು ಕೇರಳದ ವಿಮ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.


ಅನಾಥ ಶಿಶುಗಳಿಗೆ ಎದೆಹಾಲು ನೀಡಲು ಮುಂದಾದ ತಾಯಿ

ಇಡುಕ್ಕಿ, ಕೇರಳ (ಪಿಟಿಐ): ದುರಂತ ಪೀಡಿತ ವಯನಾಡ್ ಜಿಲ್ಲೆಯಲ್ಲಿ ಸಾವು ಮತ್ತು ವಿನಾಶದ ಸುದ್ದಿಯ ನಡುವೆಯೇ, ಇಡುಕ್ಕಿಯಿಂದ ಮನಮುಟ್ಟುವ ಕಥೆಯೊಂದು ಹೊರ ಹೊಮ್ಮಿದೆ.

ದುರಂತದಲ್ಲಿ ಅಮ್ಮಂದಿರ ಕಳೆದುಕೊಂಡ ಶಿಶುಗಳಿಗೆ ಎದೆಹಾಲು ನೀಡಲು ಇಡುಕ್ಕಿಯ ಎರಡು ಮಕ್ಕಳ ತಾಯಿಯೊಬ್ಬರು ಮುಂದಾಗಿದ್ದಾರೆ.

ಮಹಿಳೆಯು ತನ್ನ ಪತಿ, ನಾಲ್ಕು ವರ್ಷದ ಮಗು ಮತ್ತು ನಾಲ್ಕು ತಿಂಗಳ ಕಂದಮ್ಮನೊಂದಿಗೆ ವಯನಾಡ್‌ಗೆ ತೆರಳಿದ್ದಾರೆ.

'ನಾನು ಇಬ್ಬರು ಚಿಕ್ಕ ಮಕ್ಕಳ ಅಮ್ಮ. ತಾಯಿಯಿಲ್ಲದ ಮಗುವಿನ ಪರಿಸ್ಥಿತಿ ಹೇಗಿರುತ್ತದೆ ಎಂಬುದು ನನಗೆ ತಿಳಿದಿದೆ. ಅದು ಈ ನಿರ್ಧಾರಕ್ಕೆ ಪ್ರೇರೇಪಿಸಿತು' ಎಂದು ಅವರು ಮಾಧ್ಯಮದವರಿಗೆ ತಿಳಿಸಿದರು. 'ನನ್ನ ತೀರ್ಮಾನವನ್ನು ಪತಿಗೆ ತಿಳಿಸಿದಾಗ ಅವರು ಸಂತಸದಿಂದ ಒಪ್ಪಿಕೊಂಡರು' ಎಂದು ಹೇಳಿದರು.





ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ಅವರು ಭೂಕುಸಿತ ಸಂಭವಿಸಿದ ಸ್ಥಳಗಳಿಗೆ ಗುರುವಾರ ಭೇಟಿ ನೀಡಿದರು –ಪ್ರಜಾವಾಣಿ ಚಿತ್ರ

ತಂದೆ ಸಾವಿನ ಸಂದರ್ಭ ನೆನೆದ ರಾಹುಲ್

ಪ್ರಜಾವಾಣಿ ವಾರ್ತೆ

ತಿರುವನಂತಪುರ: ತನ್ನ ತಂದೆ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಹತ್ಯೆಯಾದಾಗ ಅನುಭವಿಸಿದ್ದ ಸಂಕಟಕ್ಕಿಂತ ಹೆಚ್ಚಿನ ದುಃಖವನ್ನು ವಯನಾಡ್ ಜನರು ಅನುಭವಿಸುತ್ತಿದ್ದಾರೆ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ, ವಯನಾಡ್ ಕ್ಷೇತ್ರದ ಮಾಜಿ ಸಂಸದ ರಾಹುಲ್ ಗಾಂಧಿ ಹೇಳಿದ್ದಾರೆ.

'ನನ್ನ ತಂದೆ ತೀರಿಕೊಂಡಾಗ ಅನುಭವಿಸಿದ್ದ ಸಂಕಟ ಈಗ ಅನುಭವಕ್ಕೆ ಬರುತ್ತಿದೆ. ಇಲ್ಲಿಯ ಜನರು ತಮ್ಮ ತಂದೆಯನ್ನು ಮಾತ್ರ ಕಳೆದುಕೊಂಡಿಲ್ಲ, ಕುಟುಂಬದ ಹಲವು ಸದಸ್ಯರನ್ನೂ ಕಳೆದುಕೊಂಡಿದ್ದಾರೆ. ಹಾಗಾಗಿ ಅವರು ಅನುಭವಿಸುತ್ತಿರುವ ದುಃಖ, ನಾನು ಅನುಭವಿಸಿದ್ದಕ್ಕಿಂತಲೂ ತೀವ್ರವಾಗಿರುತ್ತದೆ. ಕುಟುಂಬದ ಹಲವು ಸದಸ್ಯರನ್ನು ಕಳೆದುಕೊಂಡು ದುಃಖದ ಮಡುವಿನಲ್ಲಿರುವ ಜನರನ್ನು ಮಾತನಾಡಿಸಲು ಕಷ್ಟವಾಗುತ್ತಿದೆ' ಎಂದು ಗುರುವಾರ ಭೂಕುಸಿತದ ಸ್ಥಳಗಳಿಗೆ ಭೇಟಿ ನೀಡಿದ ಬಳಿಕ ಅವರು ತಿಳಿಸಿದರು.

> **ವಯನಾಡ್ ಭೂಕುಸಿತ ಖಂಡಿತವಾಗಿಯೂ ರಾಷ್ಟ್ರೀಯ ದುರಂತ. ಆದರೆ, ಕೇಂದ್ರ ಸರ್ಕಾರ ಏನು ಹೇಳುತ್ತದೆ ಎಂಬುದನ್ನು ನೋಡೋಣ**
> **ರಾಹುಲ್ ಗಾಂಧಿ,** ಲೋಕಸಭೆ ವಿರೋಧ ಪಕ್ಷದ ನಾಯಕ

ರಾಹುಲ್ ಜೊತೆಗಿದ್ದ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ, 'ನನ್ನ ಸಹೋದರ (ರಾಹುಲ್) ಅನುಭವಿಸುತ್ತಿರುವ ಅದೇ ಸಂಕಟ ನನಗೂ ಆಗುತ್ತಿದೆ' ಎಂದರು.

2019ರಲ್ಲಿ ವಯನಾಡ್ ಸಂಸದರಾಗಿ ಆಯ್ಕೆಯಾಗಿದ್ದ ರಾಹುಲ್ ಅವರು ಈ ಬಾರಿಯ ಚುನಾವಣೆಯಲ್ಲೂ ಗೆದ್ದಿದ್ದರು. ಆದರೆ ಉತ್ತರ ಪ್ರದೇಶದ ರಾಯ್‌ಬರೇಲಿ ಕ್ಷೇತ್ರವನ್ನು ಉಳಿಸಿಕೊಳ್ಳುವುದಕ್ಕಾಗಿ, ವಯನಾಡ್ ಕ್ಷೇತ್ರಕ್ಕೆ ರಾಜೀನಾಮೆ ನೀಡಿದ್ದಾರೆ.

ಒಂಬತ್ತು ವರ್ಷಗಳಿಂದ ಚರ್ಚೆಯಲ್ಲೇ ಉಳಿದ ಸ್ಥಳಾಂತರ

ಗುಡ್ಡೇತೋಟ: ಬಾಗಿಲಿಗೇ ಬಂದ ಧರೆ ಕುಸಿತ

• ವಿಜಯಕುಮಾರ್ ಎಸ್.ಕೆ.

ಚಿಕ್ಕಮಗಳೂರು: ಮನೆಯ ಮುಂದೆ ಪ್ರಪಾತ, ಹಿಂದೆ ಮುಗಿಲೆತ್ತರದ ಗುಡ್ಡ, ಮನೆ ಬಾಗಿಲ ತನಕ ಬಂದು ನಿಂತ ಧರೆ ಕುಸಿತ, ರಾತ್ರಿ ಮಲಗಿದರೆ ಏಳುವುದು ಖಾತ್ರಿ ಇಲ್ಲ, ಮಳೆಗಾಲದಲ್ಲಿ ನೆಮ್ಮದಿಯ ನಿದ್ರೆಯನ್ನೇ ಮಾಡದ 17 ಕುಟುಂಬ...

ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನ ಗುಡ್ಡೇತೋಟ ಗ್ರಾಮದಲ್ಲಿ ಈ ಕುಟುಂಬಗಳು ಪ್ರತಿ ವರ್ಷ ಮಳೆಗಾಲದಲ್ಲಿ ಜೀವ ಪಣಕ್ಕಿಟ್ಟು ಬದುಕುತ್ತಿವೆ. ಜಾಗ ಗುರುತಿಸಿ ನಿವೇಶನ ನೀಡುವ ಪ್ರಸ್ತಾಪ 9 ವರ್ಷಗಳ ಹಿಂದೆ ಆರಂಭವಾಗಿದ್ದರೂ ಈವರೆಗೆ ಸ್ಥಳಾಂತರ ಆಗಿಲ್ಲ.

ಗ್ರಾಮ ಪಂಚಾಯಿತಿಯಿಂದ ಸ್ವಲ್ಪ ದೂರದ ಎತ್ತರದ ಪ್ರದೇಶದಲ್ಲಿ ಈ ಕುಟುಂಬಗಳು ನೆಲೆಸಿವೆ. ಬಹುತೇಕ ಎಲ್ಲರೂ ಕೂಲಿ ಕೆಲಸ ಮಾಡುತ್ತಿದ್ದು, ಸಣ್ಣ ಸಣ್ಣ ಮನೆ ನಿರ್ಮಿಸಿಕೊಂಡು ಜೀವನ ನಡೆಸುತ್ತಿದ್ದಾರೆ. ಮನೆ ತಲುಪಲು ಜೋಡಿಸಿಕೊಂಡಿರುವ ಕಡಿದಾದ ಕಲ್ಲುಗಳನ್ನು ಏರಿ ಸಾಗಬೇಕು. ಮನೆಯ ಹಿಂದೆ ಮುಗಿಲೆತ್ತರದ ಕಡಿದಾದ ಬೆಟ್ಟದಿಂದ ಹರಿದು ಬರುವ ನೀರು ಮನೆಗಳ ಮುಂದೆಯೇ ಹಾದು ಹೋಗುತ್ತಿದೆ.

ಯಾವ ಮನೆಯ ಮುಂದೆ ಹೋದರೂ ಅಲ್ಲಲ್ಲಿ ಸಣ್ಣದಾಗಿ ಧರೆ ಕುಸಿದಿರುವುದು ಕಾಣಿಸುತ್ತದೆ.



ಗುಡ್ಡೇತೋಟದ ಮನೆಯೊಂದರ ಮುಂದೆಯೇ ಧರೆ ಕುಸಿದಿದೆ –ಪ್ರಜಾವಾಣಿ ಚಿತ್ರ/ಎ.ಎನ್.ಮೂರ್ತಿ

ಸೋಮವಾರ ಸುರಿದ ಮಳೆಗೆ ಮನೆಯ ಮುಂದಿದ್ದ ತೆಂಗಿನ ಮರ ಸೇರಿ ಮಣ್ಣು ರಸ್ತೆಗೇ ಜರಿದಿದ್ದು, ಧರೆ ಕುಸಿತ ಮನೆಯ ಬಾಗಿಲ ತನಕ ಬಂದಿದೆ. ಕಾಲಿಟ್ಟಲ್ಲೆಲ್ಲಾ ಮಣ್ಣು ಜರಿಯುತ್ತಿದೆ. ಇನ್ನು ಒಂದು ಅಡಿ ಮಣ್ಣು ಜರಿದರೂ ಮನೆ ಕುಸಿದು ರಸ್ತೆಗೆ ಬೀಳುವುದರಲ್ಲಿ ಅನುಮಾನ ಇಲ್ಲ.

'30 ವರ್ಷಗಳಿಂದ ಇದೇ ಸ್ಥಿತಿಯಲ್ಲಿ ಬದುಕುತ್ತಿದ್ದೇವೆ. ರಸ್ತೆಗಳು ಅಗಲವಾದ ಬಳಿಕ ಕುಸಿತ ಹೆಚ್ಚಾಗಿದೆ. ಸ್ಥಳಾಂತರದ ಬಗ್ಗೆ 9 ವರ್ಷಗಳಿಂದ ಹೆಚ್ಚಿನ ಚರ್ಚೆಯಾಗುತ್ತಿದೆ. ಮಳೆಗಾಲ ಬಂದಾಗ ಅಧಿಕಾರಿಗಳು ಹೆಚ್ಚು ಮಾತನಾಡುತ್ತಾರೆ. ತಾತ್ಕಾಲಿಕವಾಗಿ ಶಾಲೆ, ಗ್ರಾಮ ಪಂಚಾಯಿತಿ ಕಟ್ಟಡಗಳನ್ನು ತೋರಿಸುತ್ತಾರೆ. ಬಳಿಕ ಸುಮ್ಮನಾಗುತ್ತಾರೆ' ಎಂದು ನಿವಾಸಿ ನಾರಾಯಣ ಬೇಸರ ವ್ಯಕ್ತಪಡಿಸುತ್ತಾರೆ.

'ಸರ್ಕಾರಿ ಆಸ್ತಿ ಒತ್ತುವರಿ ಮಾಡಿಕೊಂಡವರಿಗೆ, ಹಣ ಉಳ್ಳವರಿಗೆ ಸಮೀಪದ ಸರ್ಕಾರಿ ಜಾಗ ಬಿಟ್ಟುಕೊಡುತ್ತಾರೆ. ಆಗಲೋ ಈಗಲೇ ಗುಡ್ಡ ಜರಿದು ಕೊಚ್ಚಿ ಹೋಗುವ ಸ್ಥಿತಿಯಲ್ಲಿರುವ ನಮ್ಮನ್ನು ದೂರದ ಊರುಗಳಿಗೆ ಹೋಗಿ ಎನ್ನುತ್ತಾರೆ. ಸುತ್ತಮುತ್ತ ತೋಟಗಳ ಮಾಲೀಕರಿಂದ ಸಾಲ ಪಡೆದುಕೊಂಡಿದ್ದೇವೆ. ಬೇರೆ ಊರಿಗೆ ಹೋದರೆ ಅಲ್ಲಿಂದ ಬಂದು ಕೆಲಸ ಮಾಡಿ ಸಾಲ ತೀರಿಸುವುದು ಹೇಗೆ? ಆದ್ದರಿಂದ ಗಟ್ಟಿ ಮನಸು ಮಾಡಿ ಇಲ್ಲೇ ವಾಸವಿದ್ದೇವೆ' ಎಂದು ಅವರು ಹೇಳುತ್ತಾರೆ.

> **ನಿವಾಸಿಗಳ ಸ್ಥಳಾಂತರಕ್ಕೆ ಎರಡು ಜಾಗ ಗುರುತಿಸಲಾಗಿದ್ದು, ಅರಣ್ಯ–ಕಂದಾಯ ಇಲಾಖೆ ಜಂಟಿ ಸರ್ವೆ ಮಾಡಿಸಲಾಗುತ್ತಿದೆ. ಸಮಸ್ಯೆ ಬಗೆಹರಿಸಲಾಗುವುದು**
> **ಮೀನಾ ನಾಗರಾಜ್,** ಜಿಲ್ಲಾಧಿಕಾರಿ

ಇನ್ನೊಂದೆಡೆ ಮನೆಯಲ್ಲೇ ಮಲಗಿದ್ದ ಅಂಗವಿಕಲ ಮಹಿಳೆ ಲೀಲಾ ಅವರು ಕಡಿದಾದ ಪ್ರದೇಶದಿಂದ ರಸ್ತೆಗೆ ಇಳಿದು ಬರಲು ಸಾಧ್ಯವೇ ಆಗದ ಸ್ಥಿತಿಯಲ್ಲಿದ್ದಾರೆ. 'ಮಳೆಗಾಲದಲ್ಲಿ ರಾತ್ರಿ ಮಲಗಿದರೆ ನಿದ್ರೆ ಬರುವುದಿಲ್ಲ. ಸ್ವಲ್ಪ ಜೋರು ಶಬ್ದವಾದರೂ ಇಂದಿಗೆ ಬದುಕು ಮುಗಿಯಿತು ಎನ್ನಿಸುತ್ತದೆ. ಯಾವ ಸಂದರ್ಭದಲ್ಲಿ ಕೊಚ್ಚಿ ಹೋಗುತ್ತೇವೆವೋ ಗೊತ್ತಿಲ್ಲ' ಎಂದು ಲೀಲಾ ಗದ್ಗದಿತರಾದರು.

'ಆದರೂ ಬೇರೆ ಮಾರ್ಗವಿಲ್ಲದೆ ಇಲ್ಲೇ ವಾಸ ಮಾಡಬೇಕಿದೆ. ಸುರಕ್ಷಿತ ಜಾಗಕ್ಕೆ ಸ್ಥಳಾಂತರ ಮಾಡುವ ಹಲವು ವರ್ಷಗಳಿಂದ ಮಾತುಗಳು ನಡೆಯುತ್ತಿದೆ. 9 ವರ್ಷಗಳಿಂದ ಚರ್ಚೆ ಹೆಚ್ಚಾಗಿದೆ. ಆದರೆ, ಈವರೆಗೆ ಸೂಕ್ತ ಜಾಗ ನೀಡಿಲ್ಲ' ಎಂದರು.

'5 ಕಿಲೋ ಮೀಟರ್ ದೂರದಲ್ಲಿ ಜಾಗ ಗುರುತಿಸಿ ಸ್ಥಳಾಂತರಕ್ಕೆ ಪ್ರಯತ್ನಿಸಲಾಯಿತು. ದೂರ ಎಂಬ ಕಾರಣಕ್ಕೆ ಅವರು ಒಪ್ಪುತ್ತಿಲ್ಲ. ಗುಡ್ಡ ಕುಸಿದು ಸತ್ತರೆ ನಮಗೆ ನಾವೇ ಜವಾಬ್ದಾರರು ಎಂದು ಬರೆದುಕೊಟ್ಟಿದ್ದಾರೆ. ಆದರೆ, ಮಳೆ ಜೋರಾದ ಸಂದರ್ಭದಲ್ಲಿ 2 ಕುಟುಂಬಗಳನ್ನು ಗ್ರಾಮ ಪಂಚಾಯಿತಿ ಕಟ್ಟಡಕ್ಕೆ ಸ್ಥಳಾಂತರ ಮಾಡಲಾಗಿದೆ' ಎನ್ನುತ್ತಾರೆ ಅಧಿಕಾರಿಗಳು.


ಸಮೀಪದಲ್ಲೇ ಜಾಗ ಗುರುತು

ದೂರಕ್ಕೆ ಸ್ಥಳಾಂತರ ಆಗಲು ನಿವಾಸಿಗಳು ಒಪ್ಪದ ಕಾರಣ, ಈಗ ಸಮೀಪದಲ್ಲೇ 32 ಗುಂಟೆ ಸರ್ಕಾರಿ ಜಾಗ ಗುರುತಿಸಲಾಗಿದೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಉಪವಿಭಾಗಾಧಿಕಾರಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಒಂದೇ ಕಿಲೋ ಮೀಟರ್ ದೂರ ಆಗಿರುವುದರಿಂದ ನಿವಾಸಿಗಳೂ ಒಪ್ಪಿದ್ದಾರೆ ಎಂದು ಹೇಳಿದರು.

'ರಸ್ತೆ ಬದಿಯಿದ್ದರೂ ಸದ್ಯ ಅದು ಎಸ್ಟೇಟ್ ಒಳಗೆ ಸೇರಿಕೊಂಡಿದೆ. ರಾಜಕೀಯ ಒತ್ತಡಗಳ ನಡುವೆ ಒತ್ತುವರಿ ತೆರವುಗೊಳಿಸುವುದು ಸುಲಭ ಇಲ್ಲ. ಅಧಿಕಾರಿಗಳಿಗೆ ಸವಾಲಿನ ಕೆಲಸ' ಎಂಬುದು ಸ್ಥಳೀಯರ ಅಭಿಪ್ರಾಯ.

ಷೇರುಪೇಟೆ ವಹಿವಾಟು 126



ಎನ್‌ಎಸ್‌ಇ ನಿಫ್ಟಿ


ಹಿಂದಿನ ಅಂತ್ಯ	24,951
ಇಂದಿನ ಅಂತ್ಯ	25,010
▲	59
ದಿನದ ಗರಿಷ್ಠ	25,078

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ) ₹280-445
ದ್ವಿತಳಿ (ಬಿ.ವಿ) ₹263-596

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹490
12 ಕ್ಕೆ	₹70
ಮೈಸೂರು	
100ಕ್ಕೆ	₹495

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ವಹಿವಾಟಿನ ದರ)



ಶೇಂಗಾ (ರಿಫೈನ್ಡ್)	₹1570 (1570)
ಸೋಯಾ (ರಿಫೈನ್ಡ್)	₹950 (950)
ಸೂರ್ಯಕಾಂತಿ (ರಿಫೈನ್ಡ್)	₹952 (955)
ಪಾಮೋಲಿನ್	₹898 (898)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)



ಅರಸೀಕೆರೆ	₹8800-10000
ಬೆಂಗಳೂರು	₹10000-12000
ತಿಪಟೂರು	₹9200-9800
ತುರುವೇಕೆರೆ	₹9400-9400

ಮುದ್ರೆಮನೆ ಕಾಫಿ (50 ಕೆಜಿಗೆ)



ಎಪಿ	₹16000
ಎಸಿ	₹9660
ಆರ್‌ಪಿ	₹18500
ಆರ್‌ಸಿ	₹9880

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4 ₹221
ಆರ್‌ಎಸ್‌ಎಸ್-5 ₹213
ಗುಡ್ ಲಾಟ್ ₹204
(ಪ್ರತಿ ಕೆ.ಜಿಗೆ)

ಉತ್ಪಾದನಾ ವೆಚ್ಚ ಏರಿಕೆ • ಹೊಸ ಆರ್ಡರ್‌ಗಳ ಸಂಖ್ಯೆ ಹೆಚ್ಚಳ

ತಯಾರಿಕಾ ಚಟುವಟಿಕೆ ಇಳಿಕೆ

ನವದೆಹಲಿ (ಪಿಟಿಐ): ದೇಶದ ತಯಾರಿಕಾ ವಲಯದ ಚಟುವಟಿಕೆಯು ಜುಲೈ ತಿಂಗಳಲ್ಲಿ ಅಲ್ಪ ಪ್ರಮಾಣದಲ್ಲಿ ಇಳಿಕೆಯಾಗಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆ ತಿಳಿಸಿದೆ.

ಗುರುವಾರ ಬಿಡುಗಡೆಯಾಗಿರುವ ಎಚ್‌ಎಸ್‌ಬಿಸಿ ಇಂಡಿಯಾದ ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಸೂಚ್ಯಂಕದ (ಪಿಎಂಐ) ವರದಿ ಪ್ರಕಾರ, ಜೂನ್‌ನಲ್ಲಿ 58.3ರಷ್ಟಿದ್ದ ಸೂಚ್ಯಂಕವು, ಜುಲೈನಲ್ಲಿ 58.1ಕ್ಕೆ ಇಳಿದಿದೆ. ಹೊಸ ಆರ್ಡರ್ ಮತ್ತು ಉತ್ಪಾದನೆ ಪ್ರಮಾಣದಲ್ಲಿನ ಅಲ್ಪ ಏರಿಕೆಯಿಂದಾಗಿ ಸೂಚ್ಯಂಕವು ಇಳಿಕೆ ಕಂಡಿದೆ ಎಂದು ತಿಳಿಸಿದೆ.


ಆದರೆ, ತಯಾರಿಕಾ ಸರಕುಗಳ ಮಾರಾಟದ ಬೆಲೆಯು 11 ವರ್ಷಗಳ ಗರಿಷ್ಠ ಮಟ್ಟಕ್ಕೆ ತಲುಪಿದೆ. ಕಾರ್ಮಿಕ ಮತ್ತು ಉತ್ಪಾದನಾ ವೆಚ್ಚದ ಏರಿಕೆಯೇ ಇದಕ್ಕೆ ಕಾರಣವಾಗಿದೆ ಎಂದು ಹೇಳಿದೆ.

ಅಲ್ಪ ಪ್ರಮಾಣದಲ್ಲಿ ಇಳಿಕೆ ಹೊರತಾಗಿಯೂ ಹೊಸ ಆರ್ಡರ್‌ಗಳ ಸಂಖ್ಯೆಯಲ್ಲಿ ಏರಿಕೆಯಾಗಿದೆ. ಏಷ್ಯಾ, ಯುರೋಪ್, ದಕ್ಷಿಣ ಅಮೆರಿಕ, ಮಧ್ಯಪ್ರಾಚ್ಯದಿಂದ ಬೇಡಿಕೆ ಹೆಚ್ಚಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾರಾಟ ಪ್ರಮಾಣದಲ್ಲೂ ಏರಿಕೆಯಾಗಿದೆ ಎಂದು ವಿವರಿಸಿದೆ.

ಪಿಎಂಐ ಸೂಚ್ಯಂಕವು 50ಕ್ಕಿಂತ ಮೇಲಿದ್ದರೆ ಸಕಾರಾತ್ಮಕ ಬೆಳವಣಿಗೆ ಎಂದು ಪರಿಗಣಿಸಲಾಗುತ್ತದೆ. 50ಕ್ಕಿಂತ ಕಡಿಮೆ ಇದ್ದರೆ ನಕಾರಾತ್ಮಕ ಎಂದು ಅರ್ಥೈಸಲಾಗುತ್ತದೆ.

'ಜುಲೈನಲ್ಲಿ ತಯಾರಿಕಾ ಚಟುವಟಿಕೆ ಇಳಿಕೆಯಾದರೂ ಹಲವು ವಲಯಗಳ ಚಟುವಟಿಕೆ ಸದೃಢವಾಗಿದೆ' ಎಂದು ಎಚ್‌ಎಸ್‌ಬಿಸಿಯ ಮುಖ್ಯ ಅರ್ಥಶಾಸ್ತ್ರಜ್ಞ ಪ್ರಂಜುಲ್ ಭಂಡಾರಿ ಹೇಳಿದ್ದಾರೆ.

ತಯಾರಿಕಾ ವಲಯದ ಸೂಚ್ಯಂಕ



ದೇಶದ ಎಲ್ಲ ರೈಲು ಮಾರ್ಗಕ್ಕೂ 'ಕವಚ' ರಕ್ಷೆ: ಅಶ್ವಿನಿ ವೈಷ್ಣವ್

ನವದೆಹಲಿ (ಪಿಟಿಐ): ರೈಲುಗಳ ಅಪಘಾತ ತಪ್ಪಿಸಲು ಅಭಿವೃದ್ಧಿ ಪಡಿಸಿರುವ ಸ್ವಯಂಚಾಲಿತ ಸುರಕ್ಷತಾ ವ್ಯವಸ್ಥೆಯಾದ 'ಕವಚ'ವನ್ನು ದೇಶದ ಎಲ್ಲಾ ರೈಲು ಮಾರ್ಗಗಳಲ್ಲೂ ಅಳವಡಿಸಲು ಸರ್ಕಾರ ಕ್ರಮವಹಿಸಲಿದೆ ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ಲೋಕಸಭೆಯಲ್ಲಿ ಗುರುವಾರ ರೈಲ್ವೆ ಇಲಾಖೆಗೆ ₹7.89 ಲಕ್ಷ ಕೋಟಿ ಮೊತ್ತದ ಅನುದಾನಕ್ಕೆ ಅನುಮೋದನೆ ನೀಡಿದ ಬಳಿಕ ಮಾತನಾಡಿದ ಅವರು, 'ದೇಶದಲ್ಲಿ 58 ವರ್ಷಗಳ ಕಾಲ ಆಡಳಿತ ನಡೆಸಿದ ಕಾಂಗ್ರೆಸ್ ಒಂದು ಕಿ.ಮೀ.ಗೂ ಸ್ವಯಂಚಾಲಿತ ಸುರಕ್ಷತಾ ವ್ಯವಸ್ಥೆ ಅಳವಡಿಸಲಿಲ್ಲ' ಎಂದು ದೂರಿದರು.

'ಪ್ರಯಾಣಿಕರ ಅನುಕೂಲಕ್ಕಾಗಿ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ರೈಲ್ವೆಯಲ್ಲಿ ಹಲವು ಪ್ರಯೋಗ ಕೈಗೊಂಡರೂ ಯಾವುದೇ ಫಲಪ್ರದವಾಗಲಿಲ್ಲ' ಎಂದರು.

ಎನ್‌ಡಿಎ ಅಧಿಕಾರಕ್ಕೆ ಬಂದ ಬಳಿಕ ಮಾನವರಹಿತ ರೈಲ್ವೆ ಲೆವೆಲ್ ಕ್ರಾಸಿಂಗ್ ವ್ಯವಸ್ಥೆಯನ್ನು ಬದಲಾಯಿಸಲಾಗಿದೆ. ರೈಲ್ವೆ ನಿಲ್ದಾಣಗಳ ನಡುವೆ ಎಲೆಕ್ಟ್ರಾನಿಕ್ ಇಂಟರ್ ಲಾಕಿಂಗ್ ವ್ಯವಸ್ಥೆ ಅಳವಡಿಸಲಾಗಿದೆ. ಇದು ರೈಲುಗಳ ಸುಗಮ ಸಂಚಾರಕ್ಕೆ ಸಹಕಾರಿಯಾಗಿದೆ ಎಂದು ತಿಳಿಸಿದರು.

ಆದರೆ, 'ಕವಚ' ವ್ಯವಸ್ಥೆ ಅಳವಡಿಕೆ ಸಂಬಂಧ ಸಚಿವರು ಕಾಲಮಿತಿಯ ಬಗ್ಗೆ ಯಾವುದೇ ಮಾಹಿತಿ ನೀಡಲಿಲ್ಲ.

ಜುಲೈನಲ್ಲಿ ₹1.82 ಲಕ್ಷ ಕೋಟಿ ವರಮಾನ

ಜಿಎಸ್‌ಟಿ ಸಂಗ್ರಹ ದಾಖಲೆ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮೂಲಕ ಜುಲೈ ತಿಂಗಳಿನಲ್ಲಿ ₹1.82 ಲಕ್ಷ ಕೋಟಿ ವರಮಾನ ಸಂಗ್ರಹವಾಗಿದೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ವರಮಾನ ಸಂಗ್ರಹದಲ್ಲಿ ಶೇ 10.3ರಷ್ಟು ಏರಿಕೆಯಾಗಿದೆ.



ಜಿಎಸ್‌ಟಿ ಜಾರಿಗೆ ಬಂದ ಏಳು ವರ್ಷಗಳ ಅವಧಿಯಲ್ಲಿ ಅತಿಹೆಚ್ಚು ವರಮಾನ ಸಂಗ್ರಹವಾಗಿರುವ ಮೂರನೇ ತಿಂಗಳು ಇದಾಗಿದೆ.

ಪ್ರಸಕ್ತ ವರ್ಷದ ಏಪ್ರಿಲ್‌ನಲ್ಲಿ ವರಮಾನ ಸಂಗ್ರಹವು ₹2.10 ಲಕ್ಷ ಕೋಟಿ ದಾಟುವ ಮೂಲಕ ಹೊಸ ದಾಖಲೆ ಬರೆದಿತ್ತು. ಕಳೆದ ವರ್ಷದ ಏಪ್ರಿಲ್‌ನಲ್ಲಿ ₹1.87 ಲಕ್ಷ ಕೋಟಿ ಸಂಗ್ರಹವಾಗಿತ್ತು. ಜುಲೈನಲ್ಲಿನ ಸಂಗ್ರಹವು ದಾಖಲೆಯಾಗಿದೆ.

ಒಟ್ಟು ಮರುಪಾವತಿ ₹16,283 ಕೋಟಿ ಆಗಿದೆ. ಈ ರೀಫಂಡ್ ಬಳಿಕ ನಿವ್ವಳ ಜಿಎಸ್‌ಟಿ ಸಂಗ್ರಹವು ₹1.66 ಲಕ್ಷ ಕೋಟಿ ಆಗಿದೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 14.4ರಷ್ಟು ಹೆಚ್ಚಳವಾಗಿದೆ ಎಂದು ಗುರುವಾರ ಬಿಡುಗಡೆಯಾಗಿರುವ ಕೇಂದ್ರ ಸರ್ಕಾರದ ಅಂಕಿ–ಅಂಶ ತಿಳಿಸಿವೆ.

ದೇಶೀಯ ವಹಿವಾಟು ಶೇ 8.9ರಷ್ಟು ಹೆಚ್ಚಳವಾಗಿದ್ದು, ಒಟ್ಟು ₹1.34 ಲಕ್ಷ ಕೋಟಿ ಸಂಗ್ರಹವಾಗಿದೆ. ರಫ್ತು ಪ್ರಮಾಣದಲ್ಲಿ ಶೇ 14.2ರಷ್ಟು ಏರಿಕೆಯಿಂದಾಗಿ ₹48,039 ಕೋಟಿ ಸಂಗ್ರಹವಾಗಿದೆ ಎಂದು ವಿವರಿಸಿದೆ.

ಒಟ್ಟು ಜಿಎಸ್‌ಟಿಯಲ್ಲಿ ಕೇಂದ್ರ ಜಿಎಸ್‌ಟಿ ₹32,386 ಕೋಟಿ, ರಾಜ್ಯ ಜಿಎಸ್‌ಟಿ ₹40,289 ಕೋಟಿ, ಸಮಗ್ರ ಜಿಎಸ್‌ಟಿ ₹96,447 ಕೋಟಿ ಹಾಗೂ ಪರಿಹಾರ ಸೆಸ್ ₹12,953 ಕೋಟಿ ಸಂಗ್ರಹವಾಗಿದೆ.

ಏಪ್ರಿಲ್‌ನಿಂದ ಜುಲೈವರೆಗೆ ₹7.39 ಲಕ್ಷ ಕೋಟಿ ವರಮಾನ ಸಂಗ್ರಹವಾಗಿದೆ.

'ದೇಶೀಯ ಮಟ್ಟದ ಪೂರೈಕೆಗಿಂತಲೂ ಆಮದು ಮೇಲೆ ವಿಧಿಸುವ ಜಿಎಸ್‌ಟಿಯಿಂದಾಗಿ ವರಮಾನವು ಹೆಚ್ಚಳವಾಗಿದೆ' ಎಂದು ಡೆಲಾಯ್ಟ್ ಇಂಡಿಯಾದ ಪಾಲುದಾರ ಎಂ.ಎಸ್. ಮಣಿ ತಿಳಿಸಿದ್ದಾರೆ.

ಜಿಎಸ್‌ಟಿ ಇಲಾಖೆ ಕ್ರಮಕ್ಕೆ ನಾಸ್ಕಾಂ ಆಕ್ಷೇಪ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ ಇಲಾಖೆಯ ರಿವರ್ಸ್ ಚಾರ್ಜ್ ಕಾರ್ಯ ವಿಧಾನದಿಂದಾಗಿ (ಆರ್‌ಸಿಎಂ) ಹಲವು ಕಂಪನಿಗಳು ಸಮಸ್ಯೆಗೆ ಸಿಲುಕಿವೆ. ಇದರಿಂದ ಹೂಡಿಕೆದಾರರು ಮತ್ತು ಗ್ರಾಹಕರು ಆತಂಕ ಎದುರಿಸುವಂತಾಗಿದೆ ಎಂದು ಐ.ಟಿ ಉದ್ಯಮ ಸಂಘಟನೆ ನಾಸ್ಕಾಂ ಹೇಳಿದೆ.

₹32,403 ಕೋಟಿ ಸಮಗ್ರ ಜಿಎಸ್‌ಟಿ ವಂಚನೆಗೆ ಸಂಬಂಧಿಸಿದಂತೆ ಇನ್ಫೊಸಿಸ್ ಕಂಪನಿಗೆ, ಬೆಂಗಳೂರಿನ ಜಿಎಸ್‌ಟಿ ಗುಪ್ತಚರ ಮಹಾನಿರ್ದೇಶನಾಲಯವು (ಡಿಜಿಜಿಐ) ನೋಟಿಸ್ ನೀಡಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ನಾಸ್ಕಾಂ, 'ಕೈಗಾರಿಕಾ ಕಾರ್ಯಾಚರಣೆಯ ಮಾದರಿ ಅರ್ಥೈಸಿಕೊಳ್ಳದೆ ಮಹಾನಿರ್ದೇಶನಾಲಯವು ನೋಟಿಸ್ ನೀಡಿದೆ' ಎಂದು ಹೇಳಿಕೆಯಲ್ಲಿ ತಿಳಿಸಿದೆ. ಆದರೆ, ಎಲ್ಲಿಯೂ ಇನ್ಫೊಸಿಸ್ ಹೆಸರನ್ನು ಪ್ರಸ್ತಾಪಿಸಿಲ್ಲ.

ಯಾವುದೇ, ಕಂಪನಿಯು ಸಾಗರೋತ್ತರ ಶಾಖೆಗಳಿಂದ ಸ್ವೀಕರಿಸಿದ ಸರಬರಾಜಿಗೆ ಸಂಬಂಧಿಸಿದಂತೆ ಅನುಸರಿಸುತ್ತಿರುವ ರಿವರ್ಸ್ ಚಾರ್ಜ್ ಕಾರ್ಯ ವಿಧಾನವು ಸಮರ್ಪಕವಾಗಿಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದೆ.

'ವಿಕಸಿತ ಭಾರತ'ದ ಗುರಿ ಸಾಧನೆಯ ವೇಗ ಹೆಚ್ಚಳಕ್ಕೆ ಸೇವಾ ರಫ್ತು ಸಹಕಾರಿಯಾಗಿದೆ. ಭಾರತದಲ್ಲಿ ವಿದೇಶಿ ಬಂಡವಾಳ ಹೂಡಿಕೆ ಉತ್ತೇಜನಕ್ಕೂ ನೆರವಾಗಲಿದೆ ಎಂದು ಹೇಳಿದೆ.

ಹಾಗಾಗಿ, ಸುಗಮವಾಗಿ ವ್ಯಾಪಾರ ವಹಿವಾಟು ನಡೆಯಲು ಪೂರಕವಾದ ನೀತಿಗಳ ಅಗತ್ಯವಿದೆ. ಭಾರತದಲ್ಲಿ ಇರುವ ಯಾವುದೇ ಕಂಪನಿಗೆ ಸಾಗರೋತ್ತರ ಶಾಖೆಗಳಿಂದ ಒದಗಿಸುವ ಸೇವೆಗೆ ಜಿಎಸ್‌ಟಿ ಅನ್ವಯವಾಗುವುದಿಲ್ಲ ಎಂದು ಜಿಎಸ್‌ಟಿ ಮಂಡಳಿಯು ಶಿಫಾರಸು ಮಾಡಿದೆ. ಜಿಎಸ್‌ಟಿ ಮಹಾನಿರ್ದೇಶನಾಲಯವು ಇದನ್ನು ಪರಿಗಣಿಸಬೇಕಿದೆ. ನೋಟಿಸ್‌ಗಳು ದೇಶದ ವ್ಯಾಪಾರ ವಹಿವಾಟಿನ ಮೇಲೆ ಅನಿಶ್ಚಿತತೆ ಹಾಗೂ ನಕಾರಾತ್ಮಕ ಪರಿಣಾಮ ಬೀರುವಂತಿರಬಾರದು ಎಂದು ಹೇಳಿದೆ.

ಮುಂಬೈ ಧಾರಣೆ (ಶೇಂಗಾ)
01-08-2024

ಜಾವಾ 70/80(ಹೊಸ)	11700-11800
ಜಾವಾ 80/90(ಹೊಸ)	11100-11200
ದಪ್ಪ ಮಧ್ಯಪ್ರದೇಶ(ಹೊಸ)	9500-9600
ದಪ್ಪ ಗುಜರಾತ್(ಹೊಸ)	10300-10400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1580 (1580)
ಒಂದು ವಾರದ ಡೆಲಿವರಿ	1575 (1575)
ಸೋಯಾ ಕಚ್ಚಾ	895 (897)
ಪಾಮ್ ವಾರದ ಡೆಲಿವರಿ	896 (896)
ಸೂರ್ಯಕಾಂತಿ ಎಣ್ಣೆ ಕಚ್ಚಾ	910 (910)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಚಿನ್ನ 10ಗ್ರಾಂ ₹69,500 (69,100)
ಬೆಳ್ಳಿ ಕೆ.ಜಿ ₹83,450 (83,150)


ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಭಾರತ: ಕ್ರಾಸ್-ಸೆಕ್ಟೋರಲ್ ಕಾರ್ಯಕ್ರಮಕ್ಕೆ ₹711 ಕೋಟಿ ನೀಡಲು ವಾಗ್ದಾನ

ಜಿನೀವಾ (ಪಿಟಿಐ): ಸಾಂಪ್ರದಾಯಿಕ ಔಷಧದ ಪುರಾವೆಗಳನ್ನು ಬಲಪಡಿಸುವ ಕ್ರಾಸ್-ಸೆಕ್ಟೋರಲ್ ಕಾರ್ಯಕ್ರಮಕ್ಕೆ ಭಾರತವು 10 ವರ್ಷಗಳಲ್ಲಿ ಸುಮಾರು ₹711 ಕೋಟಿ ನೀಡಲು ವಾಗ್ದಾನ ಮಾಡಿದೆ ಎಂದು ಡಬ್ಲ್ಯುಎಚ್‌ಒ ಗುರುವಾರ ಹೇಳಿಕೆಯಲ್ಲಿ ತಿಳಿಸಿದೆ.

ಬುಧವಾರ ಇಲ್ಲಿ ನಡೆದ ಸಹಿ ಹಾಕುವ ಸಮಾರಂಭದಲ್ಲಿ ಈ ವಿಷಯ ಸ್ಪಷ್ಟವಾಯಿತು. ವಿಶ್ವ ಆರೋಗ್ಯ ಸಂಸ್ಥೆಯ ಪ್ರಧಾನ ನಿರ್ದೇಶಕ ಟೆಡ್ರೊಸ್ ಅಧಾನೊಮ್ ಘೆಬ್ರೆಯೆಸಸ್ ಅವರು ಭಾರತದ ಬದ್ಧತೆಗೆ ಧನ್ಯವಾದ ಸಲ್ಲಿಸಿದ್ದಾರೆ.

ರಸ್ತೆ ಅಪಘಾತ ಸಂತ್ರಸ್ತರಿಗೆ ನಗದುರಹಿತ ಚಿಕಿತ್ಸೆ: ಗಡ್ಕರಿ



ನಿತಿನ್ ಗಡ್ಕರಿ

ನವದೆಹಲಿ (ಪಿಟಿಐ): ರಸ್ತೆ ಅಪಘಾತಗಳಲ್ಲಿ ಗಾಯಗೊಂಡವರಿಗೆ ನಗದು ರಹಿತ ಚಿಕಿತ್ಸೆ ನೀಡಲು ಸರ್ಕಾರವು ಯೋಜನೆ ರೂಪಿಸಿದ್ದು, ಈಗಾಗಲೇ ಚಂಡೀಗಢ ಮತ್ತು ಅಸ್ಸಾಂನಲ್ಲಿ ಇದನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಲಾಗಿದೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ–ಜನಾರೋಗ್ಯ ಯೋಜನೆಯಡಿ ಸೇರ್ಪಡೆ ಯಾಗಿರುವ ಆಸ್ಪತ್ರೆಗಳಲ್ಲಿ ಗಾಯಾಳುಗಳನ್ನು ಚಿಕಿತ್ಸೆಗೆ ದಾಖಲಿಸ ಲಾಗುತ್ತದೆ. ಅವಘಡ ಸಂಭವಿಸಿದ ದಿನದಿಂದ ಏಳು ದಿನಗಳವರೆಗೆ ಗರಿಷ್ಠ ₹1.5 ಲಕ್ಷದವರೆಗೆ ಚಿಕಿತ್ಸೆ ನೀಡಲಾಗುತ್ತದೆ ಎಂದು ಅವರು, ಲೋಕಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. ಭಾರತೀಯ ಆರೋಗ್ಯ ಪ್ರಾಧಿಕಾರದ ಸಹಭಾಗಿತ್ವದಡಿ ವಾಹನ ಅಪಘಾತದಿಂದ ಗಾಯಗೊಂಡವರಿಗೆ ಈ ಯೋಜನೆ ರೂಪಿಸಲಾಗಿದೆ ಎಂದು ತಿಳಿಸಿದ್ದಾರೆ.

ಮೋಟರ್ ವಾಹನಗಳ ಕಾಯ್ದೆ 1988ರ ಅಡಿ ರಚಿಸಿರುವ ಮೋಟರ್ ವಾಹನ ಅಪಘಾತ ನಿಧಿಯಡಿ ಚಿಕಿತ್ಸಾ ವೆಚ್ಚ ಭರಿಸಲಾಗುತ್ತದೆ ಎಂದು ಹೇಳಿದ್ದಾರೆ.

ಸಾಲದ ಬಡ್ಡಿದರ ಹೆಚ್ಚಿಸಿದ ಪಿಎನ್‌ಬಿ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಪಂಜಾಬ್ ನ್ಯಾಷನಲ್ ಬ್ಯಾಂಕ್, ಮಾರ್ಜಿನಲ್ ಕಾಸ್ಟ್ ಆಫ್ ಫಂಡ್ಸ್ ಆಧಾರಿತ ಸಾಲದ (ಎಂಸಿಎಲ್‌ಆರ್) ಮೇಲಿನ ಬಡ್ಡಿದರವನ್ನು ಶೇ 0.05ರಷ್ಟು ಹೆಚ್ಚಿಸಿದೆ. ಇದರಿಂದಾಗಿ ವಾಹನಗಳು ಹಾಗೂ ವೈಯಕ್ತಿಕ ಸಾಲಗಳ ಮೇಲಿನ ಇಎಂಐ ಹೆಚ್ಚಳವಾಗಲಿದೆ.

ಬಡ್ಡಿದರವು ಶೇ 8.85ರಿಂದ ಶೇ 8.90ರಷ್ಟು ಏರಿಕೆಯಾಗಲಿದೆ ಎಂದು ಬ್ಯಾಂಕ್, ಷೇರುಪೇಟೆಗೆ ಮಾಹಿತಿ ನೀಡಿದೆ.

ಮೂರು ವರ್ಷಗಳ ಎಂಸಿಎಲ್‌ಆರ್ ಶೇ 9.20ರಷ್ಟು ಏರಿಕೆಯಾಗಿದೆ. ಒಂದು, ಮೂರು ಮತ್ತು ಆರು ತಿಂಗಳ ಎಂಸಿಎಲ್‌ಆರ್ ಶೇ 8.35ರಿಂದ ಶೇ 8.55ಕ್ಕೆ ಹೆಚ್ಚಾಗಿದೆ. ಈ ಹೊಸ ಬಡ್ಡಿದರವು ಗುರುವಾರದಿಂದಲೇ ಜಾರಿಗೆ ಬಂದಿದೆ.

ಬ್ಯಾಂಕ್ ಆಫ್ ಇಂಡಿಯಾ: ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಇಂಡಿಯಾ ಕೂಡ ಎಂಸಿಎಲ್‌ಆರ್ ಆಧಾರಿತ ಬಡ್ಡಿದರವನ್ನು ಶೇ 0.05ರಷ್ಟು ಹೆಚ್ಚಿಸಿದೆ. ಒಂದು ವರ್ಷದ ಎಂಸಿಎಲ್‌ಆರ್ ಶೇ 8.95ರಷ್ಟು ಹೆಚ್ಚಳವಾಗಿದೆ. ಉಳಿದ ಸಾಲಗಳ ಬಡ್ಡಿದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿದೆ.

ಸಂಕ್ಷಿಪ್ತ ಸುದ್ದಿ

ಏಳು ಕೋಟಿ ಐಟಿಆರ್ ಸಲ್ಲಿಕೆ

ನವದೆಹಲಿ (ಪಿಟಿಐ): 2023–24ನೇ ಆರ್ಥಿಕ ವರ್ಷದಲ್ಲಿ ಗಳಿಸಿದ ಆದಾಯಕ್ಕೆ ಸಂಬಂಧಿಸಿದಂತೆ ಬುಧವಾರ ಸಂಜೆ 7 ಗಂಟೆವರೆಗೆ 7 ಕೋಟಿಗೂ ಹೆಚ್ಚು ತೆರಿಗೆದಾರರು ತೆರಿಗೆ ರಿಟರ್ನ್ಸ್ (ಐಟಿಆರ್) ಸಲ್ಲಿಸಿದ್ದಾರೆ ಎಂದು ಆದಾಯ ತೆರಿಗೆ ಇಲಾಖೆಯು ತಿಳಿಸಿದೆ.

'ಅಂದು ಸಂಜೆವರೆಗೆ 50 ಲಕ್ಷಕ್ಕೂ ಹೆಚ್ಚು ರಿಟರ್ನ್ಸ್ ಸಲ್ಲಿಕೆಯಾಗಿವೆ' ಎಂದು 'ಎಕ್ಸ್'ನಲ್ಲಿ ತಿಳಿಸಿದೆ.

2024–25ನೇ ಮೌಲ್ಯಮಾಪನ ವರ್ಷಕ್ಕೆ ಸಂಬಂಧಿಸಿದಂತೆ ತೆರಿಗೆದಾರರು ರಿಟರ್ನ್ಸ್ ಸಲ್ಲಿಸಲು ಜುಲೈ 31 ಕೊನೆಯ ದಿನವಾಗಿತ್ತು. ಇಲಾಖೆಯು ದಿನಾಂಕವನ್ನು ವಿಸ್ತರಣೆ ಮಾಡಿಲ್ಲ.

ಶೇ 97.92ರಷ್ಟು ನೋಟು ವಾಪಸ್

ಮುಂಬೈ (ಪಿಟಿಐ): ₹2 ಸಾವಿರ ಮುಖಬೆಲೆಯ ಶೇ 97.92ರಷ್ಟು ನೋಟುಗಳು ಬ್ಯಾಂಕಿಂಗ್ ವ್ಯವಸ್ಥೆಗೆ ಮರಳಿವೆ. ಜನರ ಬಳಿ ಇನ್ನೂ ₹7,409 ಕೋಟಿ ಮೌಲ್ಯದ ನೋಟುಗಳಿವೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಗುರುವಾರ ತಿಳಿಸಿದೆ.

ಒಟ್ಟು ₹3.56 ಲಕ್ಷ ಕೋಟಿ ಮೌಲ್ಯದ ₹2 ಸಾವಿರ ಮುಖಬೆಲೆಯ ನೋಟುಗಳನ್ನು ಚಲಾವಣೆಯಿಂದ ಹಿಂಪಡೆಯುವುದಾಗಿ 2023ರ ಮೇ 19ರಂದು ಆರ್‌ಬಿಐ ಘೋಷಿಸಿತ್ತು.

ಬ್ಯಾಂಕ್‌ಗಳಲ್ಲಿ ಠೇವಣಿ ಇಡುವ ಹಾಗೂ ಬೇರೆ ಮುಖಬೆಲೆಯ ನೋಟುಗಳೊಂದಿಗೆ ಬದಲಾಯಿಸಿಕೊಳ್ಳುವುದಕ್ಕೆ ಆರ್‌ಬಿಐನ 19 ಪ್ರಾದೇಶಿಕ ಕಚೇರಿಗಳಲ್ಲಿ ಅವಕಾಶ ಕಲ್ಪಿಸಲಾಗಿದೆ.

ಟಾಟಾ ಮೋಟರ್ಸ್ ಲಾಭ ಏರಿಕೆ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ಟಾಟಾ ಮೋಟರ್ಸ್, ₹5,566 ಕೋಟಿ ನಿವ್ವಳ ಲಾಭಗಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ₹3,203 ಕೋಟಿ ಲಾಭ ಗಳಿಸಲಾಗಿತ್ತು. ಇದಕ್ಕೆ ಹೋಲಿಸಿದರೆ ಲಾಭದ ಪ್ರಮಾಣದಲ್ಲಿ ಶೇ 74ರಷ್ಟು ಹೆಚ್ಚಳವಾಗಿದೆ ಎಂದು ಕಂಪನಿಯು, ಗುರುವಾರ ಷೇರುಪೇಟೆಗೆ ತಿಳಿಸಿದೆ.

ದೇಶೀಯವಾಗಿ ಕಂಪನಿಯ ಜಾಗ್ವಾರ್ ಲ್ಯಾಂಡ್ ರೋವರ್ ವಾಹನಗಳ ಮಾರಾಟದಲ್ಲಿ ಏರಿಕೆಯಾಗಿದೆ ಎಂದು ತಿಳಿಸಿದೆ.

ಕಳೆದ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ಕಂಪನಿಯು ₹1.03 ಲಕ್ಷ ಕೋಟಿ ವರಮಾನ ಗಳಿಸಿತ್ತು. ಈ ತ್ರೈಮಾಸಿಕದಲ್ಲಿ ₹1.09 ಲಕ್ಷ ಕೋಟಿ ಗಳಿಸಿದೆ. 'ಕಳೆದ ವರ್ಷಕ್ಕೆ ಹೋಲಿಸಿದರೆ ಕಂಪನಿಯ ಎಲ್ಲ ವರ್ಗದ ವ್ಯಾಪಾರವು ಸದೃಢವಾಗಿದೆ. ಮುಂಬರುವ ತ್ರೈಮಾಸಿಕಗಳಲ್ಲೂ ವ್ಯಾಪಾರದಲ್ಲಿ ಸುಸ್ಥಿರತೆ ಕಾಯ್ದುಕೊಳ್ಳುವ ಭರವಸೆಯಿದೆ' ಎಂದು ಟಾಟಾ ಮೋಟರ್ಸ್ ಗ್ರೂಪ್‌ನ ಮುಖ್ಯ ಹಣಕಾಸು ಅಧಿಕಾರಿ ಪಿ.ಬಿ. ಬಾಲಾಜಿ ತಿಳಿಸಿದ್ದಾರೆ.

ಕಂಪನಿಯ ಷೇರಿನ ಮೌಲ್ಯವು ಶೇ 1.02ರಷ್ಟು ಇಳಿಕೆಯಾಗಿದ್ದು, ಪ್ರತಿ ಷೇರಿನ ಬೆಲೆ ₹1,144 ಆಗಿದೆ.

ಶ್ವಾಂಟೆಕ್‌ಗೆ ಆಘಾತ ನೀಡಿದ ಚೀನಾದ ಝೆಂಗ್


ಚೀನಾದ ಆಟಗಾರ್ತಿ ಝೆಂಗ್ ಕ್ವಿನ್‌ವೆನ್ –ಎಪಿ/ಪಿಟಿಐ ಚಿತ್ರ

ಪ್ಯಾರಿಸ್ (ಎಎಫ್‌ಪಿ): ಚೀನಾದ ಆಟಗಾರ್ತಿ ಝೆಂಗ್ ಕ್ವಿನ್‌ವೆನ್ ಅವರು ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ಇಗಾ ಶ್ವಾಂಟೆಕ್ ಅವರ ಆಧಿಪತ್ಯಕ್ಕೆ ತೆರೆಯೆಳೆದರು. ಒಲಿಂಪಿಕ್ಸ್ ಟೆನಿಸ್ ಮಹಿಳಾ ಸಿಂಗಲ್ಸ್ ಸೆಮಿಫೈನಲ್‌ನಲ್ಲಿ ಗುರುವಾರ ನೇರ ಸೆಟ್‌ಗಳಿಂದ ವಿಶ್ವದ ಅಗ್ರಮಾನ್ಯ ಆಟಗಾರ್ತಿ ಶ್ವಾಂಟೆಕ್ ಅವರನ್ನು ಹಿಮ್ಮೆಟ್ಟಿಸಿದರು.

ಫಿಲಿಪ್ ಶಾಟಿಯೆ ಕ್ರೀಡಾಂಗಣದಲ್ಲಿ ಕ್ವಿನ್‌ವೆನ್ 6–2, 7–5 ರಿಂದ ಗೆದ್ದು ಸಿಂಗಲ್ಸ್ ಫೈನಲ್ ತಲುಪಿದ ಚೀನಾದ ಮೊದಲ ಆಟಗಾರ್ತಿ ಎನಿಸಿದರು. ನಾಲ್ಕು ಬಾರಿಯ ಫ್ರೆಂಚ್ ಓಪನ್ ಚಾಂಪಿಯನ್ ಆಗಿರುವ ಪೋಲೆಂಡ್‌ನ ಆಟಗಾರ್ತಿ ಈ ಕೆಮ್ಮಣ್ಣಿನ ಅಂಕಣದಲ್ಲಿ ಸತತವಾಗಿ 25 ಪಂದ್ಯಗಳಲ್ಲಿ ಜಯಗಳಿಸಿದ್ದರು. ಜೊತೆಗೆ ಈ ಹಿಂದೆ ಕ್ವಿನ್‌ವೆನ್ ಜೊತೆಗಿನ ಆರೂ ಮುಖಾಮುಖಿಯಲ್ಲಿ ಶ್ವಾಂಟೆಕ್ ಜಯಶಾಲಿ ಆಗಿದ್ದರು.

‘ನನ್ನ ಸಂತಸ ವ್ಯಕ್ತಪಡಿಸಲು ಪದಗಳೇ ನಿಲುಕುತ್ತಿಲ್ಲ’ ಎಂದು ಕ್ವಿನ್‌ವೆನ್ ಪ್ರತಿಕ್ರಿಯಿಸಿದರು. ಅವರು ಫೈನಲ್‌ನಲ್ಲಿ ಅನ್ನಾ ಕರೋಲಿನಾ ಷ್ಮಿಡ್ಲೊವಾ (ಸ್ಲೊವಾಕಿಯಾ) ಮತ್ತು ಡೊನಾ ವೆಕಿಕ್ (ಕ್ರೊವೇಷ್ಯಾ) ನಡುವಣ ಪಂದ್ಯದ ವಿಜೇತರನ್ನು ಎದುರಿಸಲಿದ್ದಾರೆ.

ಹಾಲಿ ಚಾಂಪಿಯನ್‌ಗೂ ಸೋಲು: ಪುರುಷರ ವಿಭಾಗದಲ್ಲಿ ಹಾಲಿ ಚಾಂಪಿಯನ್ ಅಲೆಕ್ಸಾಂಡರ್ ಜ್ವರೇವ್ ಅವರು ಒಲಿಂಪಿಕ್ಸ್ ಟೆನಿಸ್‌ನಿಂದ ಗುರುವಾರ ಹೊರಬಿದ್ದರು. ಇಟಲಿಯ ಲೊರೆಂಝೊ ಮುಸೆಟ್ಟಿ ಅವರು ಕ್ವಾರ್ಟರ್‌ಫೈನಲ್‌ನಲ್ಲಿ 7–5, 7–5 ರಿಂದ ವಿಶ್ವ ಕ್ರಮಾಂಕದಲ್ಲಿ ನಾಲ್ಕನೇ ಸ್ಥಾನದಲ್ಲಿರುವ ಜ್ವರೇವ್ ಅವರನ್ನು ಹಿಮ್ಮೆಟ್ಟಿಸಿದರು.

ವಿಶ್ವದ ಮೂರನೇ ನಂಬರ್ ಆಟಗಾರ ಕಾರ್ಲೊಸ್ ಅಲ್ಕರಾಜ್ 6–3, 7–6 (9/7) ರಿಂದ ಅಮೆರಿಕದ ಟಾಮಿ ಪಾಲ್ (13ನೇ ಕ್ರಮಾಂಕ) ಅವರನ್ನು ಸೋಲಿಸಿ ನಾಲ್ಕರ ಘಟ್ಟಕ್ಕೆ ಮುನ್ನಡೆದರು. 21 ವರ್ಷ ವಯಸ್ಸಿನ ಸ್ಪೇನ್ ಆಟಗಾರನಿಗೆ ಮುಂದಿನ ಸುತ್ತಿನಲ್ಲಿ ನೊವಾಕ್ ಜೊಕೊವಿಚ್ ಎದುರಾಗುವ ನಿರೀಕ್ಷೆಯಿದೆ.

ಸಾತ್ವಿಕ್– ಚಿರಾಗ್ ಜೋಡಿಗೆ ಆಘಾತ: ಪಿ.ವಿ. ಸಿಂಧು ನಿರ್ಗಮನ

ಸೇನ್‌ಗೆ ಮಣಿದ ಪ್ರಣಯ್


ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಎಚ್‌.ಎಸ್‌. ಪ್ರಣಯ್ ವಿರುದ್ಧ ಭಾರತದ ಲಕ್ಷ್ಯ ಸೇನ್ ಆಟದ ವೈಖರಿ –ಪಿಟಿಐ ಚಿತ್ರ

ಪ್ಯಾರಿಸ್ (ಪಿಟಿಐ): ಭಾರತದ ಲಕ್ಷ್ಯ ಸೇನ್ ಒಲಿಂಪಿಕ್ಸ್‌ನ ಪುರುಷರ ಸಿಂಗಲ್ಸ್ ಸ್ಪರ್ಧೆಯಲ್ಲಿ ಸ್ವದೇಶದ ಎಚ್. ಎಸ್. ಪ್ರಣಯ್ ಅವರನ್ನು ನೇರ ಗೇಮ್‌ಗಳಲ್ಲಿ ಮಣಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಆದರೆ, ಡಬಲ್ಸ್‌ನಲ್ಲಿ ಪದಕದ ಭರವಸೆಯಾಗಿದ್ದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ನಿರಾಸೆ ಮೂಡಿಸಿದರು.

ಕಾಮನ್‌ವೆಲ್ತ್ ಗೇಮ್ಸ್ ಚಾಂಪಿಯನ್ ಸೇನ್ ಗುರುವಾರ 21-12, 21-6 ರಿಂದ ವಿಶ್ವದ 13ನೇ ಕ್ರಮಾಂಕದ ಪ್ರಣಯ್ ಅವ ರನ್ನು ಸೋಲಿಸಿದರು. ನಿಖರ ಸರ್ವ್, ಅದ್ಭುತ ಫೋರ್‌ಹ್ಯಾಂಡ್ ಆಟದ ಮೂಲಕ ಸೇನ್ ಅವರು ಕೇವಲ 39 ನಿಮಿಷದಲ್ಲಿ ನಿರಾಯಾಸವಾಗಿ ಗೆಲುವನ್ನು ದಕ್ಕಿಸಿಕೊಂಡರು.

22 ವರ್ಷ ವಯಸ್ಸಿನ ಸೇನ್ ಅವರು ಒಲಿಂಪಿಕ್ಸ್‌ನ ಪುರುಷರ ಸಿಂಗಲ್ಸ್‌ನಲ್ಲಿ ಎಂಟರ ಘಟ್ಟ ಪ್ರವೇಶಿಸಿದ ಭಾರತದ ಮೂರನೇ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರವಾದರು. ಈ ಹಿಂದೆ ಪರುಪಳ್ಳಿ ಕಶ್ಯಪ್ ಮತ್ತು ಕಿದಂಬಿ ಶ್ರೀಕಾಂತ್ ಅವರು ಕ್ರಮವಾಗಿ ಲಂಡನ್ ಮತ್ತು ರಿಯೋ ಒಲಿಂಪಿಕ್ಸ್‌ನಲ್ಲಿ ಈ ಸಾಧನೆ ಮಾಡಿದ್ದರು. ವಿಶ್ವ ರ್‍ಯಾಂಕಿಂಗ್‌ನಲ್ಲಿ 22ನೇ ಸ್ಥಾನದಲ್ಲಿರುವ ಸೇನ್ ಅವರು ಕ್ವಾರ್ಟರ್ ಫೈನಲ್‌ನಲ್ಲಿ ಚೌ ಟಿಯೆನ್ ಚೆನ್ (ಚೀನಾ ತೈಪೆ) ಅವರನ್ನು ಎದುರಿಸುವರು.

‘ಕಠಿಣ ಪಂದ್ಯವನ್ನು ಗೆದ್ದಾಗ ಆತ್ಮವಿಶ್ವಾಸ ವೃದ್ಧಿಯಾಗುತ್ತದೆ. ಅದು ಟೂರ್ನಿಯಲ್ಲಿ ಇನ್ನಷ್ಟು ತೊಡಗಲು ಪ್ರೇರಣೆಯಾಗುತ್ತದೆ. ಚೌ ವಿರುದ್ಧದ ಮುಂದಿನ ಪಂದ್ಯ ನನಗೆ ಸವಾಲಿನದು. ಶೇ 100ರಷ್ಟು ಪರಿಶ್ರಮ ಹಾಕಿ ಗೆಲ್ಲಲು ಪ್ರಯತ್ನಿಸುತ್ತೇನೆ’ ಎಂದು ಸೇನ್ ಪ್ರತಿಕ್ರಿಯಿಸಿದರು.

ಏಷ್ಯನ್ ಗೇಮ್ಸ್‌ನಲ್ಲಿ ಕಂಚು ಗೆದ್ದಿದ್ದ 31 ವರ್ಷ ವಯಸ್ಸಿನ ಪ್ರಣಯ್ ಅವರು ಈಚೆಗೆ ಚಿಕೂನ್‌ಗುನ್ಯಾಕ್ಕೆ ತುತ್ತಾಗಿದ್ದರು. ಅದರಿಂದ ಚೇತರಿಸಿಕೊಂಡು ತಮ್ಮ ಚೊಚ್ಚಲ ಒಲಿಂಪಿಕ್ಸ್‌ನಲ್ಲಿ ಕಣಕ್ಕೆ ಇಳಿದಿದ್ದರು.

‘ಹ್ಯಾಟ್ರಿಕ್’ ಕನಸು ನುಚ್ಚುನೂರು


ಪಿ.ವಿ. ಸಿಂಧು

ಪ್ಯಾರಿಸ್ (ಪಿಟಿಐ): ಸತತ ಮೂರನೇ ಒಲಿಂಪಿಕ್ಸ್‌ನಲ್ಲಿ ಪದಕ ಜಯಿಸಿ ಐತಿಹಾಸಿಕ ಸಾಧನೆ ಮಾಡುವ ಪಿ.ವಿ. ಸಿಂಧು ಅವರ ಕನಸು ಕಮರಿತು.

ಗುರುವಾರ ಇಲ್ಲಿ ನಡೆದ ಮಹಿಳೆಯರ ಸಿಂಗಲ್ಸ್‌ನ ಪ್ರೀ-ಕ್ವಾರ್ಟರ್‌ಫೈನಲ್‌ನಲ್ಲಿ ಸಿಂಧು 19–21, 14–21ರಿಂದ ಚೀನಾದ ಹೀ ಬಿಂಗ್‌ಜಿಯಾವೊ ವಿರುದ್ಧ ಸೋತರು. ಹೈದರಾಬಾದಿನ ಸಿಂಧು ಅವರು 2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಪ್ಲೇಆಫ್‌ನಲ್ಲಿ ಇದೇ ಎದುರಾಳಿಯ ವಿರುದ್ಧ ಜಯಿಸಿದ್ದರು. ಆದರೆ ಈ ಬಾರಿ ಸವಾಲು ಮೀರಿ ನಿಲ್ಲಲು 29 ವರ್ಷದ ಸಿಂಧು ಅವರಿಗೆ ಸಾಧ್ಯವಾಗಲಿಲ್ಲ.

ಸಿಂಧು 2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಮತ್ತು ಟೋಕಿಯೊದಲ್ಲಿ ಕಂಚು ಜಯಿಸಿದ್ದರು. ಪ್ಯಾರಿಸ್‌ನಲ್ಲಿ ಅವರು ಗುಂಪು ಹಂತದಲ್ಲಿ ಅಗ್ರಸ್ಥಾನ ಗಳಿಸಿ ನಾಕೌಟ್ ಹಂತಕ್ಕೆ ಪ್ರವೇಶಿಸಿದ್ದರು. ವಿಶ್ವ ರ್‍ಯಾಂಕಿಂಗ್‌ನಲ್ಲಿ 9ನೇ ಸ್ಥಾನದಲ್ಲಿರುವ ಬಿಂಗ್‌ಜಿಯಾವೊ ಮೊದಲ ಗೇಮ್‌ನಲ್ಲಿಯೇ ಆಕ್ರಮಣಕಾರಿ ಶೈಲಿಯಲ್ಲಿ ಆಡಿದರು. ಬಲಶಾಲಿ ಫೋರ್‌ಹ್ಯಾಂಡ್ ಹೊಡೆತಗಳು ಮತ್ತು ಮಿಂಚಿನ ವೇಗದ ಸ್ಮ್ಯಾಷ್‌ಗಳಿಂದ ಸಿಂಧು ಅವರನ್ನು ಒತ್ತಡಕ್ಕೆ ತಳ್ಳಿದರು. ಆದರೂ ಸಿಂಧು ಮೊದಲ ಗೇಮ್‌ನಲ್ಲಿ 19–19ರ ಸಮಬಲ ಸಾಧಿಸುವಲ್ಲಿ ಯಶಸ್ವಿಯಾದರು. ಆದರೆ ಗೆಲುವು ಒಲಿಯಲಿಲ್ಲ.

ಎರಡನೇ ಗೇಮ್‌ನಲ್ಲಿ ಚೀನಾದ ಆಟಗಾರ್ತಿಯು ಜಂಪ್ ಸ್ಮ್ಯಾಷ್ ಮತ್ತು ರ್‍ಯಾಲಿಗಳಲ್ಲಿ ಮೇಲುಗೈ ಸಾಧಿಸಿದರು. 14–8ರ ಮುನ್ನಡೆ ಸಾಧಿಸಿದರು. ಈ ಹಂತದಲ್ಲಿ ಮರುಹೋರಾಟ ತೋರಿದ ಸಿಂಧು ಕ್ರಾಸ್‌ಕೋರ್ಟ್ ಫೋರ್‌ಹ್ಯಾಂಡ್ ಮತ್ತು ಫ್ಲ್ಯಾಟ್ ಡ್ರೈವ್ ಗಳ ಆಟವಾಡಿದರು. ಆದರೆ ಚೀನಾದ ಅಟಗಾರ್ತಿ ಮುನ್ನಡೆ ಬಿಟ್ಟುಕೊಡಲಿಲ್ಲ. ಇದು ಸಿಂಧು ಸೋಲಿಗೆ ಕಾರಣವಾಯಿತು.


ಪಂದ್ಯದಲ್ಲಿ ಸೋತ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರನ್ನು ಕೋಚ್ ಮಥಿಯಾಸ್ ಬೊ ಸಮಾಧಾನ ಪಡಿಸಿದರು –ಪಿಟಿಐ ಚಿತ್ರ

ಸ್ಟಾರ್ ಜೋಡಿಯ ಪದಕದ ಕನಸು ಭಗ್ನ

ಪ್ಯಾರಿಸ್ (ಪಿಟಿಐ): ಭಾರತದ ಸ್ಟಾರ್ ಜೋಡಿ ಸಾತ್ವಿಕ್ ಮತ್ತು ಚಿರಾಗ್ ಕಾರ್ಟರ್ ಫೈನಲ್ ಹಣಾಹಣಿಯಲ್ಲಿ ಮೂರು ಗೇಮ್‌ಗಳ ಹೋರಾಟದ ನಂತರ ಸೋತು ಹೊರಬಿದ್ದಿತು. ಈ ಮೂಲಕ ಚೊಚ್ಚಲ ಒಲಿಂಪಿಕ್ಸ್ ಸ್ಪರ್ಧೆಯಲ್ಲಿ ಪದಕ ಗೆಲ್ಲುವ ಅವರ ಕನಸು ಭಗ್ನಗೊಂಡಿತು.

ಮೂರನೇ ಶ್ರೇಯಾಂಕದ ಭಾರತದ ಆಟಗಾರರು ಗುರುವಾರ ನಡೆದ ಪಂದ್ಯದಲ್ಲಿ 21-13, 14-21, 16-21ರಿಂದ ಮಲೇಷ್ಯಾದ ಆರನ್ ಚಿಯಾ ಮತ್ತು ಸೊಹ್ ವೂಯಿ ಯಿಕ್ ಜೋಡಿಗೆ ಶರಣಾದರು. ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನ ಗೆದ್ದು ದಾಖಲೆ ನಿರ್ಮಿಸಿದ್ದ ಸಾತ್ವಿಕ್– ಚಿರಾಗ್ ಜೋಡಿ ಇಲ್ಲೂ ಗುಂಪು ಹಂತದಲ್ಲಿ ಅಮೋಘ ಪ್ರದರ್ಶನ ನೀಡಿ ಚಿನ್ನದ ಭರವಸೆ ಮೂಡಿಸಿದ್ದರು.

ಭಾರತದ ಆಟಗಾರರು ಇದೇ ಮಲೇಷ್ಯಾ ಜೋಡಿಯ ವಿರುದ್ಧ ಕೊನೆಯ ಮೂರು ಮುಖಾಮುಖಿಯಲ್ಲೂ ಜಯ ಸಾಧಿಸಿದ್ದರು. ಅದರೆ, ಅದಕ್ಕಿಂತ ಮೊದಲು ಎಂಟು ಬಾರಿ ಸಾತ್ವಿಕ್–ಚಿರಾಗ್ ಪರಾಭವಗೊಂಡಿದ್ದರೂ ವಿಶ್ವದ ಅತಿದೊಡ್ಡ ವೇದಿಕೆ ಒಲಿಂಪಿಕ್ಸ್‌ನಲ್ಲಿ ಎದುರಾದ ಸೋಲು ಭಾರಿ ನಷ್ಟ ಉಂಟುಮಾಡಿತು.

ವಿಶ್ವದ ಮಾಜಿ ಅಗ್ರಮಾನ್ಯ ಜೋಡಿಯು ಈ ಪಂದ್ಯದಲ್ಲಿ ಉತ್ತಮ ಆರಂಭ ಪಡೆದಿತ್ತು. ಚುರುಕಿನ ಆಟ ಪ್ರದರ್ಶಿಸಿ ಮೊದಲ ಗೇಮ್ ಅನ್ನು ನಿರಾಯಾಸವಾಗಿ ಗೆದ್ದುಕೊಂಡಿತ್ತು. ಆದರೆ, ನಂತರ ಎದುರಾಳಿಗಳ ನಿಖರ ಆಟದ ಮುಂದೆ ತಬ್ಬಿಬ್ಬಾಯಿತು. ನಿರ್ಣಾಯಕ ಗೇಮ್‌ನಲ್ಲಿ ಆರಂಭದಲ್ಲಿ ಸಮಬಲದ ಹೋರಾಟ ತೋರಿದರೂ ಕೊನೆಯಲ್ಲಿ ಮತ್ತೆ ಹಿಡಿತ ಕಳೆದುಕೊಂಡಿತು.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚು ಗೆದ್ದಿರುವ ಆರನ್ ಮತ್ತು ಸೊಹ್ ಜೋಡಿಯು ಸೆಮಿ ಫೈನಲ್‌ನಲ್ಲಿ ಚೀನಾದ ಲಿಯಾಂಗ್ ವೀ ಕೆಂಗ್ ಮತ್ತು ವಾಂಗ್ ಅವರನ್ನು ಎದುರಿಸಲಿದ್ದಾರೆ.

ಪ್ರತಿಭೆ ಗುರುತಿಸಿ ಬೆಳೆಸುವಲ್ಲಿ ನಾವು ಹಿಂದೆ: ಪಾಡ್‌ಕಾಸ್ಟ್‌ನಲ್ಲಿ ಚೆಟ್ರಿ


ಸುನಿಲ್ ಚೆಟ್ರಿ

ಬೆಂಗಳೂರು: ‘ನಾವು 150 ಕೋಟಿ ಜನಸಂಖ್ಯೆ ಹೊಂದಿದ್ದರೂ, ಕ್ರೀಡಾ ಪ್ರತಿಭೆಗಳನ್ನು ಗುರುತಿಸಿ ಬೆಳೆಸುವಲ್ಲಿ ವಿಫಲವಾಗಿರುವುದರಿಂದ ಒಲಿಂಪಿಕ್ಸ್‌ನಲ್ಲಿ ನಮ್ಮ ದೇಶ ಸಾಕಷ್ಟು ಪದಕಗಳನ್ನು ಗೆಲ್ಲಲು ಆಗುತ್ತಿಲ್ಲ’ ಎಂದು ಫುಟ್‌ಬಾಲ್ ದಿಗ್ಗಜ ಸುನಿಲ್ ಚೆಟ್ರಿ ಪಾಡ್‌ಕಾಸ್ಟ್‌ನಲ್ಲಿ ಪ್ರಕಟವಾದ ಸಂದರ್ಶನದಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಅವರ ಹೇಳಿಕೆ ಈಗ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಪ್ಯಾರಿಸ್ ಒಲಿಂಪಿಕ್ಸ್ ಆರಂಭಕ್ಕೆ ಮುನ್ನ (ಜುಲೈ ನಾಲ್ಕನೇ ವಾರ) ಈ ಪಾಡ್‌ಕಾಸ್ಟ್ ಪ್ರಸಾರಗೊಂಡಿತ್ತು.

‘ಒಲಿಂಪಿಕ್ಸ್‌ನಲ್ಲಿ ಉತ್ತಮ ಪ್ರದರ್ಶನ ನೀಡುವ ಚೀನಾ, ಅಮೆರಿಕ, ಜರ್ಮನಿ, ಜಪಾನ್, ಆಸ್ಟ್ರೇಲಿಯಾ, ಕೆನಡಾ ನಮಗಿಂತ ಎಷ್ಟೊ ಮೇಲ್ಮಟ್ಟದಲ್ಲಿವೆ’ ಎಂದಿದ್ದಾರೆ. ‘ನಮ್ಮಲ್ಲೂ ಪ್ರತಿಭೆಗಳಿವೆ. ಆದರೆ ಅವರನ್ನು ಗುರುತಿಸಿ, ಬೆಳೆಸಿ ಮುಂದಿನ ಹಂತಕ್ಕೆ ಸಜ್ಜುಗೊಳಿಸುವ ಕಡೆ ಹೆಚ್ಚು ಗಮನ ನೀಡುತ್ತಿಲ್ಲ’ ಎಂದಿದ್ದಾರೆ.

ಜಾಲತಾಣಗಳ ಹಲವು ಬಳಕೆದಾರರು ಅವರ ಮಾತಿಗೆ ಸಮ್ಮತಿ ಸೂಚಿಸಿದ್ದಾರೆ. ‘ನಮ್ಮಲ್ಲಿ ಪ್ರತಿಭೆಗಳಿಗೆ ಕೊರತೆಯಿಲ್ಲ ಎಂದು ಜನಸಾಮಾನ್ಯರು ಹೇಳುವುದಕ್ಕೆ ನನ್ನ ಸಹಮತವಿದೆ’ ಎಂದಿದ್ದಾರೆ.

‘ಪ್ರತಿಭೆಗಳನ್ನು ಸರಿಯಾದ ಸಮಯದಲ್ಲಿ, ಸರಿಯಾದ ರೀತಿಯಲ್ಲಿ ಗುರುತಿಸಿ ಬೆಳೆಸುವಲ್ಲಲಿ ನಾವು ತುಂಬಾ ಹಿಂದೆಯಿದ್ದೇವೆ. ಇದಕ್ಕಾಗಿ ನನ್ನನ್ನು ಕೊಲ್ಲಲೂ ಮುಂದಾದರೂ ಹೆದರುವುದಿಲ್ಲ. ಆದರೆ ಇದು ವಾಸ್ತವ ವಿಷಯ’ ಎಂದಿದ್ದಾರೆ.

ಆರ್ಚರಿ: ಜಾಧವ್‌ಗೆ ಸೋಲು

ಪ್ಯಾರಿಸ್ (ಪಿಟಿಐ): ಭಾರತದ ಪ್ರವೀಣ್ ಜಾಧವ್ ಪ್ಯಾರಿಸ್ ಒಲಿಂಪಿಕ್ಸ್‌ನಿಂದ ಹೊರಬಿದ್ದಿದ್ದಾರೆ. ಗುರುವಾರ ನಡೆದ ಪುರುಷರ ರಿಕರ್ವ್ ವಿಭಾಗದ ಆರಂಭಿಕ ಸುತ್ತಿನ ಹಣಾಹಣಿಯಲ್ಲಿ ನೇರ ಸೆಟ್‌ಗಳಲ್ಲಿ ಕಾವೊ ವೆನ್ ಚಾವೊ ವಿರುದ್ಧ ಸೋಲನುಭವಿಸಿದರು.


64ರ ಸುತ್ತಿನಲ್ಲಿ ಜಾಧವ್ 0-6ರಿಂದ (28-29, 29-30, 27-28) ಚಾವೊ ಅವರಿಗೆ ಮಣಿದರು.

ಜಾಧವ್ ಅವರು ಪಂದ್ಯದಲ್ಲಿ ನಾಲ್ಕು ಬಾರಿ 10 ಅಂಕ ಗಳಿಸಿದರು. ಆದಾಗ್ಯೂ ಚೀನಾದ ಕಾವೊ ವೆನ್ ಚಾವೊ ಪ್ರತಿ ಬಾರಿ ಜಾಧವ್‌ಗಿಂತ ಒಂದು ಹೆಚ್ಚಿನ ಅಂಕ ಗಳಿಸುವಲ್ಲಿ ಸಫಲರಾದರು.

ಜಾಧವ್ ಸೋಲಿನೊಂದಿಗೆ ಆರ್ಚರಿ ಪುರುಷರ ವೈಯಕ್ತಿಕ ವಿಭಾಗದಲ್ಲಿ ಭಾರತದ ಸವಾಲು ಅಂತ್ಯಗೊಂಡಿದೆ. ಈ ವಾರದ ಆರಂಭದಲ್ಲಿ ಅನುಭವಿ ತರುಣ್‌ದೀಪ್ ರಾಯ್ ಮತ್ತು ಧೀರಜ್ ಬೊಮ್ಮದೇವರ ಅವರು ನಾಕೌಟ್ ಹಂತದಲ್ಲಿ ಸೋಲನುಭವಿಸಿದ್ದಾರೆ.

ಮಹಿಳೆಯರ ವೈಯಕ್ತಿಕ ವಿಭಾಗದಲ್ಲಿ ದೀಪಿಕಾ ಕುಮಾರಿ ಮತ್ತು ಭಜನ್ ಕೌರ್ ಅವರು ಇನ್ನೂ ಸ್ಪರ್ಧೆಯಲ್ಲಿ ಉಳಿದಿದ್ದಾರೆ. ಶನಿವಾರ ನಡೆಯಲಿರುವ ಪ್ರಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಅವರು ಆಡಲಿದ್ದಾರೆ. ಪುರುಷರ ಹಾಗೂ ಮಹಿಳೆಯರ ತಂಡಗಳು ಕ್ವಾರ್ಟರ್ ಫೈನಲ್‌ನಲ್ಲಿ ಸೋಲನುಭವಿಸಿವೆ.


ರಾಜ್ಯ ಸಬ್ ಜೂನಿಯರ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್ ಪ್ರಶಸ್ತಿಯನ್ನು ಗೆದ್ದ ಮೈಸೂರು ‘ಎ’ ಬಾಲಕಿಯರ ತಂಡ. (ಕುಳಿತವರು) ಎಡದಿಂದ ಆಂಚಲ್, ದೀತ್ಯಾ, ಸಾನ್ವಿಕಾ, ಆಮೋದಿನಿ ಮತ್ತು ರಿಷ್ಠಾ, ರಾ ರಾ ಜಿತಾ (ನಿಂತಿರುವುದು) ಲಹರಿ, ಪ್ರತಿಜ್ಞಾ, ಶಿವಣ್ಣ (ಕೋಚ್), ಪವನ್ (ಸಹಾಯಕ ಕೋಚ್), ಲಗಾನಾ, ರಿಶಾ ಮತ್ತು ಇಶಾನ್ವಿ ಪ್ರಜಾವಾಣಿ ಚಿತ್ರ/ಎಸ್‌.ಕೆ. ದಿನೇಶ್





ಹನಿಯೆಗೆ ಅಯಾತೊಲ್ಲ ಅಂತಿಮ ನಮನ


ಹನಿಯೆ ಭಿತ್ತಿಚಿತ್ರ ಪ್ರದರ್ಶಿಸಿದ ಇರಾನಿಯನ್ನರು – ಎಎಫ್‌ಪಿ ಚಿತ್ರ

ಬೈರೂತ್ (ಎಪಿ): ಈಚೆಗೆ ಮೃತಪಟ್ಟ ಹಮಾಸ್ ಪರಮೋಚ್ಚ ನಾಯಕ ಇಸ್ಮಾಯಿಲ್ ಹನಿಯೆ ಮತ್ತು ಅವರ ಅಂಗರಕ್ಷಕನ ಪಾರ್ಥಿವ ಶರೀರಕ್ಕೆ ಇರಾನ್ ಸರ್ವೋಚ್ಚ ನಾಯಕ ಅಯಾತೊಲ್ಲ ಆಲಿ ಖಮೇನಿ ಅವರು ಗುರುವಾರ ನಮನ ಸಲ್ಲಿಸಿದರು.

ಟೆಹರಾನ್ ವಿಶ್ವವಿದ್ಯಾಲಯದ ಆವರಣದಲ್ಲಿ ಹನಿಯೆ ಮತ್ತು ಅವರ ಅಂಗರಕ್ಷನ ಮೃತದೇಹಗಳಿದ್ದ ಶವಪೆಟ್ಟಿಗೆಗಳನ್ನು ಸಾರ್ವಜನಿಕ ದರ್ಶನಕ್ಕೆ ಇರಿಸಲಾಗಿತ್ತು. ಬಳಿಕ ಶವಪೆಟ್ಟಿಗೆಗಳನ್ನು ಟ್ರಕ್ ಮೂಲಕ ಆಜಾದಿ ಸ್ಕ್ವೇರ್‌ಗೆ ತರಲಾಯಿತು. ಜನರು ಪುಷ್ಪನಮನ ಸಲ್ಲಿಸಿದರು. ಈ ದೃಶ್ಯಗಳನ್ನು ಅಲ್ಲಿಯ ಸರ್ಕಾರಿ ವಾಹಿನಿ ಬಿತ್ತರಿಸಿದೆ.

ಟೆಹರಾನ್‌ನಲ್ಲಿ ಅಂತಿಮ ವಿಧಿವಿಧಾನಗಳು ನೆರವೇರಿದ ಬಳಿಕ ಹನಿಯೆ ಅವರ ಪಾರ್ಥಿವ ಶರೀರವನ್ನು ಅಂತಿಮ ಸಂಸ್ಕಾರಕ್ಕಾಗಿ ಕತಾರ್‌ಗೆ ಶುಕ್ರವಾರ ಕಳುಹಿಸಲಾಗುವುದು ಎನ್ನಲಾಗಿದೆ.

ಈಚೆಗೆ ಟೆಹರಾನ್‌ನಲ್ಲಿ ನಡೆದ ಸಮಾರಂಭವೊಂದರಲ್ಲಿ ಭಾಗವಹಿಸಿ ಹನಿಯೆ ಅವರು ತಮ್ಮ ನಿವಾಸಕ್ಕೆ ತೆರಳಿದ್ದರು. ಆಗ ನಡೆದ ವಾಯುದಾಳಿಯಲ್ಲಿ ಅವರು ಮೃತಪಟ್ಟರು. ಇಸ್ರೇಲ್ ಈ ದಾಳಿ ನಡೆಸಿದೆ ಎಂದು ಇರಾನ್ ಆರೋಪಿಸಿದೆ. ಈ ಸಾವಿನಿಂದ ಇರಾನ್– ಹಮಾಸ್ ನಡುವಿನ ಯುದ್ಧ ಮತ್ತಷ್ಟು ತೀವ್ರಗೊಳ್ಳಲಿದೆ ಎಂದು ಅಂದಾಜಿಸಲಾಗಿದೆ.

ಡೀಫ್ ಸಾವು: ಖಚಿತಪಡಿಸಿದ ಇಸ್ರೇಲ್

ಜೆರುಸಲೇಂ (ಎಪಿ): ಕಳೆದ ಜುಲೈನಲ್ಲಿ ತಾನು ನಡೆಸಿದ ವೈಮಾನಿಕ ದಾಳಿಯಲ್ಲಿ ಹಮಾಸ್‌ನ ಸೇನಾ ವಿಭಾಗದ ಮುಖ್ಯಸ್ಥ ಮೊಹಮ್ಮದ್ ಡೀಫ್ ಹತರಾಗಿದ್ದಾರೆ ಎಂದು ಇಸ್ರೇಲಿ ಸೇನೆ ಗುರುವಾರ ದೃಢಪಡಿಸಿದೆ.

ಡೀಫ್ ಅವರನ್ನು ಗುರಿಯಾಗಿಸಿ ಜುಲೈ 13ರಂದು ದಕ್ಷಿಣ ಗಾಜಾದ ಖಾನ್ ಯೂನಿಸ್ ನಗರದ ಹೊವಲಯದಲ್ಲಿನ ಕಾಂಪೌಂಡ್‌ವೊಂದರ ಮೇಲೆ ವೈಮಾನಿಕ ದಾಳಿ ನಡೆಸಲಾಗಿತ್ತು. ಆದರೆ ಈ ದಾಳಿಯಲ್ಲಿ ಡೀಫ್ ಸಾವಿಗೀಡಾಗಿದ್ದಾರೆಯೋ ಇಲ್ಲವೋ ಎನ್ನುವುದನ್ನು ಇಸ್ರೇಲ್ ಖಚಿತಪಡಿಸಿರಲಿಲ್ಲ.

ದಾಳಿಯಲ್ಲಿ ಡೀಫ್ ಮೃತಪಟ್ಟಿಲ್ಲವೆಂದೇ ಹಮಾಸ್ ಹೇಳಿತ್ತು. ಆ ದಾಳಿಯಲ್ಲಿ ಒಟ್ಟು 90 ಮಂದಿ ಸಾವಿಗೀಡಾಗಿದ್ದಾರೆ ಎಂದು ಗಾಜಾದ ಆರೋಗ್ಯಾಧಿಕಾರಿಗಳು ತಿಳಿಸಿದ್ದರು.

ಗುರುವಾರ ಈ ಬಗ್ಗೆ ಅಧಿಕೃತ ಹೇಳಿಕೆ ನೀಡಿರುವ ಇಸ್ರೇಲಿ ಸೇನೆಯು, ‘ಗುಪ್ತಚರ ಮಾಹಿತಿಯನ್ನು ಆಧರಿಸಿ, ದಾಳಿಯಲ್ಲಿ ಮೊಹಮ್ಮದ್ ಡೀಫ್ ಸಾವಿಗೀಡಾಗಿದ್ದಾರೆ ಎನ್ನಬಹುದು’ ಎಂದಿದೆ. ತಕ್ಷಣಕ್ಕೆ ಈ ಬಗ್ಗೆ ಹಮಾಸ್ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಕಮಲಾ ಕಪ್ಪುವರ್ಣೀಯರೋ, ಭಾರತೀಯರೋ: ಟ್ರಂಪ್ ಪ್ರಶ್ನೆ



ವಾಷಿಂಗ್ಟನ್ (ಪಿಟಿಐ): ಭಾರತ ಮೂಲದ ಅಮೆರಿಕ ಉಪಾಧ್ಯಕ್ಷೆ, ಅಧ್ಯಕ್ಷೀಯ ಚುನಾವಣೆಗೆ ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿಯಾಗಿರುವ ಕಮಲಾ ಹ್ಯಾರಿಸ್ ಅವರ ವಿರುದ್ಧ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ, ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಜನಾಂಗೀಯ ಮಾತಿನ ದಾಳಿ ನಡೆಸಿದ್ದಾರೆ.

‘ಕಮಲಾ ಹ್ಯಾರಿಸ್ ಕಪ್ಪು ವರ್ಣೀಯರೋ ಅಥವಾ ಭಾರತೀಯರೋ’ ಎಂದು ಟ್ರಂಪ್ ಪ್ರಶ್ನಿಸಿದ್ದಾರೆ.

ಕಮಲಾ ಹ್ಯಾರಿಸ್ ಅವರು ಅಧ್ಯಕ್ಷೀಯ ಚುನಾವಣೆಯ ಅಭ್ಯರ್ಥಿ ಆಗಲು ಬಯಸುವವರೆಗೆ ಭಾರತ–ಅಮೆರಿಕ ಮೂಲದ ಕುರಿತು ಒತ್ತಿ ಹೇಳುತ್ತಿದ್ದರು. ಈಗ ಇದ್ದಕ್ಕಿದ್ದಂತೆ ಕಪ್ಪು ವರ್ಣೀಯರೆಂದು ಹೇಳಿಕೊಳ್ಳುತ್ತಿದ್ದಾರೆ ಎಂದು ಷಿಕಾಗೊದಲ್ಲಿ ಕಪ್ಪು ವರ್ಣೀಯ ಪತ್ರಿಕೋದ್ಯಮಿಗಳ ರಾಷ್ಟ್ರೀಯ ಸಂಘದ ಸಮ್ಮೇಳನದಲ್ಲಿ ಟ್ರಂಪ್ ವ್ಯಂಗ್ಯವಾಡಿದ್ದಾರೆ.

ಟ್ರಂಪ್ ಅವರ ಈ ಹೇಳಿಕೆಗೆ ಡೆಮಾಕ್ರಟಿಕ್ ಪಕ್ಷವು ಪ್ರತಿಕ್ರಿಯಿಸಿದ್ದು, ‘ಇದು ಮತದಾರರನ್ನು ವಿಭಜಿಸುವ, ಅಭ್ಯರ್ಥಿಗೆ ಅಗೌರವ ತೋರುವ ಟ್ರಂಪ್ ಅವರ ಹಳೆಯ ತಂತ್ರವಾಗಿದೆ’ ಎಂದು ಹೇಳಿದೆ.

ಭಾರತದ ಮೀನುಗಾರ ಮೃತ

ಕೊಲಂಬೊ (ಪಿಟಿಐ): ಶ್ರೀಲಂಕಾ ನೌಕಾಪಡೆಯ ಹಡಗು ಹಾಗೂ ಭಾರತದ ಮೀನುಗಾರಿಕಾ ದೋಣಿ ಪರಸ್ಪರ ಡಿಕ್ಕಿ ಹೊಡೆದಿದ್ದರಿಂದ ಭಾರತದ ಮೀನುಗಾರರೊಬ್ಬರು ಮೃತಪಟ್ಟಿದ್ದಾರೆ ಎಂದು ಮಾಧ್ಯಮ ವರದಿಯೊಂದು ತಿಳಿಸಿದೆ.

ಕಚ್ಚತೀವು ದ್ವೀಪದಿಂದ ಐದು ನೌಕಾ ಮೈಲು ದೂರದಲ್ಲಿ ಈ ಅವಘಡ ಸಂಭವಿಸಿದೆ. ಅಕ್ರಮವಾಗಿ ಮೀನುಗಾರಿಕೆ ಮಾಡುವವರನ್ನು ಬೆನ್ನಟ್ಟಿ ಹಡಗು ಸಾಗುವಾಗ ಡಿಕ್ಕಿ ಸಂಭವಿಸಿದೆ ಎಂದು ಶ್ರೀಲಂಕಾದ ನೌಕಾಪಡೆಯ ವಕ್ತಾರ ಕ್ಯಾಪ್ಟನ್ ಗಯನ್ ವಿಕ್ರಮಸೂರ್ಯ ತಿಳಿಸಿರುವುದಾಗಿ ‘ಡೈಲಿ ಮಿರರ್’ ಪ್ರಕಟಿಸಿದೆ

ಟ್ರಂಪ್ ಅರ್ಜಿ ತಿರಸ್ಕೃತ

ನ್ಯೂಯಾರ್ಕ್ (ಎಪಿ): ನೀಲಿಚಿತ್ರಗಳ ನಟಿಗೆ ಹಣ ನೀಡಿ ಬಾಯಿ ಮುಚ್ಚಿಸಿದ ಪ್ರಕರಣದಲ್ಲಿನ ಆರೋಪಕ್ಕೆ ಸಂಬಂಧಿಸಿದಂತೆ ತಾವು ಸಾರ್ವಜನಿಕವಾಗಿ ಏನನ್ನೂ ಹೇಳುವಂತಿಲ್ಲ ಎಂಬ ಆದೇಶವನ್ನು ರದ್ದುಪಡಿಸುವಂತೆ ಕೋರಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಸಲ್ಲಿಸಿದ್ದ ಅರ್ಜಿಯನ್ನು ನ್ಯೂಯಾರ್ಕ್ ಕೋರ್ಟ್ ತಿರಸ್ಕರಿಸಿದೆ.

ಪ್ರಕರಣದ ವಿಚಾರಣೆಯು ಕ್ರಮಬದ್ಧವಾಗಿ ನಡೆಯಲು ಸಾರ್ವಜನಿಕವಾಗಿ ಈ ಪ್ರಕರಣದ ಕುರಿತು ಟ್ರಂಪ್ ಅವರು ಏನನ್ನೂ ಹೇಳದೇ ಇರುವುದು ಮುಖ್ಯವಾಗಿದೆ ಎಂದು ಐವರು ನ್ಯಾಯಮೂರ್ತಿಗಳನ್ನು ಒಳಗೊಂಡ ಪೀಠವು ತಿಳಿಸಿದೆ.

ಜಮಾತ್-ಎ-ಇಸ್ಲಾಮಿ ನಿಷೇಧ

ಢಾಕಾ (ಪಿಟಿಐ): ಬಾಂಗ್ಲಾದೇಶವು ಭಯೋತ್ಪಾದನಾ ವಿರೋಧಿ ಕಾನೂನಿನಡಿ ಜಮಾತ್-ಎ-ಇಸ್ಲಾಮಿ ಮತ್ತು ಅದರ ವಿದ್ಯಾರ್ಥಿ ಘಟಕವಾದ ಇಸ್ಲಾಮಿ ಛಾತ್ರಾ ಶಿಬಿರವನ್ನು ಗುರುವಾರ ನಿಷೇಧಿಸಿದೆ.

ಮೂಲಭೂತವಾದಿ ಪಕ್ಷವು ಸಾರ್ವಜನಿಕ ಭದ್ರತೆಗೆ ಒಡ್ಡಿರುವ ಬೆದರಿಕೆಯನ್ನು ಉಲ್ಲೇಖಿಸಿ, ಗೃಹ ಸಚಿವಾಲಯದ ಸಾರ್ವಜನಿಕ ಭದ್ರತಾ ವಿಭಾಗವು ಗುರುವಾರ ಜಮಾತ್-ಎ-ಇಸ್ಲಾಮಿ ಮೇಲಿನ ನಿಷೇಧವನ್ನು ತನ್ನ ಅಧಿಸೂಚನೆಯಲ್ಲಿ ದೃಢಪಡಿಸಿದೆ.

ಸರ್ಕಾರಿ ಉದ್ಯೋಗಗಳಲ್ಲಿ ಕೋಟಾ ನೀಡುವಂತೆ ಕೋರಿ ದೇಶದಾದ್ಯಂತ ನಡೆದ ಪ್ರತಿಭಟನೆಯಲ್ಲಿ 150 ಜನ ಮೃತಪಟ್ಟಿದ್ದರು. ಆನಂತರ ಜಮಾತ್-ಎ-ಇಸ್ಲಾಮಿಯನ್ನು ನಿಷೇಧಿಸಲು ಬಾಂಗ್ಲಾದೇಶ ಸರ್ಕಾರವು ಮಂಗಳವಾರ ನಿರ್ಧರಿಸಿತ್ತು.

ಒಲಿಂಪಿಕ್ಸ್: 50 ಮೀ ತ್ರಿ ಪೊಸಿಷನ್ ಶೂಟಿಂಗ್‌ನಲ್ಲಿ ಪದಕ ಗಳಿಸಿದ ಮೊದಲ ಭಾರತೀಯ

ತೆರೆಮರೆಯಿಂದ ಎದ್ದುಬಂದ ಸ್ವಪ್ನಿಲ್

• ಸಿದ್ದಿ ಕಿರಣ್

ಪ್ಯಾರಿಸ್: ಸ್ವಪ್ನಿಲ್ ಕುಸಾಳೆ ಅವರು ಒಲಿಂಪಿಕ್ ಕೂಟದಲ್ಲಿ ಸ್ಪರ್ಧಿಸುವ ಅವಕಾಶಕ್ಕಾಗಿ 15 ವರ್ಷ ಕಾಯಬೇಕಾಯಿತು.

ಮಹಾರಾಷ್ಟ್ರದ ಸ್ವಪ್ನಿಲ್ ಅವರು ಶೂಟಿಂಗ್ ಕಲಿಕೆ ಆರಂಭಿಸಿದ್ದು 2009ರಲ್ಲಿ. ಅದೂ ಅವರ ತಂದೆಯು ರಾಜ್ಯದ ಶೂಟಿಂಗ್ ತರಬೇತಿ ಕಾರ್ಯಕ್ರಮವೊಂದಕ್ಕೆ ಹೆಸರು ನೋಂದಾಯಿಸಿದ್ದರಿಂದ ಕಲಿಕೆ ಆರಂಭವಾಯಿತು. ಅದಾಗಿ ಮೂರು ವರ್ಷಗಳ 'ಕಾಯುವಿಕೆ'ಯ ನಂತರ ಅವರು ಅಂತರರಾಷ್ಟ್ರೀಯ ಶೂಟಿಂಗ್‌ಗೆ ಪದಾರ್ಪಣೆ ಮಾಡಿದರು.

ಇದೇ ತಿಂಗಳು 6ರಂದು 29ನೇ ವಸಂತಕ್ಕೆ ಕಾಲಿಡಲಿರುವ ಸ್ವಪ್ನಿಲ್ ಅವರು ಮಹಾರಾಷ್ಟ್ರದ ಕಾಂಬಳವಾಡಿಯವರು. ಸ್ವಪ್ನಿಲ್ ಅವರು ಶಾತೋಹು ನಗರ (ಶೂಟಿಂಗ್ ರೇಂಜ್ ಇರುವ ತಾಣ) ಕ್ಕೆ ಭಾರತದ ಶೂಟಿಂಗ್ ತಂಡದೊಂದಿಗೆ ಬಂದಿಳಿದಿದ್ದರು. ಅದರಲ್ಲಿ ಮನು ಭಾಕರ್, ಸಿಫ್ತ್ ಕೌರ್ ಸಮ್ರಾ ಮತ್ತು ಅರ್ಜುನ್ ಬಬುತಾ ಅವರು ಪದಕ ಜಯಿಸುವ ನಿರೀಕ್ಷೆ ಮೂಡಿಸಿದ್ದ ಪ್ರಮುಖರಾಗಿದ್ದರು.

ಅದರಲ್ಲೂ 50 ಮೀ ರೈಫಲ್ 3 ಪೊಸಿಷನ್ ವಿಭಾಗದಲ್ಲಿ ಐಶ್ವರಿ ಪ್ರತಾಪ್ ಸಿಂಗ್ ತೋಮರ್ ಅವರ ಮೇಲೆ ಅಪಾರ ನಿರೀಕ್ಷೆಗಳಿದ್ದವು. ಎರಡನೇ ಒಲಿಂಪಿಕ್ಸ್‌ನಲ್ಲಿ ಕಣಕ್ಕಿಳಿದಿದ್ದ ಅವರಿಗೆ ಅದೃಷ್ಟ ಒಲಿಯಲಿಲ್ಲ. ಇದೇ ಮೊದಲ ಬಾರಿಗೆ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ ಸ್ವಪ್ನಿಲ್ ಅವರು ಐಶ್ವರಿಯವರನ್ನು ಅರ್ಹತಾ ಸುತ್ತಿನಲ್ಲಿಯೇ ಹಿಂದಿಕ್ಕಿದರು. ಫೈನಲ್‌ನಲ್ಲಿ ಚೀನಾ ಮತ್ತು ಉಕ್ರೇನ್ ಸ್ಪರ್ಧಿಗಳಿಗೆ ನಿಕಟ ಪೈಪೋಟಿಯೊಡ್ಡಿದರು. ಕಂಚಿನ ಪದಕ ಜಯಿಸಿದರು. ಸದಾ ತೆರೆಮರೆಯ ಸಾಧಕನಂತೆ ಇದ್ದ ಸ್ವಪ್ನಿಲ್ ಈಗ ಇಡೀ ದೇಶದ ಗಮನವನ್ನು ತಮ್ಮತ್ತ ಸೆಳೆದಿದ್ದಾರೆ.

ಒಲಿಂಪಿಕ್ ಕೂಟದ 50 ಮೀ ರೈಫಲ್ 3 ಪೊಸಿಷನ್ ವಿಭಾಗದಲ್ಲಿ ಪದಕ ಜಯಿಸಿದ ಭಾರತೀಯ ಮೊದಲ ಶೂಟರ್ ಆದರು. ಚೀನಾದ ಯುಕುನ್ ಲಿಯು (463.6) ಹಾಗೂ ಉಕ್ರೇನ್‌ನ ಸೆರಿಯಾ ಕುಲಿಶ್ (461.3) ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಜಯಿಸಿದರು. ಕುಸಾಳೆ ಅವರು 451.4 ಅಂಕ ಕಲೆಹಾಕಿದರು.

ತ್ರಿ ಪೊಸಿಷನ್ ಶೂಟಿಂಗ್ ಸವಾಲಿನದ್ದಾಗಿತ್ತು. ಇದರಲ್ಲಿರುವ ಮೂರು ವಿಭಾಗಗಳಾದ ನೀಲಿಂಗ್ (ಮಂಡಿಯೂರಿ), ಪ್ರೋನ್ (ಬೋರಲಾಗಿ ಮಲಗಿ) ಹಾಗೂ ಸ್ಟ್ಯಾಂಡಿಂಗ್ (ನಿಂತುಕೊಂಡು) ಗುರಿ ಕಟ್ಟಬೇಕು. ಮೂರು ವಿಭಾಗಗಳಲ್ಲಿ ಗಳಿಸಿದ ಅಂಕಗಳನ್ನು ಒಟ್ಟುಗೂಡಿಸಿ ಅಂತಿಮ ಸ್ಕೋರ್ ಪ್ರಕಟಿಸಲಾಗುತ್ತದೆ.

ಕ್ರಿಕೆಟಿಗ ಮಹೇಂದ್ರಸಿಂಗ್ ಧೋನಿ ಅವರು ಕುಸಾಳೆಯ ನೆಚ್ಚಿನ ಆಟಗಾರ. ಧೋನಿಯವರ ಶಾಂತಚಿತ್ತ ಮತ್ತು ನಾಯಕತ್ವ ಗುಣಗಳನ್ನು ಅನುಸರಿಸುವ ಕುಶಾಲೆ ರೈಲ್ವೆ ಇಲಾಖೆಯಲ್ಲಿ ಟಿಕೆಟ್ ನಿರೀಕ್ಷಕರಾಗಿದ್ದಾರೆ. ಅವರು ಇಲ್ಲಿ ಕಂಚಿನ ಪದಕಕ್ಕೆ ಕೊರಳೊಡ್ಡುತ್ತಿದ್ದಂತೆಯೇ ತವರೂರು ಕಾಂಬಳವಾಡಿಯಲ್ಲಿ ಸಂಭ್ರಮ ಗರಿಗೆದರಿತು.

ಅಂಜುಮ್, ಸಿಫ್ತ್‌ಗೆ ನಿರಾಶೆ: ಮಹಿಳೆಯರ 50 ಮೀ ರೈಫರ್ 3 ಪೊಸಿಷನ್ ಸ್ಪರ್ಧೆಯಲ್ಲಿ ಭಾರತದ ಅಂಜುಮ್ ಮೌದ್ಗಿಲ್ ಮತ್ತು ಸಿಫ್ತ್ ಕೌರ್ ಸಮ್ರಾ ಅವರು ಫೈನಲ್‌ಗೆ ಪ್ರವೇಶಿಸುವಲ್ಲಿ ವಿಫಲರಾದರು.



ಸ್ವಪ್ನಿಲ್ ಕುಸಾಳೆ –ಪಿಟಿಐ / ಪಿಟಿಐ ಚಿತ್ರ

₹1 ಕೋಟಿ ಬಹುಮಾನ

ಮುಂಬೈ (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್‌ನ 50 ಮೀ. ರೈಫಲ್ 3 ಪೊಸಿಷನ್ಸ್ ಸ್ಪರ್ಧೆಯಲ್ಲಿ ಕಂಚಿನ ಪದಕ ಗೆದ್ದ ಸ್ವಪ್ನಿಲ್ ಕುಸಾಳೆ ಅವರಿಗೆ ಮಹಾರಾಷ್ಟ್ರ ಸರ್ಕಾರದಿಂದ ₹1 ಕೋಟಿ ಬಹುಮಾನ ನೀಡುವುದಾಗಿ ಮುಖ್ಯಮಂತ್ರಿ ಏಕನಾಥ ಶಿಂದೆ ಗುರುವಾರ ಪ್ರಕಟಿಸಿದ್ದಾರೆ.

ಕುಸಾಳೆ ಅವರ ತಂದೆ ಮತ್ತು ಕೋಚ್ ಜೊತೆ ಮಾನತಾಡಿದ್ದೇನೆ. ವಿಡಿಯೊ ಕಾಲ್‌ನಲ್ಲಿ ಕುಸಾಳೆಗೂ ಅಭಿನಂದನೆ ಸಲ್ಲಿಸಿದ್ದೇನೆ ಎಂದು ಸುದ್ದಿಗಾರರಿಗೆ ತಿಳಿಸಿದರು. ಕುಸಾಳೆ, ಕೊಲ್ಹಾಪುರದವರು.



ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಪಡೆದ ಮಹಾರಾಷ್ಟ್ರದ ಸ್ವಪ್ನಿಲ್ ಕುಸಾಳೆ ಅವರ ತಂದೆ ಸುರೇಶ, ತಾಯಿ ಅನಿತಾ ಹಾಗೂ ಕುಟುಂಬದವರು ಸಿಹಿ ತಿಂದು ಸಂಭ್ರಮಿಸಿದ್ದು ಹೀಗೆ

ಸ್ವಪ್ನಿಲ್ ತವರೂರಲ್ಲಿ ಸಡಗರ

ಪ್ರಜಾವಾಣಿ ವಾರ್ತೆ

ನಿಪ್ಪಾಣಿ (ಬೆಳಗಾವಿ ಜಿಲ್ಲೆ): ಪ್ಯಾರಿಸ್ ಒಲಿಂಪಿಕ್ಸ್ ಶೂಟಿಂಗ್‌ನಲ್ಲಿ ಕಂಚಿನ ಪದಕ ಜಯಿಸಿದ ಸ್ವಪ್ನಿಲ್ ಕುಸಾಳೆ ಅವರ ತವರೂರಿನಲ್ಲಿ ಸಂಭ್ರಮ ಗರಿಗೆದರಿದೆ.

ನಿಪ್ಪಾಣಿ ತಾಲ್ಲೂಕಿನ ಗಡಿ ಭಾಗಕ್ಕೆ ಹೊಂದಿಕೊಂಡಿರುವ ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ರಾಧಾನಗರಿ ತಾಲ್ಲೂಕಿನ ಕಾಂಬಳವಾಡಿ ಗ್ರಾಮದವರಾದ ಸ್ವಪ್ನಿಲ್ ಭಾರತದ ಕೀರ್ತಿಪತಾಕೆಯನ್ನು ವಿಶ್ವಮಟ್ಟದಲ್ಲಿ ಹಾರಿಸಿದ್ದಾರೆ.

'ಪ್ರಜಾವಾಣಿ' ಜತೆಗೆ ಸಂತಸ ಹಂಚಿಕೊಂಡ ಸ್ವಪ್ನಿಲ್ ಅವರ ತಂದೆ, ಶಿಕ್ಷಕ ಸುರೇಶ ಕುಸಾಳೆ, 'ನಾಸಿಕ್‌ನ ಭೋಸ್ಲಾ ಸೈನಿಕ ಶಾಲೆಯಲ್ಲಿ 9ನೇ ತರಗತಿಯಲ್ಲಿ ಪ್ರಥಮ ಬಾರಿಗೆ ರಾಜ್ಯಮಟ್ಟದ ಚಿನ್ನದ ಪದಕ ಗೆದ್ದಾಗ ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲುವ ಕನಸು ಕಂಡಿದ್ದ. ಈಗ ಅದು ನನಸಾಗಿದೆ. ಬಾಲ್ಯದಿಂದಲೂ ಅವನಿಗೆ ಕ್ರೀಡೆಯಲ್ಲಿ ಅತ್ಯಂತ ಆಸಕ್ತಿ ಇತ್ತು' ಎಂದರು.

ಸ್ವಪ್ನಿಲ್ ತಾಯಿ, ಕಾಂಬಳವಾಡಿ ಗ್ರಾಮ ಪಂಚಾಯಿತಿ ಅಧ್ಯಕ್ಷೆಯೂ ಆಗಿರುವ ಅನಿತಾ, 'ಸ್ವಪ್ನಿಲ್ ಪದಕ ಜಯಿಸಿದ್ದು ಸಂತಸವಾಗಿದೆ' ಎಂದರು.



ಚಿನ್ನ ಗೆದ್ದ ಚೀನಾದ ಯುಕುನ್ ಲಿಯು (ಮಧ್ಯ), ಬೆಳ್ಳಿ ಗೆದ್ದ ಉಕ್ರೇನ್‌ನ ಸೆರಿಯಾ ಕುಲಿಶ್ ಜೊತೆ ಸ್ವಪ್ನಿಲ್ ಕುಸಾಳೆ ಸೆಲ್ಫಿ ಸಂಭ್ರಮ –ಪಿಟಿಐ ಚಿತ್ರ

ಪದಕ ಪಟ್ಟಿ

ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಚೀನಾ	11	7	5	23
ಅಮೆರಿಕ	8	14	13	35
ಫ್ರಾನ್ಸ್	8	11	8	27
ಜಪಾನ್	8	3	5	16
ಆಸ್ಟ್ರೇಲಿಯಾ	7	6	4	17
ಬ್ರಿಟನ್	6	7	7	20
ದ.ಕೊರಿಯಾ	6	3	3	12
ಇಟಲಿ	5	6	4	15
ಕೆನಡಾ	3	2	3	8
ಭಾರತ	0	0	3	3

ಪಟ್ಟಿಯಲ್ಲಿ ಭಾರತ 44ನೇ ಸ್ಥಾನದಲ್ಲಿದೆ



ಶ್ರೀಜಾ ಅಕುಲಾ –ಪಿಟಿಐ ಚಿತ್ರ

ಟಿಟಿ: ಸಿಂಗಲ್ಸ್‌ನಲ್ಲಿ ಭಾರತದ ಅಭಿಯಾನಕ್ಕೆ ತೆರೆ

ಪ್ಯಾರಿಸ್ (ಪಿಟಿಐ): ಒಲಿಂಪಿಕ್ಸ್‌ನ ಟೇಬಲ್ ಟೆನಿಸ್ ಸಿಂಗಲ್ಸ್ ಸ್ಪರ್ಧೆಯಲ್ಲಿ ಭಾರತದ ಅಭಿಯಾನಕ್ಕೆ ತೆರೆಬಿದ್ದಿದೆ. ಕೊನೆಯ ಭರವಸೆಯಾಗಿದ್ದ ಶ್ರೀಜಾ ಅಕುಲಾ ಮಹಿಳೆಯರ ಸಿಂಗಲ್ಸ್‌ನ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಹೊರಬಿದ್ದಿದ್ದಾರೆ.

ಬುಧವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಶ್ರೀಜಾ 0–4 ಗೇಮ್‌ಗಳಿಂದ ವಿಶ್ವದ ಅಗ್ರಮಾನ್ಯ ಆಟಗಾರ್ತಿ ಯಿಂಗ್ಶಾ ಸನ್ ವಿರುದ್ಧ ಪರಾಭವಗೊಂಡರು.

ಮಣಿಕಾ ಬಾತ್ರಾ ಮತ್ತು ಶ್ರೀಜಾ ಅವರು ಒಲಿಂಪಿಕ್ಸ್‌ನಲ್ಲಿ 16ರ ಘಟ್ಟ ಪ್ರವೇಶಿಸುವ ಮೂಲಕ ಐತಿಹಾಸಿಕ ಸಾಧನೆ ಮಾಡಿದ್ದರು. ಸಿಂಗಲ್ಸ್‌ನಲ್ಲಿ ಈ ಹಂತಕ್ಕೆ ಭಾರತದ ಸ್ಪರ್ಧಿಗಳು ತಲುಪಿದ್ದು ಇದೇ ಮೊದಲು. ಆದರೆ, ಯಾರೊಬ್ಬರಿಗೂ ಕ್ವಾರ್ಟರ್ ಫೈನಲ್ ತಲುಪಲು ಸಾಧ್ಯವಾಗಲಿಲ್ಲ. ಇಬ್ಬರೂ ತಮಗಿಂತ ಉನ್ನತ ರ‍್ಯಾಂಕ್‌ನ ಎದುರಾಳಿಗಳ ವಿರುದ್ಧ ಮುಗ್ಗರಿಸಿದರು.

26ನೇ ವರ್ಷದ ಜನ್ಮದಿನದ ಸಂಭ್ರಮದಲ್ಲಿದ್ದ ಶ್ರೀಜಾ 10-12, 10-12, 8-11, 3-11 ರಿಂದ ಚೀನಾ ಆಟಗಾರ್ತಿ ವಿರುದ್ಧ ಪರಾಭವಗೊಂಡರು. ಅದಕ್ಕೂ ಮೊದಲು 29 ವರ್ಷ ವಯಸ್ಸಿನ ಮಣಿಕಾ 6-11, 9-11, 14-12, 8-11, 6-11 ರಿಂದ ಜಪಾನ್‌ನ ಮಿಯು ಹಿರಾನೊ ಅವರಿಗೆ ಮಣಿದಿದ್ದರು.

ಶ್ರೀಜಾ ಮೊದಲೆರಡು ಗೇಮ್‌ಗಳಲ್ಲಿ ಪೈಪೋಟಿ ನೀಡಿದರು. ನಂತರ ಗೇಮ್‌ನಲ್ಲಿ ಸೋಲೊಪ್ಪಿಕೊಂಡರು. ಭಾರತ ಆಟಗಾರರು ತಂಡ ವಿಭಾಗದ ಸ್ಪರ್ಧೆಯಲ್ಲಿದ್ದಾರೆ.



ಪ್ಯಾರಿಸ್ ಒಲಿಂಪಿಕ್ಸ್ ಪುರುಷರ ವೈಯಕ್ತಿಕ ಗಾಲ್ಫ್ ಆರಂಭಿಕ ಸುತ್ತಿನ ಸ್ಪರ್ಧೆಯಲ್ಲಿ ಭಾರತದ ಶುಭಂಕರ್ ಶರ್ಮಾ –ಪ್ರಜಾವಾಣಿ ಚಿತ್ರ/ ಕೆ.ಎನ್. ಶಾಂತಕುಮಾರ್

ಬೆಲ್ಜಿಯಮ್‌ಗೆ ಮಣಿದ ಭಾರತ

ಪ್ಯಾರಿಸ್ (ಪಿಟಿಐ): ಆರಂಭದಲ್ಲಿ ಮುನ್ನಡೆ ಪಡೆದರೂ, ಅದನ್ನು ಕೈಚೆಲ್ಲಿದ ಭಾರತ ತಂಡ ಒಲಿಂಪಿಕ್ಸ್ ಹಾಕಿ 'ಬಿ' ಗುಂಪಿನ ಪಂದ್ಯದಲ್ಲಿ ಹಾಲಿ ಚಾಂಪಿಯನ್ಸ್ ಬೆಲ್ಜಿಯಂ ತಂಡಕ್ಕೆ ಗುರುವಾರ 1–2 ಗೋಲುಗಳಿಂದ ಸೋತಿತು. ಇದು ಭಾರತ ತಂಡಕ್ಕೆ ಮೊದಲ ಸೋಲು.

ಎರಡೂ ತಂಡಗಳು 'ಬಿ' ಗುಂಪಿನಿಂದ ಈ ಮೊದಲೇ ಎಂಟರ ಘಟ್ಟಕ್ಕೆ ಅರ್ಹತೆ ಪಡೆದಿದ್ದವು.

ಇವ್ಸ್ ಡಿ ಮ್ಯಾನುವಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯದ 18ನೇ ನಿಮಿಷ ಅಭಿಷೇಕ್ ಭಾರತಕ್ಕೆ ಮುನ್ನಡೆ ಒದಗಿಸಿದರು. ಆದರೆ ವಿರಾಮದ ನಂತರ ಬೆಲ್ಜಿಯಂ ಹಿಡಿತ ಸಾಧಿಸಿತು. 33ನೇ ನಿಮಿಷ ಥಿಬೌ ಸ್ಟಾಕ್‌ಬ್ರೊಕಿ ಸ್ಕೋರ್ ಸಮಮಾಡಿದರು. ಜಾನ್–ಜಾನ್ ದೊಮೆನ್ 44ನೇ ನಿಮಿಷ ನಿರ್ಣಾಯಕ ಗೋಲು ಗಳಿಸಿದರು. ಆ ಮೂಲಕ ಬೆಲ್ಜಿಯಂ ಟೂರ್ನಿಯಲ್ಲಿ ಇದುವರೆಗೆ ಅಜೇಯವಾಗುಳಿಯಿತು.

ಹರ್ಮನ್‌ಪ್ರೀತ್ ಬಳಗ ನ್ಯೂಜಿಲೆಂಡ್ ಮತ್ತು ಐರ್ಲೆಂಡ್ ವಿರುದ್ಧ ಜಯಗಳಿಸಿದರೆ, ಅರ್ಜೆಂಟೀನಾ ಜೊತೆ 1–1 'ಡ್ರಾ' ಮಾಡಿಕೊಂಡಿತ್ತು. ಗುಂಪಿನ ತನ್ನ ಕೊನೆಯ ಪಂದ್ಯವನ್ನು ಶುಕ್ರವಾರ ಆಸ್ಟ್ರೇಲಿಯಾ ಎದುರು ಆಡಲಿದೆ.

ಮೊದಲಾರ್ಧದಲ್ಲಿ ಭಾರತ ತಂಡವೇ ಮೇಲುಗೈ ಸಾಧಿಸಿತ್ತು. ಚೆಂಡಿನ ಮೇಲೆ ನಿಯಂತ್ರಣ ಸಾಧಿಸಿದ್ದ ಭಾರತ, 'ರೆಡ್ ಲಯನ್ಸ್' ವಿರುದ್ಧ ಹೆಚ್ಚು ಅವಕಾಶಗಳನ್ನು ಸೃಷ್ಟಿಸಿಕೊಂಡಿತ್ತು. ರಕ್ಷಣಾ ವಿಭಾಗವೂ ಬೆಲ್ಜಿಯಮ್ ತಂಡಕ್ಕೆ ಸ್ಕೋರಿಂಗ್ ಅವಕಾಶ ನೀಡಿಲಿಲ್ಲ. ಎರಡು ಪೆನಾಲ್ಟಿ ಕಾರ್ನರ್‌ಗಳನ್ನು ಯಶಸ್ವಿ ಆಗಿ ತಡೆಯಿತು.

ಆದರೆ ಪ್ರತಿದಾಳಿಗಳನ್ನು ನಡೆಸಿದ ಭಾರತಕ್ಕೆ ಅಭಿಷೇಕ್ ಮುನ್ನಡೆ ಒದಗಿಸಿದರು. 'ಡಿ' ಆವರಣದ ಬಳಿ ಎದುರಾಳಿ ತಂಡದ ಆರ್ಥ್ ಡಿ ಸ್ಲೂವರ್ ಅವರಿಂದ ಚೆಂಡನ್ನು ನಿಯಂತ್ರಣಕ್ಕೆ ಪಡೆದ ಅಭಿಷೇಕ್ ಮುನ್ನುಗ್ಗಿ ಎದುರಾಳಿ ರಕ್ಷಣೆ ಆಟಗಾರರನ್ನು ತಪ್ಪಿಸಿ ಪಂದ್ಯದ ಮೊದಲ ಗೋಲು ಗಳಿಸಿದರು.



ಭಾರತ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ –ಪಿಟಿಐ ಚಿತ್ರ

25ನೇ ನಿಮಿಷ ಭಾರತಕ್ಕೆ ದೊರೆತ ಮೊದಲ ಪೆನಾಲ್ಟಿ ಕಾರ್ನರ್ ಅವಕಾಶವನ್ನು ಪರಿವರ್ತಿಸುವಲ್ಲಿ ಅಮಿತ್ ರೋಹಿದಾಸ್ ಎಡವಿದರು.

ಆದರೆ ಉತ್ತರಾರ್ಧದಲ್ಲಿ ಬೆಲ್ಜಿಯಂ ಸ್ಕೋರ್ ಸಮಮಾಡಲು ಇನ್ನಿಲ್ಲದ ಯತ್ನ ನಡೆಸಿತು. ಫ್ಲೊರೆಂಟ್ ವಾನ್ ಬೆಲ್ ಅವರು ಎಡಗಡೆಯಿಂದ ಚೆಂಡನ್ನು ಮುನ್ನಡೆಸಿ ಗೋಲಿನ ಬಳಿ ಹೊಂಚುಹಾಕುತ್ತಿದ್ದ ಸ್ಟಾಕ್‌ಬ್ರೊಕಿ ಅವರಿಗೆ ಪಾಸ್ ಮಾಡಿದರು. ಅವರು ಈ ಅವಕಾಶ ವ್ಯರ್ಥಪಡಿಸಲಿಲ್ಲ.

ಬೆಲ್ಜಿಯಂ ನಂತರ ಬೆನ್ನುಬೆನ್ನಿಗೆ ಮೂರು ಪೆನಾಲ್ಟಿ ಕಾರ್ನರ್ ಪಡೆಯಿತು. ಇದರಲ್ಲಿ ಕೊನೆಯ ಅವಕಾಶವನ್ನು ದೊಮನ್ ಗೋಲಾಗಿಸುವಲ್ಲಿ ಯಶಸ್ವಿ ಆದರು. ಭಾರತಕ್ಕೆ ಅಂತಿಮ ಕ್ವಾರ್ಟರ್‌ನಲ್ಲಿ ಅವಕಾಶಗಳು ದೊರೆತರೂ, ಬೆಲ್ಜಿಯಂನ ರಕ್ಷಣೆ ಭೇದಿಸಲಾಗಲಿಲ್ಲ.

ನಿಖತ್ ಜರೀನ್ ಕನಸು ಭಗ್ನ

ಪ್ಯಾರಿಸ್ (ಪಿಟಿಐ): ಭಾರತದ ಪದಕದ ಭರವಸೆಯಾಗಿದ್ದ, ಎರಡು ಬಾರಿಯ ವಿಶ್ವ ಚಾಂಪಿಯನ್ ನಿಖತ್ ಜರೀನ್ ಅವರು ಒಲಿಂಪಿಕ್ಸ್ ಬಾಕ್ಸಿಂಗ್‌ನ (50 ಕೆ.ಜಿ ವಿಭಾಗ) ಅನಿರೀಕ್ಷಿತ ಫಲಿತಾಂಶದಲ್ಲಿ ಚೀನಾದ ವು ಯು ಅವರಿಗೆ 0–5 ಅಂತರದಲ್ಲಿ ಮಣಿದರು. ಗುರುವಾರ ಬೆಳಿಗ್ಗೆ ನಡೆದ 16ರ ಸುತ್ತಿನ ಈ ಪಂದ್ಯ ನಿರೀಕ್ಷೆ ಮೀರಿ ಏಕಪಕ್ಷೀಯವಾಯಿತು.



ನಿಖತ್ ಜರೀನ್

ಆದರೆ ಏಷ್ಯನ್ ಗೇಮ್ಸ್ ಸ್ವರ್ಣ ವಿಜೇತೆ ಎದುರು ಗುರುವಾರ ನಡೆದ ಈ ಹೋರಾಟದಲ್ಲಿ ಜರೀನ್ ಕನಸು ಜರ್ಜರಿತಗೊಂಡಿತು. 'ನನ್ನನ್ನು ಕ್ಷಮಿಸಿ' ಎಂದು ಪಂದ್ಯದ ನಂತರ ಭಾವೋದ್ವೇಗದಿಂದ ಅವರು ಹೇಳಿದರು. 'ಇದು ನನಗೆ ಕಲಿಕೆಯ ಅನುಭವ. ಈ ಹಿಂದೆ ಆಕೆಯ ಜೊತೆ ನಾನು ಎಂದೂ ಸೆಣಸಾಡಿಲ್ಲ. ಅವರು ತುಂಬಾ ವೇಗವಾಗಿದ್ದರು. ಊರಿಗೆ ಹೋದ ನಂತರ ಈ ಬಗ್ಗೆ ಸೆಣಸಾಟದಲ್ಲಿ ಎಲ್ಲಿ ಎಡವಿದ್ದೇನೆಂದು ವಿಶ್ಲೇಷಣೆ ನಡೆಸುವೆ' ಎಂದರು.

ಮೊದಲ ಬಾರಿ ಇವರಿಬ್ಬರ ನಡುವಿನ ಸೆಣಸಾಟದಲ್ಲಿ ನಿಖತ್ ಅವರನ್ನು ಹಾಲಿ ಫ್ಲೈವೇಟ್ (52 ಕೆ.ಜಿ) ವಿಶ್ವ ಚಾಂಪಿಯನ್ ಆಟಗಾರ್ತಿ ಮೊದಲ ಸುತ್ತಿನಿಂದಲೇ ಒತ್ತಡಕ್ಕೆ ಸಿಲುಕಿಸಿದರು. ಯು ಅವರು ಚುರುಕಿನ ಪ್ರಹಾರಗಳನ್ನು ನೀಡಿದರು. ನಿಖತ್ ಪ್ರತಿಹೋರಾಟಕ್ಕೆ ಯತ್ನಿಸಿದರೂ, ಅವರಿಗೆ ಸಮನ್ವಯ ಸಾಧಿಸಲಾಗಲಿಲ್ಲ. ಇದಕ್ಕೆ ಯು ಅವರ ಮಿಂಚಿನ ಪಾದಚಲನೆ ಕಾರಣವಾಯಿತು. ಗುದ್ದುಗಳನ್ನು ಅವರು ಸುಲಭವಾಗಿ ತಪ್ಪಿಸಿಕೊಂಡರು.

ಎರಡನೆ ಸುತ್ತಿನಲ್ಲಿ ಸ್ವಲ್ಪ ಯಶಸ್ಸು ಕಂಡರು. ನಿಖತ್ ಕೆಲವು ಪ್ರಹಾರಗಳನ್ನು ನೀಡುವಲ್ಲಿ ಯಶಸ್ವಿ ಆದರೂ, ಯು ಕೂಡ ನಂತರ ಪ್ರತಿದಾಳಿಯಲ್ಲಿ ನಿಖತ್ ಅವರ ಮುಖಕ್ಕೆ ಪ್ರಹಾರ ನಡೆಸಿದರು. ಮೂರನೇ ಸುತ್ತಿನಲ್ಲೂ ಅಂಥ ಬದಲಾವಣೆ ಕಾಣಲಿಲ್ಲ.

ಒಲಿಂಪಿಕ್ಸ್ ಕುಸ್ತಿಯಿಂದ ಹೊರಬಿದ್ದ ನಾಲ್ಕನೇ ಬಾಕ್ಸರ್ ಎನಿಸಿದರು. ಆರು ಮಂದಿಯ ಭಾರತ ಬಾಕ್ಸಿಂಗ್ ತಂಡ ಇಲ್ಲಿಗೆ ಬಂದಿತ್ತು. ಅಮಿತ್ ಪಂಘಲ್ (51 ಕೆ.ಜಿ), ಕಾಮನ್‌ವೆಲ್ತ್ ಗೇಮ್ಸ್ ಕಂಚಿನ ಪದಕ ವಿಜೇತೆ ಜೈಸ್ಮಿನ್ ಲಂಬೋರಿಯಾ (57 ಕೆ.ಜಿ), ಏಷ್ಯನ್ ಗೇಮ್ಸ್ ಕಂಚಿನ ಪದಕ ವಿಜೇತೆ ಪ್ರೀತಿ ಪವಾರ್ (54 ಕೆ.ಜಿ) ಈಗಾಗಲೇ ಹೊರಬಿದ್ದಿದ್ದಾರೆ.



ಎದುರಾಳಿ ಬಾಕ್ಸರ್‌ಗೆ ಪಂಚ್ ನೀಡಿದ ನಿಶಾಂತ್ ದೇವ್ –ಎಎಫ್‌ಪಿ ಚಿತ್ರ

ಎಂಟರ ಘಟ್ಟಕ್ಕೆ ನಿಶಾಂತ್ ದೇವ್

ಪ್ಯಾರಿಸ್ (ಪಿಟಿಐ): ಭಾರತದ ನಿಶಾಂತ್ ದೇವ್, ಒಲಿಂಪಿಕ್ಸ್ ಬಾಕ್ಸಿಂಗ್‌ನ ಪುರುಷರ 71 ಕೆ.ಜಿ. ವಿಭಾಗದ ಸ್ಪರ್ಧೆಯಲ್ಲಿ ಈಕ್ವೆಡಾರ್‌ನ ಜೋಸ್ ಗೇಬ್ರಿಯಲ್ ರಾಡ್ರಿಗಸ್ ಟೆನೊರಿಯೊ ಅವರನ್ನು ಸೋಲಿಸಿ ಕ್ವಾರ್ಟರ್‌ಫೈನಲ್ ತಲುಪಿದರು.

ಬುಧವಾರ ರಾತ್ರಿ ನಡೆದ ಸೆಣಸಾಟದಲ್ಲಿ ಅವರು 3–2 ಭಿನ್ನ ತೀರ್ಪಿನಲ್ಲಿ ಜಯಶಾಲಿಯಾದರು. ಮೊದಲ ಸುತ್ತಿನಲ್ಲಿ ದೇವ್ ಆಕ್ರಮಣಕಾರಿಯಾಗಿದ್ದು, ಎದುರಾಳಿಗೆ ಕರಾರುವಾಕ್ ಆಗಿ ಪಂಚ್‌ಗಳನ್ನು ನೀಡಿದರು. ಆದರೆ ಎರಡನೇ ಸುತ್ತಿನಲ್ಲಿ ಅವರು ದಣಿದಂತೆ ಕಂಡರೆ, ಈಕ್ವೆಡಾರ್ ಸ್ಪರ್ಧಿ ತಮ್ಮ ಉತ್ತಮ ಆಟ ಈ ಸುತ್ತಿಗೆ ಉಳಿಸಿದಂತೆ ಕಂಡಿತು. ಆದರೆ ಅಂತಿಮವಾಗಿ ನಿಶಾಂತ್ ತಮ್ಮ ಮುನ್ನಡೆ ಉಳಿಸಿಕೊಳ್ಳುವಲ್ಲಿ ಯಶಸ್ವಿ ಆದರು.

ಲವ್ಲಿನಾ ಬೊರ್ಗೊಹೈನ್ (75 ಕೆ.ಜಿ) ಮತ್ತು ನಿಶಾಂತ್ ದೇವ್ (75 ಕೆ.ಜಿ) ಅವರಿಬ್ಬರು ಇನ್ನು ಒಂದು ಪಂದ್ಯ ಗೆದ್ದರೆ ಕನಿಷ್ಠ ಕಂಚಿನ ಪದಕವಂತೂ ಖಚಿತವಾಗಲಿದೆ.

46 ಸೆಕೆಂಡುಗಳಲ್ಲಿ 'ಗೆದ್ದ' ಇಮಾನೆ

ಪ್ಯಾರಿಸ್ (ರಾಯಿಟರ್ಸ್): ಅಲ್ಜೀರಿಯಾದ ಇಮಾನೆ ಖೆಲಿಫ್ ವಿರುದ್ಧದ ಹೋರಾಟದಲ್ಲಿ ಸಾಕಷ್ಟು ಏಟುಗಳನ್ನು ತಿಂದ ಇಟಲಿಯ ಬಾಕ್ಸರ್ ಏಂಜೆಲಾ ಕ್ಯಾರಿನಿ ಅವರು ವೆಲ್ಟರ್‌ವೇಟ್ 16ರ ಸುತ್ತಿನ ಸ್ಪರ್ಧೆಯಿಂದ ಹಿಂದೆ ಸರಿದರು. ಕೇವಲ 46 ಸೆಕೆಂಡುಗಳಲ್ಲಿ ಇತ್ಯರ್ಥವಾದ ಈ ಸ್ಪರ್ಧೆ ವಿವಾದಕ್ಕೆ ಕಾರಣವಾಯಿತು.

ಮೊದಲ 30 ಸೆಕೆಂಡುಗಳಲ್ಲಿ ಸತತ ಶಕ್ತಿಶಾಲಿ ಪಂಚ್‌ಗಳಿಗೆ ಇಟಲಿ ಸ್ಪರ್ಧಿ ಗುರಿಯಾದರು. ನಂತರ ಮೂಗಿನ ಎಡಭಾಗಕ್ಕೆ ಇನ್ನೊಂದು ಬಲವಾದ-ಪ್ರಹಾರ ಬಿದ್ದಾಗ ಸ್ಪರ್ಧೆಯಿಂದ ಹಿಂದೆ ಸರಿದರು. ತಮ್ಮ ಕೈಎತ್ತಿ ರಿಂಗ್‌ನ ಮೂಲೆಯಲ್ಲಿ ಮಂಡಿಯೂರಿ ಕುಳಿತರು. ಇಮಾನೆ ಅವರಿಗೆ ಕಳೆದ ವರ್ಷ ವಿಶ್ವ ಚಾಂಪಿಯನ್‌ಷಿಪ್ ವೇಳೆ ನಡೆಸಿದ್ದ ಲಿಂಗತ್ವ ಅರ್ಹತಾ ಪರೀಕ್ಷೆಯಲ್ಲಿ ಹಿನ್ನಡೆ ಆಗಿತ್ತು. ಅವರ ಸ್ಪರ್ಧೆಗೆ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ಒಪ್ಪಿಗೆ ನೀಡಿತ್ತು. ಇದರ ಬಗ್ಗೆ ಬಾಕ್ಸಿಂಗ್ ವಲಯದಲ್ಲಿ ಭಿನ್ನ ಅಭಿಪ್ರಾಯಗಳು ವ್ಯಕ್ತವಾಗಿದ್ದವು.

'ತಮ್ಮ ಸ್ಪರ್ಧಿ ಹಿಂದೆ ಸರಿದಿರುವುದಾಗಿ' ಏಂಜೆಲಾ ಕೋಚ್ ಹೇಳಿದರು. ಏಂಜೆಲಾ ಕುಳಿತಲ್ಲೇ ಕಣ್ಣೀರು ಹಾಕಿದರು. ಎದುರಾಳಿಗೆ ಹಸ್ತಲಾಘವ ನೀಡಲು ನಿರಾಕರಿಸಿದರು. ರೆಫ್ರಿ ಅವರು ಅಲ್ಜೀರಿಯಾ ಸ್ಪರ್ಧಿಯನ್ನು ವಿಜೇತೆ ಎಂದು ಘೋಷಿಸಿದರು.

'ನಾನು ಹೋರಾಟಗಾರ್ತಿ. ನನ್ನ ತಂದೆ ಹೋರಾಟ ಮಾಡುವುದನ್ನು ಕಲಿಸಿದರು. ಅದೇ ಮನೋಭಾವದಲ್ಲಿ ಕಣಕ್ಕಿಳಿದೆ. ಇಂದು ಸೋತಿಲ್ಲ. ಪ್ರಬುದ್ಧಳಾಗಿ ವರ್ತಿಸಿ ಶರಣಾದೆ' ಎಂದು ಏಂಜೆಲಾ ಹೇಳಿದರು.

ಕೆಲಿಫ್ ಮತ್ತು ತೈವಾನ್‌ನ ಎರಡು ಬಾರಿಯ ವಿಶ್ವ ಚಾಂಪಿಯನ್ ಲಿನ್ ಯು–ಟಿಂಗ್ ಅವರಿಗೆ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಲು ಅವಕಾಶ ನೀಡಲಾಗಿತ್ತು. ಐಒಸಿ, ಅಂತರರಾಷ್ಟ್ರೀಯ ಬಾಕ್ಸಿಂಗ್ ಸಂಸ್ಥೆಯನ್ನು (ಐಬಿಎ) ಮಾನ್ಯ ಮಾಡಿಲ್ಲ.

'ಚಿನ್ನದ ಹುಡುಗಿ' ಬೈಲ್ಸ್ ಚಾರಿತ್ರಿಕ ಸಾಧನೆ

ಪ್ಯಾರಿಸ್ (ಎಎಫ್‌ಪಿ): ಅಮೆರಿಕದ ಜಿಮ್ನಾಸ್ಟಿಕ್ಸ್ ತಾರೆ ಸಿಮೊನ್ ಬೈಲ್ಸ್ ಒಲಿಂಪಿಕ್ಸ್ ಆಲ್‌ರೌಂಡ್ ವಿಭಾಗದ ಚಿನ್ನದ ಪದಕವನ್ನು ಗಳಿಸಿದರು. ಇದರೊಂದಿಗೆ ಒಲಿಂಪಿಕ್ಸ್‌ನಲ್ಲಿ ಎಂಟು ವರ್ಷಗಳ ನಂತರ ಈ ಪದಕವನ್ನು ಮತ್ತೆ ಜಯಿಸಿದ ಏಕೈಕ ಜಿಮ್ನಾಸ್ಟ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

ಅವರು 2016ರಲ್ಲಿ ರಿಯೊ ಡಿ ಜನೈರೊ ಒಲಿಂಪಿಕ್ಸ್‌ನಲ್ಲಿ ಅವರು ಆಲ್‌ರೌಂಡ್ ವಿಭಾಗದಲ್ಲಿ ಚಿನ್ನ ಜಯಿಸಿದ್ದರು. ಆದರೆ ಮೂರು ವರ್ಷಗಳ ಹಿಂದೆ ನಡೆದಿದ್ದ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಅವರು ಸ್ಪರ್ಧೆಯಿಂದ ಹಿಂದೆ ಸರಿದಿದ್ದರು. ಇದೀಗ ಮತ್ತೆ ಮರಳಿ ಚಾಂಪಿಯನ್ ಆಗಿದ್ದಾರೆ

ಇದರೊಂದಿಗೆ ಅವರು ಒಲಿಂಪಿಕ್ಸ್‌ನಲ್ಲಿ ಆರನೇ ಮತ್ತು ಪ್ಯಾರಿಸ್‌ನಲ್ಲಿ ಎರಡನೇ ಚಿನ್ನ ಜಯಿಸಿದರು. ಈಚೆಗೆ ಇಲ್ಲಿ ತಂಡ ವಿಭಾಗದಲ್ಲಿಯೂ ಚಿನ್ನ ಜಯಿಸಿದ್ದರು.

ಗುರುವಾರ ನಡೆದ ಸ್ಪರ್ಧೆಯಲ್ಲಿ ಅವರು 59.131 ಅಂಕಗಳನ್ನು ಗಳಿಸಿದರು. ಬ್ರೆಜಿಲ್‌ನ ರೆಬೆಕಾ ಆ್ಯಂಡ್ರೆಡ್ ಮತ್ತು ಟೋಕಿಯೊ ಒಲಿಂಪಿಕ್ಸ್ ಚಾಂಪಿಯನ್, ಅಮೆರಿಕದ 21 ವರ್ಷದ ಸುನಿಸಾ ಲೀ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದರು.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಅವರು ಇನ್ನೂ ಮೂರು ಸ್ಪರ್ಧೆಗಳಲ್ಲಿ ಕಣಕ್ಕಿಳಿಯಲ್ಲಿದ್ದಾರೆ. ವಾಲ್ಟ್, ಫ್ಲೋರ್ ಎಕ್ಸೈಸ್ ಮತ್ತು ಬ್ಯಾಲೆನ್ಸ್ ಭೀಮ್‌ನಲ್ಲಿ ಅವರು ಪದಕ ಜಯಿಸುವ ವಿಶ್ವಾಸದಲ್ಲಿದ್ದಾರೆ.



ಪ್ಯಾರಿಸ್ ಒಲಿಂಪಿಕ್ಸ್‌ನ ಮಹಿಳೆಯರ ಜಿಮ್ನಾಸ್ಟಿಕ್ಸ್ ಆಲ್‌ರೌಂಡ್ ವಿಭಾಗದಲ್ಲಿ ಪದಕ ಜಯಿಸಿದ ರೆಬೆಕಾ ಆ್ಯಂಡ್ರೇಡ್ (ಬೆಳ್ಳಿ), ಸಿಮೋನ್ ಬೈಲ್ಸ್ (ಚಿನ್ನ) ಮತ್ತು ಸುನಿಸಾ ಲೀ (ಕಂಚು) ಅವರು ಸೆಲ್ಫಿ ತೆಗೆದುಕೊಂಡರು –ಪ್ರಜಾವಾಣಿ ಚಿತ್ರ/ಕೆ.ಎನ್. ಶಾಂತಕುಮಾರ್

20 ಕಿ.ಮೀ ನಡಿಗೆ: ಭಾರತಕ್ಕೆ ನಿರಾಸೆ

ಪ್ಯಾರಿಸ್ (ಪಿಟಿಐ): ರಾಷ್ಟ್ರೀಯ ದಾಖಲೆ ಹೊಂದಿರುವ ಪ್ರಿಯಾಂಕಾ ಗೋಸ್ವಾಮಿ ಅವರು ಪ್ಯಾರಿಸ್ ಒಲಿಂಪಿಕ್ಸ್ ಮಹಿಳೆಯರ 20 ಕಿ.ಮೀ. ನಡಿಗೆ ಸ್ಪರ್ಧೆಯಲ್ಲಿ ಕಳಪೆ ಸಾಧನೆಯೊಡನೆ 41ನೇ ಸ್ಥಾನ ಪಡೆದರು. ಪುರುಷರ ವಿಭಾಗದಲ್ಲಿ ನಿರಾಶಾದಾಯಕ ಪ್ರದರ್ಶನ ನೀಡಿದ ವಿಕಾಶ್ ಸಿಂಗ್ ಮತ್ತು ಪರಮ್‌ಜೀತ್ ಸಿಂಗ್ ಅವರು ಕ್ರಮವಾಗಿ 30 ಮತ್ತು 37ನೇ ಸ್ಥಾನ ಪಡೆದರು.

ಏಷ್ಯನ್ ಬೆಳ್ಳಿ ಪದಕ ವಿಜೇತರಾಗಿರುವ ಪ್ರಿಯಾಂಕಾ ಅವರು 1 ಗಂಟೆ 39 ನಿಮಿಷ 55 ಸೆಕೆಂಡುಗಳಲ್ಲಿ ಗುರಿ ತಲುಪಿದರು. 1 ಗಂಟೆ 29 ನಿಮಿಷ 48 ಸೆಕೆಂಡುಗಳಲ್ಲಿ ಗುರಿ ತಲುಪಿದ್ದು ಈ ಋತುವಿನಲ್ಲಿ ಅವರ ಶ್ರೇಷ್ಠ ಕಾಲಾವಧಿಯಾಗಿತ್ತು. 28 ವರ್ಷ ವಯಸ್ಸಿನ ಅಥ್ಲೀಟ್, ಪ್ಯಾರಿಸ್‌ನಲ್ಲಿ ಗುರಿ ತಲುಪಲು ಇದಕ್ಕಿಂತ 10 ನಿಮಿಷ ಹೆಚ್ಚಿನ ಸಮಯ ತೆಗೆದುಕೊಂಡರು. 1 ಗಂಟೆ 28 ನಿಮಿಷ 45 ಸೆಕೆಂಡುಗಳಲ್ಲಿ ಗುರಿ ತಲುಪಿದ್ದು ಪ್ರಿಯಾಂಕಾ ಅವರ ಶ್ರೇಷ್ಠ ಸಾಧನೆ.

ಚೀನಾದ ಯಾಂಗ್ ಜಿಯಾವು 1 ಗಂಟೆ 25 ನಿಮಿಷ 54 ಸೆಕೆಂಡುಗಳಲ್ಲಿ ಗುರಿ ತಲುಪಿ ಚಿನ್ನದ ಪದಕ ತಮ್ಮದಾಗಿಸಿಕೊಂಡರು.

ಒಲಿಂಪಿಕ್ಸ್‌ನಲ್ಲಿ ಇಂದು
(ಭಾರತದ ಸ್ಪರ್ಧೆ)

ಗಾಲ್ಫ್

ಪುರುಷರ ವೈಯಕ್ತಿಕ ಫೈನಲ್ಸ್ (2ನೇ ಸುತ್ತು): ಶುಭಂಕರ್ ಶರ್ಮಾ, ಗಗನ್‌ಜೀತ್ ಭುಲ್ಲರ್, ಮಧ್ಯಾಹ್ನ **12.30**

ಶೂಟಿಂಗ್

ಮಹಿಳೆಯರ 25 ಮೀ.ಪಿಸ್ತೂಲ್ ಕ್ವಾಲಿಫಿಕೇಷನ್ ಪ್ರಿಸಿಶನ್: ಇಶಾ ಸಿಂಗ್, ಮನು ಭಾಕರ್, ಮಧ್ಯಾಹ್ನ **12.30**

ಪುರುಷರ ಸ್ಕೀಟ್ ಕ್ವಾಲಿಫಿಕೇಷನ್ ಮೊದಲ ದಿನ: ಅನಂತ್‌ಜೀತ್ ಸಿಂಗ್ ನರೂಕ, ಮಧ್ಯಾಹ್ನ **1.00**

ಆರ್ಚರಿ

ಮಿಶ್ರ ತಂಡ (1/8 ಎಲಿಮಿನೇಷನ್): ಭಾರತ (ಧೀರಜ್ ಬೊಮ್ಮದೇವರ, ಅಂಕಿತಾ ಭಕತ್) ವಿರುದ್ಧ ಇಂಡೊನೇಷ್ಯಾ, ಮಧ್ಯಾಹ್ನ **1.19**

ರೋಯಿಂಗ್

ಪುರುಷರ ಸಿಂಗಲ್ ಸ್ಕಲ್ ಫೈನಲ್ಸ್ (ಫೈನಲ್ಸ್ ಡಿ): ಬಲರಾಜ್ ಪನ್ವರ್, ಮಧ್ಯಾಹ್ನ **1.48**

ಜುಡೋ

ಮಹಿಳೆಯರ 78 ಕೆ.ಜಿ. (32ರ ಸುತ್ತು ಎಲಿಮಿನೇಷನ್): ತುಲಿಕಾ ಮಾನ್ ವಿರುದ್ಧ ಇದಲ್ಯಾಸ್ ಓರ್ಟಿಜ್ (ಕ್ಯೂಬಾ), ಮಧ್ಯಾಹ್ನ **2.12**

ಸೇಲಿಂಗ್

ಮಹಿಳೆಯರ ಡಿಂಘಿ (ರೇಸ್ 3/4): ನೇತ್ರಾ ಕುಮಾನನ್, ಮಧ್ಯಾಹ್ನ **3.45**/ ಸಂಜೆ **4.53**

ಪುರುಷರ ಡಿಂಘಿ (ರೇಸ್ 3/4): ವಿಷ್ಣು ಸರವಣನ್, ಸಂಜೆ **7.5/8.15**

ಪುರುಷರ ಹಾಕಿ (ಗುಂಪು ಹಂತ) ಭಾರತ ವಿರುದ್ಧ ಆಸ್ಟ್ರೇಲಿಯಾ, ಸಂಜೆ **4.45**

ಬ್ಯಾಡ್ಮಿಂಟನ್

ಪುರುಷರ ಸಿಂಗಲ್ಸ್ ಕ್ವಾರ್ಟರ್ ಫೈನಲ್ಸ್: ಲಕ್ಷ್ಯ ಸೇನ್ ವಿರುದ್ಧ ಚೊವು ಟಿಯೆನ್ ಚೆನ್ (ಚೀನಾ ತೈಪೆ), ಸಂಜೆ **6.30**

ಅಥ್ಲೆಟಿಕ್ಸ್

ಮಹಿಳೆಯರ 5,000 ಮೀ. (ಹೀಟ್ 1): ಅಂಕಿತಾ ಧ್ಯಾನಿ, ರಾತ್ರಿ **9.40**

ಮಹಿಳೆಯರ 5,000 ಮೀ. (ಹೀಟ್ 2): ಪಾರುಲ್ ಚೌಧರಿ, ರಾತ್ರಿ **10.06**

ಪುರುಷರ ಶಾಟ್‌ಪಟ್ (ಅರ್ಹತಾ ಸುತ್ತು): ತಜಿಂದರ್‌ಪಾಲ್ ಸಿಂಗ್ ತೂರ್, ರಾತ್ರಿ **11.40**

ಏಕದಿನ ಕ್ರಿಕೆಟ್: ಭಾರತ–ಶ್ರೀಲಂಕಾ ಹಣಾಹಣಿ ಇಂದು

ವಿಕೆಟ್‌ಕೀಪಿಂಗ್ ಹೊಣೆ ಯಾರಿಗೆ?

ಕೊಲಂಬೊ (ಪಿಟಿಐ): ಶ್ರೀಲಂಕಾ ಎದುರಿನ ಏಕದಿನ ಕ್ರಿಕೆಟ್ ಸರಣಿಯ ಮೊದಲ ಪಂದ್ಯವು ಶುಕ್ರವಾರ ನಡೆಯಲಿದೆ.

ಇದರಲ್ಲಿ ವಿಕೆಟ್‌ಕೀಪಿಂಗ್ ಹೊಣೆಯನ್ನು ಕನ್ನಡಿಗ ಕೆ.ಎಲ್. ರಾಹುಲ್ ಮತ್ತು ರಿಷಭ್ ಪಂತ್ ಅವರಲ್ಲಿ ಯಾರಿಗೆ ನೀಡಬೇಕೆಂಬ ಕುರಿತು ತಂಡದ ಮ್ಯಾನೇಜ್‌ಮೆಂಟ್ ಯೋಚಿಸುತ್ತಿದೆ. ಈ ಹಿಂದೆ ರಾಹುಲ್ ದ್ರಾವಿಡ್ ಅವರು ಮುಖ್ಯ ಕೋಚ್ ಆಗಿದ್ದ ಸಂದರ್ಭದಲ್ಲಿ ಕೆ.ಎಲ್. ರಾಹುಲ್ ಕೀಪಿಂಗ್ ಹೊಣೆ ನಿಭಾಯಿಸಿದ್ದರು. ರಿಷಭ್ ಪಂತ್ ಅವರು ಏಕದಿನ ವಿಶ್ವಕಪ್‌ಗೆ ಅಲಭ್ಯರಾಗಿದ್ದಾಗಲೂ ರಾಹುಲ್ ಕೀಪಿಂಗ್ ಮಾಡಿದ್ದರು.

ಹೋದ ವರ್ಷದಲ್ಲಿ ರಾಹುಲ್ ಅವರು 21 ಪಂದ್ಯಗಳಿಂದ 834 ರನ್ ಗಳಿಸಿದ್ದರು. ಅದರಲ್ಲಿ ಎರಡು ಶತಕಗಳೂ ಸೇರಿದ್ದವು. ದಕ್ಷಿಣ ಆಫ್ರಿಕಾ ಪ್ರವಾಸದಲ್ಲಿ ನಡೆದಿದ್ದ ಏಕದಿನ ಸರಣಿಯಲ್ಲಿ ರಾಹುಲ್ ನಾಯಕತ್ವ ಕೂಡ ನಿಭಾಯಿಸಿದ್ದರು.


ವಿರಾಟ್ ಕೊಹ್ಲಿ –ಪಿಟಿಐ ಚಿತ್ರ

ರಿಷಭ್ ಈಚೆಗೆ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಉತ್ತಮವಾಗಿ ಕೀಪಿಂಗ್ ಮಾಡಿದ್ದರು. ಬ್ಯಾಟಿಂಗ್‌ನಲ್ಲಿಯೂ ಮಿಂಚಿದ್ದರು. ಇದರಿಂದಾಗಿ ಇವರಿಬ್ಬರಲ್ಲಿ ಯಾರಿಗೆ ಕೀಪಿಂಗ್ ಹೊಣೆ ನೀಡಬೇಕೆಂಬ ಬಗ್ಗೆ ಹೊಸ ಮುಖ್ಯ ಕೋಚ್ ಗೌತಮ್ ಗಂಭೀರ್ ಮತ್ತು ವ್ಯವಸ್ಥಾಪಕ ಸಮಿತಿಯು ಲೆಕ್ಕಾಚಾರ ಹಾಕುತ್ತಿದೆ.

ಒಂದೊಮ್ಮೆ ಇಬ್ಬರಿಗೂ 11ರ ಬಳಗದಲ್ಲಿ ಸ್ಥಾನ ನೀಡಿದರೆ, ಶ್ರೇಯಸ್ ಅಯ್ಯರ್ ಅವರಿಗೆ ಸ್ಥಾನ ನೀಡುವುದು ತುಸು ಕಷ್ಟವಾಗಬಹುದು. ರಾಹುಲ್, ಪಂತ್ ಮತ್ತು ಶ್ರೇಯಸ್ ಅವರೆಲ್ಲರಿಗೂ ಸ್ಥಾನ ನೀಡಿದರೆ ಐವರು ಬೌಲರ್‌ಗಳೊಂದಿಗೆ ಕಣಕ್ಕಿಳಿಯಬಹುದು. ವೈಯಕ್ತಿಕ ಕಾರಣಗಳಿಗಾಗಿ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಈ ಸರಣಿಯಿಂದ ಹೊರಗುಳಿದಿದ್ದಾರೆ.

ಆರನೇ ಕ್ರಮಾಂಕದಲ್ಲಿ ಆಡಲು ಶಿವಂ ದುಬೆ ಅಥವಾ ರಿಯಾನ್ ಪರಾಗ್ ಅವರಲ್ಲಿ ಒಬ್ಬರಿಗೆ ಅವಕಾಶ ಸಿಗಬಹುದು. ದುಬೆ ಐದು ವರ್ಷದ ಹಿಂದೆ ಏಕದಿನ ಪಂದ್ಯ ಆಡಿದ್ದರು. ಬೌಲಿಂಗ್ ವಿಭಾಗದಲ್ಲಿ ಮೊಹಮ್ಮದ್ ಸಿರಾಜ್, ಅರ್ಷದೀಪ್ ಸಿಂಗ್, ಸ್ಪಿನ್ನರ್ ಕುಲದೀಪ್ ಯಾದವ್ ಮತ್ತು ಆಲ್‌ರೌಂಡರ್ ಅಕ್ಷರ್ ಪಟೇಲ್ ಅವರು ಕಣಕ್ಕಿಳಿಯುವುದು ಬಹುತೇಕ ಖಚಿತವಾಗಿದೆ.

ಟಿ20 ವಿಶ್ವಕಪ್ ವಿಜಯದ ನಂತರ ಮತ್ತೆ ಕಣಕ್ಕೆ ಮರಳುತ್ತಿರುವ ನಾಯಕ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರು ಇನಿಂಗ್ಸ್ ಆರಂಭಿಸುವ ಸಾಧ್ಯತೆ ಹೆಚ್ಚಿದೆ. ಇದರಿಂದಾಗಿ ಉಪನಾಯಕ ಶುಭಮನ್ ಗಿಲ್ ಅವರು ಮೂರನೇ ಕ್ರಮಾಂಕದಲ್ಲಿ ಆಡಬಹುದು. ಚರಿತ್ ಅಸಲಂಕಾ ನಾಯಕತ್ವದ ಶ್ರೀಲಂಕಾ ತಂಡವು ತವರಿನಂಗಳದಲ್ಲಿ ಗೆಲುವಿನ ಆರಂಭ ಮಾಡಲು ಕಾತರಿಸಿದೆ. ಆತಿಥೇಯ ತಂಡವು ಟಿ20 ಸರಣಿಯಲ್ಲಿ ಸೋತಿದ್ದು ಏಕದಿನ ಸರಣಿಯಲ್ಲಿ ಪುಟಿದೇಳುವ ನಿರೀಕ್ಷೆಯಲ್ಲಿದೆ.

ನೇರಪ್ರಸಾರ: ಸೋನಿ ಸ್ಪೋರ್ಟ್ಸ್

ರಿಷಭ್ ಪಂತ್ ಮತ್ತು ಕೆ.ಎಲ್. ರಾಹುಲ್ ಅಭ್ಯಾಸ ನಡೆಸಿದರು –ಎಎಫ್‌ಪಿ ಚಿತ್ರ



ಕರ್ನಾಟಕ ತಂಡಕ್ಕೆ ಶ್ರೇಯಸ್



ಬೆಂಗಳೂರು: ಲೆಗ್‌ಸ್ಪಿನ್ನರ್ ಶ್ರೇಯಸ್ ಗೋಪಾಲ್ ಅವರು ಕರ್ನಾಟಕ ತಂಡಕ್ಕೆ ಮರಳಲಿದ್ದಾರೆ. ಒಂದು ವರ್ಷದ ಹಿಂದಷ್ಟೇ ಅವರು ಕರ್ನಾಟಕ ತಂಡವನ್ನು ಬಿಟ್ಟು ಕೇರಳ ಸೇರಿಕೊಂಡಿದ್ದರು.

‘ಶ್ರೇಯಸ್ ಗೋಪಾಲ್ ಅವರು ರಾಜ್ಯ ತಂಡಕ್ಕೆ ಮರಳಲಿದ್ದಾರೆ. ಅವರು ಕೇರಳ ಕ್ರಿಕೆಟ್ ಸಂಸ್ಥೆಯಿಂದ ನಿರಾಕ್ಷೇಪಣ ಪತ್ರ ಪಡೆದಿದ್ದಾರೆ’ ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಅಧ್ಯಕ್ಷ ರಘುರಾಮ್ ಭಟ್ ಗುರುವಾರ ತಿಳಿಸಿದ್ದಾರೆ.

‘ಕರ್ನಾಟಕ ತಂಡವನ್ನು ಪ್ರತಿನಿಧಿಸು ವುದಾಗಿ ಶ್ರೇಯಸ್ ಹೇಳಿದ್ದಾರೆ. ಮೂರು ಮಾದರಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಅವರು ಲಭ್ಯವಾಗಲಿದ್ದಾರೆಂದು ಆಯ್ಕೆ ಸಮಿತಿಗೂ ತಿಳಿಸಲಾಗಿದೆ’ ಎಂದು ಭಟ್ ಹೇಳಿದರು.

82 ಪ್ರಥಮ ದರ್ಜೆ ಪಂದ್ಯಗಳಲ್ಲಿ ಆಡಿರುವ ಶ್ರೇಯಸ್ 234 ವಿಕೆಟ್ ಗಳಿಸಿದ್ದಾರೆ. 3409 ರನ್ ಗಳಿಸಿದ್ದಾರೆ.

‘ಕರ್ನಾಟಕ ತಂಡಕ್ಕೆ ಮರಳು ತ್ತಿರುವುದಕ್ಕೆ ಬಹಳ ಸಂತಸವಾ ಗುತ್ತಿದೆ. ತಂಡಕ್ಕೆ ಉತ್ತಮವಾದ ಕಾಣಿಕೆ ನೀಡುವುದು ನನ್ನ ಕರ್ತವ್ಯ. ಹೆಚ್ಚು ವಿಕೆಟ್‌ಗಳನ್ನು ಗಳಿಸುವುದು ಹಾಗೂ ರನ್ ಪೇರಿಸುವ ಮೂಲಕ ತಂಡಕ್ಕೆ ಆಸರೆಯಾಗುತ್ತೇನೆ’ ಎಂದು ಶ್ರೇಯಸ್ ಪ್ರಜಾವಾಣಿಗೆ ತಿಳಿಸಿದ್ದಾರೆ.

ಮೆಗಾ ಹರಾಜು: ಫ್ರಾಂಚೈಸಿಗಳ ಭಿನ್ನ ಅಭಿಪ್ರಾಯ


ಜಯ್ ಶಾ

ಮುಂಬೈ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ ಮೆಗಾ ಹರಾಜು ಪ್ರಕ್ರಿಯೆ ಮತ್ತು ಇಂಪ್ಯಾಕ್ಟ್ ಪ್ಲೇಯರ್ ನಿಯಮದ ಕುರಿತು ಫ್ರಾಂಚೈಸಿಗಳ ಮಾಲೀಕರಿಂದ ಭಿನ್ನ ಅಭಿಪ್ರಾಯಗಳು ವ್ಯಕ್ತವಾಗಿವೆ.

ಬುಧವಾರ ಬಿಸಿಸಿಐ ಪದಾಧಿಕಾರಿಗಳೊಂದಿಗೆ ಮಾತುಕತೆ ನಡೆಸಿದ ಫ್ರಾಂಚೈಸಿ ಮಾಲೀಕರು ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು. ಮುಂದಿನ ವರ್ಷ ನಡೆಯಲಿರುವ 18ನೇ ಆವೃತ್ತಿಯ ಮೆಗಾ ಹರಾಜು ಪ್ರಕ್ರಿಯೆ ನಡೆಯಲಿದೆ. ಈ ಕುರಿತು ಈಗ ಚರ್ಚೆ ಆರಂಭವಾಗಿದೆ.

‘ಬುಧವಾರ ಐಪಿಎಲ್ ಟೂರ್ನಿಯ 10 ಫ್ರಾಂಚೈಸಿಗಳ ಮಾಲೀಕರೊಂದಿಗೆ ಮಾತುಕತೆ ನಡೆಸಲಾಯಿತು. ಮುಂಬರುವ ಆವೃತ್ತಿಗಳ ಕುರಿತು ವಿವಿಧ ವಿಷಯಗಳ ಬಗ್ಗೆ ಚರ್ಚೆ ನಡೆಯಿತು’ ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ತಿಳಿಸಿದ್ದಾರೆ.

‘ಆಟಗಾರರನ್ನು ಉಳಿಸಿಕೊಳ್ಳುವ ಕುರಿತು ಮತ್ತು ವಾಣಿಜ್ಯಕ ವಿಷಯಗಳ ಕುರಿತು ಮಾಲೀಕರು ತಮ್ಮ ಅಭಿಪ್ರಾಯಗಳನ್ನು ತಿಳಿಸಿದರು. ಉತ್ಪನ್ನಗಳ ಕೇಂದ್ರಿಕೃತ ಮಾರಾಟ ವ್ಯವಸ್ಥೆ, ಲೈಸೆನ್ಸಿಂಗ್ ಮತ್ತು ಗೇಮಿಂಗ್ ಕುರಿತು ಚರ್ಚಿಸಲಾಯಿತು’ ಎಂದೂ ಹೇಳಿದ್ದಾರೆ.

ಸಭೆಯಲ್ಲಿ ಶಾರೂಕ್ ಖಾನ್ (ಕೆಕೆಆರ್), ಕಾವ್ಯ ಮಾರನ್ (ಸನ್‌ರೈಸರ್ಸ್ ಹೈದರಾಬಾದ್), ನೆಸ್ ವಾಡಿಯಾ (ಪಂಜಾಬ್ ಕಿಂಗ್ಸ್), ಸಂಜೀವ ಗೊಯೆಂಕಾ ಮತ್ತು ಅವರ ಮಗ ಶಾಶ್ವತ್ (ಲಖನೌ ಸೂಪರ್ ಜೈಂಟ್ಸ್), ಕೆಕೆ ಗ್ರ್ಯಾಂಡ್ ಮತ್ತು ಪಾರ್ಥ್ ಜಿಂದಾಲ್ (ಡೆಲ್ಲಿ ಕ್ಯಾಪಿಟಲ್ಸ್) ಅವರು ಖುದ್ದಾಗಿ ಹಾಜರಿದ್ದರು.

ಮನೋಜ್ ಬದಾಳೆ ಮತ್ತು ರಂಜಿತ್ ಭರ್ತಾಕುರ್ (ಆರ್‌ಆರ್), ಪ್ರಥಮೇಶ್ ಮಿಶ್ರಾ (ಆರ್‌ಸಿಬಿ), ಕಾಶಿ ವಿಶ್ವನಾಥ್ ಮತ್ತು ರೂಪಾ ಗುರುನಾಥ್ (ಸಿಎಸ್‌ಕೆ), ಸಮಿತ್ ಸೋನಿ (ಜಿ.ಟಿ) ಮತ್ತು ಮುಂಬೈ ಇಂಡಿಯನ್ಸ್ ಮಾಲೀಕರು ಆನ್‌ಲೈನ್ ಮೂಲಕ ಸಭೆಗೆ ಹಾಜರಾದರು.

ಮೆಗಾ ಹರಾಜು ಪ್ರಕ್ರಿಯೆ ಇರಬೇಕೋ ಬೇಡವೋ ಎಂಬ ಬಗ್ಗೆ ನಿರ್ಧಾರಿಸಬೇಕು ಎಂದು ಶಾರೂಕ್ ಖಾನ್ ಮತ್ತು ವಾಡಿಯಾ ಅವರ ನಡುವಿನ ಚರ್ಚೆ ಬಿಸಿಯೇರಿತು. ಡೆಲ್ಲಿ ಕ್ಯಾಪಿಟಲ್ಸ್ ತಂಡದ ಮಾಲೀಕರು ಇಂಪ್ಯಾಕ್ಟ್ ಪ್ಲೇಯರ್ ನಿಯಮದ ವಿರುದ್ಧ ಅಭಿಪ್ರಾಯ ವ್ಯಕ್ತಪಡಿಸಿದರು.